ವಿಶ್ವವಾಣಿ

ವಿಶ್ವಾಸವೇ ವಿಶ್ವ

ಸೊಂಪಾದ ಪುಟಗಳು

ಸಿದ್ಧಾಂತಕ್ಕಾಗಿ ಪಕ್ಷದಲ್ಲಿ ಇರುವವರಿಗೆ ಎಂದು ಅವಕಾಶ?

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
6

ಪಾಠ ಕಲಿಸಿದ ಎಲ್ಲರೂ ಗುರು ಸಮಾನರು!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
7

ದಾರಿದೀಪೋಕ್ತಿ

ಹೋರಾಟವೇ ಜೀವನದ ಸತ್ವ, ಅದು ಇಲ್ಲದಿದ್ದರೆ ಬದುಕು ನಿಲ್ಲುತ್ತದೆ. ನಿಮ್ಮ ಹೋರಾಟ ಪ್ರವೃತ್ತಿಗೆ ಎಂದೂ ವಿರಾಮ ಹಾಡಬೇಡಿ.

ವಕ್ರತುಂಡೋಕ್ತಿ

ಸಾಲ ಕೊಡದಿರಲು ಎರಡು ಕಾರಣಗಳಿವೆ. ನಿಮಗೆ ಅವರ ಬಗ್ಗೆ ಗೊತ್ತಿಲ್ಲದಿರುವುದು ಒಂದು ಕಾರಣ. ಗೊತ್ತಿರುವುದು ಇನ್ನೊಂದು ಕಾರಣ.

ವಾಂತಿಭೇದಿ: ಮೂವರ ಸಾವು

ಯಾದಗಿರಿ: ಕಲುಷಿತ ನೀರು ಸೇವನೆಯಿಂದಾಗಿ ವಾಂತಿಭೇದಿ ಉಲ್ಬಣಗೊಂಡು ಸುರಪುರ ತಾಲೂಕಿನ ತಿಪ್ಪನಟಗಿ ಗ್ರಾಮದಲ್ಲಿ ಮೂವರು ಸಾವನ್ನಪ್ಪಿದ್ದು , 20ಕ್ಕೂ ಹೆಚ್ಚು ಮಂದಿ ಅಸ್ವಸ್ಥರಾಗಿದ್ದಾರೆ. ವಾಂತಿ ಭೇದಿಯಿಂದ ಆಸ್ಪತ್ರೆಗೆ ದಾಖಲಾಗಿದ್ದರೆನ್ನಲಾದ ತಿಪ್ಪನಟಗಿ ಗ್ರಾಮದ ದೇವಿಕೆಮ್ಮ ಹೊಟ್ಟಿ (48) ವೆಂಕಮ್ಮ (60) ರಾಮಣ್ಣ ಪೂಜಾರಿ (50) ಮೃತಪಟ್ಟಿದ್ದಾರೆ. ನಾಲ್ವರ ಸ್ಥಿತಿ ಚಿಂತಾಜನಕವಾಗಿದ್ದು, ಕಲಬುರಗಿ ನಗರದ ವಿವಿಧ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕಲುಷಿತ ನೀರು ಸೇವನೆ ಸಾವಿಗೆ ಕಾರಣ ಎಂದು ಗ್ರಾಮಸ್ಥರು ಹೇಳಿದರೆ ಅಧಿಕಾರಿ ವರ್ಗ ಇದನ್ನು ತಳ್ಳಿಹಾಕಿದೆ.

ವಿಯಾನ್ ತ್ರಿಶತಕದ ವಿಶ್ವ ದಾಖಲೆ

ಆತಿಥೇಯ ಜಿಂಬಾಬ್ವೆ ವಿರುದ್ಧದ ದ್ವಿತೀಯ ಟೆಸ್ಟ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡದ ನಾಯಕ ವಿಯಾನ್ ಮುಲ್ಡರ್ ತ್ರಿಶತಕ (367) ಬಾರಿಸುವ ಮೂಲಕ ಇತಿಹಾಸ ನಿರ್ಮಿಸಿದ್ದಾರೆ. ಟೆಸ್ಟ್ ನಾಯಕತ್ವದ ಚೊಚ್ಚಲ ಪಂದ್ಯದಲ್ಲೇ ತ್ರಿಶತಕ ಗಳಿಸಿದ ವಿಶ್ವದ ಮೊದಲ ಆಟಗಾರ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದು, ಒಟ್ಟಾರೆಯಾಗಿ ಟೆಸ್ಟ್‌ನಲ್ಲಿ ತ್ರಿಶತಕ ಬಾರಿಸಿದ ಒಂಬತ್ತನೇ ನಾಯಕ ಎನಿಸಿಕೊಂಡಿದ್ದಾರೆ.

ಸಾವಿನ ಪೋಸ್ಟ್‌ಮಾರ್ಟಂ, ಸರಕಾರ, ಖಾಸಗಿ ಸಿಬ್ಬಂದಿ ವಾರ್ಷಿಕ ತಪಾಸಣೆ ಕಡ್ಡಾಯ
ಸಾವಿಗೆ ಲಸಿಕೆ ಕಾರಣವಲ್ಲ, ಸೋಂಕಿನ ಬಗ್ಗೆ ಸಂಶಯ, ಶಾಲಾ ಮಕ್ಕಳಿಗೂ ಚೆಕ್ ಅಪ್

ಹೃದ್ರೋಗ ಅಧಿಸೂಚಿತ ಕಾಯಿಲೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಹಠಾತ್ ಸಾವಿಗೆ ಕಾರಣವಾಗುವ ಹೃದ್ರೋಗವನ್ನು ಅಧಿಸೂಚಿತ ಕಾಯಿಲೆ ಎಂದು ಘೋಷಿಸಲು ರಾಜ್ಯ ಸರಕಾರ ನಿರ್ಧರಿಸಿದೆ.

ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ಹಠಾತ್ ಮರಣಗಳ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿರುವ ಸರಕಾರ, ತಜ್ಞರ ಸಮಿತಿಯ ಶಿಫಾರಸುಗಳ ಆಧಾರದ ಮೇಲೆ ಮಹತ್ವದ ನಿರ್ಧಾರಗಳನ್ನು ಕೈಗೊಂಡಿದೆ. ಈ ಕುರಿತು ಶೀಘ್ರದಲ್ಲೇ ಅಧಿಸೂಚನೆ ಹೊರಡಿಸಲಿದೆ. ಹಠಾತ್ ಸಾವುಗಳನ್ನು 'ಅಧಿಸೂಚಿತ ಕಾಯಿಲೆ ಗಳು' ಎಂದು ಘೋಷಿಸಲಾಗುತ್ತಿದೆ. ಆಸ್ಪತ್ರೆ ಹೊರಗೆ ಸಂಭವಿಸುವ ಸಾವಿನ ಪ್ರಕರಣಗಳನ್ನು ದಾಖಲಿಸುವುದು ಕಡ್ಡಾಯವಾಗಲಿದೆ. ಜತೆಗೆ ಮರಣೋತ್ತರ ಪರೀಕ್ಷೆ ಕಡ್ಡಾಯವಾಗಲಿದೆ. ಹೃದಯಸಂಬಂಧಿ ರೋಗಗಳ ಬಗ್ಗೆ ಸಾರ್ವಜನಿ ಕರಲ್ಲಿ ಅರಿವು ಮೂಡಿಸಲು ಈ ನಿರ್ಧಾರ ಮಾಡಲಾಗಿದೆ.

ಕರೋನಾ ಲಸಿಕೆಯಿಂದ ಹೃದಯಾಘಾತ ಸಂಭವಿಸುತ್ತಿಲ್ಲ ಎಂದು ತಜ್ಞರ ವರದಿ ಸ್ಪಷ್ಟಪಡಿಸಿದೆ. ಜಯದೇವ ಹೃದ್ರೋಗ ಆಸ್ಪತ್ರೆಯ ನಿರ್ದೇಶಕ ಡಾ.ರವೀಂದ್ರನಾಥ್ ನೇತೃತ್ವದ ತಜ್ಞರ ಸಮಿತಿ ವರದಿಯನ್ನು ಸೋಮವಾರ ರಾಜ್ಯ ಸರಕಾರಕ್ಕೆ ಸಲ್ಲಿಸಿದೆ. ಹೃದಯಾಘಾತಕ್ಕೆ ಕೋವಿಡ್ ಸೋಂಕು ಕೂಡ ಕಾರಣವಾಗಿರಬಹುದೇ ಹೊರತು ಲಸಿಕೆಯಲ್ಲ ಎಂದು ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಅವರು ಸ್ಪಷ್ಟಪಡಿಸಿದ್ದಾರೆ.

ವಿಕಾಸ ಸೌಧದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಸಚಿವ ದಿನೇಶ್ ಗುಂಡೂರಾವ್ ಅವರು ಮಾತನಾಡಿ, ಹೃದಯಾಘಾತದಿಂದ ಸಂಭವಿಸುತ್ತಿರುವ ಸಾವುಗಳು ಮತ್ತು ಕರೋನಾದಿಂದಾಗುವ ದುಷ್ಪರಿಣಾಮಗಳ ಕುರಿತು ಸರಕಾರದ ಕಾರ್ಯದರ್ಶಿಗೆ ಪತ್ರ ಬರೆಯಲಾಗಿದ್ದು, ಈ ಸಂಬಂಧ ಡಾ. ರವೀಂದ್ರನಾಥ್ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಲಾಗಿತ್ತು.

→ 4

ಜಯದೇವ ಹೃದ್ರೋಗ ಆಸ್ಪತ್ರೆಯ ನಿರ್ದೇಶಕ ಡಾ.ರವೀಂದ್ರನಾಥ್ ನೇತೃತ್ವದ ತಜ್ಞರ ಸಮಿತಿ ಸೋಮವಾರ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ವರದಿ ಸಲ್ಲಿಸಿತು.

- ಪಠ್ಯ ಪುಸ್ತಕದಲ್ಲಿ ಇರಲಿದೆ ಹೃದಯ ಸಂಬಂಧ ಪಾಠ
- ಶಾಲೆಗಳಲ್ಲಿ 15 ವರ್ಷದ ಮಕ್ಕಳಿಗೆ ಹೃದಯ ತಪಾಸಣೆ
- ಎಲ್ಲ ತಾಲೂಕು ಆಸ್ಪತ್ರೆಗಳಲ್ಲಿ ಪುನೀತ್ ಹೃದಯ ಜ್ಯೋತಿ ವಿಸ್ತರಣೆ
- ಲಸಿಕೆಯಿಂದ ಸಮಸ್ಯೆ ಇಲ್ಲ, ಎಂಆರ್‌ಎನ್‌ಎ ವ್ಯಾಕ್ಸಿನ್ ಮಾತ್ರ ಪ್ರತಿಕೂಲ ಪರಿಣಾಮ

ಮೂವರ ಸಾವು

ಬೆಂಗಳೂರು: ರಾಜ್ಯದಲ್ಲಿ ಹೃದಯಾಘಾತದಿಂದ ಸರಣಿ ಸಾವು ಮುಂದುವರಿದಿದೆ. ಸೋಮವಾರ ಹಾಸನ, ಶಿವಮೊಗ್ಗ ಹಾಗೂ ಚಿತ್ರದುರ್ಗ ಜಿಲ್ಲೆಯಲ್ಲಿ ತಲಾ ಒಬ್ಬರು ಹೃದಯಾಘಾತಕ್ಕೆ ಬಲಿಯಾಗಿದ್ದಾರೆ.

ಡಿಕೆಶಿ ಇಂದು, ಸಿದ್ದು ನಾಳೆ ರಾಜಧಾನಿಗೆ

ಸಿಎಂ, ಡಿಸಿಎಂ ಮತ್ತೆ ದೆಹಲಿಯತ್ತ ಪಯಣ

ಬೆಂಗಳೂರು: ಹೈಕಮಾಂಡ್ ಎಚ್ಚರಿಕೆಯ ಬಳಿಕ ಎಲ್ಲವೂ ತಣ್ಣಗಾಗಿದ್ದ ರಾಜ್ಯ ಕಾಂಗ್ರೆಸ್ ರಾಜಕೀಯ ಇದೀಗ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿ ಭೇಟಿಯ ಬೆನ್ನಲ್ಲೇ ಮತ್ತೆ ಚುರುಕಾಗಿದೆ.

ಕೇಂದ್ರ ಸಚಿವರ ಭೇಟಿಯ ನೆಪದಲ್ಲಿ ಸಿಎಂ ಮತ್ತು ಉಪಮುಖ್ಯ ಮಂತ್ರಿ ಗಳು ದೆಹಲಿ ಪ್ರವಾಸ ಕೈಗೊಂಡಿ ದ್ದರೂ, ರಾಜ್ಯ ದಲ್ಲಿರುವ ಗೊಂದಲಗಳಿಗೆ ಸಂಬಂಧಿ ಸಿದಂತೆ ಹೈಕಮಾಂಡ್ ಜತೆ ಚರ್ಚೆ ನಡೆಸಲಿದ್ದಾರೆ ಎನ್ನಲಾಗಿದೆ. ಅದರ ಲ್ಲಿಯೂ ರಣದೀಪ್ ಸಿಂಗ್ ಸುರ್ಜೇವಾಲ ಅವರು ಬೆಂಗಳೂರಿನಲ್ಲಿ ಶಾಸಕ ರೊಂದಿಗೆ ಪ್ರತ್ಯೇಕ ಸಭೆ ನಡೆಸುವ ಸಮಯದ ಲ್ಲಿಯೇ ಸಿಎಂ, ಡಿಸಿಎಂ ದೆಹಲಿ ಭೇಟಿ ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ನಾಡಹಬ್ಬ ದಸರಾ ವೇಳೆ ವೈಮಾನಿಕ ಪ್ರದರ್ಶನಕ್ಕೆ ಅನುಮತಿ ನೀಡಬೇಕು ಎಂದು ಮನವಿ ಸಲ್ಲಿಸಲು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭೇಟಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ಬೆಳಗ್ಗೆ ದೆಹಲಿ ಪ್ರವಾಸ ಕೈಗೊಳ್ಳುತ್ತಿದ್ದಾರೆ. ಆದರೆ ಅದಕ್ಕೂ ಮೊದಲೇ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್ ಭೇಟಿಗೆ ಮಂಗಳವಾರ ಬೆಳಗ್ಗೆಯೇ ತೆರಳಲಿದ್ದು, ಮಂಗಳವಾರ ದೆಹಲಿಯಲ್ಲಿಯೇ ವಾಸ್ತವ್ಯ ಹೂಡಲಿದ್ದು ಬೆಂಗಳೂರಿಗೆ ಯಾವಾಗ ವಾಪಸಾಗಲಿದ್ದಾರೆ ಎನ್ನುವ ಗುಟ್ಟನ್ನು ಬಿಟ್ಟುಕೊಟ್ಟಿಲ್ಲ.

ದೆಹಲಿಯ ಭೇಟಿಯ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜನಾಥ್ ಸಿಂಗ್ ಅವರ ಭೇಟಿಯ ಬಳಿಕ ಪಕ್ಷದ ಹೈಕಮಾಂಡ್ ಅನ್ನು ಭೇಟಿಯಾಗುವ ಸಾಧ್ಯತೆಯಿದೆ. ಈ ವೇಳೆ ಸುರ್ಜೇವಾಲ ಅವರು ಶಾಸಕರೊಂದಿಗೆ ಪ್ರತ್ಯೇಕ ಸಭೆ ನಡೆಸುತ್ತಿರುವ ಸಂಬಂಧ ದೆಹಲಿ ನಾಯಕರೊಂದಿಗೆ ಚರ್ಚಿಸುವ ಸಾಧ್ಯತೆಯಿದೆ. ಇದರೊಂದಿಗೆ ಒಬಿಸಿ ಸಲಹಾ ಸಮಿತಿ ವಿಷಯಕ್ಕೆ ಸಂಬಂಧಿಸಿದಂತೆ ಆಗುತ್ತಿರುವ ಚರ್ಚೆಗೆ 'ಸ್ಪಷ್ಟನೆ' ಪಡೆಯುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಇದರೊಂದಿಗೆ 15ರಂದು ಬೆಂಗಳೂರಿನಲ್ಲಿ ಹಿಂದುಳಿದ ವರ್ಗಗಳ ಪ್ರಮುಖ ನಾಯಕರ ಸಮಾವೇಶದ ಹಿನ್ನಲೆಯಲ್ಲಿ ಪೂರ್ವಭಾವಿಯಾಗಿ ಸಿದ್ದರಾಮಯ್ಯ ಹೈಕಮಾಂಡ್ ನಾಯಕರ ಜೊತೆ ಚರ್ಚೆ ನಡೆಸುವ ಸಾಧ್ಯತೆಯಿದೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಅವರೊಂದಿಗೆ ಚರ್ಚಿಸುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಡಿಕೆ ಭೇಟಿ ಕುತೂಹಲ

ಸಿದ್ದರಾಮಯ್ಯ ಅವರು ಹೈಕಮಾಂಡ್ ಜತೆ ಒಬಿಸಿ ಸಲಹಾ ಸಮಿತಿಗೆ ಸಂಬಂಧ ಚರ್ಚಿಸುವ ಸಾಧ್ಯತೆಯಿದೆ. ಆದರೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಯಾರನ್ನು ಭೇಟಿಯಾಗಲಿದ್ದಾರೆ? ಯಾವೆಲ್ಲ ವಿಷಯಗಳು ಚರ್ಚೆಗೆ ಬರಲಿವೆ? ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಹೈಕಮಾಂಡ್ ಭೇಟಿಯಾಗುವರೋ ಅಥವಾ ಪ್ರತ್ಯೇಕವಾಗಿ ಭೇಟಿಯಾಗಲಿದ್ದಾರೋ ಎನ್ನುವ ಕುತೂಹಲ ರಾಜ್ಯ ನಾಯಕರಲ್ಲಿದೆ.

ದಿನದ ಬೆಳವಣಿಗೆ

- ಸಿಎಂ ಪ್ರಗತಿ ಪರಿಶೀಲನೆ ಸಭೆ
- ಮೂರು ಇಲಾಖೆಗಳ ಮುಖ್ಯಸ್ಥರ ಜತೆ ಮೂರು ತಾಸು ಚರ್ಚೆ
- 24 ಶಾಸಕರ ಜತೆ ಉಸ್ತುವಾರಿ ಸುರ್ಜೇವಾಲಾ ಖುದ್ದು ಸಭೆ

ಬ್ರಿಕ್ಸ್ ಮೇಲೆ ಕೆಂಗಣ್ಣು

ನ್ಯೂಯಾರ್ಕ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕೆಂಗಣ್ಣು ಈಗ ಭಾರತ, ಚೀನಾವನ್ನೊಳಗೊಂಡ ಬ್ರಿಕ್ಸ್ ಗುಂಪಿನ ಮೇಲೆ ಬಿದ್ದಿದೆ. ಅಮೆರಿಕ ವಿರೋಧಿ ನೀತಿಗಳೊಂದಿಗೆ ಕೈ ಜೋಡಿಸುವ ದೇಶ ಗಳ ಮೇಲೆ ಹೆಚ್ಚುವ ರಿಯಾಗಿ ಶೇ.10 ರಷ್ಟು ಸುಂಕವನ್ನು ವಿಧಿಸುವುದಾ ಗಿ ಟ್ರಂಪ್ ಬೆದರಿಕೆ ಹಾಕಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಬ್ರೆಜಿಲ್‌ನಲ್ಲಿ 17 ನೇ ಬ್ರಿಕ್ಸ್ ಶೃಂಗಸಭೆಗಾಗಿ ಸಭೆ ಸೇರಿದ ಇರಾನ್ ಮೇಲಿನ ಇಸ್ರೇಲ್ ದಾಳಿಯನ್ನು ಖಂಡಿಸಿದ್ದರು. ಮೂಲತಃ ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾವನ್ನು ಒಳಗೊಂಡಿದ್ದ ಬ್ರಿಕ್ಸ್ , ಈಗ ಈಜಿಪ್ಟ್, ಇಥಿಯೋಪಿಯಾ, ಇರಾನ್, ಯುಎಇ ಮತ್ತು ಇಂಡೋನೇಷ್ಯಾ ರಾಷ್ಟ್ರಗಳನ್ನೊಳಗೊಂಡಿದೆ.

ಮೆಟ್ರೋ ವಿರುದ್ಧ ಅರ್ಜಿ

ಬೆಂಗಳೂರು: ನಮ್ಮ ಮೆಟ್ರೋ ದರ ನಿಗದಿ ಸಮಿತಿ ವರದಿಯನ್ನು ಬಹಿರಂಗ ಪಡಿಸುವಂತೆ ಕೋರಿ ಸಂಸದ ತೇಜಸ್ವಿ ಸೂರ್ಯ ಹೈಕೋರ್ಟ್ ಮೆಟ್ಟಿಲೇರಿದ್ದು ಬಿಎಂಆರ್‌ಸಿಎಲ್‌ಗೆ ನ್ಯಾಯಾ ಲಯ ನೋಟಿಸ್ ಜಾರಿ ಮಾಡಿ 2 ವಾರದಲ್ಲಿ ಉತ್ತರಿಸುವಂತೆ ಸೂಚಿಸಿದೆ. ರಿಟ್ ಅರ್ಜಿಯ ವಿಚಾರಣೆ ನಡೆಸಿದ ನ್ಯಾ.ಸುನಿಲ್ ದತ್ ಯಾದವ್, ವಿಚಾರಣೆ ವೇಳೆ, 'ನೀವಿಷ್ಟು ಪ್ರಬಲರಾಗಿದ್ದೂ ನಿಮಗೆ ವರದಿ ಸಿಗುತ್ತಿಲ್ಲವೇ' ಎಂದು ತೇಜಸ್ವಿ ಸೂರ್ಯ ಪರ ವಕೀಲರಿಗೆ ಪ್ರಶ್ನಿಸಿದರು. ಡಿಸೆಂಬರ್ ತಿಂಗಳಲ್ಲೇ ದರ ನಿಗದಿ ಸಮಿತಿ ವರದಿ ನೀಡಿದ್ದರೂ ಬಿಎಂಆರ್‌ಸಿಎಲ್ ವರದಿ ನೀಡುತ್ತಿಲ್ಲ. ಮಾಹಿತಿ ಹಕ್ಕಿನಡಿ ಅರ್ಜಿ ಸಲ್ಲಿಸಿದ್ದರೂ ಸಮಿತಿ ವರದಿ ಬಹಿರಂಗಪಡಿಸಿಲ್ಲ ಎಂದು ವಕೀಲರು ಉತ್ತರಿಸಿದರು.



ಪಾಲಿಕೆ ನೌಕರರ ಮುಷ್ಕರ

ಬೆಂಗಳೂರು: ರಾಜ್ಯಾದ್ಯಂತ ಮಹಾನಗರ ಪಾಲಿಕೆ ನೌಕರರು ಮಂಗಳವಾರದಿಂದ ಮುಷ್ಕರಕ್ಕೆ ಕರೆ ನೀಡಿದ್ದಾರೆ. ರಾಜ್ಯದ 10 ಮಹಾನಗರ ಪಾಲಿಕೆಗಳು ಬಂದ್ ಆಗಲಿದ್ದು, ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅವರು ಸಾಮೂಹಿಕ ರಜೆ ಹಾಕಿ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಲಿದ್ದಾರೆ. ಬಿಬಿಎಂಪಿ ಸೇರಿದಂತೆ ವಿವಿಧ ಪಾಲಿಕೆಗಳ ನೌಕರರು ಫ್ರೀಡಂ ಪಾರ್ಕ್‌ನಲ್ಲಿ ತಮ್ಮ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟಿಸಲಿದ್ದಾರೆ. ಪಾಲಿಕೆ ನೌಕರರನ್ನು ಸರ್ಕಾರಿ ನೌಕರರು ಅಂತ ಪರಿಗಣಿಸಬೇಕು. ಲಾಗ್‌ಸೇಫ್ ಹಾಜರಾತಿ ಪ್ರಕ್ರಿಯೆಯನ್ನ ರದ್ದು ಮಾಡಬೇಕು, ವಿವಿಧ ವಾರ್ಡ್ ಗಳಲ್ಲಿ ಖಾಲಿ ಇರುವ ಆರು ಸಾವಿರ ಹುದ್ದೆಗಳನ್ನು ಭರ್ತಿ ಮಾಡಬೇಕು, ಎಂದು ಇತ್ಯಾದಿ ಬೇಡಿಕೆಗಳನ್ನು ಮುಂದಿಟ್ಟಿದ್ದಾರೆ.

ವಿಡಿಯೊಗೆ ಬಳಸಿದ್ದ ಮಾರಕಾಸ್ತ್ರ ಮಾಯ: ವಿನಯ್, ರಜತ್‌ಗೆ ಸಂಕಷ್ಟ

ಬೆಂಗಳೂರು: ಕಿರುತೆರೆ ರಿಯಾಲಿಟಿ ಶೋ ಸ್ಪರ್ಧಿಗಳಾದ ರಜತ್ ಕಿಶನ್ ಹಾಗೂ ವಿನಯ್ ಗೌಡ ಮಾರಕಾಸ್ತ್ರ ಹಿಡಿದು ಸಾರ್ವಜನಿಕ ಸ್ಥಳದಲ್ಲಿ ಶಾರ್ಟ್ ವಿಡಿಯೊ ಮಾಡಿದ್ದ ಪ್ರಕರಣ ಚಾರ್ಜ್‌ಶೀಟ್ ಹಂತ ತಲುಪಿದೆ. ವಿಡಿಯೋಗೆ ಬಳಸಿದ್ದ ಮಾರಕಾಸ್ತ್ರಗಳು ಮೂರು ತಿಂಗಳು ಕಳೆದರೂ ಪೊಲೀಸರಿಗೆ ಸಿಗದಿರುವುದು ಇಬ್ಬರೂ ಆರೋಪಿಗಳಿಗೂ ಪುನಃ ಸಂಕಷ್ಟ ತಂದೊಡ್ಡುವ ಸಾಧ್ಯತೆ ದಟ್ಟವಾಗಿದೆ. ಮಾರಕಾಸ್ತ್ರ ದೊರೆಯದಿದ್ದರೆ ಸಾಕ್ಷ್ಯನಾಶವೆಂದು ಉಲ್ಲೇಖಿಸಿ ಚಾರ್ಜ್‌ಶೀಟ್ ಸಲ್ಲಿಸುವುದಾಗಿ ಪೊಲೀಸ್ ಮೂಲಗಳು ತಿಳಿಸಿವೆ. ಮಾರಕಾಸ್ತ್ರಗಳ ಮಾದರಿಯನ್ನು ತಯಾರಿಸಿ ಕೊಟ್ಟಿದ್ದರು ಎಂದು ಹೇಳಲಾದ ಆರ್ಟ್ ಡೈರೆಕ್ಟರ್‌ಗಳ ಹೇಳಿಕೆ ಪಡೆದಿರುವ ಬಸವೇಶ್ವರ ನಗರ ಠಾಣೆ ಪೊಲೀಸರು, ಘಟನಾ ಸ್ಥಳದ ಮಹಜರು ಪ್ರಕ್ರಿಯೆ ಪೂರ್ಣಗೊಳಿಸಿದ್ದಾರೆ. ಆದರೆ, ಕೃತ್ಯಕ್ಕೆ ಬಳಸಲಾಗಿರುವ ಮಾರಕಾಸ್ತ್ರಗಳನ್ನು ಸುಮನಹಳ್ಳಿ ಬಳಿ ಮೋರಿಯಲ್ಲಿ ಎಸೆದಿರುವುದಾಗಿ ವಿಚಾರಣೆ ವೇಳೆ ಆರೋಪಿಗಳು ತಿಳಿಸಿದ್ದರಾದರೂ, ಅವು ಇನ್ನೂ ಲಭ್ಯವಾಗಿಲ್ಲ. ಚಾರ್ಜ್ ಶೀಟ್‌ನಲ್ಲಿ ಸಾಕ್ಷ್ಯನಾಶವೆಂದು ಉಲ್ಲೇಖಿಸಿದರೆ ಮತ್ತು ಆರೋಪ ಸಾಬೀತಾದರೆ ಮತ್ತೊಮ್ಮೆ ಆರೋಪಿಗಳಿಗೆ ಸಂಕಷ್ಟ ಎದುರಾಗಲಿದೆ. ಮತ್ತೊಂದೆಡೆ, ವಿಡಿಯೋ ಚಿತ್ರೀಕರಣವಾದ ಸ್ಥಳದ ವ್ಯಾಪ್ತಿಯ ಅನ್ನಪೂರ್ಣೇಶ್ವರಿ ನಗರ ಠಾಣೆಗೆ ಪ್ರಕರಣ ವರ್ಗಾಯಿಸಲಿದ್ದು, ನಂತರ ಚಾರ್ಜ್ ಶೀಟ್ ಸಲ್ಲಿಕೆಯಾಗಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜೆ.ಹುಚ್ಚಪ್ಪಗೆ ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ನೀಡಲು ಉದಯ್‌ಶಂಕರ್ ಮನವಿ

ಬೆಂಗಳೂರು: ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಜೆ.ಹುಚ್ಚಪ್ಪ ಅವರನ್ನು ವಿಧಾನ ಪರಿಷತ್ ಸದಸ್ಯ ಅಥವಾ ಯಾವುದಾದರೂ ನಿಗಮ ಮಂಡಳಿ ಅಧ್ಯಕ್ಷ ಸ್ಥಾನಕ್ಕೆ ನಾಮ ನಿರ್ದೇಶಿಸಬೇಕು ಎಂದು ರಾಜ್ಯ ಅಹಿಂದ ಒಗ್ಗಟ್ಟಿಗಾಗಿ ಸಂಘಟನಾ ಒಕ್ಕೂಟ ರಾಜ್ಯಾಧ್ಯಕ್ಷ ಎಸ್.ಎಲ್.ಉದಯ್‌ಶಂಕರ್ ಸರಕಾರಕ್ಕೆ ಮನವಿ ಮಾಡಿದ್ದಾರೆ.

ಸಂಘಟನೆಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಮಾಜಿ ಮೇಯರ್ ಹಾಗೂ ಕೆಪಿಸಿಸಿ ಕಾರ್ಯದರ್ಶಿ ಜೆ.ಹುಚ್ಚಪ್ಪ ಅವರು ಬೆಂಗಳೂರಿಗೆ ಸಲ್ಲಿಸಿರುವ ಸೇವೆ ಅಪಾರವಾದದ್ದು, ಈ ಹಿಂದೆ ಮಾಜಿ ಮುಖ್ಯಮಂತ್ರಿ ಡಿ.ದೇವರಾಜು ಅರಸು ನಿಗಮ ಮಂಡಳಿಯಲ್ಲಿ ಅಧ್ಯಕ್ಷರಾಗಿ ಜನಪರ ಕಾರ್ಯಗಳಲ್ಲಿ ತೊಡಗಿ ಯಶಸ್ವಿಯಾಗಿದ್ದಾರೆ.

ಅದರಂತೆ ಕಾಂಗ್ರೆಸ್ ಪಕ್ಷದಲ್ಲಿ ಕಾರ್ಯಕರ್ತರನ್ನು ಸಂಘಟಿಸಿ ಹೋರಾಟಗಳನ್ನು ಮಾಡಿದ್ದಾರೆ. ನಾಡು, ನುಡಿ, ಜಲಾಶಯಕ್ಕೆ ಕುತ್ತು ಬಂದಾಗ ಅವುಗಳ ವಿರುದ್ಧ ಧ್ವನಿ ಎತ್ತಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿ ಸುಮಾರು 20 ವರ್ಷಗಳ ಕಾಲ ನಿಷ್ಠಾವಂತ ಕಾರ್ಯಕರ್ತರಾಗಿ ದುಡಿದಿದ್ದಾರೆ. ಆದ್ದರಿಂದ ಇದನ್ನೆಲ್ಲಾ ಪರಿಗಣಿಸಿ ಸರಕಾರ ಯಾವುದಾದರೂ ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ನೀಡಿದರೆ, ಜೆ.ಹುಚ್ಚಪ್ಪ ಅವರು ಯಶಸ್ವಿಯಾಗಿ ನಿರ್ವಹಿಸಿ ಇನ್ನು ಹೆಚ್ಚು ಜನಪರ ಕಾರ್ಯಗಳನ್ನು ಮಾಡುವರು. ಆದ್ದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಜೆ.ಹುಚ್ಚಪ್ಪ ಅವರ ಅನುಭವಕ್ಕೆ ತಕ್ಕ ಹಾಗೆ ಮುಂದಿನ ದಿನಗಳಲ್ಲಿ ಉತ್ತಮ ಸ್ಥಾನಮಾನ ನೀಡಬೇಕು ಎಂದು ಒಕ್ಕೂಟ ಹಾಗೂ ಹಲವಾರು ಸಂಘಸಂಸ್ಥೆಗಳ ಪರ ಮನವಿ ಮಾಡುತ್ತೇನೆ ಎಂದು ತಿಳಿಸಿದರು.

ಕರೆ ಮಾಡಲು ಕೊಟ್ಟ ಮೊಬೈಲ್ ವಾಪಸ್ ಕೇಳಿದ್ದಕ್ಕೆ ಮಚ್ಚು ಬೀಸಿದ

ದುಷ್ಕರ್ಮಿಯ ಅಟ್ಟಹಾಸಕ್ಕೆ ಸೆಕ್ಯುರಿಟಿ ಗಾರ್ಡ್‌ಗೆ ಗಂಭೀರ ಗಾಯ

ಬೆಂಗಳೂರು: ಅಪರಿಚಿತರು ಮೊಬೈಲ್ ಫೋನ್ ಕೇಳಿದಾಗ ಕೊಡುವ ಮುನ್ನ ಸ್ವಲ್ಪ ಎಚ್ಚರವಿರಲಿ. ಕರೆ ಮಾಡಲು ಕೊಟ್ಟ ಫೋನ್ ಅನ್ನು ವಾಪಸ್ ಕೇಳಿದ್ದಕ್ಕೆ ಮಾರಕಾಸ್ತ್ರಗಳಿಂದ ಹಲ್ಲೆಗೈದ ಘಟನೆ ನಡೆದಿದೆ.

ಜುಲೈ 3ರಂದು ಹಾಡಹಗಲೇ ಜಯನಗರದ ಪಟಾಲಮ್ಮ ದೇವಸ್ಥಾನದ ರಸ್ತೆಯಲ್ಲಿ ಈ ಘಟನೆ ಜರುಗಿದೆ. ದುಷ್ಕರ್ಮಿಯ ಅಟ್ಟಹಾಸಕ್ಕೆ ಸೆಕ್ಯುರಿಟಿ ಗಾರ್ಡ್ ಪರ್ವಿಂದರ್ ಎಂಬಾತ ಗಂಭೀರವಾಗಿ ಗಾಯಗೊಂಡಿದ್ದಾನೆ. ಹಲ್ಲೆ ಮಾಡಿ ಪರಾರಿಯಾಗಿದ್ದ ಆರೋಪಿ ಅಸ್ಗರ್ ಎಂಬಾತನನ್ನು ಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪಟ್ಟಾಕಮ್ಮ ದೇವಸ್ಥಾನದ ರಸ್ತೆಯ ಪಕ್ಕದಲ್ಲಿ ನಿರ್ಮಾಣವಾಗುತ್ತಿದ್ದ ಕಟ್ಟಡದ ಎಂಜಿನಿಯರಿಂಗ್ ಕೆಲಸವನ್ನು ಮಿಥುನ್ ಕುಮಾರ್ ಎಂಬವರು ಮಾಡುತ್ತಿದ್ದರು. ಜುಲೈ 3ರಂದು ಬೆಳಗ್ಗೆ 10 ಗಂಟೆ ಸುಮಾರಿಗೆ ರಸ್ತೆಯಲ್ಲಿ ಓನ್ ವೇನಲ್ಲಿ ಬಂದಿದ್ದ ಅಸ್ಗರ್, 'ನನ್ನ ಮೊಬೈಲ್ ಹಾಳಾಗಿದೆ, ಒಂದು ಕರೆ ಮಾಡಬೇಕು' ಎಂದು ಮಿಥುನ್ ಕುಮಾರ್ ಬಳಿ ಫೋನ್ ಕೇಳಿದ್ದ. ಈ ವೇಳೆ ಮಿಥುನ್ ಕುಮಾರ್ ತನ್ನ ಮೊಬೈಲ್ ಫೋನ್ ನೀಡಿದ್ದರು.

ಮೊಬೈಲ್ ಮರಳಿ ಕೇಳಿದ್ದಕ್ಕೆ ಮಚ್ಚು ಬೀಸಿದ: ಎರಡು ಕರೆಗಳನ್ನು ಮಾಡಿದ್ದ ಆರೋಪಿ ಬಳಿ ಮಿಥುನ್ ಕುಮಾರ್ ಫೋನ್ ವಾಪಸ್ ಕೇಳಿದ್ದರು. ಮೊಬೈಲ್ ಹಿಂದಿರುಗಿಸಲು ನಿರಾಕರಿಸಿದ್ದ ಆರೋಪಿ, ತನ್ನ ಸ್ಕೂಟರ್‌ನ ಮ್ಯಾಟ್ ಅಡಿಯಿಂದ ಮಾರಕಾಸ್ತ್ರ ತೆಗೆದು ಮಿಥುನ್ ಕುಮಾರ್ ಮೇಲೆ ಬೀಸಿದ್ದ. ಈ ವೇಳೆ ಗಲಾಟೆ ಬಿಡಿಸಲು ಬಂದ ಸೆಕ್ಯೂರಿಟಿ ಗಾರ್ಡ್ ಪರ್ವಿಂದರ್ ಮೇಲೆಯೂ ಮಾರಕಾಸ್ತ್ರ ಬೀಸಿ ಸ್ಕೂಟರ್ ಹಿಂದಿರುಗಿಸಿಕೊಂಡು ಪರಾರಿಯಾಗಿದ್ದ. ಘಟನೆಯ ಸಂಪೂರ್ಣ ದೃಶ್ಯಾವಳಿ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಪ್ರಕರಣ ದಾಖಲಿಸಿಕೊಂಡಿರುವ ಜಯನಗರ ಠಾಣೆ ಪೊಲೀಸರು ಸದ್ಯ ಆರೋಪಿಯನ್ನು ಬಂಧಿಸಿದ್ದಾರೆ.

PUBLIC NOTICE

The General Public are hereby informed that my client has intended to purchase, **Vacant Site bearing Municipal New No. 19/1, E-PID No. 2145746007, Old PID No. 38-1-19/1, (formerly Site No.1, Nagarabhavi Village, Yeshwanthapura Hobli, Bangalore North Taluk), situated at 1st Main Road, Garden Vilas, Nagarabhavi, Bangalore, measuring East to West: 42 Feet & North to South: 60 Feet, totally measuring 2520 Square Feet, presently within the jurisdiction of BBMP Ward No. 128-Nagarabhavi,** morefully described in the Schedule hereunder for valuable consideration from **Sri. M. VENUGOPAL RAO S/o Late M. Srinivasulu**, Any person/s objecting for the proposed purchase or having any right in the Schedule Property may lodge their objections and/ or claims to the undersigned along with the supporting documentary evidences **within 07 (Seven) days** from the date of this publication, and any objections or claims received thereafter will not be taken for consideration and my client will proceed to purchase the Schedule Property as if there are no claimant/s or objections from any person/s.

SCHEDULE PROPERTY

All that piece and parcel of **Vacant Site bearing Municipal New No. 19/1, E-PID No. 2145746007, Old PID No. 38-1-19/1, (formerly Site No.1, Nagarabhavi Village, Yeshwanthapura Hobli, Bangalore North Taluk), situated at 1st Main Road, Garden Vilas, Nagarabhavi, Bangalore, measuring East to West: 42 Feet & North to South: 60 Feet, totally measuring 2520 Square Feet, presently within the jurisdiction of BBMP Ward No. 128-Nagarabhavi** and property bounded by: **East by** : Private Property, **West by :** Private Property bearing Site No. 2, **North by :** 30 Feet Road, **South by :** Remaining property in Sy. No. 39/4.

RAGHAVENDRA C., Advocate, No. 109, 1st Floor, SSI Area, 5th Block, Rajajinagar, Bangalore – 560 010, Mob: 9845089883.

PUBLIC NOTICE

The General Public are hereby informed that my client has intended to purchase, **Vacant Site bearing Municipal New No. 19/2, E-PID No. 2018526652, Old PID No. 38-1-19/2, (formerly Site No.2, Nagarabhavi Village, Yeshwanthapura Hobli, Bangalore North Taluk), situated at 1st Main Road, Garden Vilas, Nagarabhavi, Bangalore, measuring East to West: 40 Feet & North to South: 60 Feet, totally measuring 2400 Square Feet, presently within the jurisdiction of BBMP Ward No. 128-Nagarabhavi,** morefully described in the Schedule hereunder for valuable consideration from **Smt. PADMA M. W/o Sri. M. VENUGOPAL RAO.** Any person/s objecting for the proposed purchase or having any right in the Schedule Property may lodge their objections and/ or claims to the undersigned along with the supporting documentary evidences within 07 (Seven) days from the date of this publication, and any objections or claims received thereafter will not be taken for consideration and my client will proceed to purchase the Schedule Property as if there are no claimant/s or objections from any person/s.

SCHEDULE PROPERTY

All that piece and parcel of **Vacant Site bearing Municipal New No. 19/2, E-PID No. 2018526652, Old PID No. 38-1-19/2, (formerly Site No. 2, Nagarabhavi Village, Yeshwanthapura Hobli, Bangalore North Taluk), situated at 1st Main Road, Garden Vilas, Nagarabhavi, Bangalore, measuring East to West: 40 Feet & North to South: 60 Feet, totally measuring 2400 Square Feet, presently within the jurisdiction of BBMP Ward No. 128-Nagarabhavi** and property bounded by: **East by** : Private Property bearing Site No. 1, **West by**:Private Property bearing Site No. 3, **North by**: 30 Feet Road, **South by :** Remaining property in Sy. No. 39/4.

RAGHAVENDRA C., Advocate, No. 109, 1st Floor, SSI Area, 5th Block, Rajajinagar, Bangalore – 560 010, Mob: 9845089883.

AP – COM NO. 87 OF 2025
IN THE HIGH COURT AT CALCUTTA
ORIGINAL SIDE COMMERCIAL DIVISION

In the matter of:

M/s. Wow Momo Foods Pvt. Ltd, a registered Pvt. Ltd. company having its registered Office at 29A/2E/1, Raja Subodh Chandra Mullick Road, Ground Floor (24 Shyama Pally) Kolkata - 700032.

Versus ...Petitioner

1. M/s. Sulfyaz (Partnership Concern) through Mr. Harish BB (Managing Partner) having its registered office at FC - 17, 2nd Floor, Food Court, Phoenix Market City Mall, Near R K Puram Fly-Over, Mahadevpura, (Opp Mahadevapura (MC), Bangalore-560048.
Also at :-
3rd Floor, No. 13, Food Court, Lulu Mall, Edapally, Ernakulam, Kerala - 682024.
2. Mr. Harish BB (Partner of Respondent No. 1) S/o Sh. B. P. Basher Ali, resident of Bangavil House, Palappotta, Karyankode, PO - Pudur, Pallakad, Kerala - 678581 Mobile-9902633116/7034444044
Also at : -
No. 97, Ground Floor, 3rd Cross, 8th Main, Behind Raheja Residency, Kormangala, 1st Block, Bangalore – 560034
3. M/s. 11th Zense Foods Pvt/ Ltd. 91 Springboard Business Hub, 5th floor, Trifecta Adatto, 21 ITPL Main Road, Garudachar Palya, Mahadevapura Whitefield, Karnataka, India - 560048 **...Respondents**

Kindly take note that the above-mentioned matter has been filed before the Hon'ble High Court at Calcutta against the aforesaid respondents and the same has been listed before the Hon'ble Justice Shampa Sarkar. Whereas by way of order dated June 23, 2025 passed by her Ladyship, the Hon'ble Justice Shampa Sarkar, Hon'ble Court was pleased to direct the petitioner to effect substituted service, thereby publish the captioned matter and the same is made returnable on the Daily List of July 14, 2025 before the Hon'ble High Court at Calcutta, when please attend.

Advocate
RAHUL MODAK
"DELTA HOUSE"
4, Government Place (North)
Room No. 3G, Kolkata - 700 001.

ಪತ್ನಿಗೆ ಕಿರುಕುಳ: ಡಿವೈಎಸ್ಪಿ ವಿರುದ್ಧ ಎಫ್‌ಐಆರ್

ಬೆಂಗಳೂರು: ಬೇರೊಂದು ಹೆಣ್ಣಿಗಾಗಿ ಪತ್ನಿಗೆ ಕಿರುಕುಳ ನೀಡಿ ಹಲ್ಲೆ ನಡೆಸಿದ ಆರೋಪದ ಮೇಲೆ ಐಎಸ್‌ಡಿ ಡಿವೈಎಸ್‌ಪಿ ಮೇಲೆ ಎಫ್‌ಐಆರ್ ದಾಖಲಾಗಿದೆ. ಡಿವೈಎಸ್‌ಪಿ ಶಂಕರಪ್ಪ ವಿರುದ್ಧ ಅವರ ಪತ್ನಿ ದೂರು ನೀಡಿದ್ದು, ನಗರದ ಈಶಾನ್ಯ ಮಹಿಳಾ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಕಾಲೇಜ್‌ಗೆ ಹೋಗುತ್ತಿರುವ ಮಗನಿದ್ದು ಅನ್ಯ ಹೆಣ್ಣಿನ ಸಂಪರ್ಕ ಮಾಡಿ ಹಲ್ಲೆ ಹಾಗೂ ಮಾನಸಿಕ ಕಿರುಕುಳ ನೀಡಿದ್ದಾರೆ. ವರದಕ್ಷಿಣೆ ಹಣಕ್ಕಾಗಿ ಪೀಡಿಸಿದ್ದಾರೆ. ಅಕ್ರಮವಾಗಿ ಆ ಹೆಣ್ಣಿನ ಜತೆ ಮದುವೆಯಾಗಿದ್ದಾರೆ. ನನಗೆ ನ್ಯಾಯ ಕೊಡಿಸಬೇಕೆಂದು ಡಿಜಿ ಐಜಿಪಿಗೂ ಡಿವೈಎಸ್‌ಪಿ ಪತ್ನಿ ದೂರು ನೀಡಿದ್ದಾರೆ. ನನ್ನ ಸಂಸಾರ ಹಾಳು ಮಾಡಬೇಡ ಎಂದು ಆ ಮಹಿಳೆಗೆ ಡಿವೈಎಸ್‌ಪಿ ಪತ್ನಿ ಪರಿಪರಿಯಾಗಿ ಕೇಳಿಕೊಂಡರೂ ಜೀವ ಬೆದರಿಕೆ ಹಾಕಿದ್ದಾರೆ. ಸದ್ಯ ಇಬ್ಬರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಭೀಕರ ಅಪಘಾತ: ಟಿಪ್ಪರ್ ಚಕ್ರದಡಿ ಸಿಲುಕಿ ದೇಹ ಅಪ್ಪಚ್ಚಿ

ದೇವನಹಳ್ಳಿ: ವಿಮಾನ ನಿಲ್ದಾಣ ರಸ್ತೆಯಲ್ಲಿ ಭೀಕರ ರಸ್ತೆ ಅಪಘಾತ ಸಂಭವಿಸಿದ ಪರಿಣಾಮ ಟಿಪ್ಪರ್ ಚಕ್ರದಡಿ ಸಿಲುಕಿ ಬೈಕ್ ಸವಾರನ ದೇಹ ಅಪ್ಪಚ್ಚಿಯಾಗಿದೆ. ಮತ್ತೊಬ್ಬ ಸವಾರ ಗಂಭೀರವಾಗಿ ಗಾಯಗೊಂಡಿದ್ದಾನೆ.

ದೇವನಹಳ್ಳಿ ತಾಲೂಕಿನ ಕನ್ನಮಂಗಲ ಗ್ರಾಮದ ಬಳಿಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಸೋಮವಾರ ಮಧ್ಯಾಹ್ನ ಘಟನೆ ನಡೆದಿದ್ದು, ಟಿಪ್ಪರ್ ಲಾರಿ ಬೈಕ್ ಮೇಲೆ ಹರಿದ ಪರಿಣಾಮ ಬೈಕ್ ಸವಾರ ಚಕ್ರದಡಿ ಸಿಲುಕಿದ್ದಾನೆ. ಆತನ ದೇಹ ಛಿದ್ರ ಛಿದ್ರವಾಗಿದೆ. ಮತ್ತೊಬ್ಬ ಸವಾರ ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಗೆ ರವಾನೆ ಮಾಡಲಾಗಿದೆ. ಮೃತ ಬೈಕ್ ಸವಾರನ ಗುರುತು ಪತ್ತೆಯಾಗಿಲ್ಲ. ಘಟನೆಯಲ್ಲಿ ವೃದ್ಧ ದಂಪತಿ ಗಾಯಗೊಂಡಿದ್ದು, ಅವರನ್ನೂ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ದೇವನಹಳ್ಳಿ ಸಂಚಾರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಡ್ರಗ್ಸ್ ಜಾಲ: 3 ವಿದೇಶಿಯರು ಸೆರೆ

ಬೆಂಗಳೂರು: ಮಿಂಚಿನ ಕಾರ್ಯಾಚರಣೆ ನಡೆಸಿರುವ ರಾಜಾನುಕುಂಟೆ ಪೊಲೀಸರು ಮೂವರು ವಿದೇಶಿ ಪ್ರಜೆಗಳನ್ನು ಬಂಧಿಸುವ ಮೂಲಕ ಡ್ರಗ್ಸ್ ಜಾಲವನ್ನು ಪತ್ತೆ ಮಾಡಿದ್ದಾರೆ. ಆರೋಪಿಗಳಿಂದ 4.5 ಕೋಟಿ ಮೌಲ್ಯದ ಮಾದಕ ದ್ರವ್ಯಗಳನ್ನು ಜಪ್ತಿ ಮಾಡಿಕೊಂಡಿದ್ದಾರೆ.

ಯಲಹಂಕ ತಾಲೂಕು ರಾಜಾನುಕುಂಟೆ ಪೊಲೀಸ್ ಠಾಣಾ ವ್ಯಾಪ್ತಿಯ ಅದ್ದಿಗಾನಹಳ್ಳಿ ಗ್ರಾಮದ ಬಾಡಿಗೆ ಮನೆಯೊಂದರಲ್ಲಿ ವಿದೇಶಿ ಪ್ರಜೆಗಳು ವಾಸವಾಗಿದ್ದು, ಅವರ ಚಲನವಲನದ ಬಗ್ಗೆ ಪೊಲೀಸರಿಗೆ ಸಂಶಯ ಇತ್ತು. ಹೀಗಾಗಿ ಖಚಿತ ಮಾಹಿತಿ ಪಡೆದ ಮೇರೆಗೆ ರಾಜಾನುಕುಂಟೆ ಪೊಲೀಸರು ಅವರ ಮನೆ ಮೇಲೆ ದಾಳಿ ಮಾಡಿದ್ದಾರೆ. ದಾಳಿ ವೇಳೆ ಮನೆಯಲ್ಲಿ ಮೂವರು ವಿದೇಶಿ ಪ್ರಜೆಗಳು ವಾಸವಾಗಿರುವುದು ಪತ್ತೆಯಾಗಿದೆ. ಮಾದಕ ದ್ರವ್ಯವೂ ಸಿಕ್ಕಿದೆ. ಹೀಗಾಗಿ ಅವರನ್ನು ಬಂಧಿಸಲಾಗಿದೆ. ಈ ಕುರಿತು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ. ಕೆ.ಬಾಬಾ ಅವರು ಮಾತನಾಡಿದ್ದು, ನೈಜೀರಿಯಾ ಮೂಲದ ಮೂವರು ವಿದೇಶಿ ಪ್ರಜೆಗಳನ್ನು ಬಂಧಿಸಲಾಗಿದೆ. ಆರೋಪಿಗಳು ಮೆಡಿಕಲ್ ಕಾರಣಕ್ಕಾಗಿ ದೆಹಲಿಗೆ ಬಂದಿದ್ದರು. ಅಲ್ಲಿಂದ ಬೆಂಗಳೂರಿನ ಅದಿಗಾನಹಳ್ಳಿಯಲ್ಲಿ ಬಾಡಿಗೆ ಮನೆ ಪಡೆದು ವಾಸವಾಗಿದ್ದರು ಎಂದಿದ್ದಾರೆ.

ಸಂಚರಿಸದಿದ್ದರೂ ಸುಳ್ಳು ದಾಖಲೆ ನೀಡಿ 4 ಸಾವಿರ ಲೀ. ಡೀಸೆಲ್ ಹಣ ಲೂಟಿ

ಬೆಂಗಳೂರು: ಬಿಎಂಟಿಸಿಯಲ್ಲಿ ಬಸ್‌ಗಳು ಸಂಚರಿಸದಿದ್ದರೂ ಸುಳ್ಳು ಲೆಕ್ಕ ನೀಡಿ ಸಾವಿರಾರು ಲೀಟರ್ ಡೀಸೆಲ್ ಕಳ್ಳತನ ಮಾಡಿದ್ದಾರೆ ಎಂದು ಸುಮನಹಳ್ಳಿ ಡಿಪೋ ಅಧಿಕಾರಿಗಳ ವಿರುದ್ಧ ದೂರುಗಳಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಲಾಗಿದೆ.

ಬಿಎಂಟಿಸಿಯ 54 ಡಿಪೊಗಳಲ್ಲಿ ಸುಮಾರು 6800 ಬಸ್‌ಗಳಿದ್ದು, ಅದರಲ್ಲಿ ಪ್ರತಿದಿನ ಡಿಪೋದಿಂದ ಒಪ್ಪಂದದ ಮೇರೆಗೆ ನೂರಾರು ಬಸ್‌ಗಳನ್ನು ಬಾಡಿಗೆಗೆ ನೀಡಲಾಗುತ್ತದೆ. ಈ ವೇಳೆ ಡಿಪೋದ ಹಿರಿಯ ಅಧಿಕಾರಿಗಳೊಂದಿಗೆ ಚಾಲಕರು, ನಿರ್ವಾಹಕರು ಕೈ ಜೋಡಿಸಿದ್ದು, ಸುಳ್ಳು ಲೆಕ್ಕ ಕೊಟ್ಟು



ಡೀಸೆಲ್ ಕಳ್ಳತನ ಮಾಡುತ್ತಿರುವ ಆರೋಪ ಕೇಳಿಬಂದಿದೆ. ಘಟಕ 31 ರ ಸುಮ್ಮನಹಳ್ಳಿ ಡಿಪೋದಿಂದ ಸಿಸಿ ಕಾಂಟ್ಯಾಕ್ಟ್ ಕ್ಯಾರೇಜ್ ಮೇಲೆ ಬೇರೆ ಬೇರೆ ಊರಿಗೆ ಮತ್ತು ಮದುವೆ-ಶುಭ ಸಮಾರಂಭಗಳಿಗೆ ಬಿಎಂಟಿಸಿ ಬಸ್‌ಗಳನ್ನು ತೆಗೆದುಕೊಂಡು ಹೋಗಿದ್ದು, ಈ ವೇಳೆ, ಬಸ್ ಕಡಿಮೆ ದೂರ ಸಂಚಾರ ಮಾಡಿದ್ದರೂ ಹೆಚ್ಚಿನ ಸಂಚಾರ ಮಾಡಿದೆ ಎಂದು ಲೆಕ್ಕ ತೋರಿಸಿ ಡಿಪೋದ ಹಿರಿಯ ಅಧಿಕಾರಿಗಳು ಸುಮಾರು 4 ಸಾವಿರ ಲೀಟರ್‌ನಷ್ಟು ಡಿಸೇಲ್ ಕಳವು ಮಾಡಿ ಬಿಎಂಟಿಸಿಗೆ ಲಕ್ಷಾಂತರ ರುಪಾಯಿ ಮೋಸ ಮಾಡಿರುವ ಆರೋಪ ಕೇಳಿ ಬಂದಿದೆ. ಈ ಆರೋಪದ ಬಗ್ಗೆ ದಾಖಲೆ ಸಮೇತ ಬಿಎಂಟಿಸಿಯ ಮುಖ್ಯ ಕಚೇರಿಯ ಹಿರಿಯ ಅಧಿಕಾರಿಗಳಿಗೆ ದೂರು ನೀಡಿದರೂ ಯಾವುದೇ ಕ್ರಮಗೊಳ್ಳಲು ಮುಂದಾಗಿಲ್ಲ . ಈ ಅಕ್ರಮದಲ್ಲಿ ಹಿರಿಯ ಅಧಿಕಾರಿಗಳೇ ಶಾಮೀಲಾಗಿದ್ದಾರೆ. ಈಗ ಬೆಳಕಿಗೆ ಬಂದಿರುವುದು ಸುಮ್ಮನಹಳ್ಳಿ ಡಿಪೋ ಅಕ್ರಮ ಮಾತ್ರ. ಸರಿಯಾಗಿ ತನಿಖೆ ಮಾಡಿದರೆ 54 ಡಿಪೋಗಳ ಅಕ್ರಮ ಕೂಡ ಬಯಲಾಗುತ್ತದೆ ಎಂದು ಸಾರಿಗೆ ನೌಕರರ ಮುಖಂಡರು ಹೇಳಿದ್ದಾರೆ.

THIS IS A PUBLIC ANNOUNCEMENT FOR INFORMATION PURPOSES ONLY AND DOES NOT CONSTITUTE AN INVITATION OR OFFER TO ACQUIRE, PURCHASE OR SUBSCRIBE TO SECURITIES NOR IT IS A PROSPECTUS ANNOUNCEMENT. NOT FOR RELEASE, PUBLICATION OR DISTRIBUTION, DIRECTLY OR INDIRECTLY, OUTSIDE INDIA.

INITIAL PUBLIC OFFERING OF EQUITY SHARES OF THE COMPANY ON THE MAIN BOARD OF THE BSE LIMITED ("**BSE**") AND NATIONAL STOCK EXCHANGE OF INDIA LIMITED ("**NSE**", AND TOGETHER WITH BSE, THE "**STOCK EXCHANGES**") IN COMPLIANCE WITH CHAPTER II OF THE SECURITIES AND EXCHANGE BOARD OF INDIA (ISSUE OF CAPITAL AND DISCLOSURE REQUIREMENTS) REGULATIONS, 2018, AS AMENDED ("**SEBI ICDR REGULATIONS**")

PUBLIC ANNOUNCEMENT

(Please scan this QR Code to view the DRHP)

EMMVEE

EMMVEE PHOTOVOLTAIC POWER LIMITED

Our Company was originally incorporated as "Emmvee Toughened Glass and Photovoltaics Private Limited" as a private limited company under the provisions of the Companies Act, 1956, pursuant to a certificate of incorporation dated March 21, 2007, issued by the RoC. Pursuant to a change in the name of our Company to "Emmvee Photovoltaic Power Private Limited", a fresh certificate of incorporation dated November 10, 2010, was issued by the RoC.The name change was undertaken to align with the current business growth and product portfolio of our Company and global renewable energy scenario. Subsequently, our Company was converted to a public limited company and the name of our Company changed to "Emmvee Photovoltaic Power Limited" pursuant to approval by our Board pursuant to resolution dated April 28, 2025 and Shareholders pursuant to an extra ordinary general meeting dated April 29, 2025 and a fresh certificate of incorporation dated May 7, 2025 was issued by the central processing centre, MCA, Haryana. For further details, see *"History and Certain Corporate Matters – Brief History of our Company"* on page 229 of the draft red herring prospectus dated July 6, 2025 (**"DRHP"**).

Registered and Corporate Office: 13/1, International Airport Road, Bettahalasur Post, Bengaluru, Karnataka, 562 157, India
Tel: +91 80 2217 4524; **Website:** www.emmveepv.com; **Contact Person:** Shailesha Barve, Company Secretary and Compliance Officer; **E-mail:** investorrelations@emmvee.in
Corporate Identity Number: U26101KA2007PLC042197

OUR PROMOTERS: MANJUNATHA DONTHI VENKATARATHNAIAH, SHUBHA MANJUNATHA DONTHI, SUHAS DONTHI MANJUNATHA AND SUMANTH MANJUNATHA DONTHI

INITIAL PUBLIC OFFER OF UP TO [●] EQUITY SHARES OF FACE VALUE OF ₹2 EACH ("EQUITY SHARES") OF EMMVEE PHOTOVOLTAIC POWER LIMITED ("COMPANY") FOR CASH AT A PRICE OF ₹[●] PER EQUITY SHARE (INCLUDING A SHARE PREMIUM OF ₹[●] PER EQUITY SHARE) ("OFFER PRICE") AGGREGATING UP TO ₹30,000.00 MILLION COMPRISING A FRESH ISSUE OF UP TO [●] EQUITY SHARES OF FACE VALUE OF ₹2 EACH AGGREGATING UP TO ₹21,438.62 MILLION BY OUR COMPANY ("FRESH ISSUE") AND AN OFFER FOR SALE OF UP TO [●] EQUITY SHARES OF FACE VALUE OF ₹2 EACH AGGREGATING UP TO ₹4,280.69 MILLION BY MANJUNATHA DONTHI VENKATARATHNAIAH AND UP TO [●] EQUITY SHARES OF FACE VALUE OF ₹2 EACH AGGREGATING UP TO ₹4,280.69 MILLION BY SHUBHA MANJUNATHA DONTHI (THE "PROMOTER SELLING SHAREHOLDERS") AND SUCH EQUITY SHARES OFFERED BY THE PROMOTER SELLING SHAREHOLDERS ("OFFER FOR SALE" AND TOGETHER WITH THE FRESH ISSUE, THE "OFFER").

THE OFFER INCLUDES A RESERVATION OF UP TO [●] EQUITY SHARES OF FACE VALUE ₹2 EACH, AGGREGATING UP TO ₹[●] MILLION (CONSTITUTING UP TO [●]% OF THE POST-OFFER PAID-UP EQUITY SHARE CAPITAL OF OUR COMPANY), FOR SUBSCRIPTION BY ELIGIBLE EMPLOYEES (THE "EMPLOYEE RESERVATION PORTION"). THE OFFER, LESS THE EMPLOYEE RESERVATION PORTION, IS HEREINAFTER REFERRED TO AS THE "NET OFFER". THE OFFER AND THE NET OFFER SHALL CONSTITUTE [●]% AND [●]%, RESPECTIVELY, OF THE POST-OFFER PAID-UP EQUITY SHARE CAPITAL OF OUR COMPANY.

OUR COMPANY, IN CONSULTATION WITH THE BRLMS, MAY CONSIDER A FURTHER ISSUE OF SPECIFIED SECURITIES FOR AN AMOUNT OF UP TO ₹4,287.72 MILLION, AS MAY BE PERMITTED UNDER THE APPLICABLE LAW, PRIOR TO FILING OF THE RED HERRING PROSPECTUS WITH THE ROC ("PRE-IPO PLACEMENT" OR "PRE-IPO"). THE PRE-IPO PLACEMENT, IF UNDERTAKEN, WILL BE AT A PRICE TO BE DECIDED BY OUR COMPANY, IN CONSULTATION WITH THE BRLMS. IF THE PRE-IPO PLACEMENT IS COMPLETED, THE AMOUNT RAISED PURSUANT TO THE PRE-IPO PLACEMENT WILL BE REDUCED FROM THE FRESH ISSUE, SUBJECT TO COMPLIANCE WITH RULE 19(2)(B) OF THE SCRR. THE PRE-IPO PLACEMENT, IF UNDERTAKEN, SHALL NOT EXCEED 20% OF THE SIZE OF THE FRESH ISSUE. PRIOR TO THE COMPLETION OF THE OFFER, OUR COMPANY SHALL APPROPRIATELY INTIMATE THE SUBSCRIBERS TO THE PRE-IPO PLACEMENT, PRIOR TO ALLOTMENT PURSUANT TO THE PRE-IPO PLACEMENT, THAT THERE IS NO GUARANTEE THAT OUR COMPANY MAY PROCEED WITH THE OFFER OR THE OFFER MAY BE SUCCESSFUL AND WILL RESULT INTO LISTING OF THE EQUITY SHARES ON THE STOCK EXCHANGES. FURTHER, RELEVANT DISCLOSURES IN RELATION TO SUCH INTIMATION TO THE SUBSCRIBERS TO THE PRE-IPO PLACEMENT (IF UNDERTAKEN) SHALL BE APPROPRIATELY MADE IN THE RELEVANT SECTIONS OF THE RED HERRING PROSPECTUS AND PROSPECTUS.

THE FACE VALUE OF EQUITY SHARES IS ₹2 EACH. THE OFFER PRICE IS [●] TIMES THE FACE VALUE OF THE EQUITY SHARES. THE PRICE BAND,AND THE MINIMUM BID LOT SHALL BE DECIDED BY OUR COMPANY, IN CONSULTATION WITH THE BRLMS AND WILL BE ADVERTISED IN ALL EDITIONS OF [●], AN ENGLISH NATIONAL DAILY NEWSPAPER, ALL EDITIONS OF [●], A HINDI NATIONAL DAILY NEWSPAPER AND THE [●] EDITION OF [●], A KANNADA DAILY NEWSPAPER (KANNADA BEING THE REGIONAL LANGUAGE OF KARNATAKA, WHERE OUR REGISTERED AND CORPORATE OFFICE IS LOCATED), EACH WITH WIDE CIRCULATION, AT LEAST TWO WORKING DAYS PRIOR TO THE BID/ OFFER OPENING DATE AND SHALL BE MADE AVAILABLE TO THE STOCK EXCHANGES FOR THE PURPOSE OF UPLOADING ON THEIR RESPECTIVE WEBSITES IN ACCORDANCE WITH THE SEBI ICDR REGULATIONS.

In case of any revision in the Price Band, the Bid/ Offer Period will be extended by at least three additional Working Days after such revision in the Price Band, subject to the Bid/ Offer Period not exceeding 10 Working Days. In cases of force majeure, banking strike or similar unforeseen circumstances, our Company may, in consultation with the BRLMs, for reasons to be recorded in writing, extend the Bid/ Offer Period for a minimum of one Working Day, subject to the Bid/ Offer Period not exceeding 10 Working Days. Any revision in the Price Band and the revised Bid/ Offer Period, if applicable, shall be widely disseminated by notification to the Stock Exchanges, by issuing a public notice, and also by indicating the change on the respective websites of the BRLMs and at the terminals of the Syndicate Members and by intimation to the Self-Certified Syndicate Banks ("**SCSBs**"), other Designated Intermediaries and the Sponsor Bank(s), as applicable.

This is an Offer in terms of Rule 19(2)(b) of the Securities Contracts (Regulation) Rules, 1957, as amended **("SCRR")** read with Regulation 31 of the SEBI ICDR Regulations. This Offer is being made through the Book Building Process in compliance with Regulation 6(2) of the SEBI ICDR Regulations wherein in terms of Regulation 32(1) of the SEBI ICDR Regulations, not less than 75% of the Net Offer shall be available for allocation on a proportionate basis to Qualified Institutional Buyers (**"QIBs",** and such portion, the **"QIB Portion"**) provided that our Company in consultation with the BRLMs, may allocate up to 60% of the QIB Portion to Anchor Investors on a discretionary basis in accordance with the SEBI ICDR Regulations (**"Anchor Investor Portion"**), of which at least one-third shall be reserved for domestic Mutual Funds, subject to valid Bids being received from domestic Mutual Funds at or above the Anchor Investor Allocation Price. In the event of under-subscription or non-allocation in the Anchor Investor Portion, the balance Equity Shares shall be added to the Net QIB Portion. Further, 5% of the Net QIB Portion shall be available for allocation on a proportionate basis to Mutual Funds only and the remainder of the Net QIB Portion shall be available for allocation on a proportionate basis to all QIBs (other than Anchor Investors) including Mutual Funds, subject to valid Bids being received at or above the Offer Price However, if the aggregate demand from Mutual Funds is less than 5% of the Net QIB Portion, the balance Equity Shares available for allocation in the Mutual Fund Portion will be added to the remaining QIB Portion for proportionate allocation to QIBs. Further, not more than 15% of the Net Offer shall be available for allocation to NIBs out of which (a) one-third of such portion shall be reserved for Bidders with application size of more than ₹0.20 million and up to ₹1.00 million; and (b) two-third of such portion shall be reserved for Bidders with application size of more than ₹1.00 million provided that the unsubscribed portion in either of such sub-categories may be allocated to Bidders in other sub-category of the NIBs in accordance with SEBI ICDR Regulations and not more than 10% of the Net Offer shall be available for allocation to Retail Individual Bidders **("RIB")** in accordance with the SEBI ICDR Regulations, subject to valid Bids being received from them at or above the Offer Price. Further, Equity Shares will be allocated on a proportionate basis to Eligible Employees applying under the Employee Reservation Portion, subject to valid Bids received from them at or above the Offer Price. All Bidders (except Anchor Investors) are required to mandatorily utilise the Application Supported by Blocked Amount **("ASBA")** process by providing details of their respective ASBA accounts (and UPI ID in case of UPI Bidders using the UPI Mechanism), (in which case the corresponding Bid Amounts will be blocked by the SCSBs or under the UPI Mechanism, as applicable to participate in the Offer. Anchor Investors are not permitted to participate in the Anchor Investor Portion of the Offer through the ASBA process. For details, see *"Offer Procedure"* on page 390 of the DRHP.

This public announcement is being made in compliance with the provisions of Regulation 26(2) of the SEBI ICDR Regulations to inform the public that our Company is proposing, subject to applicable statutory and regulatory requirements, receipt of requisite approvals, market conditions and other considerations, to undertake an initial public offering of its Equity Shares pursuant to the Offer and has filed the DRHP dated July 6, 2025 with the SEBI and with the Stock Exchanges on July 6, 2025. Pursuant to Regulation 26(1) of the SEBI ICDR Regulations, the DRHP filed with SEBI and Stock Exchanges shall be made available to the public for comments, if any, for period of at least 21 days, from the date of publication of this public announcement, by hosting it on the website of SEBI at www.sebi.gov.in, websites of the Stock Exchanges i.e., BSE at www.bseindia.com and NSE at www.nseindia.com, respectively, on the website of the Company at www.emmveepv.com and the websites of the BRLMs, i.e., JM Financial Limited, IIFL Capital Services Limited *(formerly known as IIFL Securities Limited)*, Jefferies India Private Limited and Kotak Mahindra Capital Company Limited at www.jmfl.com, www.iiflcap.com, www.jefferies.com and https://investmentbank.kotak.com, respectively.. Our Company hereby invites the public to provide comments on the DRHP filed with SEBI and the Stock Exchanges with respect to disclosures made therein. The public are requested to send a copy of the comments to SEBI, to the Company Secretary and Compliance Officer of our Company and/or the BRLMs and the Registrar to the Offer at their respective addresses mentioned below. All comments must be received by our Company and/or the BRLMs and/or the Registrar to the Offer and/or the Company Secretary and Compliance Officer of our Company on or before 5:00 p.m. on the 21st day from the date of publication of this public announcement.

Investments in equity and equity-related securities involve a degree of risk and Bidders should not invest any funds in the Offer unless they can afford to take the risk of losing their entire investment. Bidders are advised to read the risk factors carefully before taking an investment decision in the Offer. For taking an investment decision, Bidders must rely on their own examination of our Company and the Offer, including the risks involved. The Equity Shares in the Offer have not been recommended or approved by SEBI, nor does SEBI guarantee the accuracy or adequacy of the contents of the Draft Red Herring Prospectus. Specific attention of the Bidders is invited to *"Risk Factors"* on page 30 of the DRHP.

Any decision to invest in the Equity Shares described in the DRHP may only be made after the Red Herring Prospectus ("**RHP**") and must be made solely on the basis of such RHP has been filed with the RoC as there may be material changes in the RHP from the DRHP.

The Equity Shares, when offered, through the RHP, are proposed to be listed on BSE and NSE. For details of the main objects of the Company as contained in its Memorandum of Association, see *"History and Certain Corporate Matters"* on page 229 of the DRHP. The liability of the members of the Company is limited by shares. For details of the share capital and capital structure of the Company and the names of the signatories to the Memorandum of Association and the number of shares subscribed by them of the Company see *"Capital Structure"* on page 83 of the DRHP.

BOOK RUNNING LEAD MANAGERS TO THE OFFER				REGISTRAR TO THE OFFER
JM FINANCIAL	IIFL CAPITAL	Jefferies	kotak Investment Banking	KFINTECH
JM Financial Limited 7th Floor, Cnergy, Appasaheb Marathe Marg, Prabhadevi, Mumbai Maharashtra, 400 025, India **Tel:** +91 22 6630 3030 **E-mail:** emmveephotovoltaic.ipo@jmfl.com **Website:** www.jmfl.com **Investor Grievance E-mail:** grievance.ibd@jmfl.com **Contact Person:** Prachee Dhuri **SEBI Registration No.:** INM000010361	**IIFL Capital Services Limited** *(formerly known as IIFL Securities Limited)* 24th Floor, One Lodha Place, Senapati Bapat Marg, Lower Parel (West), Mumbai, Maharashtra, 400 013, India **Tel:** +91 22 4646 4728 **E-mail:** emmvee.ipo@iiflcap.com **Website:** www.iiflcap.com **Investor Grievance E-mail:** ig.ib@iiflcap.com **Contact Person:** Mansi Sampat/ Pawan Jain **SEBI Registration No.:** INM000010940	**Jefferies India Private Limited** Level 16, Express Towers Nariman Point, Mumbai Maharashtra, 400 021, India **Tel:** +91 22 4356 6000 **E-mail:** Emmvee.IPO@jefferies.com **Website:** www.jefferies.com **Investor Grievance E-mail:** jipl.grievance@jefferies.com **Contact Person:** Suhani Bhareja **SEBI Registration No:** INM000011443	**Kotak Mahindra Capital Company Limited** 27 BKC, 1st Floor, Plot No. C–27 "G" Block, Bandra Kurla Complex Bandra (East), Mumbai 400 051 Maharashtra, India **Tel:** +91 22 4336 0000 **E-mail:** Emmvee.ipo@kotak.com **Website:** https://investmentbank.kotak.com **Investor Grievance E-mail:** kmccredressal@kotak.com **Contact Person:** Ganesh Rane **SEBI Registration No:** INM000008704	**KFin Technologies Limited** Selenium, Tower-B, Plot No. 31 & 32, Financial District, Nanakramguda, Serilingampally, Rangareddi, Hyderabad, Telangana, 500 032, India **Tel:** + 91 40 6716 2222/ 1800 309 4001 **E-mail:** emmvee.ipo@kfintech.com **Website:** www.kfintech.com **Investor Grievance E-mail:** einward.ris@kfintech.com **Contact Person:** M. Murali Krishna **SEBI registration no.:** INR000000221

All capitalized terms used herein and not specifically defined shall have the same meaning as ascribed to them in the DRHP.

For **EMMVEE PHOTOVOLTAIC POWER LIMITED**
On behalf of the Board of Directors
Sd/-
Shailesha Barve
Company Secretary and Compliance Officer

Place: Bengaluru, Karnataka
Date: July 7, 2025

EMMVEE PHOTOVOLTAIC POWER LIMITED is proposing, subject to applicable statutory and regulatory requirements, receipt of requisite approvals, market conditions and other considerations, to make an initial public offering of its Equity Shares and has filed the DRHP with SEBI and the Stock Exchanges on July 6, 2025. The DRHP shall be available on the website of SEBI at www.sebi.gov.in, and is available on the websites of the Stock Exchanges i.e. BSE and NSE at www.bseindia.com and www.nseindia.com, respectively, on the website of the Company at www.emmveepv.com and the websites of the BRLMs, i.e., JM Financial Limited, IIFL Capital Services Limited *(formerly known as IIFL Securities Limited)*, Jefferies India Private Limited and Kotak Mahindra Capital Company Limited at www.jmfl.com, www.iiflcap.com, www.jefferies.com and https://investmentbank.kotak.com, respectively. Any potential investors should note that investment in equity shares involves a high degree of risk and for details relating to such risk, see *"Risk Factors"* beginning on page 30 of the DRHP. Potential investors should not rely on the DRHP filed with SEBI and the Stock Exchanges, and should instead rely on their own examination of our Company and the Offer, including the risks involved, for making any investment decision.

The Equity Shares offered in the Offer have not been and will not be registered under the U.S. Securities Act of 1933, as amended (the "**U.S. Securities Act**") or any state securities laws in the United States and, unless so registered, may not be offered or sold within the United States, except pursuant to an exemption from, or in a transaction not subject to, the registration requirements of the U.S. Securities Act and applicable state securities laws. Accordingly, the Equity Shares are being offered and sold (i) within the United States only to persons reasonably believed to be "qualified institutional buyers" (as defined in Rule 144A under the U.S. Securities Act and referred to in the Draft Red Herring Prospectus as "**U.S. QIBs**") pursuant to the private placement exemption set out in Section 4(a) of the U.S. Securities Act, and (ii) outside the United States in offshore transactions as defined in and in reliance on Regulation S under the U.S. Securities Act and the applicable laws of the jurisdiction where those offers and sales are made. The Equity Shares have not been and will not be registered, listed or otherwise qualified in any other jurisdiction outside India and may not be offered or sold, and Bids may not be made by persons in any such jurisdiction, except in compliance with the applicable laws of such jurisdiction. There will be no public offering in the United States.

Adfactors 240/25

ಸಮಾಚಾರ ಸಣ್ಣದಲ್ಲ

ಬರೋಡಾ ಬ್ಯಾಂಕ್‌ನಿಂದ ಕನಿಷ್ಠ ಶುಲ್ಕ ಮನ್ನಾ

ಬೆಂಗಳೂರು: ಭಾರತದ ಪ್ರಮುಖ ಸಾರ್ವಜನಿಕ ವಲಯದ ಬ್ಯಾಂಕ್‌ಗಳಲ್ಲಿ ಒಂದಾದ ಬ್ಯಾಂಕ್ ಆಫ್ ಬರೋಡಾ ಎಲ್ಲಾ ಉಳಿತಾಯ ಖಾತೆಗಳಲ್ಲಿ ಕನಿಷ್ಠ ಬ್ಯಾಲೆನ್ಸ್ ಕಾಯ್ದುಕೊಳ್ಳದವರಿಗೆ ವಿಧಿಸಲಾಗುವ ಶುಲ್ಕಗಳನ್ನು ಮನ್ನಾ ಮಾಡುವ ಮೂಲಕ ಗ್ರಾಹಕ ಸ್ನೇಹಿ ಉಪಕ್ರಮ ಘೋಷಿಸಿದೆ. ಇದು ತನ್ನ ಗ್ರಾಹಕರಿಗೆ ತನ್ನ ಬದ್ಧತೆಯನ್ನು ಬಲಪಡಿಸುತ್ತದೆ. ಇದರೊಂದಿಗೆ, ಗ್ರಾಹಕರು ತಮ್ಮ ಉಳಿತಾಯ ಖಾತೆಗಳಲ್ಲಿ ಮಾಸಿಕ ಸರಾಸರಿ ಬ್ಯಾಲೆನ್ಸ್‌ನಲ್ಲಿನ ಯಾವುದೇ ಕೊರತೆಗೆ ಯಾವುದೇ ಶುಲ್ಕವನ್ನು ವಿಧಿಸುವುದಿಲ್ಲ. ಪ್ರೀಮಿಯಂ ಉಳಿತಾಯ ಖಾತೆ ಯೋಜನೆಗಳಿಗೆ ಈ ವಿನಾಯಿತಿ ಅನ್ವಯಿಸುವುದಿಲ್ಲ. ಇದು ನಮ್ಮ ಗ್ರಾಹಕರಿಗೆ ಸಮಗ್ರ, ಮೌಲ್ಯ-ಚಾಲಿತ ಬ್ಯಾಂಕಿಂಗ್ ಸೇವೆಗಳನ್ನು ತಲುಪಿಸುವ ನಮ್ಮ ಪ್ರಯತ್ನಗಳನ್ನು ಮತ್ತಷ್ಟು ಬಲಪಡಿಸುತ್ತದೆ ಎಂದು ಬ್ಯಾಂಕ್ ಆಫ್ ಬರೋಡಾದ ಕಾರ್ಯನಿರ್ವಾಹಕ ನಿರ್ದೇಶಕಿ ಬೀನಾ ವಹೀದ್ ಅವರು ತಿಳಿಸಿದ್ದಾರೆ.

ರಂಗ ಶಂಕರದಲ್ಲಿ ನಾಟಕ ಇಂದು

ಬೆಂಗಳೂರು: ಡಿ.ಆರ್.ನಾಗರಾಜ್ ರಂಗರೂಪದ ವಾರ್ಡ್ ನಂಬರ್ 6 ನಾಟಕ ಪ್ರದರ್ಶನ ಮಂಗಳವಾರ ಸಂಜೆ 7.30ಕ್ಕೆ ಜೆಪಿ ನಗರದ ರಂಗ ಶಂಕರದಲ್ಲಿ ನಡೆಯಲಿದೆ. ಮೈಸೂರಿನ ಜಿಪಿಐಇಆರ್ ರಂಗ ತಂಡದ ಜತೆಯಲ್ಲಿ ಮೈಮ್ ರಮೇಶ್ ನಿರ್ದೇಶಿಸಿರುವ ನಾಟಕ ಇದಾಗಿದ್ದು, ಹರಿದತ್ತ ಅವರ ಸಂಗೀತ ನಿರ್ವಹಣೆ, ಚೇತನ್ ರಾವ್ ಸಹ ನಿರ್ದೇಶನ, ಚಂದನ್ ಕ್ಯಾತಮಾರನಹಳ್ಳಿ ರಂಗ ಪ್ರಸಾದನ, ರಾಘವೇಂದ್ರ ಬೆಳಕು ಆಯೋಜನೆ ಮಾಡಲಿದ್ದಾರೆ. ರಂಗ ಪ್ರಿಯರು ಭಾಗವಹಿಸಿ ನಾಟಕ ಪ್ರದರ್ಶನ ಯಶಸ್ವಿಗೊಳಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ 9019370060 ಗೆ ಸಂಪರ್ಕಿಸಿ.

ಆ.10ಕ್ಕೆ ಗುರು ಪೌರ್ಣಿಮೆ ಜಾತ್ರೆ

ಬೆಂಗಳೂರು: ಪಂಚಗಣಪತಿ ದೇವರ 16ನೇ ವಾರ್ಷಿಕೋತ್ಸವ ಹಾಗೂ ಗುರು ಪೌರ್ಣಿಮೆ ಜಾತ್ರಾ ಮಹೋತ್ಸವ ಭಾನುವಾರ ಬೆಳಗ್ಗೆ 11 ಗಂಟೆಗೆ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದಲ್ಲಿ ನಡೆಯಲಿದೆ. ಮಹೋತ್ಸವದಲ್ಲಿ ಮಹಮೇರು ಪಂಚಗಣಪತಿ ಸ್ವಾಮಿಗೆ ಅಭಿಷೇಕ, ಅಲಂಕಾರ, ಕಾಲಭೈರವೇಶ್ವರ ಪೂಜೆ, ಸತ್ಯನಾರಾಯಣ ಪೂಜೆ ಹಾಗೂ ವ್ಯಾಸ ಪೂಜೆ, ಪುಣ್ಯಾಹ ವಚನ, ಕಳಸ ಸ್ಥಾಪನೆ, ಕಳಸಾರಧನೆ, ನವಚಂಡಿ ಪಾರಾಯಣ, ಲಲಿತ ಸಹಸ್ರನಾಮ ಪಾರಾಯಣ, ಸಹಸ್ರ ಮೋದಕ ಗಣಪತಿ ಹೋಮ, ಮಹಾಚಂಡಿ ಹೋಮ ನಡೆಯಲಿದೆ. ಮಹೋತ್ಸವದಲ್ಲಿ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಹಾಗೂ ನಿಶ್ಚಲಾನಂದನಾಥ ಸ್ವಾಮೀಜಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆ.1ಕ್ಕೆ ಮ್ಯೂಸಿಕ್ ಟು ಹೀಲ್ ಕಾರ್ಯಕ್ರಮ

ಬೆಂಗಳೂರು: ಮ್ಯೂಸಿಕ್ ಟು ಹೀಲ್ ಹರಿಕಥಾ ಕಾರ್ಯಕ್ರಮ ಆ.1 ರಂದು ಸಂಜೆ 5.30 ಕ್ಕೆ ಮಲ್ಲೇಶ್ವರಂನ ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ ನಡೆಯಲಿದೆ. ಗೋಪಾಲ್ಸ್ ಸಂಸ್ಥೆ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಕರ್ನಾಟಕ ಶಾಸ್ತ್ರೀಯ ಗಾಯಕಿ ವಿದುಷಿ ವಿಶಾಖಾ ಹರಿ ಅವರ ಹರಿಕಥಾ ಪ್ರಸ್ತುತಪಡಿಸುವರು. ಪೇಜಾವರ ಮಠದ ಆಚಾರ್ಯ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಜೋಹೊ ಗ್ರೂಪ್‌ನ ಶ್ರೀಧರ್ ವೆಂಬು, ಪ್ರೊ.ಆರ್.ವೈದ್ಯನಾಥನ್, ರಾಮಯ್ಯ ಆಸ್ಪತ್ರೆಯ ಆಯುರ್ವೇದ ವಿಭಾಗದ ಮುಖ್ಯಸ್ಥ ಡಾ.ಜಿ.ಜಿ.ಗಂಗಾಧರನ್ ಭಾಗವಹಿಸಲಿದ್ದಾರೆ. ಆಸಕ್ತರು ಬುಕ್ ಮೈ ಶೋನಲ್ಲಿ https://in.bookmyshow.com/events/smt&vishaka&hari&7gs&for&a&successful&life/ET00449675 ಲಿಂಕ್ ಮೂಲಕ ಅಥವಾ 81486 94359 ಸಂಪರ್ಕಿಸಿ ಪಾಸ್ ಪಡೆಯಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಅಕ್ರಮ ವಲಸಿಗರಿಗೆ ಗೇಟ್ ಪಾಸ್ :ಪರಂ

ಬೆಂಗಳೂರು: ಗುಜರಾತ್ ರೀತಿಯೇ ಕರ್ನಾಟಕದಲ್ಲಿಯೂ ಅಕ್ರಮ ನುಸುಳುಕೋರರನ್ನು ವಾಪಸ್ ಕಳಿಸುತ್ತೇವೆ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು. ಸುದ್ದಿಗಾರರ ಜತೆ ಮಾತನಾಡಿದ ಅವರು, ಅಕ್ರಮ ನುಸುಳುಕೋರರನ್ನು ಗಡಿಪಾರು ಮಾಡುವ ಪ್ರಕ್ರಿಯೆ ನಡೆದಿದೆ. ಈಗಾಗಲೇ 200ಕ್ಕೂ ಹೆಚ್ಚು ಜನ ಅನಧಿಕೃತವಾಗಿ ತಂಗಿರುವುದು ಪತ್ತೆಯಾಗಿದೆ. ಅಕ್ರಮವಾಗಿ ನೆಲೆಸಿರುವ ವಿದೇಶಿಯರನ್ನು ಗಡಿಪಾರು ಮಾಡುತ್ತಿದ್ದೇವೆ. ನಮ್ಮಲ್ಲೂ ಹೆಚ್ಚು ನುಸುಳುಕೋರರು ಇದ್ದರೆ ವಾಪಸ್ ಅವರ ದೇಶಕ್ಕೆ ಕಳುಹಿಸುತ್ತೇವೆ. ಈಗಾಗಲೇ ವಿದೇಶಿಗರ ಪತ್ತೆ ಕಾರ್ಯ ನಡೆಯುತ್ತಿದೆ ಎಂದು ಹೇಳಿದರು.

{ ಬಿ.ಶ್ರೀರಾಮುಲು } ಮಾಜಿ ಸಚಿವ

ಮೋದಿ ಅವರು ಒಬಿಸಿ ನಾಯಕರು. ಅವರಿಗೆ ಸ್ಪರ್ಧೆ ನೀಡಲು ಕಾಂಗ್ರೆಸ್‌ನಲ್ಲಿ ರಾಷ್ಟ್ರೀಯ ಮಟ್ಟದ ನಾಯಕರು ಇಲ್ಲ. ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ ಅವರಿಗೂ ಸ್ಪರ್ಧೆ ನೀಡಲು ಆಗುತ್ತಿಲ್ಲ. ಹೀಗಾಗಿ, ಸಿದ್ದರಾಮಯ್ಯ ಅವರನ್ನು ರಾಷ್ಟ್ರಮಟ್ಟಕ್ಕೆ ಕರೆದುಕೊಂಡು ಬರಬಹುದು ಅನಿಸುತ್ತದೆ.

ಸದ್ಯಕ್ಕೆ ಯಾವುದೇ ಹೊಸ ಪ್ರದೇಶಗಳ ಸೇರ್ಪಡೆಯಿಲ್ಲ | ಪಾಲಿಕೆಗಳ ವಿಂಗಡಿಸಿ, ಶೀಘ್ರದಲ್ಲೇ ಚುನಾವಣೆ

ಬಿಬಿಎಂಪಿ ವ್ಯಾಪ್ತಿಯಲ್ಲಿಯೇ ಗ್ರೇಟರ್ ಬೆಂಗಳೂರು ರಚನೆ

ವಿಶ್ವವಾಣಿ ಸುದ್ದಿಮನೆ, ಬೆಂಗಳೂರು

ಬಿಬಿಎಂಪಿ ವ್ಯಾಪ್ತಿಯಲ್ಲಿಯೇ ಗ್ರೇಟರ್ ಬೆಂಗಳೂರು ಪ್ರಾಧಿಕಾರವನ್ನು ರಚಿಸಿ, ಅದಕ್ಕೆ ಮಾತ್ರ ಸದ್ಯ ಚುನಾವಣೆ ನಡೆಸಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ಗ್ರೇಟರ್ ಬೆಂಗಳೂರಿಗಾಗಿ ಬಿಬಿಎಂಪಿಯನ್ನು ಈಗಿರುವ ವ್ಯಾಪ್ತಿಯಲ್ಲಿಯೇ ಸಮಾನಂತರವಾಗಿ ವಿಭಜಿಸಲು ಅಂತಿಮ ವರದಿ ಸಲ್ಲಿಕೆಯಾಗಿದೆ. ಪ್ರಾಧಿಕಾರದ ರಚನಾ ಸಮಿತಿ ಅಧ್ಯಕ್ಷ ರಿಜ್ವಾನ್ ಅರ್ಷದ್ ಸೋಮವಾರ ಡಿಕೆ ಶಿವಕುಮಾರ್ ಅವರಿಗೆ ವರದಿ ಸಲ್ಲಿಸಿದ್ದಾರೆ. ವರದಿ ಸ್ವೀಕರಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸದ್ಯ ಬಿಬಿಎಂಪಿ ವ್ಯಾಪ್ತಿಯಲ್ಲಿಯೇ ಗ್ರೇಟರ್ ಬೆಂಗಳೂರು ರಚಿಸಲಾಗುವುದು. ಮತ್ತಷ್ಟು ಪ್ರದೇಶಗಳನ್ನು ಮುಂದಿನ ದಿನಗಳಲ್ಲಿ ಸೇರಿಸಲಾಗುವುದು. ಸದ್ಯಕ್ಕೆ ಯಾವುದೇ ಹೊಸ ಪ್ರದೇಶಗಳ ಸೇರ್ಪಡೆಯಿಲ್ಲದೆ ಸಮಾನಂತರವಾಗಿ ಬಿಬಿಎಂಪಿಯನ್ನು ಗ್ರೇಟರ್ ಬೆಂಗಳೂರನ್ನಾಗಿ ರಚಿಸಿ ಚುನಾವಣೆ ನಡೆಸುವುದಾಗಿ ತಿಳಿಸಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಡಿಯಲ್ಲಿ ಪಾಲಿಕೆಗಳನ್ನು ಹೇಗೆ ವಿಂಗಡಿಸಬೇಕು ಎಂಬುದರ ಬಗ್ಗೆ ಸಮಿತಿಯವರು ಅಂತಿಮ ವರದಿ ನೀಡಿದ್ದಾರೆ. ಈ ವಿಚಾರವಾಗಿ ವಿರೋಧ ಪಕ್ಷದ ನಾಯಕರ ಜತೆ ಚರ್ಚೆ ಮಾಡಿ ಅವರನ್ನು ವಿಶ್ವಾಸಕ್ಕೆ ಪಡೆಯಬೇಕು ಎಂದು ಸಮಿತಿ ಅಧ್ಯಕ್ಷರಿಗೆ ಸೂಚಿಸಿದ್ದೇನೆ. ಇದಾದ ಬಳಿಕ ಸಚಿವ ಸಂಪುಟ ಸಭೆಯ ಮುಂದೆ ವರದಿ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಈಗ ಹಾಲಿ ಇರುವ ಪಾಲಿಕೆ ವ್ಯಾಪ್ತಿಯಲ್ಲೇ ಇದನ್ನು ಜಾರಿಗೊಳಿಸುತ್ತೇವೆ. ಮುಂದಿನ ದಿನಗಳಲ್ಲಿ ಇದನ್ನು ವಿಸ್ತರಣೆ ಮಾಡಲಾಗುವುದು. ಸಚಿವ ಸಂಪುಟ ಸಭೆಯಲ್ಲಿ ಇದನ್ನು ಪ್ರಸ್ತಾಪಿಸಿ, ಆದಷ್ಟು ಬೇಗ ಚುನಾವಣೆ ನಡೆಸಬೇಕಿದೆ ಎಂದು ತಿಳಿಸಿದರು.

ಗ್ರೇಟರ್ ಬೆಂಗಳೂರು ವಿಭಜನೆಗೆ ಸಿದ್ಧಪಡಿಸಿದ ಅಂತಿಮ ವರದಿಯನ್ನು ಡಿಸಿಎಂ ಡಿಕೆ ಶಿವಕುಮಾರ್ ಅವರಿಗೆ ಸಲ್ಲಿಸಲಾಯಿತು. ಸಚಿವ ಪರಮೇಶ್ವರ್, ರಿಜ್ವಾನ್ ಅರ್ಷದ್ ಇದ್ದರು.

- ಪಾಲಿಕೆ ವಿಭಜಿಸಲು ಡಿಸಿಎಂ ಡಿಕೆ ಶಿವಕುಮಾರ್‌ಗೆ ಅಂತಿಮ ವರದಿ ಸಲ್ಲಿಕೆ
- ಬಿಬಿಎಂಪಿಯನ್ನು ಸಮಾನಂತರವಾಗಿ ವಿಂಗಡಿಸಲು ಕ್ರಮ
- ವಿರೋಧ ಪಕ್ಷದ ನಾಯಕರ ವಿಶ್ವಾಸಕ್ಕೆ ಪಡೆಯಲು ಸಲಹೆ
- ರಿಜ್ವಾನ್ ಅರ್ಷದ್, ಪರಮೇಶ್ವರ್ ನೇತೃತ್ವದಲ್ಲಿ ಸಭೆ

ಎತ್ತಿನಹೊಳೆ ಯೋಜನೆ ಸಂಬಂಧ ಸಚಿವ ಪರಮೇಶ್ವರ ಅವರ ಭೇಟಿ ವಿಚಾರವಾಗಿ ಕೇಳಿದಾಗ, ಎತ್ತಿನಹೊಳೆ ವಿಚಾರವಾಗಿ ಕೆಲವು ಸಮಸ್ಯೆ ಇತ್ತು. ಅವರ ತಾಲೂಕನ್ನು ಕೈಬಿಡಬೇಕು ಎಂಬ ಪ್ರಸ್ತಾವನೆ ಇತ್ತು. ಈ ಭಾಗದಲ್ಲಿ ನೀರು ನಿಲ್ಲಿಸಬೇಕಾಗಿದ್ದು, ಯಾವುದೇ ಹಳ್ಳಿ ಮುಳುಗದಂತೆ ಈ ಯೋಜನೆ ಜಾರಿಗೆ ಮುಂದಾಗಿದ್ದೇವೆ. ಸ್ಥಳೀಯರೇ ಒಂದೆರಡು ಕೆರೆಗಳ ಬಗ್ಗೆ ಸಲಹೆ ನೀಡಿದ್ದು, ಎಲ್ಲರನ್ನು ವಿಶ್ವಾಸಕ್ಕೆ ಪಡೆದು, ಈ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಪ್ರಸ್ತಾಪ ಮಾಡಲಾಗುವುದು ಎಂದು ತಿಳಿಸಿದರು.

> ಎತ್ತಿನಹೊಳೆ ಯೋಜನೆಗೆ ಸಂಬಂಧಿಸಿದಂತೆ ತುಮಕೂರು ಹಾಗೂ ಹಾಸನ ಭಾಗದಲ್ಲಿ ಅರಣ್ಯ ಭೂಮಿಗೆ ಸಂಬಂಧಿಸಿದಂತೆ ಕೇಂದ್ರ ಸಚಿವರ ಅನುಮತಿ ಬಗ್ಗೆ ಚರ್ಚಿಸಲು ಸಮಯಾವಕಾಶ ನಿಗದಿಯಾಗಿದೆ. ಕೇಂದ್ರ ಜಲಶಕ್ತಿ ಸಚಿವರನ್ನೂ ಭೇಟಿ ಮಾಡಲಾಗುವುದು. ಬಳಿಕ ಪಕ್ಷದ ಕಚೇರಿ ನಮಗೆ ದೇವಾಲಯವಿದ್ದಂತೆ ದೆಹಲಿಗೆ ಭೇಟಿ ನೀಡಿದಾಗ ಅಲ್ಲಿಗೆ ಹೋಗಿ ಕೈಮುಗಿದು ಬರುತ್ತೇವೆ.
>
> -ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ತೇಜಸ್ವಿ ಸೂರ್ಯ ಸಲ್ಲಿಸಿದ ಅರ್ಜಿ ವಿಚಾರಣೆ
ಸರಕಾರ, ಬಿಎಂಆರ್‌ಸಿಎಲ್‌ಗೆ ಹೈ ನೋಟಿಸ್

ಮೆಟ್ರೋ ದರ ನಿಗದಿ ಸಮಿತಿ ವರದಿ ಬಹಿರಂಗ ಪಡಿಸಲಿ

ಬೆಂಗಳೂರು: ಬೆಂಗಳೂರು ಮೆಟ್ರೋ ರೈಲಿನ ಟಿಕೆಟ್ ದರ ಹೆಚ್ಚಳ ಸಂಬಂಧ ನಿವೃತ್ತ ನ್ಯಾಯಮೂರ್ತಿ ತರಣಿ ನೇತೃತ್ವದ ದರ ನಿಗದಿ ಸಮಿತಿ ಸಲ್ಲಿಸಿರುವ ವರದಿ ಬಹಿರಂಗಪಡಿಸಲು ಕೋರಿ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಸಲ್ಲಿಸಿರುವ ಅರ್ಜಿಯ ಸಂಬಂಧ ಹೈಕೋರ್ಟ್, ಕೇಂದ್ರ, ರಾಜ್ಯ ಸರಕಾರ ಮತ್ತು ಬೆಂಗಳೂರು ಮೆಟ್ರೋ ರೈಲು ನಿಗಮ(ಬಿಎಂಆರ್‌ಸಿಎಲ್)ಕ್ಕೆ ನೋಟಿಸ್ ಜಾರಿ ಮಾಡಿ ಆದೇಶಿಸಿದೆ.

ತೇಜಸ್ವಿ ಸೂರ್ಯ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸುನೀತ್ ದತ್ತ ಯಾದವ್ ಅವರಿದ್ದ ನ್ಯಾಯಪೀಠ, ರಾಜ್ಯ ಸರಕಾರ ಮತ್ತು ಬಿಎಂಆರ್‌ಸಿಎಲ್‌ಗೆ ನೋಟಿಸ್ ಜಾರಿ ಮಾಡಿ ವಿಚಾರಣೆ ಮುಂದೂಡಿತು. ವಿಚಾರಣೆ ವೇಳೆ ಅರ್ಜಿದಾರರು (ನೀವಿಷ್ಟು) ಪ್ರಬಲರಾಗಿದ್ದೂ ನಿಮಗೆ ವರದಿ ಸಿಗುತ್ತಿಲ್ಲವೇ? ಎಂದು ಪೀಠ ಪ್ರಶ್ನಿಸಿತು. ಇದಕ್ಕೆ ಅರ್ಜಿದಾರರ ಪರ ವಕೀಲರು, ಡಿಸೆಂಬರ್ ತಿಂಗಳಲ್ಲೇ ದರ ನಿಗದಿ ಸಮಿತಿ ವರದಿ ನೀಡಿದೆ. ಆದರೂ ಬಿಎಂಆರ್‌ಸಿಎಲ್ ವರದಿ ನೀಡುತ್ತಿಲ್ಲ. ಈ ಸಂಬಂಧ ನಿಗಮದ ವ್ಯವಸ್ಥಾಪಕ ನಿರ್ದೇಶಕರನ್ನೂ ಖುದ್ದಾಗಿ ಭೇಟಿ ಮಾಡಿ ಚರ್ಚೆ ಮಾಡಲಾಗಿದೆ. ಆದರೂ, ವರದಿ ಸಿಕ್ಕಿಲ್ಲ. ಸರಕಾರದ ಅನುಮತಿಗಾಗಿ ಕಾಯುತ್ತಿದ್ದೇವೆ ಎಂದು ತಿಳಿಸಿದ್ದಾರೆ. ಮಾಹಿತಿ ಹಕ್ಕು ಕಾಯಿದೆಯಡಿ ಅರ್ಜಿ ಸಲ್ಲಿಸಿದ್ದರೂ ಸಮಿತಿ ವರದಿ ಬಹಿರಂಗಪಡಿಸಿಲ್ಲ ಎಂದು ಪೀಠಕ್ಕೆ ವಿವರಿಸಿದರು.

ಬಿಎಂಆರ್‌ಸಿಎಲ್ ವಿಫಲ: ಅರ್ಜಿದಾರರು ವರದಿ ಬಹಿರಂಗಪಡಿಸುವಂತೆ ಕೋರಿ, 2025ರ ಏಪ್ರಿಲ್ ತಿಂಗಳಿನಿಂದ ಈವರೆಗೂ 3 ಬಾರಿ ಮನವಿ ಸಲ್ಲಿಸಿದ್ದಾರೆ. ಆದರೂ, ಈವರೆಗೂ ವರದಿ ಬಹಿರಂಗಪಡಿಸುವಲ್ಲಿ ಬಿಎಂಆರ್‌ಸಿಎಲ್ ವಿಫಲವಾಗಿದೆ. ಸಾರ್ವಜನಿಕ ಪ್ರಾಧಿಕಾರವಾಗಿರುವ ಬಿಎಂಆರ್‌ಸಿಎಲ್, ಜನರ ಮೇಲೆ ಪರಿಣಾಮ ಬೀರುವಂತಹ ನಿರ್ಧಾರಗಳನ್ನು ತೆಗೆದುಕೊಂಡಂತಹ ಸಂದರ್ಭದಲ್ಲಿ ಅದನ್ನು ಬಹಿರಂಗಪಡಿಸಬೇಕಾಗುತ್ತದೆ. ವರದಿ ಬಹಿರಂಗಪಡಿಸದಂತೆ ಯಾವುದೇ ಕಾನೂನಿನಲ್ಲಿ ತಿಳಿಸಿಲ್ಲ. ಆದ್ದರಿಂದ ಸಾರ್ವಜನಿಕ ಪ್ರಾಧಿಕಾರವಾಗಿರುವ ಬಿಎಂಆರ್‌ಸಿಎಲ್, ಜನತೆಯಲ್ಲಿ ಪಾರದರ್ಶಕತೆ ಉಳಿಸಿಕೊಳ್ಳಬೇಕಾಗಿದ್ದು, ವರದಿಯನ್ನು ಬಹಿರಂಗ ಪಡಿಸುವಂತೆ ಸೂಚನೆ ನೀಡಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಅರ್ಜಿಯಲ್ಲೇನಿದೆ?

ಮೆಟ್ರೋ ದರ ಬಹಿರಂಗ ಪಡಿಸಲು ಸೂಚನೆ ನೀಡುವಂತೆ ಕೋರಿ ಸಂಸದ ತೇಜಸ್ವಿ ಸೂರ್ಯ ಅರ್ಜಿ ಸಲ್ಲಿಕೆ ಮಾಡಿದ್ದಾರೆ. ಅರ್ಜಿಯಲ್ಲಿ ಪ್ರಮುಖ ವಿಚಾರಗಳನ್ನು ಉಲ್ಲೇಖಿಸಿದ್ದಾರೆ. ಬಿಎಂಆರ್‌ಸಿಎಲ್ ಕೇಂದ್ರ ಮತ್ತು ರಾಜ್ಯ ಸರಕಾರದ ಉದ್ದಿಮೆಯಾಗಿದ್ದು, ಸಾರ್ವಜನಿಕ ನಿಧಿ ಬಳಕೆ ಮಾಡುತ್ತಿದೆ. ಪಾರದರ್ಶಕವಾಗಿ ಸೇವೆ ಸಲ್ಲಿಸಬೇಕು. ಹೀಗಾಗಿ ಬಿಎಂಆರ್‌ಸಿಎಲ್ ದರ ಏರಿಕೆ ಸಂಬಂಧಿಸಿದಂತೆ ವರದಿ ಬಹಿರಂಗಪಡಿಸುವುದು ಅದರ ಕರ್ತವ್ಯವಾಗಿರಲಿದೆ. ಪ್ರಯಾಣ ದರ ಏರಿಕೆಗೆ ಸಂಬಂಧಿಸಿದಂತೆ ದೆಹಲಿ, ಮುಂಬೈ ಮತ್ತು ಹೈದರಾಬಾದ್ ಮೆಟ್ರೋ ನಿಗಮ ಗಳು ವರದಿಗಳನ್ನು ಬಹಿರಂಗಪಡಿಸಿದ್ದು, ಸಾರ್ವಜನಿಕ ಆಡಳಿತದಲ್ಲಿ ಪಾರದರ್ಶಕವಾಗಿ ನಿರ್ಧಾರ ತೆಗೆದುಕೊಂಡಿವೆ. ಅಲ್ಲದೆ, ಅರ್ಜಿದಾರರು ಮೆಟ್ರೋ ರೈಲು ಸಂಚಾರ ಮಾಡುವ ಕ್ಷೇತ್ರ ವನ್ನು ಪ್ರತಿನಿಧಿಸುವ ಸಂಸದರಾಗಿದ್ದು, ಹಲವು ಸಂದರ್ಭಗಳಲ್ಲಿ ಮೆಟ್ರೋ ರೈಲಿನಲ್ಲಿ ಪ್ರಯಾಣ ಬೆಳೆಸಿದ್ದಾರೆ. ಹೀಗಾಗಿ ವರದಿಯಲ್ಲಿನ ಅಂಶಗಳನ್ನು ತಿಳಿದುಕೊಳ್ಳುವುದಕ್ಕೆ ಅವಕಾಶ ನೀಡಬೇಕು.

ಉತ್ತರ ಅಮೆರಿಕದ ವೀರಶೈವ ಸಮಾಜದ 47ನೇ ವಾರ್ಷಿಕ ಸಮಾವೇಶ ಮತ್ತು ಬಸವ ಜಯಂತಿ ಕಾರ್ಯಕ್ರಮ ಮಿಚಿಗನ್‌ನ ಪೋರ್ಟ್ ಹ್ಯುರಾನ್‌ನಲ್ಲಿರುವ ಬ್ಲೂ ವಾಟರ್ ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆಯಿತು. ಸಭೆಯಲ್ಲಿ, ಪಂಚಮಸಾಲಿ ಪೀಠದ ಪರಮಪೂಜ್ಯ ಜಗದ್ಗುರು ವಚನಾನಂದ ಸ್ವಾಮೀಜಿ, ಕೆಎಲ್‌ಇ ಸೊಸೈಟಿ ಅಧ್ಯಕ್ಷ ಪ್ರಭಾಕರ ಕೋರೆ, ಸಂಸದ ಜಗದೀಶ್ ಶೆಟ್ಟರ್, ಮಾಜಿ ಸಚಿವ ಮುರುಗೇಶ್ ನಿರಾಣಿ, ಶಂಕರ್ ಪಾಟೀಲ್ ಮುನೇನಕೊಪ್ಪ, ವಿಧಾನ ಪರಿಷತ್ ಸದಸ್ಯರಾದ ಪ್ರದೀಪ್ ಶೆಟ್ಟರ್, ಕೆ.ನವೀನ್, ವಿಎಸ್‌ಎನ್‌ಎ ಅಧ್ಯಕ್ಷ ತುಮಕೂರು ದಯಾನಂದ, ಸಮಾವೇಶದ ಅಧ್ಯಕ್ಷ ಮಹೇಶ್ ಪಾಟೀಲ್ ಉಪಸ್ಥಿತರಿದ್ದರು.

ಯೋಗ ದಿನ ಆಚರಣೆಯಲ್ಲಿ ಚಿಂತಕ ಹಿರೇಮಗಳೂರು ಕಣ್ಣನ್ ಅಭಿಮತ

ಉತ್ತಮ ಆರೋಗ್ಯಕ್ಕೆ ಯೋಗ ಅವಶ್ಯ

ಬೆಂಗಳೂರು: 11ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮ ಭಾನುವಾರ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಿತು.

ವೀರಾಂಜನೇಯ ಯೋಗ ಕೇಂದ್ರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಚಿಂತಕ ಹಿರೇಮಗಳೂರು ಕಣ್ಣನ್ ಮಾತನಾಡಿ, ಯೋಗವು ಕಳೆದ ಐದು ಸಾವಿರ ವರ್ಷಗಳ ಹಿಂದೆ ನಮ್ಮ ಸನಾತನ ಧರ್ಮ ಜಗತ್ತಿಗೆ ನೀಡಿದ ಅತ್ಯಂತ ದೊಡ್ಡ ಕೊಡುಗೆಯಾಗಿದೆ. ಯಾರ ಮನಸ್ಸು ಯೋಗದಿಂದ ಕೂಡಿರುತ್ತದೆ ಅಂತಹವರ ನಡೆ ಮತ್ತು ನುಡಿ ಕೇವಲ ಆದರ್ಶವಾಗಿರುವುದಿಲ್ಲ, ಆರೋಗ್ಯ ಪ್ರಾಯವಾಗಿರುತ್ತದೆ. ಆರೋಗ್ಯವೆಂದರೆ, ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ ಈ ಆರು ಯೋಗ್ಯವಾಗಿದ್ದರೆ, ನಮ್ಮ ಜೀವನದಲ್ಲಿ ಆರೋಗ್ಯ ಸಮರ್ಪಕವಾಗಿರುತ್ತದೆ. ಆಧುನಿಕ ಯುಗದಲ್ಲಿ ಮನಸ್ಸು ಮತ್ತು ದೇಹ ಎರಡನ್ನು ಹತೋಟಿಯಲ್ಲಿಡಲು ಯೋಗ ಅತ್ಯವಶ್ಯವಾಗಿದೆ. ಇದರೊಂದಿಗೆ ನಮ್ಮ ಹಿರಿಯರ ಜೀವನ ಚರಿತ್ರೆ-ವಿಚಾರಗಳನ್ನು ಓದಿ, ಆರೋಗ್ಯಕರ ಮನಸ್ಥಿತಿ ಬೆಳಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಯೋಗ ಕೇಂದ್ರದ ಸದಸ್ಯರು ಮತ್ತು ನೃತ್ಯಪಟಗಳ ಸಂಯೋಜನೆಯಲ್ಲಿ ಜನಪದ, ಕನಕದಾಸರ ಗೀತೆ ಮತ್ತು ದೇಶಭಕ್ತಿ ಗೀತೆಗಳ ಹಿನ್ನಲೆಯಲ್ಲಿ ಯೋಗ ಪ್ರದರ್ಶನ ನೀಡಿದರು. ಹಾಗೂ ಯೋಗ ಕ್ಷೇತ್ರದಲ್ಲಿ ದುಡಿದ ಡಾ.ಬಿ.ಎನ್. ಬ್ರಹ್ಮಾಚಾರ್ಯ ಮತ್ತು ಹುಬ್ಬಳ್ಳಿಯ ಧನ್ಯೋಸ್ಮಿ ಯೋಗ ಶಾಲೆಯ ಸಂಸ್ಥಾಪಕ ವಿನಾಯಕ ತಲಗೇರಿ ಅವರನ್ನು ಸನ್ಮಾನಿಸಲಾಯಿತು. ಯೋಗ ಕ್ಷೇತ್ರದ ಹಲವು ಗಣ್ಯರು, ಯೋಗಪಟುಗಳು ಭಾಗವಹಿಸಿದ್ದರು.

ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ವೀರಾಂಜನೇಯ ಯೋಗ ಕೇಂದ್ರ ಆಯೋಜಿಸಿದ್ದ 11 ನೇ ವರ್ಷದ ಅಂತಾರಾಷ್ಟ್ರೀಯ ಯೋಗ ದಿನ ಆಚರಣೆ ಕಾರ್ಯಕ್ರಮವನ್ನು ಚಿಂತಕ ಹಿರೇಮಗಳೂರು ಕಣ್ಣನ್ ಉದ್ಘಾಟಿಸಿದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ಸೂಚನೆಯಂತೆ ಅಶ್ರಫ್ ಕುಟುಂಬಸ್ಥರ ಭೇಟಿ

ಅಶ್ರಫ್ ಮನೆಗೆ ಕಾಂಗ್ರೆಸ್ ನಿಯೋಗ ಪರಿಹಾರ

ಬೆಂಗಳೂರು: ಎಐಸಿಸಿ ಪ್ರಧಾನ ಕಾರ್ಯದರ್ಶಿ ಸಂಸದ ಕೆ.ಸಿ.ವೇಣುಗೋಪಾಲ್ ಸೂಚನೆಯಂತೆ, ಸಭಾಧ್ಯಕ್ಷ ಯು.ಟಿ.ಖಾದರ್ ನೇತೃತ್ವದ ನಿಯೋಗ ಹಲ್ಲೆಯಲ್ಲಿ ಹತ್ಯೆಗೀಡಾದ ಅಶ್ರಫ್ ಕುಟುಂಬಸ್ಥರನ್ನು ಭೇಟಿ ಮಾಡಿ ಪರಿಹಾರ ವಿತರಿಸಿದೆ.

ಮಂಗಳೂರಿನ ಕುಡುಪುವಿನಲ್ಲಿ ನಡೆದ ಗುಂಪು ಹತ್ಯೆಗೆ ಸಂಬಂಧಿಸಿದಂತೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೇರಳ ಸಂಸದ ಕೆ.ಸಿ.ವೇಣುಗೋಪಾಲ್ ಅವರ ಕೋರಿಕೆ ಹಾಗೂ ಸೂಚನೆಯ ಮೇರೆಗೆ ಸಭಾಧ್ಯಕ್ಷ ಯು.ಟಿ.ಖಾದರ್, ಸಚಿವ ಜಮೀರ್ ಅಹ್ಮದ್ ಖಾನ್, ಎಐಸಿಸಿ ಕಾರ್ಯದರ್ಶಿ ಬಿ.ಕೆ.ಹರಿಪ್ರಸಾದ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಕಾಂಗ್ರೆಸ್ ಮುಖಂಡ ಜಿ.ಎ.ಬಾವ ಹಾಗೂ ಶಾಸಕ ಎ.ಕೆ.ಎಂ.ಅಶ್ರಫ್ ಒಳಗೊಂಡ ನಿಯೋಗವು, ಗುಂಪು ಹಲ್ಲೆಯಲ್ಲಿ ಹತ್ಯೆಗೀಡಾದ ಅಶ್ರಫ್ ಅವರ ಕುಟುಂಬಸ್ಥರೊಂದಿಗೆ ಚರ್ಚೆ ನಡೆಸಿದರು.

ಚರ್ಚೆಯಲ್ಲಿ ಪ್ರಕರಣಕ್ಕೆ ಸಂಬಂಧ ಕಾನೂನು ಹೋರಾಟ ನಡೆಸಲು ಸರಕಾರದ ವತಿಯಿಂದ ವಿಶೇಷ ಅಭಿಯೋಜಕರನ್ನು ನೇಮಿಸಲು ತೀರ್ಮಾನಿಸಲಾಗಿದೆ. ಅದೇ ರೀತಿ ಗುಂಪು ಹತ್ಯಾ ಕಾಯಿದೆ ಪ್ರಕಾರ ಹತ್ಯೆಯಾದ ಅಶ್ರಫ್ ಅವರ ಕುಟುಂಬಕ್ಕೆ ಸರಕಾರದ ವತಿಯಿಂದ ಪರಿಹಾರ ಒದಗಿಸುವ ಕುರಿತಾಗಿ ಕೂಡಾ ಚರ್ಚೆ ನಡೆಸಲಾಯಿತು. ಬಳಿಕ ಮಾನವೀಯತೆ ನೆಲೆಯಲ್ಲಿ ತಮ್ಮ ವೈಯುಕ್ತಿಕ ಖಾತೆಗಳಿಂದ ಸಚಿವ ಜಮೀರ್ ಅಹ್ಮದ್ ಖಾನ್ ಹತ್ತು ಲಕ್ಷ ರು. ಹಾಗೂ ಯು.ಟಿ.ಖಾದರ್ ಐದು ಲಕ್ಷ ರು. ಪರಿಹಾರ ಮೊತ್ತವನ್ನು ಅಶ್ರಫ್ ಕುಟುಂಬಸ್ಥರಿಗೆ ವಿತರಿಸಿದರು. ಅಶ್ರಫ್ ಕುಟುಂಬಸ್ಥರೊಂದಿಗೆ ಮಲಪ್ಪುರಂ ಕಾಂಗ್ರೆಸ್ ಮುಖಂಡ ನಾಸಿರ್ ವೆಂಗರ ಉಪಸ್ಥಿತರಿದ್ದರು.

ಸಭಾಧ್ಯಕ್ಷ ಯು.ಟಿ.ಖಾದರ್ ನೇತೃತ್ವದ ಕಾಂಗ್ರೆಸ್ ನಿಯೋಗವು ಮಂಗಳೂರಿನ ಕುಡುಪುವಿನಲ್ಲಿ ನಡೆದ ಗುಂಪು ಹಲ್ಲೆಯಲ್ಲಿ ಹತ್ಯೆಯಾದ ಅಶ್ರಫ್ ಕುಟುಂಬವನ್ನು ಭೇಟಿ ಮಾಡಿ, ಪರಿಹಾರ ಧನ ವಿತರಿಸಿದರು.

ಜಲಮಂಡಳಿ 60 ಸಾವಿರ ಗಿಡ ನೆಡುವ ಗುರಿ

ಬೆಂಗಳೂರು: ಬೆಂಗಳೂರು ಜಲಮಂಡಳಿಯು ವಜ್ರಮಹೋತ್ಸವವನ್ನು ಆಚರಿಸುತ್ತಿದ್ದು, ತನ್ನ ವ್ಯಾಪ್ತಿಯಲ್ಲಿ 60 ಸಾವಿರ ಗಿಡಗಳನ್ನು ನೆಡುವ ಹಸಿರು ಹಾದಿ ನೀರಿನ ಭವಿಷ್ಯ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ ಎಂದು ಡಾ.ವಿ.ರಾಮ್ ಪ್ರಸಾತ್ ಮನೋಹರ್ ಹೇಳಿದರು.

ಜಿಕೆವಿಕೆ ಆವರಣದಲ್ಲಿ 60 ವಿವಿಧ ಜಾತಿಯ ಗಿಡಗಳನ್ನು ನೆಡುವ ಮೂಲಕ ಈ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿ, ನೀರು ಹಾಗೂ ಪರಿಸರದ ಸಂರಕ್ಷಣೆಗೆ ಹಸಿರು ವಾತಾವರಣ ಅತ್ಯಂತ ಅಗತ್ಯವಾಗಿದ್ದು, ಪ್ರತಿಯೊಬ್ಬರು ತಮ್ಮ ವ್ಯಾಪ್ತಿಯಲ್ಲಿ ಗಿಡನೆಡುವ ಮೂಲಕ ನಗರವನ್ನು ಸುಂದರವಾಗಿಸಲು ಕೊಡುಗೆ ನೀಡಬೇಕು. ಬೆಂಗಳೂರು ಜಲಮಂಡಳಿ ನಗರದಲ್ಲಿ ಬಹಳಷ್ಟು ಜಾಗವನ್ನು ಹೊಂದಿದ್ದು, ಈ ಜಾಗದಲ್ಲಿ ಗಿಡಗಳನ್ನು ನೆಡುವ ಮೂಲಕ ಹಸಿರು ಪರಿಸರವನ್ನು ಇನ್ನಷ್ಟು ಹೆಚ್ಚಿಸಲು ಮುಂದಾಗಿದೆ. ವಿಶ್ವ ಒಂದು ವರ್ಷದ ಅವಧಿಯಲ್ಲಿ ಒಟ್ಟಾರೆಯಾಗಿ 60 ಸಾವಿರ ಗಿಡಗಳನ್ನು ನೆಡುವುದು ನಮ್ಮ ಉದ್ದೇಶವಾಗಿದೆ ಎಂದರು. ಈ ನಿಟ್ಟಿನಲ್ಲಿ ಬಲ್ಕ್ ಯೂಸರ್ಸ್, ಅಪಾರ್ಟ್‌ಮೆಂಟ್‌ಗಳು, ಕೈಗಾರಿಕೆಗಳು, ತಂತ್ರಜ್ಞಾನ ಉದ್ಯಾನಗಳು ಹಾಗೂ ವಿದ್ಯಾ ಸಂಸ್ಥೆಗಳಿಗೆ ಈ ಅಭಿಯಾನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮನವಿ ಮಾಡಲಾಗಿದೆ. ತಮ್ಮ ಆವರಣಗಳಲ್ಲಿ ಗಿಡ ನೆಡುವುದರ ಜತೆಗೆ, ಅವುಗಳನ್ನು ಪೋಷಿಸುವ ಜವಾಬ್ದಾರಿಯನ್ನೂ ಹೊತ್ತುಕೊಳ್ಳುವಂತೆ ಪ್ರೋತ್ಸಾಹಿಸಲಾಗುತ್ತಿದೆ. ಅಲ್ಲದೇ, ಜಲಮಂಡಳಿ ವ್ಯಾಪ್ತಿಯ ಎಲ್ಲ ಉಪವಿಭಾಗಗಳಿಗೆ ಹಾಗೂ ಕಚೇರಿಗಳಿಗೆ ತಮ್ಮ ತಮ್ಮ ಪ್ರದೇಶಗಳಲ್ಲಿ ಗಿಡ ನೆಡುವ ಕಾರ್ಯಕ್ಕೆ ಮುಂದಾಗುವಂತೆ ನಿರ್ದೇಶನ ನೀಡಲಾಗಿದೆ ಎಂದರು.

ಜಿಕೆವಿಕೆ ಆವರಣದಲ್ಲಿ 60 ವಿವಿಧ ಜಾತಿಯ ಗಿಡಗಳನ್ನು ನೆಡುವ ಮೂಲಕ ಡಾ.ವಿ.ರಾಮ್ ಪ್ರಸಾತ್ ಮನೋಹರ್ ಅಭಿಯಾನಕ್ಕೆ ಚಾಲನೆ ನೀಡಿದರು.

ಇಂದಿನಿಂದ ಹತ್ತು ಪಾಲಿಕೆ ನೌಕರರಿಂದ ಮುಷ್ಕರ

ಬೆಂಗಳೂರು: ಇಂದಿನಿಂದ ರಾಜ್ಯಾದ್ಯಂತ ವಿವಿಧ ಬೇಡಿಕೆ ಈಡೇರಿಕೆಗಾಗಿ ಮಹಾನಗರ ಪಾಲಿಕೆ ನೌಕರರು ಮುಷ್ಕರಕ್ಕೆ ಕರೆ ನೀಡಿದ್ದು, ರಾಜ್ಯದ 10 ಮಹಾನಗರ ಪಾಲಿಕೆಗಳು ಬಂದ್ ಆಗಲಿವೆ.

ಬಿಬಿಎಂಪಿ ಸೇರಿದಂತೆ ವಿವಿಧ ಪಾಲಿಕೆಗಳ ನೌಕರರು ಫ್ರೀಡಂ ಪಾರ್ಕ್‌ನಲ್ಲಿ ತಮ್ಮ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟಿಸಲಿದ್ದು, ಪಾಲಿಕೆ ನೌಕರರನ್ನು ಸರಕಾರಿ ನೌಕರರು ಎಂದು ಪರಿಗಣಿಸಬೇಕು. ಲಾಗ್ ಸೇಫ್ ಹಾಜರಾತಿ ಪ್ರಕ್ರಿಯೆಯನ್ನು ರದ್ದು ಮಾಡಬೇಕು, ವಿವಿಧ ವಾರ್ಡ್ ಗಳಲ್ಲಿ ಖಾಲಿ ಇರುವ 6 ಸಾವಿರ ಹುದ್ದೆಗಳನ್ನ ಭರ್ತಿ ಮಾಡಬೇಕು, ಪಾಲಿಕೆ ನೌಕರರಿಗೆ ಆಗುತ್ತಿರುವ ಕೆಲಸದ ಒತ್ತಡ ಕಡಿಮೆ ಮಾಡಬೇಕು, ಪಾಲಿಕೆಯ ಶಿಕ್ಷಣ ವಿಭಾಗದಲ್ಲಿ ಪ್ರಾಂಶುಪಾಲರ ಮೇಲಾಗುತ್ತಿರುವ ಇಲಾಖಾ ವಿಚಾರಣೆಗಳನ್ನ ಕೈಬಿಡಬೇಕು. ಅಭಿಯಂತರರು, ಸಹಾಯಕ ಅಭಿಯಂತರರಿಗೆ ಮುಂಬಡ್ತಿ ನೀಡಬೇಕು, ನೌಕರರಿಗೆ ಆರೋಗ್ಯ ವಿಮಾ ಸೌಲಭ್ಯ ನೀಡಬೇಕು. ಪಾಲಿಕೆ ನೌಕರರಿಗೆ ಜ್ಯೇಷ್ಠತಾ ಪಟ್ಟಿಯನ್ನ ಅಂತಿಮಗೊಳಿಸುವುದು. ಇ-ಖಾತಾ ಬದಲು ಹಿಂದೆ ಇದ್ದ ಪದ್ಧತಿಯನ್ನ ಜಾರಿಗೊಳಿಸುವುದು, ಹೆಲ್ತ್ ಸೂಪರ್ ವೈಸರ್‌ಗಳಿಗೆ ಉದ್ದಿಮೆ ಪರವಾನಗಿ ನೀಡಬೇಕು. ಕಾನೂನು ಬಾಹಿರವಾಗಿರುವ ಮಾರ್ಷಲ್ ಹುದ್ದೆಗಳನ್ನು ರದ್ದುಗೊಳಿಸುವುದು ಇವರ ಪ್ರಮುಖ ಬೇಡಿಕೆಗಳಾಗಿವೆ. ಬಿಬಿಎಂಪಿ, ಹುಬ್ಬಳ್ಳಿ-ಧಾರವಾಡ, ತುಮಕೂರು, ಮಂಗಳೂರು, ಶಿವಮೊಗ್ಗ, ದಾವಣಗೆರೆ, ಮೈಸೂರು ಹಾಗೂ ಬೆಳಗಾಂ ಮಹಾನಗರ ಪಾಲಿಕೆ ನೌಕರರು ಈ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುತ್ತಿವೆ.

ಜಿಲ್ಲಾ ಪಂಚಾಯತ್ ಸಿಇಒಗಳಿಗೆ ಸಚಿವ ಪ್ರಿಯಾಂಕ್ ಖರ್ಗೆ ಸೂಚನೆ

ಅಭಿವೃದ್ಧಿ ಕಾಮಗಾರಿಗಳಲ್ಲಿ ಗುಣಮಟ್ಟ ಇರಲಿ

ಬೆಂಗಳೂರು: ಜಿಲ್ಲೆಗಳಲ್ಲಿ ನಡೆಯುತ್ತಿರುವ ವಿವಿಧ ಕಾಮಗಾರಿಗಳಲ್ಲಿ ಗುಣಮಟ್ಟ ಕಾಪಾಡಿಕೊಳ್ಳುವಲ್ಲಿ ಜಿಲ್ಲಾ ಪಂಚಾಯತಿ ಸಿಇಒಗಳು ಆದ್ಯತೆಯ ಮೇರೆಗೆ ಆಸಕ್ತಿ ವಹಿಸಬೇಕೆಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಸೂಚಿಸಿದರು.

ಜಿಲ್ಲಾ ಪಂಚಾಯತಿ ಸಿಇಒಗಳ ಜತೆ ನಡೆದ ವಿಡಿಯೊ ಸಭೆಯಲ್ಲಿ ಮಾತನಾಡಿದ ಸಚಿವರು, ಪಂಚಾಯತ್ ರಾಜ್ ಎಂಜಿನಿಯರಿಂಗ್ ಇಲಾಖೆ, ಗ್ರಾಮೀಣ ನೀರು ಸರಬರಾಜು ಇಲಾಖೆ ಹಾಗೂ ಕರ್ನಾಟಕ ಗ್ರಾಮೀಣ ಮೂಲಭೂತ ಸೌಲಭ್ಯ ಅಭಿವೃದ್ಧಿ ಸಂಸ್ಥೆಯ ಮೂಲಕ ನಡೆಯುತ್ತಿರುವ ಕಾಮಗಾರಿಗಳನ್ನು ನಿಯಮಿತವಾಗಿ ಪರಿಶೀಲನೆ ಮಾಡುವ ಹೊಣೆಗಾರಿಕೆಯನ್ನು ಅಧಿಕಾರಿಗಳು ಆದ್ಯತೆಯ ಮೇಲೆ ತೆಗೆದುಕೊಳ್ಳಬೇಕು. ಜೂ.15 ರಿಂದ 31ರ ವರೆಗೆ ಸಿಇಒಗಳು ತಮ್ಮ ಜಿಲ್ಲೆಗಳಲ್ಲಿ ತೀವ್ರ ಪ್ರವಾಸ ಮಾಡಿ ಕಾಮಗಾರಿಗಳ ಗುಣಮಟ್ಟ ಪರಿಶೀಲಿಸಬೇಕಲ್ಲದೆ, ಕೆಲವು ಕಡೆ ಕಾಮಗಾರಿಗಳು ಕುಂಠಿತಗೊಂಡಿದ್ದು ಅವುಗಳಿಗೆ ಚಾಲನೆ ನೀಡಲು ಕ್ರಮ ಕೈಗೊಳ್ಳಬೇಕು. ಹಾಗೂ ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳ ಕುರಿತು ಪೂರ್ಣ ವಿವರ ಒಳಗೊಂಡ ವರದಿಯನ್ನು ಆಗಸ್ಟ್ ಮೊದಲ ವಾರದಲ್ಲಿ ಸರಕಾರಕ್ಕೆ ರವಾನಿಸಬೇಕೆಂದು ಸೂಚನೆ ನೀಡಿದರು.

ರಸ್ತೆ ಬದಿ ಗಿಡ ನೆಡುವ ಹಸಿರು ಪಥ ಕಾರ್ಯಕ್ರಮಕ್ಕೆ ಕಲಬುರಗಿಯಲ್ಲಿ ಚಾಲನೆ ನೀಡಲಾಗಿದೆ, ಮಳೆಗಾಲ ಮುಗಿಯುವ ಒಳಗೆ ಗಿಡಗಳನ್ನು ನೆಡಲು ನರೇಗಾ ಮೂಲಕ ವ್ಯಾಪಕ ಕಾರ್ಯಕ್ರಮ ಹಮ್ಮಿಕೊಳ್ಳಬೇಕು, ಜಿಲ್ಲೆಗಳಲ್ಲಿ ಅರಣ್ಯ ಅಧಿಕಾರಿಗಳು ಹಾಗೂ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ ಅಧಿಕಾರಿಗಳೊಂದಿಗೆ ಚರ್ಚಿಸಿ ಸಸಿಗಳನ್ನು ನೆಡಬೇಕಾದ ಗ್ರಾಮೀಣ ರಸ್ತೆಗಳನ್ನು ನಿರ್ಣಯಿಸಬೇಕು. ಘನತ್ಯಾಜ್ಯ ನಿರ್ವಹಣೆ ಸಮರ್ಪಕವಾಗಿ ನಡೆಯುತ್ತಿಲ್ಲ ಎಂಬ ದೂರುಗಳು ಬರುತ್ತಿವೆ, ಜಿಲ್ಲಾ ಮಟ್ಟದಲ್ಲಿ ಪ್ರದೇಶಗಳಿಗೆ ಅನುಗುಣವಾಗಿ ತ್ಯಾಜ್ಯ ನಿರ್ವಹಣೆಗೆ ಮಾರ್ಗೋಪಾಯ ಕಂಡು ಹಿಡಿದು ಸರಕಾರಕ್ಕೆ ವರದಿ ಸಲ್ಲಿಸಬೇಕೆಂದು ಸಚಿವರು ಸಲಹೆ ನೀಡಿದರು.

ಸಭೆಯಲ್ಲಿ ಸರಕಾರದ ಅಪರ ಮುಖ್ಯ ಕಾರ್ಯದರ್ಶಿ ಉಮಾ ಮಹದೇವನ್, ಇಲಾಖೆ ಕಾರ್ಯದರ್ಶಿ ಸಮೀರ್ ಶುಕ್ಲ, ಪಂಚಾಯತ್ ರಾಜ್ ಇಲಾಖೆ ಆಯುಕ್ತೆ ಡಾ. ಅರುಂಧತಿ ಚಂದ್ರಶೇಖರ್, ಗ್ರಾಮೀಣ ನೀರು ಸರಬರಾಜು ಇಲಾಖೆ ನಿರ್ದೇಶಕ ಕೆ.ನಾಗೇಂದ್ರ ಪ್ರಸಾದ್ ಭಾಗವಹಿಸಿದ್ದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಜಿಲ್ಲಾ ಪಂಚಾಯತಿ ಸಿಇಒಗಳ ಜತೆ ವಿಡಿಯೊ ಸಭೆ ನಡೆಸಿದರು. ಸರಕಾರದ ಅಪರ ಮುಖ್ಯ ಕಾರ್ಯದರ್ಶಿ ಉಮಾ ಮಹದೇವನ್, ಇಲಾಖೆ ಕಾರ್ಯದರ್ಶಿ ಸಮೀರ್ ಶುಕ್ಲ, ಆಯುಕ್ತೆ ಡಾ.ಅರುಂಧತಿ ಚಂದ್ರಶೇಖರ್, ಗ್ರಾಮೀಣ ನೀರು ಸರಬರಾಜು ಇಲಾಖೆ ನಿರ್ದೇಶಕ ಕೆ.ನಾಗೇಂದ್ರ ಪ್ರಸಾದ್ ಇದ್ದರು.

ಕುಡಿಯುವ ನೀರಿನ ಪರೀಕ್ಷೆಗೆ ಸೂಚನೆ

ಮಳೆಗಾಲ ಆರಂಭಗೊಂಡಿದ್ದು ಕೆಲವೆಡೆ ವ್ಯಾಪಕ ಮಳೆ ಆಗುತ್ತಿದೆ, ಮುಂದಿನ ಕೆಲವು ತಿಂಗಳು ಮಳೆ ಆಗುವ ಮುನ್ಸೂಚನೆಯಿದ್ದು, ಕುಡಿಯುವ ನೀರು ಕಲುಷಿತಗೊಳ್ಳುವ ಸಾಧ್ಯತೆಗಳಿರುವುದರಿಂದ ರಾಜ್ಯಾದ್ಯಂತ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ನೀರಿನ ಮಾದರಿ ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸಬೇಕು, ನೀರು ಕಲುಷಿತಗೊಂಡು ಯಾವುದೇ ದುಷಪರಿಣಾಮಗಳಾದಲ್ಲಿ ಎಂಜನಿಯರ್‌ಗಳು, ಇಒ ಹಾಗೂ ಪಿಡಿಒಗಳನ್ನು ಹೊಣೆಯಾಗಿಸಲಾಗುವುದೆಂದು ಪ್ರಿಯಾಂಕ್ ಖರ್ಗೆ ಎಚ್ಚರಿಕೆ ನೀಡಿದರು.

ಸಮಾಚಾರ ಸಣ್ಣದಲ್ಲ

ಲಾರಿ ಹರಿದು ತಾಯಿ-ಮಗು ಸಾವು

ಕುಷ್ಟಗಿ: ಪಟ್ಟಣದ ಹೊರ ಹೊಲಯದ ರಾಷ್ಟ್ರೀಯ ಹೆದ್ದಾರಿ 50ರಲ್ಲಿನ ಅಕ್ಷಯ್ ಫೀಲಿಂಗ್ ಸ್ಟೇಷನ್ ಸಮೀಪ ಲಾರಿ ಹರಿದು ತಾಯಿ- ಮಗು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ತಳುವಗೇರಾ ಗ್ರಾಮದ ಚೈತ್ರ (35) ಹಾಗೂ ಈಕೆಯ 4 ವರ್ಷದ ಮಗು ಪ್ರಮೋದ ಮೃತರು. ಚೈತ್ರಾ ತನ್ನ ಗಂಡನ ಊರು ಕುಷ್ಟಗಿ ತಾಲೂಕು ತಳುವಗೇರಾ ಗ್ರಾಮದಿಂದ ಗಂಗಾವತಿ ತಾಲೂಕ ವೆಂಕಟಗಿರಿ ಗ್ರಾಮದ ತವರು ಮನೆಗೆ ಪರಿಚಿತ ಮಂಜುನಾಥ ತಿಪ್ಪನಾಳ ಎಂಬುವರ ಜತೆಗೆ ಬೈಕ್ ನಲ್ಲಿ ಹೋಗುತ್ತಿದ್ದಾಗ ಘಟನೆ ನಡೆದಿದೆ. ಹಿಂದಿನಿಂದ ಬಂದ ಲಾರಿ ಬೈಕ್ ಮೇಲೆ ಹರಿದು, ಸ್ಥಳದಲ್ಲಿಯೇ ತಾಯಿ ಮತ್ತು ಮಗ ಮೃತಪಟ್ಟಿರುತ್ತಾರೆ. ಕುಷ್ಟಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ರಾಜಸ್ಥಾನದ ಪೇರಂಬ ದೂರಿನ ಆರೋಪಿ ಲಾರಿಯ ಚಾಲಕ ರಮೇಶ ಸತ್ಯವೇಲು ವನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ದೆವ್ವ ಬಿಡಿಸುತ್ತೇನೆಂದು ಚಿತ್ರಹಿಂಸೆ: ಮಹಿಳೆ ಸಾವು

ಶಿವಮೊಗ್ಗ: ದೆವ್ವ ಅಂಟಿಕೊಂಡಿದೆ, ಬಿಡಿಸುತ್ತೇನೆಂದು ಹೇಳಿ ಚಿತ್ರಹಿಂಸೆ ನೀಡಿದ ಪರಿಣಾಮ ಆರೋಗ್ಯದಲ್ಲಿ ಏರುಪೇರಾಗಿ ಮಹಿಳೆ ಸಾವನ್ನಪ್ಪಿದ ಘಟನೆ ಶಿವಮೊಗ್ಗ ಜಿಲ್ಲೆಯ ಹೊಳೆಹೊನ್ನೂರಿನ ಜಂಬರಗಟ್ಟೆಯಲ್ಲಿ ನಡೆದಿದೆ. ಜಂಬರಗಟ್ಟೆ ನಿವಾಸಿ ಗೀತಮ್ಮ (50) ಸಾವನ್ನಪ್ಪಿದ ಮಹಿಳೆ. ತಾಯಿಗೆ ಹುಷಾರಿಲ್ಲದ ಹಿನ್ನೆಲೆ ಮಗನೇ ದೆವ್ವ ಬಿಡಿಸಲು ಹೊಸ ಜಂಬರಘಟ್ಟಕ್ಕೆ ಕರೆದು ಕೊಂಡು ಹೋಗಿದ್ದ. ಕೆಲ ದಿನಗಳಿಂದ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಗೀತಮ್ಮನನ್ನು ದೆವ್ವ ಹಿಡಿದಿದೆ ಎಂದು ಕರೆದುಕೊಂಡು ಹೋಗಿದ್ದ. ಈ ವೇಳೆ ದೆವ್ವಾ ಬಿಡಿಸುತ್ತೇನೆ ಎಂದು ಶಾಂತಮ್ಮ ಎಂಬ ಮಹಿಳೆ ಗೀತಮ್ಮನಿಗೆ ಚಿತ್ರಹಿಂಸೆ ನೀಡಿದ್ದಾಳೆ. ಚಿತ್ರಹಿಂಸೆ ತಾಳಲಾರದೇ ಗೀತಮ್ಮ ಸಾವನ್ನಪ್ಪಿದ್ದಾರೆ.

ಪ್ರೇಯಸಿಯರೇ ಸೂತ್ರಧಾರಿ: ಪ್ರಿಯಕರನ ಹತ್ಯೆ, ಹಲ್ಲೆ

ಕಲಬುರಗಿ, ಬೆಂಗಳೂರಿನಲ್ಲಿ ಬೆಳಕಿಗೆ ಬಂದ ರೇಣುಕಾಸ್ವಾಮಿ ಹತ್ಯೆ ಮಾದರಿ ಪ್ರಕರಣ | ಅಶ್ಲೀಲ ಸಂದೇಶಗಳಿಗೆ ಬೇಸತ್ತು ಪ್ರಿಯಕರನಿಂದ ವ್ಯಕ್ತಿಯ ಹತ್ಯೆ ಮಾಡಿಸಿದ ಪ್ರೇಯಸಿ | ಯುವಕನ ಮರ್ಮಾಂಗದ ಮೇಲೆ ಹಲ್ಲೆ ಮಾಡಿ ವಿಕೃತಿ | ಅಪ್ರಾಪ್ತೆ ಸೇರಿ 11 ಆರೋಪಿಗಳ ಬಂಧನ

ಬೆಂಗಳೂರು: ನೆಲಮಂಗಲ ತಾಲೂಕಿನ ಸೋಲದೇವನಹಳ್ಳಿ ಬಳಿ ಯುವಕನ ಮೇಲೆ ಮಾರಣಾಂತಿಕವಾಗಿ ಹಲ್ಲೆ ಮಾಡಿರುವ ಪ್ರಕರಣ ನಡೆದಿದೆ.

ಪ್ರಕರಣದ ಸೂತ್ರಧಾರಿ 17 ವರ್ಷದ ಹುಡಗಿಯನ್ನು ಸೋಲ ದೇವನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಪೊಲೀಸರು, ಬಾಲಕಿಯನ್ನು ಬಂಧಿಸಿ ಕಾನೂನು ಸಂಘರ್ಷ ಸಾಂತ್ವನ ಕೇಂದ್ರದಲ್ಲಿ ಇರಿಸಿದ್ದಾರೆ. 17 ವರ್ಷದ ಹುಡಗಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವಾಗಲೇ ಯುವಕ ಕುಶಾಲ್‌ನ ಪರಿಚಯವಾಗಿದೆ. ಪರಿಚಯ ಪ್ರೇಮಕ್ಕೆ ತಿರುಗಿದೆ. ಹುಡುಗಿ ಶಾಲೆ ಮುಗಿಸಿಕೊಂಡು ಕಾಲೇಜು ಮೆಟ್ಟಿಲು ಹತ್ತಿದ ಮೇಲೆ ಪ್ರೇಮಿಗಳ ನಡುವೆ ಬಿರುಕು ಮೂಡಿದೆ. ಎರಡು ವರ್ಷದ ಪ್ರೀತಿ ಕೆಲ ದಿನಗಳ ಹಿಂದೆಯಷ್ಟೇ ಬ್ರೇಕ್ ಅಪ್ ಆಗಿದೆ. ಬ್ರೇಕ್ ಅಪ್ ಆದ ಬಳಿಕ ಯುವಕ ಕುಶಾಲ್ ಖಾಸಗಿ ಕ್ಷಣದ ಫೋಟೋಗಳನ್ನು ವೈರಲ್ ಮಾಡುವುದಾಗಿ ಹುಡುಗಿಗೆ ಬ್ಲ್ಯಾಕ್ ಮೇಲ್ ಮಾಡಿದ್ದಾನೆ.

ಪವಿತ್ರಾ ಗೌಡ ರೀತಿಯೇ ಪ್ಲಾನ್ ಕೊಟ್ಟ ಬಾಲಕಿ: ಈ ವಿಚಾರವನ್ನು ಹುಡುಗಿ ತನ್ನ ಸ್ನೇಹಿತರ ಮುಂದೆ ಹೇಳಿದ್ದಾಳೆ. ಅಲ್ಲದೆ, ಕುಶಾಲ್‌ನನ್ನು ಅಪಹರಿಸುವಂತೆ ಹುಡುಗಿ ತನ್ನ ಸ್ನೇಹಿತರಿಗೆ ಹೇಳಿದ್ದಾಳೆ. ಅದರಂತೆ ಹುಡುಗಿಯ ಸ್ನೇಹಿತರು, ಕುಶಾಲ್‌ನನ್ನು ಸಂಪರ್ಕಿಸಿ ಮಾತುಕತೆ ಮೂಲಕ ಬಗೆಹರಿಸಿ ಕೊಳ್ಳೋಣ ಬಾ ಅಂತ ಬಾಗಲಗುಂಟೆಯ ಎಜಿಪಿ ಲೇಔಟ್‌ಗೆ ಕರೆಸಿಕೊಂಡಿದ್ದಾರೆ. ಸ್ಥಳಕ್ಕೆ ಬಂದ ಯುವಕ ಕುಶಾಲ್‌ನನ್ನು ಹುಡುಗಿಯ ಸ್ನೇಹಿತರು ಅಪಹರಿಸಿದ್ದಾರೆ.

ಹುಡುಗಿ ಎದುರು ಯುವಕನನ್ನು ಬೆತ್ತಲೆಗೊಳಿಸಿದ ಆರೋಪಿಗಳು

ಕುಶಾಲ್‌ನನ್ನು ಕಾರಿನಲ್ಲಿ ಕೂರಿಸಿಕೊಂಡು ನಿರ್ಜನ ಪ್ರದೇಶಕ್ಕೆ ಕರೆದೊಯ್ದಿದ್ದಾರೆ. ಕಾರಿನಲ್ಲಿ ಹುಡುಗಿಯೂ ಇದ್ದಳು. ಕಾರ್‌ನಲ್ಲಿ ಹುಡಗಿ ಮುಂದೆಯೇ ಆರೋಪಿಗಳು ಕುಶಾಲ್ ಮೇಲೆ ಹಲ್ಲೆ ಮಾಡಿದ್ದಾರೆ. ಹಾಡು ಹೇಳುವಂತೆ ಒತ್ತಾಯಿಸಿದ್ದಾರೆ. ನಿರ್ಜನ ಪ್ರದೇಶಕ್ಕೆ ಕರೆದುಕೊಂಡು ಹೋದ ಮೇಲೆ ಆರೋಪಿಗಳು ಹುಡುಗಿಯ ಮುಂದೆಯೇ ಯುವಕ ಕುಶಾಲ್‌ನ ಬಟ್ಟೆ ಬಿಚ್ಚಿಸಿ ಬೆತ್ತಲುಗೊಳಿಸಿ ವಿಕೃತಿ ಮೆರೆದಿದ್ದಾರೆ. ಬಳಿಕ, ಯುವಕ ಕುಶಾಲ್‌ನ ಮೇಲೆ ಮಾರಣಾಂತಿಕವಾಗಿ ಹಲ್ಲೆ ಮಾಡಿದ್ದಾರೆ.

ಬೆಂಗಳೂರಿನ ಸೋಲದೇವನಹಳ್ಳಿ ಬಳಿ ಯುವಕನ ಮೇಲೆ ಮಾರಣಾಂತಿಕವಾಗಿ ಹಲ್ಲೆ ಮಾಡುತ್ತಿರುವುದು.

11 ಜನ ಆರೋಪಿಗಳ ಬಂಧನ

ಪ್ರಕರಣ ಸಂಬಂಧ ಹುಡುಗಿ ಸೇರಿದಂತೆ 11 ಜನರನ್ನು ಸೋಲದೇವನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಇವರಲ್ಲಿ 8 ಜನ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ. ಆರೋಪಿಗಳಾದ ಶಶಾಂಕ್ ಗೌಡ, ಸಲ್ಮಾನ್, ಯಶ್ವಂತ್, ವಿದ್ಯಾರ್ಥಿಗಳಾದ ತೇಜಸ್, ರಾಕೇಶ್, ರಾಹುಲ್ ಮತ್ತು ಹೇಮಂತ್ ಬಿಡುಗಡೆಯಾದವರು. ಆರೋಪಿ ಹೇಮಂತ ಈ ಹಿಂದೆ ಹಲವು ಬಾರಿ ಹಲ್ಲೆ ಪ್ರಕರಣದಲ್ಲಿ ಪೊಲೀಸ್ ಠಾಣೆ ಮೆಟ್ಟಿಲೇರಿ ಬಂದಿದ್ದಾನೆ.

ನೆಲಮಂಗಲ ತಾಲೂಕಿನ ಸೋಲದೇವನಹಳ್ಳಿ ಬಳಿ ಯುವಕನ ಮೇಲೆ ಮಾರಣಾಂತಿಕವಾಗಿ ಹಲ್ಲೆ ಪ್ರಕರಣ ಸಂಬಂಧ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಪ್ರಕರಣ ಬಗ್ಗೆ ಸಂಪೂರ್ಣ ಮಾಹಿತಿ ಪಡೆದು ಮಾತನಾಡುತ್ತೇನೆ. ರೇಣುಕಾಸ್ವಾಮಿ ಪ್ರಕರಣ ಪ್ರೇರಣೆ ಆಗುತ್ತಿದೆಯಾ ಎಂಬುದು ಗೊತ್ತಿಲ್ಲ. ಆ ಬಗ್ಗೆ ಮನಃಶಾಸ್ತ್ರಜ್ಞರು ಅಧ್ಯಯನ ಮಾಡಿ ಹೇಳಬೇಕಾಗುತ್ತದೆ.
-ಜಿ. ಪರಮೇಶ್ವರ್, ಗೃಹ ಸಚಿವ

ಕಲಬುರಗಿ: ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಮಾದರಿಯ ಪ್ರಕರಣವೊಂದು ಕಲಬುರಗಿಯಲ್ಲಿ ಬೆಳಕಿಗೆ ಬಂದಿದೆ. ಮಾಜಿ ಪ್ರಿಯಕರನ ಅಶ್ಲೀಲ ಮೆಸೆಜ್‌ಗಳ ಕಿರುಕುಳ ತಾಳದೇ ಪ್ರಿಯಕರನಿಂದ ರಾಘವೇಂದ್ರ ನಾಯಕ (39) ಎಂಬಾತನನ್ನು ಅಶ್ವಿನಿ ಎಂಬಾಕೆ ಕೊಲೆ ಮಾಡಿಸಿದ್ದು, ಪೊಲೀಸ್ ತನಿಖೆಯಲ್ಲಿ ಬಯಲಾಗಿದೆ.

ವ್ಯಕ್ತಿಯೊಬ್ಬರ ನಾಪತ್ತೆ ಪ್ರಕರಣದ ಬೆನ್ನುಬಿದ್ದ ಇಲ್ಲಿನ ಸ್ಟೇಷನ್ ಬಜಾರ್ ಪೊಲೀಸರು ಕೊಲೆ ರಹಸ್ಯವನ್ನು ಪತ್ತೆ ಮಾಡಿ, ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ. ಗುರುರಾಜ್ ನೆಲೋಗಿ (36), ಅಶ್ವಿನಿ ಅಲಿಯಾಸ್ ತನು (26), ಲಕ್ಷ್ಮೀಕಾಂತ್ ಮಾಲಿ ಪಾಟೀಲ್ (28) ಬಂಧಿತ ಆರೋಪಿಗಳು.

ಲಿವಿಂಗ್ ಟುಗೆದರ್ ಸಂಬಂಧ: ಕೊಲೆಯಾದ ರಾಘವೇಂದ್ರ ನಾಯಕ್‌ಗೆ ಮದುವೆ ಆಗಿದೆ. ಕಲಬುರಗಿ ನಗರದ ಹೋಟೆಲ್ ವೊಂದರಲ್ಲಿ ಕೆಲಸ ಮಾಡಿಕೊಂಡಿದ್ದ. ಮದುವೆ ಆದರೂ ಸಹಿತ ಆರೋಪಿ ಅಶ್ವಿನಿ ಜತೆ ಲಿವಿಂಗ್ ಟುಗೆದರ್ ಸಂಬಂಧ ಹೊಂದಿದ್ದ. ಕೆಲವು ತಿಂಗಳ ಹಿಂದೆ ರಾಘವೇಂದ್ರ ನಾಯಕ್ ಸಂಬಂಧ ಬಿಟ್ಟು ಅಶ್ವಿನಿ, ಕೃಷ್ಣ ನಗರದ ಗುರುರಾಜ್ ಜತೆ ಸಂಬಂಧ ಬೆಳೆಸಿದ್ದಳು ಎನ್ನಲಾಗಿದೆ. ಇದೆ ಕೋಪಕ್ಕೆ ರಾಘವೇಂದ್ರ ಅಶ್ವಿನಿಗೆ ಅಶ್ಲೀಲ ಮೆಸೆಜ್‌ಗಳನ್ನು ಮಾಡಿದ್ದಾನೆ. ರಾಘವೇಂದ್ರನ ಉಪಟಳ ಮಿತಿಮೀರುತ್ತಿದ್ದಂತೆ ಪ್ರಿಯಕರ ಗುರುರಾಜ್‌ಗೆ ಅಶ್ಲೀಲ ಮೆಸೆಜ್ ವಿಚಾರವನ್ನೆಲ್ಲ ತಿಳಿಸಿದ್ದಾಳೆ.

ಸ್ಮಶಾನದಲ್ಲಿ ಹತ್ಯೆ, ಕೃಷ್ಣಾ ನದಿಗೆ ಶವ ಸಾಗಾಟ: ರಾಘವೇಂದ್ರನ ಹತ್ಯೆಗೆ ಸಂಚು ರೂಪಿಸಿದ ಗುರುರಾಜ್ ತನ್ನ ಸ್ನೇಹಿತ ಲಕ್ಷ್ಮಿಕಾಂತ್ ಸಹಾಯ ತೆಗೆದುಕೊಂಡಿದ್ದಾನೆ. ಮಾರ್ಚ್ 12 ರಂದು ರಾಘವೇಂದ್ರನನ್ನು ಕಲಬುರಗಿ ನಗರದ ಲಾಡ್ಜ್‌ವೊಂದರಿಂದ ಬಲವಂತವಾಗಿ ಕಾರಿನಲ್ಲಿ ಕೃಷ್ಣಾ ನಗರದ ಸ್ಮಾಶನಕ್ಕೆ ಕರೆದೊಯ್ದಿದ್ದಾರೆ. ರಾಘವೇಂದ್ರನ ಮರ್ಮಾಂಗದ ಮೇಲೆ ಹಲ್ಲೆ ಮಾಡಿ ಕೊಲೆಗೈದಿದ್ದಾರೆ. ಸ್ಮಶಾನದಲ್ಲಿ ಹತ್ಯೆ ಮಾಡಿದ ಬಳಿಕ ಕಾರಿನಲ್ಲಿ ಶವವನ್ನು ತೆಗೆದುಕೊಂಡು ಹೋಗಿ ರಾಯಚೂರಿನ ಶಕ್ತಿನಗರ ಬಳಿಯ ಕೃಷ್ಣಾ ನದಿಗೆ ಎಸೆದಿದ್ದಾರೆ.

ಅಶ್ವಿನಿ ಅಲಿಯಾಸ್ ತನು

ಕೊಲೆಯಾದ ರಾಘವೇಂದ್ರ

ಗುರುರಾಜ್ ನೆಲೋಗಿ

ಲಕ್ಷ್ಮೀಕಾಂತ್ ಪಾಟೀಲ್

ಮೃತ ವ್ಯಕ್ತಿಯ ಮೊಬೈಲ್ ಬಿಸಾಕಿ ಸಾಕ್ಷ್ಯ ನಾಶಕ್ಕೂ ಯತ್ನಿಸಿದ್ದಾರೆ.

ನಾಪತ್ತೆ ಪ್ರಕರಣ ದಾಖಲಿಸಿದ್ದ ಪತ್ನಿ: ರಾಘವೇಂದ್ರ, 8 ರಿಂದ 10 ದಿನಗಳ ಬಳಿಕ ಮನೆಗೆ ಬರುವುದನ್ನು ಮೊದಲಿನಿಂದಲೂ ರೂಢಿಸಿಕೊಂಡಿದ್ದ. ಮಾರ್ಚ್ 12 ರಂದು ಬೆಳಗ್ಗೆ ಹೋಟೆಲ್ ಕೆಲಸಕ್ಕೆ ಹೋಗುವುದಾಗಿ ಹೆಂಡತಿಗೆ ಹೇಳಿ ರಾಘವೇಂದ್ರ ಮನೆಯಿಂದ ಹೋಗಿದ್ದ. 2 ತಿಂಗಳು ಕಳೆದರೂ ಗಂಡ ಮನೆಗೆ ಬಾರದಿದ್ದಕ್ಕೆ ಅನುಮಾನಗೊಂಡು ಕಲಬುರಗಿಯ ಸ್ಟೇಷನ್ ಬಜಾರ್ ಠಾಣೆಯಲ್ಲಿ ಮೇ 25ರಂದು ಹೆಂಡತಿ ನಾಪತ್ತೆ ಪ್ರಕರಣ ದಾಖಲಿಸಿದ್ದರು. ತನಿಖೆ ನಡೆಸಿದ ಪೊಲೀಸರು ರಾಘವೇಂದ್ರನಿಗೆ ಬಂದ ಕೊನೆಯ ಕರೆಗಳನ್ನು ಆಧರಿಸಿ ತಾಂತ್ರಿಕ ಸಾಕ್ಷ್ಯಾಧಾರ ಗಳನ್ನು ಕಲೆಹಾಕಿ ಪ್ರಕರಣವನ್ನು ಬೇಧಿಸಿ, ಆರೋಪಿಗಳನ್ನು ಎಡೆಮುರಿ ಕಟ್ಟಿದ್ದಾರೆ.

ಪ್ರಕರಣವನ್ನು ಮೊದಲು ಅಪಹರಣ ತಳಹದಿಯ ಮೇಲೆ ತನಿಖೆ ನಡೆಸಿದೆವು. ಕೆಲ ಬಲವಾದ ಸಾಕ್ಷ್ಯಗಳ ಸಹಾಯದಿಂದ ಕೊಲೆ ನಡೆದಿರುವ ಬಗ್ಗೆ ಸಂಶಯ ಬಂತು. ತನಿಖೆ ಚುರುಕುಗೊಳಿಸಿದ್ದಾಗ ಕೊಲೆಯಾಗಿರುವುದು ಖಚಿತವಾಯಿತು.ರಾಘವೇಂದ್ರನ ಮೊಬೈಲ್ ಕರೆ ಸಂಪರ್ಕಗಳನ್ನು ಪರಿಶೀಲನೆ ನಡೆಸಿದಾಗ ಕೊಲೆ ರಹಸ್ಯ ಬಯಲಿಗೆ ಬಂದಿತು. ಇನ್ನು ಈ ಬಗ್ಗೆ ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ.
- ಡಾ. ಶರಣಪ್ಪ, ಎಸ್.ಡಿ.ಆಯುಕ್ತ ನಗರ ಪೊಲೀಸ್

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರವರ ಕಛೇರಿ,
ಎಂ. ಪಿ. ವಿಭಾಗ, ಬೆಂಗಳೂರು ದಕ್ಷಿಣ ಜಿಲ್ಲೆ. ರಾಮನಗರ.
ದೂ. : 080-2978 2259. ಇ-ಮೇಲ್ : eempdrmgm@gmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 04/2025-26 ದಿನಾಂಕ : 07-07-2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾವೇರಿ ನೀರಾವರಿ ನಿಗಮ ನಿಯಮಿತದ ಅಡಿಯಲ್ಲಿ ಅರ್ಹ ಗುತ್ತಿಗೆದಾರರಿಂದ https://kppp.karnataka.gov.in ಮುಖಾಂತರ 4701 ಲೆಕ್ಕ ಶೀರ್ಷಿಕೆ ಮತ್ತು 2701 ತುರ್ತು ನಿರ್ವಹಣಾ ಯೋಜನೆಯಡಿಯಲ್ಲಿ ಮಾಗಡಿ, ಕನಕಪುರ ಮತ್ತು ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಡಿ ರಸ್ತೆ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ.

ಕಾಮಗಾರಿಗಳ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ, ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ, ಪ್ರೀ ಬಿಡ್ ಸಭೆಯ ದಿನಾಂಕ, ಇ.ಎಂ.ಡಿ. ಮುಂತಾದ ಇತರೆ ಮಾಹಿತಿಗಳನ್ನು https://kppp.karnataka.gov.in ಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಕಾ.ನೀ.ನಿ.ನಿ., ಎಂ.ಪಿ. ವಿಭಾಗ,
ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ.
ಡಿಐಪಿಆರ್/ರಾಮನಗರ/224/ಮಣಿಪಾಲ್/2025-26

ನೇರಳೆ ಹಣ್ಣು ತಿಂದು 7 ವಿದ್ಯಾರ್ಥಿಗಳು ಅಸ್ವಸ್ಥ

ಕೋಲಾರ: ಶಾಲೆಯ ಆವರಣದ ಪಕ್ಕದಲ್ಲಿದ್ದ ನೇರಳೆ ಹಣ್ಣು ತಿಂದು 7 ಮಂದಿ ಸರಕಾರಿ ಶಾಲೆಯ ವಿದ್ಯಾರ್ಥಿಗಳು ಅಸ್ವಸ್ಥರಾಗಿರುವ ಘಟನೆ ಕೋಲಾರದಲ್ಲಿ ನಡೆದಿದೆ.

ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲೂಕಿನ ಪುತ್ರಸೊನ್ನೇನಹಳ್ಳಿಯ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಅಸ್ವಸ್ಥರಾಗಿದ್ದು, ಮಧ್ಯಾಹ್ನ ಊಟಕ್ಕೆ ಬಿಟ್ಟಿದ್ದ ವೇಳೆ ಊಟದ ಬಳಿಕ ಶಾಲೆಯ ಆವರಣದಲ್ಲಿದ್ದ ನೇರಳೆ ತಿನ್ನುತ್ತಿದ್ದಂತೆ 7 ಜನ ವಿದ್ಯಾರ್ಥಿಗಳಿಗೆ ವಾಂತಿ, ಭೇದಿಯಾಗಿದೆ. ಕೂಡಲೆ ಎಚ್ಚೆತ್ತ ಪೋಷಕರು ಹಾಗೂ ಶಿಕ್ಷಕರು ಮಕ್ಕಳಿಗೆ ಚಿಕಿತ್ಸೆ ಕೊಡಲು ಮುಂದಾಗಿದ್ದಾರೆ. ಅದರಂತೆ ಬಂಗಾರಪೇಟೆ ಸಾರ್ವಜನಿಕ ಆಸ್ಪತ್ರೆಯಲ್ಲಿ 6 ಜನ ವಿದ್ಯಾರ್ಥಿಗಳನ್ನು ದಾಖಲು ಮಾಡಿ ಚಿಕಿತ್ಸೆ ನೀಡಲಾಗುತ್ತಿದ್ದು, ಖಾಸಗಿ ಆಸ್ಪತ್ರೆಯಲ್ಲಿ ಒಬ್ಬ ವಿದ್ಯಾರ್ಥಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಸದ್ಯ ವೈದ್ಯರು ಮಕ್ಕಳಿಗೆ ಚಿಕಿತ್ಸೆ ನೀಡುತ್ತಿದ್ದು, ಮಕ್ಕಳನ್ನ ವೈದ್ಯರು ಪರಿವೀಕ್ಷಣೆಯಲ್ಲಿರಿಸಿದ್ದಾರೆ. ಇನ್ನು ವಿಷಯ ತಿಳಿದು ಸ್ಥಳಕ್ಕೆ ಬಿಇಓ ಗುರುಮೂರ್ತಿ ಭೇಟಿ ನೀಡಿ ಪರಿಶೀಲನೆ ನಡೆಸಿ ಮಾಹಿತಿ ಪಡೆದುಕೊಂಡಿದ್ದಾರೆ.

ಆಸ್ಪತ್ರೆಗೆ ಭೇಟಿ ನೀಡಿ ಬಿಇ.ಒ. ಗುರುಮೂರ್ತಿ ಮಕ್ಕಳ ಆರೋಗ್ಯ ವಿಚಾರಿಸಿದರು.

ಜಲಾಶಯ	ಗರಿಷ್ಠ ಮಟ್ಟ	ಇಂದಿನ ಮಟ್ಟ	ಒಳಹರಿವು	ಹೊರಹರಿವು
ಲಿಂಗನಮಕ್ಕಿ	1819.12	1793.65	31684	2880
ಕೆ ಆರ್ ಎಸ್	124.80	122.15	24903	23154
ಹಾರಂಗಿ	2859.00	2853.25	7369	5000
ಆಲಮಟ್ಟಿ	1704.81	1697.19	110612	114630
ನಾರಾಯಣಪುರ	1615.00	1610.22	117272	112419
ತುಂಗಭದ್ರಾ	1625.53	1625.07	54550	61645
ಹೇಮಾವತಿ	2917.92	2919.81	17540	15325

ಕರ್ನಾಟಕ ಸರ್ಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ
ಕಾರ್ಯನಿರ್ವಾಹಕ ಇಂಜಿನೀಯರರ ಕಚೇರಿ, ಬಂದರು ವಿಭಾಗ,
ಬೈತಖೋಲ್, ಕಾರವಾರ, ಉತ್ತರ ಕನ್ನಡ ಜಿಲ್ಲೆ-581302
ದೂ: 08382-229672 ಇ-ಮೇಲ್: eepdkwr4@gmail.com/eepdk@rediffmail.com
ನಂ:ಕಾನಿಇಂ/ಬಂವಿಕಾ/ಟೆಂಡರ್/2025-26/362 ದಿನಾಂಕ: 07-07-2025

ಮರು ಟೆಂಡರು ಪ್ರಕಟಣೆ (2ನೇ ಕರೆ)
(ಕೆ.ಪಿ.ಪಿ.ಪಿ ಪದ್ಧತಿಯಲ್ಲಿ ಮಾತ್ರ) (ದ್ವಿ ಲಕೋಟೆ ಪದ್ಧತಿ)

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳನ್ನು ಕೈಗೊಳ್ಳಲು ಕೆ.ಪಿ.ಪಿ.ಪಿ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು www.kppp.karnataka.gov.in ನಲ್ಲಿ ಹೆಚ್ಚಿನ ಮಾಹಿತಿ ಪಡೆದು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಪಾಲ್ಗೊಳ್ಳಬಹುದಾಗಿದೆ. ಸದರಿ ಟೆಂಡರಿನ ಅವಧಿ ವಿಸ್ತರಣೆಯ ಮಾಹಿತಿಯನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಿಂದ ಪಡೆಯತಕ್ಕದ್ದು. ಈ ಕುರಿತು ಪ್ರತ್ಯೇಕವಾಗಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದಿಲ್ಲ.
"ಜಿಎಸ್‌ಟಿಯನ್ನು ಅನುಮೋದಿತ ಟೆಂಡರ್ ಮೊತ್ತಕ್ಕೆ ಅನುಗುಣವಾಗಿ ಪ್ರತ್ಯೇಕವಾಗಿ ಪಾವತಿಸಲಾಗುವುದು"
ಕಾಮಗಾರಿಯ ಹೆಸರು ಮತ್ತು ಇಂಡೆಂಟ ನಂ: (1) ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಶಿರೂರು ಗ್ರಾಮದಲ್ಲಿ ಭಾರಿ ಭೂಕುಸಿತದಿಂದ ಗಂಗಾವಳಿ ನದಿಯಲ್ಲಿ ಬಿದ್ದ ಮಣ್ಣಿನ ರಾಶಿಯನ್ನು ತೆರವುಗೊಳಿಸುವ (Dredging in Gangavali River at Shirur Landslide Area) ಕಾಮಗಾರಿ. Indent no: IDD/2025-26/OW/WORK_INDENT142/CALL-2, ಟೆಂಡರಿಗಿಟ್ಟ ಮೊತ್ತ: ರೂ. 15621090.04
ಟೆಂಡರ್ ಬಗ್ಗೆ ಸ್ಪಷ್ಟನೆಗಳಿಗಾಗಿ ಕೋರಿಕೆ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ವೇಳೆ: 10-07-2025 ಸಂಜೆ 16.00 ಘಂಟೆಯವರೆಗೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ವೇಳೆ: 14-07-2025 ಸಂಜೆ 17.00 ಘಂಟೆಯವರೆಗೆ

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರ್,
ಬಂದರು ವಿಭಾಗ, ಕಾರವಾರ (ಉ.ಕ)
DIPR/ADK/KSMCA/363/25-26 Dt.07.07.25

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್:ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ:ಮುಇಂ(ವಿ)/ಎಸ್‌ಎಲ್‌ಡಿಸಿ/ಕಾನಿಇಂ/ಸಕಾನಿಇಂ-1/2025-26/3716 ದಿನಾಂಕ:05.07.2025

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯ ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಸಿಇಇ/ಎಸ್‌ಎಲ್‌ಡಿಸಿ/ಇಇ/ಎಇಇ-1/ಡಿಆರ್‌ಐ-005/2025-26ಕ್ಕೆ ಸಂಬಂಧಿಸಿದಂತೆ, ಮುಖ್ಯ ಇಂಜಿನಿಯರ್(ವಿ), ಎಸ್‌ಎಲ್‌ಡಿಸಿ, ಕವಿಪ್ರನಿನಿ, ಬೆಂಗಳೂರು ಕಛೇರಿಗೆ ಅಗತ್ಯವಿರುವ ಇಬ್ಬರು ವಾಹನ ಚಾಲಕರ ಮಾನವ ಸಂಪನ್ಮೂಲ ಸೇವೆಯನ್ನು ಗುತ್ತಿಗೆ ಆಧಾರದ ಮೇಲೆ 6 ತಿಂಗಳ ಅವಧಿಗೆ ಒದಗಿಸಲು ಆಸಕ್ತಿ ಇರುವ ಸಂಸ್ಥೆಗಳಿಂದ ಬಿಡ್‌ಗಳನ್ನು ಆಹ್ವಾನಿಸಲಾಗಿದೆ.
ಸಂಪೂರ್ಣ ವಿವರಗಳನ್ನು ವೆಬ್‌ಸೈಟ್ https://kppp.karnataka.gov.inಗೆ ದಿನಾಂಕ:08.07.2025 ರಂದು ಮಧ್ಯಾಹ್ನ 3.00 ಗಂಟೆಗೆ ಅಥವಾ ನಂತರ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಿ ಪಡೆದುಕೊಳ್ಳಬಹುದು.

ಸಹಿ/-ಮುಖ್ಯ ಇಂಜಿನಿಯರ್(ವಿ),
ರಾಜ್ಯ ವಿದ್ಯುತ್ ರವಾನೆ ಕೇಂದ್ರ, ಕವಿಪ್ರನಿನಿ,
ನಂ.28, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು-560009.

ಆರ್‌ಎಸ್‌ಎಸ್ ಬ್ಯಾನ್ ಮಾಡುವುದು ಒಳ್ಳೆಯದು

ಗ್ಯಾರಂಟಿ ಬಗ್ಗೆ ನಮ್ಮ ಶಾಸಕರು ಯಾರೂ ವಿರೋಧ ಮಾಡಿಲ್ಲ: ಸಚಿವ ಮಧು ಬಂಗಾರಪ್ಪ

ಗದಗ: ಈ ದೇಶದಲ್ಲಿ ಆರ್‌ಎಸ್‌ಎಸ್ ಸೇರಿದಂತೆ ಯಾರೇ ಸಂವಿಧಾನದ ವಿರುದ್ಧ ಹೋದರೂ ಅವರನ್ನು ಬ್ಯಾನ್ ಮಾಡುವುದು ಒಳ್ಳೆಯದು ಎಂದು ಸಚಿವ ಮಧು ಬಂಗಾರಪ್ಪ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಆರ್‌ಎಸ್‌ಎಸ್ ಬ್ಯಾನ್ ಮಾಡಬೇಕು' ಎಂಬ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯಿಸಿ ಸಂವಿಧಾನ ರಕ್ಷಿಸಲು ಕಾಂಗ್ರೆಸ್ ಬದ್ಧವಾಗಿದೆ. ಸಂವಿಧಾನಕ್ಕೆ ಧಕ್ಕೆ ಬಂದರೆ ಹೋರಾಟಕ್ಕೂ ಸಿದ್ಧರಿದ್ದೇವೆ ಎಂದರು.

ಇನ್ನು ಸಿದ್ದರಾಮಯ್ಯ ಅವರನ್ನು ರಾಷ್ಟ್ರ ರಾಜಕಾರಣಕ್ಕೆ ಕಳುಹಿಸಲು ವೇದಿಕೆ ಸಿದ್ಧವಾಗಿದೆ' ಎಂಬ ಬಿಜೆಪಿಯವರ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ಮನಸ್ಸಿಗೆ ಬಂದಂತೆ ವಿಶ್ಲೇಷಣೆ ಮಾಡಿದರೆ ನಾನೇನು ಹೇಳಲು ಸಾಧ್ಯ. ಇನ್ನು ಮೂರು ವರ್ಷ ಬಿಜೆಪಿಯವರಿಗೆ ಬೇರೆ ಕೆಲಸ ಇರಲ್ಲ. ಹಾಗಾಗಿ, ಈ ರೀತಿ ಹೇಳುತ್ತಾರೆ. ಜತೆಗೆ ಈ ವಿಚಾರದಲ್ಲಿ ಇನ್ನೊಂದು ಐದು ವರ್ಷ ಪ್ಯಾಕೇಜ್ ಡೀಲ್' ಎಂದು ವ್ಯಂಗ್ಯವಾಡಿದರು.

ಗ್ಯಾರಂಟಿ ಬಗ್ಗೆ ಶಾಸಕರು ವಿರೋಧಿಸಿಲ್ಲ: ಗ್ಯಾರಂಟಿ ಬಗ್ಗೆ ನಮ್ಮ ಶಾಸಕರು ಯಾರೂ ವಿರೋಧ ಮಾಡಿಲ್ಲ. ನಾವು ಹೇಳಿದ್ದೊಂದು ನೀವು ಬರೆಯುವುದು ಒಂದು. ಶಾಸಕ ಬಸವರಾಜ ರಾಯರೆಡ್ಡಿ ಅವರಿಗೆ ಜನರು ಅದು ಮಾಡಿ, ಇದು ಮಾಡಿ ಎಂದು ಕೇಳಿರುತ್ತಾರೆ. ಅದನ್ನು ಕೊಡಬೇಕು ಅಂದರೆ ಗ್ಯಾರಂಟಿ ನಿಲ್ಲಿಸಬೇಕು ಅಂತ ಇವರು ಹೇಳಿರುತ್ತಾರೆ. ಮಾಧ್ಯಮದವರು ಅದಕ್ಕೆ ಹಿಂದಿನದ್ದು ಹಾಗೂ ಅದರ ಮುಂದಿನ ವಿಡಿಯೊ ಕಟ್ ಮಾಡಿ ಇದನ್ನು ಮಾತ್ರ ತೋರಿಸಿದ್ದಾರೆ' ಎಂದರು.

ಯಾರು ಏನೇ ತಿಪ್ಪರಲಾಗ ಹಾಕಿದರೂ ಗ್ಯಾರಂಟಿ ಐದು ವರ್ಷ ಮುಂದುವರಿಯಲಿದೆ. ಅಷ್ಟು ಸುಲಭವಾಗಿ ಗ್ಯಾರಂಟಿ ನಿಲ್ಲಿಸಲು ಸಿಎಂ ಸಿದ್ದರಾಮಯ್ಯ ಬಿಡುವುದಿಲ್ಲ, ಚುನಾವಣೆ ಪೂರ್ವದಲ್ಲಿ ಗ್ಯಾರಂಟಿ ಪ್ರಣಾಳಿಕೆ ಯೋಜನೆಯ ಉಪಾಧ್ಯಕ್ಷನಾಗಿದ್ದೆ, ಈ ಬಗ್ಗೆ ನನಗೆ ಹೆಮ್ಮೆ ಇದೆ.
ಮಧು ಬಂಗಾರಪ್ಪ, ಸಚಿವ

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ, ರಾಯಚೂರು.
ದೂರವಾಣಿ ಸಂಖ್ಯೆ : 08532-225778
THESE WORKS ARE CATAGEORY WISE CONTRACTORS
ಲೋಇ/ರಾವಿ/ತಾಂಶಾ-4/ಟೆಂಪ್ರ/2024-25/1310 ದಿಃ 03-07-2025

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ-1, 2, 3 & 4)

1) **ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ:** ಲೋಇ/ರಾವಿ/ತಾಂಶಾ-4/ಟೆಂಪ್ರ/2024-25/1310 ದಿನಾಂಕಃ 03-07-2025 2) **ಕಾಮಗಾರಿ ಹೆಸರು:** ರಾಯಚೂರು ಜಿಲ್ಲೆಯ ಒಟ್ಟು 61 ಕಾಮಗಾರಿಗಳು. ರಾಯಚೂರು, ಮಾನವಿ, ದೇವದುರ್ಗ, ಲಿಂಗಸುಗೂರು ಮತ್ತು ಸಿಂಧನೂರು ತಾಲೂಕು ವಿವಿಧಡೆ ಕಟ್ಟಡ, ಸೇತುವೆ ಮತ್ತು ರಸ್ತೆ ನಿರ್ವಹಣೆ ಕಾಮಗಾರಿಗಳು. 3) **ಕಾಮಗಾರಿಯ ಮೊತ್ತ:** ಕನಿಷ್ಠ ರೂ. 326283.96 ಗರಿಷ್ಠ ರೂ. 54612000.00 4) **ಮುಂಗಡ ಠೇವಣಿ ಮೊತ್ತ** : ಕನಿಷ್ಠ ರೂ. 4100.00 ಗರಿಷ್ಠ ರೂ. 819180.00 5) **ಕಾಲಾವಧಿ (ಮಳೆಗಾಲ ಸೇರಿ):** ಕನಿಷ್ಠ 3 (ಮೂರು) ತಿಂಗಳು ಗರಿಷ್ಠ 11 (ಹನ್ನೊಂದು) ತಿಂಗಳು 6) **ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ:** 11/07/2025 ಸಂಜೆ 4.00 ಗಂಟೆಯವರೆಗೆ 7) **ಟೆಂಡರ್ ತೆರೆಯುವ ದಿನಾಂಕ:** 14/07/2025 ಸಂಜೆ 4.30 ಗಂಟೆಯವರೆಗೆ

ಯಾವುದೇ ಅನುಬಂಧಗಳು, ಸ್ಪಷ್ಟೀಕರಣಗಳು, ದಿನಾಂಕಗಳನ್ನು ಹಾಗೂ ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ https://kppp.karnataka.gov.in/ ಮುಖಾಂತರ ನೋಡಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ ರಾಯಚೂರು.
DIP/RCR/230/KSMCA/231/2025-26

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಬೆಂ.ಮ.ಪ್ರ.ಪ್ರಾ
ಎಲ್.ಆರ್.ಡಿ.ಇ ಕಟ್ಟಡ, ನಂ.1, ಅಲಿ ಅಸ್ಕರ್ ರಸ್ತೆ,
ಬೆಂಗಳೂರು - 560 052 ದೂರವಾಣಿ ಸಂಖ್ಯೆ: 080-2263479
ಸಂಖ್ಯೆ: STRRPA/TP/CLU/30/2025-26 ದಿನಾಂಕ: 05.07.2025

"ಪ್ರಕಟಣೆ"

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **"ವ್ಯವಸಾಯ"** ವಲಯದಿಂದ **"ವಾಣಿಜ್ಯ"** ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ-ಗು	ಅನುಮೋದಿತ ಮಹಾ ಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
ಶ್ರೀ ಮುಕುಂದ ಬೆಳಗಲಿ ಬಿನ್ ಪಂಪ ಕವಿ ಆರ್. ಬೆಳಗಲಿ, ನಂ. 39/4, 5ನೇ ಅಡ್ಡರಸ್ತೆ, ಮಾರುತಿ ಬಡಾವಣೆ, ಹೆಬ್ಬಾಳ-ದಾಸರಹಳ್ಳಿ, ಬೆಂಗಳೂರು-560 024.	ಹಾರೋಹಳ್ಳಿ	ಮರಳವಾಡಿ	ತಟ್ಟೆಕೆರೆ	144	3-35	ವ್ಯವಸಾಯ	ವಾಣಿಜ್ಯ

ಷರಾ:- ಅರ್ಜಿದಾರರ ಪ್ರಸ್ತಾವನೆಯಲ್ಲಿ ಸದರಿ ಪ್ರದೇಶದಲ್ಲಿ ವಾಣಿಜ್ಯ ಬೆಳವಣಿಗೆಗೆ ಬೇಡಿಕೆ ಇದ್ದು, ವಾಣಿಜ್ಯ ಬೆಳವಣಿ-ಗೆಯಿಂದ ಸಾರ್ವಜನಿಕರಿಗೆ ಉದ್ಯೋಗಾವಕಾಶ ಸೃಷ್ಠಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **ವ್ಯವಸಾಯ** ವಲಯದಿಂದ **ವಾಣಿಜ್ಯ** ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

"ಸದಸ್ಯ ಕಾರ್ಯದರ್ಶಿರವರ ದಿನಾಂಕ: 17.03.2025ರ ಅಧಿಕೃತ ಜ್ಞಾಪನ ಪತ್ರದಲ್ಲಿ ಅಧಿಕಾರ ಪ್ರತ್ಯೋಜಿಸಿರುವಂತೆ ಸಹಿ ಮಾಡಿದೆ."

ಸಹಿ/- ಸದಸ್ಯ ಕಾರ್ಯದರ್ಶಿಗಳ ಪರವಾಗಿ
ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR)
ಯೋಜನಾ ಪ್ರಾಧಿಕಾರ, ಬೆಂಗಳೂರು.
ಡಿಐಪಿಆರ್/ಸಿಪಿ/1692/ಸಿಸಿಎಲ್/2025-26

ಹೃದ್ರೋಗ ಅಧಿಸೂಚಿತ ಕಾಯಿಲೆ

← ಮೊದಲಪುಟದಿಂದ

ಈ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದ್ದು, ಕರೋನಾ ನಂತರ ಸ್ವಲ್ಪ ಮಟ್ಟಿಗೆ ಹೃದಯಾಘಾತ ಪ್ರಕರಣ ಹೆಚ್ಚಾಗಿರುವುದನ್ನು ದೃಢಪಡಿಸಿದೆ. ಆದರೆ, ಇದು ಲಸಿಕೆಯಿಂದಲ್ಲ ಎಂದು ಸ್ಪಷ್ಟವಾಗಿ ಉಲ್ಲೇಖಿಸಿದೆ ಎಂದು ಮಾಹಿತಿ ನೀಡಿದರು.

ಕರೋನಾ ಸೋಂಕಿನ ನಂತರ ಮಧುಮೇಹ ಪ್ರಕರಣಗಳು ಗಣನೀಯವಾಗಿ ಹೆಚ್ಚಾಗಿರುವುದು ಹೃದಯಾಘಾತಕ್ಕೆ ಒಂದು ಕಾರಣ ಎಂದು ಸಮಿತಿ ತಿಳಿಸಿದೆ. ಬಿಪಿ (ರಕ್ತದೊತ್ತಡ) ಹೆಚ್ಚಳವೂ ಹೃದಯಾಘಾತಕ್ಕೆ ಒಂದು ಕಾರಣವಾಗಿ ಪರಿಣಮಿಸಿದೆ. ಕರೋನಾ ಸೋಂಕಿನಿಂದ ದೇಹದ ಮೇಲಾಗುವ ಪರಿಣಾಮಗಳು, ಇತರೆ ಔಷಧಿಗಳ ಸೇವನೆ, ದೈಹಿಕ ಚಟುವಟಿಕೆಯ ಕೊರತೆ, ಟಿವಿ ಮತ್ತು ಕಂಪ್ಯೂಟರ್ ಮುಂದೆ ಹೆಚ್ಚು ಸಮಯ ಕಳೆಯುವುದು ಕೂಡ ಹೃದಯಾಘಾತಕ್ಕೆ ಕಾರಣಗಳಾಗಿವೆ ಎಂದು ವರದಿ ಹೇಳಿದೆ. ಜನರ ಜೀವನಶೈಲಿಯೂ ಹೃದಯಾಘಾತಕ್ಕೆ ಒಂದು ಕಾರಣ ಎಂದು ಸಮಿತಿ ಅಭಿಪ್ರಾಯಪಟ್ಟಿದೆ. ಅಂತಾರಾಷ್ಟ್ರೀಯ ಮಟ್ಟದ ವರದಿಗಳು ಸಹ ಈ ಅಂಶಗಳನ್ನು ಬೆಂಬಲಿಸುತ್ತವೆ ಎಂದು ಹೇಳಿದರು.

15 ವರ್ಷದೊಳಗಿನ ಮಕ್ಕಳಿಗೆ ಶಾಲಾ ಹಂತದಲ್ಲಿಯೇ ಹೃದಯ ಸಂಬಂಧಿ ತಪಾಸಣೆಗಳನ್ನು ಕಡ್ಡಾಯಗೊಳಿಸಲಾಗುವುದು. ಇದು ಬಾಲ್ಯದಲ್ಲಿಯೇ ಹೃದಯ ಸಮಸ್ಯೆಗಳನ್ನು ಗುರುತಿಸಿ ಚಿಕಿತ್ಸೆ ನೀಡಲು ನೆರವಾಗಲಿದೆ. ಹೃದಯಾಘಾತ ಮತ್ತು ಅಸಾಂಕ್ರಾಮಿಕ ರೋಗಗಳ ಬಗ್ಗೆ ಜಾಗೃತಿ ಮೂಡಿಸುವ ವಿಷಯಗಳನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗುವುದು. ಈ ವರ್ಷ ನೈತಿಕ ಪಾಠಗಳ ಮೂಲಕ ಜಾಗೃತಿ ಮೂಡಿಸಲಾಗುವುದು ಎಂದು ಶಿಕ್ಷಣ ಸಚಿವರು ಭರವಸೆ ನೀಡಿದ್ದಾರೆ ಎಂದು ಹೇಳಿದರು.

ಸರಕಾರಿ ಮತ್ತು ಖಾಸಗಿ ನೌಕರರಿಗೆ ಆರೋಗ್ಯ ತಪಾಸಣೆ:ಸರಕಾರಿ ನೌಕರರು ಮತ್ತು ಗುತ್ತಿಗೆದಾರರಿಗೆ ವರ್ಷಕ್ಕೊಮ್ಮೆ ಕಡ್ಡಾಯವಾಗಿ ಆರೋಗ್ಯ ತಪಾಸಣೆ ಮಾಡಿಸಲಾಗುವುದು. ಖಾಸಗಿ ಕಂಪನಿಗಳ ಸಿಬ್ಬಂದಿಗೂ ವರ್ಷಕ್ಕೊಮ್ಮೆ ಆರೋಗ್ಯ ತಪಾಸಣೆ ಮಾಡಿಸುವುದನ್ನು ಕಡ್ಡಾಯಗೊಳಿಸಲಾಗುವುದು. ಈ ಎಲ್ಲಾ ಶಿಫಾರಸುಗಳ ಕುರಿತು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸಚಿವರು ಮಾಹಿತಿ ನೀಡಿದರು.

ಧೂಮಪಾನ ಮೌಲ್ಯಮಾಪನ:ಶೇ.50ಕ್ಕಿಂತ ಹೆಚ್ಚು ಹೃದಯಾಘಾತಗಳು ಧೂಮಪಾನಿಗಳಲ್ಲಿ ಕಂಡುಬಂದಿದೆ. ಧೂಮಪಾನ ಯುವಕರಲ್ಲಿ ಹೆಚ್ಚುತ್ತಿರುವ ಹೃದಯಾಘಾತಕ್ಕೆ ಪ್ರಮುಖ ಕಾರಣವೆಂದು ತಜ್ಞರ ವರದಿಯಲ್ಲಿ ಬೆಳಕಿಗೆ ಬಂದಿದೆ. ಸಾರ್ವಜನಿಕ ಸ್ಥಳಗಳಲ್ಲಿ ಸಿಗರೇಟ್ ನಿಷೇಧ ಜಾರಿಯಲ್ಲಿದ್ದು, ಅದರ ಕಡ್ಡಾಯವಾಗಿ ಪಾಲಿಸುವುದನ್ನು ಖಚಿತಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಪುನೀತ್ ಜ್ಯೋತಿ ಯೋಜನೆ ತಾಲೂಕು ಆಸ್ಪತ್ರೆಗಳಿಗೂ ವಿಸ್ತರಣೆ

ಪ್ರಸ್ತುತ ರಾಜ್ಯದ 86 ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 'ಪುನೀತ್ ರಾಜ್ ಕುಮಾರ್ ವಿಜಯಜ್ಯೋತಿ ಯೋಜನೆ'ಯನ್ನು ತಾಲೂಕು ಆಸ್ಪತ್ರೆಗಳಿಗೂ ವಿಸ್ತರಿಸಲಾಗುವುದು. ಈ ಯೋಜನೆಯಡಿ ಅಳವಡಿಸಲಾಗಿರುವ ಆಟೋಮೇಟೆಡ್ ಎಕ್ಸ್‌ಟರ್ನಲ್ ಡಿಫೈಬ್ರಿಲೇಟರ್ ಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಮತ್ತು ಅವುಗಳನ್ನು ಬಳಸಲು ಸಿಬ್ಬಂದಿಗೆ ಸೂಕ್ತ ತರಬೇತಿ ನೀಡಲಾಗುವುದು. ರೈಲ್ವೆ ನಿಲ್ದಾಣಗಳು ಮತ್ತು ಬಸ್ ನಿಲ್ದಾಣಗಳಂತಹ ಸಾರ್ವಜನಿಕ ಸ್ಥಳಗಳಲ್ಲೂ ಎಇಡಿಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ದಿನೇಶ್ ಗುಂಡೂರಾವ್ ಅವರು ತಿಳಿಸಿದರು.

ಸಮಾಚಾರ ಸಣ್ಣದಲ್ಲ

ಗಂಡು ಮಗುವನ್ನು ಕೊಂದ ತಾಯಿ

ನೆಲಮಂಗಲ: ಒಂದೂವರೆ ತಿಂಗಳ ಹಸುಗೂಸು ಗಂಡು ಮಗುವನ್ನು ನೀರು ಕಾಯಿಸುವ ಹಂಡೆಯಲ್ಲಿ ಮುಳುಗಿಸಿ ಪಾಪಿ ತಾಯಿ ಕೊಲೆ ಮಾಡಿರುವ ಘಟನೆ ಬೆಂಗಳೂರು ಹೊರವಲಯದ ವಿಶ್ವೇಶ್ವರಪುರದಲ್ಲಿ ನಡೆದಿದೆ. ಬಡತನ ಹಾಗೂ ಮಗುವಿನ ಆರೈಕೆ ಕಷ್ಟವಾದ ಹಿನ್ನೆಲೆ ಮಗುವನ್ನು ತಾಯಿ ಕೊಲೆ ಮಾಡಿರಬಹುದು ಎಂದು ಶಂಕಿಸಲಾಗಿದೆ. ಶೌಚಾಲಯದಲ್ಲಿ ನೀರು ಕಾಯಿಸುವ ಹಂಡೆಯಲ್ಲಿ ತನ್ನ ಒಂದೂವರೆ ತಿಂಗಳ ಮಗುವನ್ನು ಮುಳುಗಿಸಿ ತಾಯಿ ಕೊಲೆ ಮಾಡಿದ್ದು, ಘಟನೆ ಕಂಡು ಸಾರ್ವಜನಿಕರು ಬೆಚ್ಚಿ ಬಿದ್ದಿದ್ದಾರೆ. ನಗರದ ವಿಶ್ವೇಶ್ವರಪುರದಲ್ಲಿ ವಾಸವಾಗಿದ್ದ ಪವನ್ ಮತ್ತು ರಾಧಾ ದಂಪತಿ ತಮ್ಮ ಗಂಡು ಮಗುವನ್ನು ತಡರಾತ್ರಿ ನೀರಿನಲ್ಲಿ ಮುಳುಗಿಸಿ ಕೊಲೆ ಮಾಡಿದ್ದು, ಸ್ಥಳಕ್ಕೆ ನೆಲಮಂಗಲ ಟೌನ್ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ನದಿಯಲ್ಲಿ ಕೊಚ್ಚಿ ಹೋದ ಡ್ರೈವರ್

ಮಂಡ್ಯ: ಫೋಟೊ ತೆದುಕೊಳ್ಳಲು ಹೋಗಿ ಕಾವೇರಿ ನದಿಯಲ್ಲಿ ವ್ಯಕ್ತಿಯೊಬ್ಬರು ಕೊಚ್ಚಿ ಹೋದ ಘಟನೆ ಶ್ರೀರಂಗಪಟ್ಟಣ ತಾಲೂಕಿನ ಸರ್ವಧರ್ಮ ಆಶ್ರಮದ ಬಳಿ ನಡೆದಿದೆ. ಮೈಸೂರಿನಲ್ಲಿ ಆಟೋ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದ ಮಹೇಶ್ (36) ನದಿಯಲ್ಲಿ ಕೊಚ್ಚಿ ಹೋದ ವ್ಯಕ್ತಿ. ಭಾನುವಾರ ಸಂಜೆ ಮಹೇಶ್ ಸ್ನೇಹಿತರೊಂದಿಗೆ ಕೆಆರ್‌ಎಸ್ ಭಾಗಕ್ಕೆ ಪಿಕ್ನಿಕ್ ಬಂದಿದ್ದರು. ಸರ್ವಧರ್ಮ ಆಶ್ರಮದ ಫೋಟೊ ತೆಗೆಸಿಕೊಳ್ಳಲು ಹೋದಾಗ ಆಯತಪ್ಪಿ ಕಾವೇರಿ ನದಿಗೆ ಬಿದ್ದಿದ್ದಾರೆ. ನದಿಯಲ್ಲಿ ನೀರು ಹೆಚ್ಚಿದ್ದ ಕಾರಣ ಮಹೇಶ್ ಕೊಚ್ಚಿ ಹೋಗಿದ್ದಾರೆ.

ಸಚಿವ ಸ್ಥಾನ: ಹೈ ತೀರ್ಮಾನ



ಹಾವೇರಿ: ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರದೀಪ್ ಸಿಂಗ್ ಸರ್ಜೇವಾಲ ಅವರನ್ನು ಭೇಟಿಯಾಗುತ್ತೇನೆ ಎಂದು ವಿಧಾನಸಭೆ ಉಪಸಭಾಪತಿ ರುದ್ರಪ್ಪ ಲಮಾಣಿ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಜೇವಾಲ ಅವರು ಕರೆದಿದ್ದಾರೆ. ಹೋಗುತ್ತೇನೆ. ಹೋಗಿ ಭೇಟಿಯಾದ ಮೇಲೆ ಏನು ಅಂತ ಗೊತ್ತಾಗಲಿದೆ. ಸರಕಾರದ ಸಾಧನೆ, ಸಂಘಟನೆ ಬಗ್ಗೆ ಚರ್ಚೆ ಮಾಡಬಹುದು. ವಿಧಾನಸಭಾ ಉಪಾಧ್ಯಕ್ಷನಾದ ಮೇಲೆ ನಾನು ಕೇಳಿದ ಅನುದಾನ ಕೊಟ್ಟಿದಾರೆ. ನನಗೆ ಸಚಿವ ಸ್ಥಾನ ಕೊಡುವ ಬಗ್ಗೆ ಹೈಕಮಾಂಡ್ ತೀರ್ಮಾನ ಮಾಡುತ್ತೆ. ಯಾರಿಗೆ, ಏನು ಕೊಡಬೇಕು ಎಂದು ಹೈಕಮಾಂಡ್ ತೀರ್ಮಾನ ಮಾಡಲಿದೆ. ಸಚಿವ ಸ್ಥಾನ ಕೊಟ್ಟರೆ ಯಾರು ಬೇಡ ಅಂತಾರೆ. ಶಾಸಕರಿದ್ದ ವರಿಗೆಲ್ಲಾ ಸಚಿವರಾಗುವ ಆಸೆ ಇರುತ್ತದೆ. ಕೊಟ್ಟರೆ ಯಾರೂ ಬೇಡ ಅನ್ನುವುದಿಲ್ಲ. ಹೈಕಮಾಂಡ್ ತೀರ್ಮಾನವೇ ಅಂತಿಮ. ಸಚಿವ ಸ್ಥಾನ ಕೊಡುವುದಾಗಿ ಸುರ್ಜೇವಾಲ ಹಿಂದೆಯೂ ಹೇಳಿದ್ದರು. ಭೇಟಿ ವೇಳೆ ಮತ್ತೊಮ್ಮೆ ಸಚಿವ ಸ್ಥಾನದ ವಿಚಾರವನ್ನು ಪ್ರಸ್ತಾಪ ಮಾಡಲಿದ್ದೇನೆ ಎಂದರು.

ವಿಶ್ವವಾಣಿ ಕ್ಲಬ್ ಹೌಸ್
08.07.2025
ಮಂಗಳವಾರದ ಅತಿಥಿ



ಯೋಗೇಶ್ ಮಾಸ್ಟರ್
ವಿಷಯ
ನಾಯಿ, ಮುದ್ದಿನ ಕಾವು ತರುವುದೇ ಸಾವು
vishwavani.news

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ :** ಧಾರವಾಡ

ಸಮಸ್ಯೆಯೇನು..? : ಧಾರವಾಡದ ಧಾನೇಶ್ವರಿ ನಗರ, ಯಲ್ಲಕ್ಕಿ ಶೆಟ್ಟರ್ ಕಾಲೋನಿಯಲ್ಲಿ ರಸ್ತೆ ದುರಸ್ತಿಯ ಬಗ್ಗೆ.

- **ಪರಿಹಾರ:** ಧಾರವಾಡದ ಧಾನೇಶ್ವರಿ ನಗರ, ಶೆಟ್ಟರ್ ಕಾಲೋನಿಯಲ್ಲಿ ರಸ್ತೆ ಹದಗಟ್ಟಿರುವ ಬಗ್ಗೆ ಅಧಿಕಾರಿಗಳು ಪರಿಶೀಲನೆ ನಡೆಸಿದ್ದು, ರಸ್ತೆಯನ್ನು ದುರಸ್ತಿಪಡಿಸಲಾಗುತ್ತಿದೆ.

ಕೆಲ ಹಿರಿಯ ನಾಯಕರ ಆಕ್ಷೇಪದ ಹೊರತಾಗಿಯೂ ಸುರ್ಜೇವಾಲರಿಂದ ಸಭೆ | ಗೊಂದಲಗಳಿಗೆ ಇನ್ನಷ್ಟು ಪುಷ್ಟಿ

ಶಾಸಕರೊಂದಿಗೆ ಉಸ್ತುವಾರಿ ಸಭೆ 2.0 ಆರಂಭ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಶಾಸಕರೊಂದಿಗೆ ನಡೆಸಿದ 'ಪ್ರತ್ಯೇಕ ಸಭೆ'ಗೆ ತೀವ್ರ ಆಕ್ಷೇಪದ ಹೊರತಾಗಿಯೂ ಸೋಮವಾರದಿಂದ ಎರಡನೇ ಹಂತದ ಸಭೆಯನ್ನು ಆರಂಭಿಸಿದ್ದಾರೆ.

ಕಳೆದ ವಾರ ಮೂರು ದಿನಗಳ ಕಾಲ ಹಳೇ ಮೈಸೂರು ಭಾಗದ ಶಾಸಕರ ಸಮಸ್ಯೆಯನ್ನು ಆಲಿಸಿದ್ದ ಸುರ್ಜೇವಾಲ ಬಳಿ ಸಚಿವರುಗಳ ಬಗ್ಗೆ ಸರಣಿ ದೂರುಗಳು ಕೇಳಿಬಂದಿತ್ತು. ಆದರೆ ಪ್ರತ್ಯೇಕ ಸಭೆ ನಡೆಸುವ ಮೂಲಕ ರಾಜ್ಯ ಕಾಂಗ್ರೆಸ್‌ನಲ್ಲಿರುವ ಗೊಂದಲಗಳಿಗೆ ಇನ್ನಷ್ಟು ಪುಷ್ಠಿಕೊಟ್ಟ ರೀತಿಯಾಯಿತು ಎನ್ನುವ ಅಸಮಾಧಾನವನ್ನು ಪಕ್ಷದ ಹಿರಿಯ ನಾಯಕರು ಹೊರಹಾಕಿ, ಪ್ರತ್ಯೇಕ ಸಭೆಯ ಅಗತ್ಯವಿಲ್ಲವೆಂದು ಹೈಕಮಾಂಡ್‌ಗೆ ದೂರನ್ನು ನೀಡಿದ್ದರು.

ಹಿರಿಯ ನಾಯಕರ ವಿರೋಧದ ಹಿನ್ನೆಲೆಯಲ್ಲಿ ಎರಡನೇ ಹಂತದ ಸಭೆಯನ್ನು ಸುರ್ಜೇವಾಲ ಅವರು ನಡೆಸುವುದಿಲ್ಲ ಎನ್ನಲಾಗಿತ್ತು. ಆದರೆ ಸೋಮವಾರ ಬೆಂಗಳೂರಿಗೆ ಆಗಮಿಸಿದ ಅವರು, ಶಾಸಕರೊಂದಿಗೆ ಸಭೆ ನಡೆಸಿದರು. ಎರಡನೇ ಹಂತದಲ್ಲಿ 50ಕ್ಕೂ ಹೆಚ್ಚು ಶಾಸಕರನ್ನು ಭೇಟಿಯಾಗಲಿರುವ ಸುರ್ಜೇವಾಲ ಅವರ ಬಳಿಕ ಮತ್ತಷ್ಟು ದೂರುಗಳು ಬರುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಎರಡನೇ ಹಂತದ ಸಭೆಯಲ್ಲಿ ಉತ್ತರ ಕರ್ನಾಟಕ, ಮಧ್ಯ ಕರ್ನಾಟಕ ಭಾಗದ ಶಾಸಕರನ್ನು ಸಭೆಗೆ ಕರೆಯಲಾಗಿದೆ. ಈ ಭಾಗದಲ್ಲಿ ಅನುದಾನ ವಿಷಯದಲ್ಲಿಯೂ ಏರುಪೇರಾಗಿರುವುದರಿಂದ ಹಲವು ಸಚಿವರ ವಿರುದ್ಧ ದೂರು ಬರುವ ಸಾಧ್ಯತೆಯಿದೆ ಎಂದು ವಿಶ್ಲೇಷಿಸಲಾಗಿದೆ. ಆದರೆ ಈಗಾಗಲೇ ಸಚಿವರಿಗೆ ಎಚ್ಚರಿಕೆ ನೀಡಿರುವುದನ್ನು ಹಲವು ನಾಯಕರು ಆಕ್ಷೇಪವ್ಯಕ್ತಪಡಿಸಿರುವುದರಿಂದ ಎರಡನೇ ಸಭೆಯಲ್ಲಿ 'ಅಹವಾಲು' ಸ್ವೀಕಾರಕ್ಕೆ ಮಾತ್ರ ಸೀಮಿತವಾಗುವ ಸಾಧ್ಯತೆಯಿದೆ ಎಂದು ತಿಳಿದುಬಂದಿದೆ.

ಆದರೆ ಶಾಸಕರೊಂದಿಗೆ ಈ ರೀತಿಯ ಸಭೆ ನಡೆಸುವಾಗ ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರನ್ನು ಕೂರಿಸಿಕೊಂಡು ಈ ಹಿಂದೆ ಸಭೆ ನಡೆಸಲಾಗುತ್ತಿತ್ತು. ಆದರೆ ಈ ಬಾರಿ ಸಿಎಂ, ಡಿಸಿಎಂ ಇಬ್ಬರೂ ಆಹ್ವಾನ ನೀಡದೇ ಏಕಾಂಗಿಯಾಗಿ ಸಭೆ ನಡೆಸುತ್ತಿರುವುದು ವಿವಾದ ಹಾಗೂ ಕೂತುಹಲಕ್ಕೆ ಕಾರಣವಾಗಿದೆ.

ಪ್ರಗತಿ ಪರಿಶೀಲಿಸಿದ ಸಿಎಂ

ಕೆಪಿಸಿಸಿ ಕಚೇರಿಯಲ್ಲಿ ರಣದೀಪ್ ಸಿಂಗ್ ಸುರ್ಜೇವಾಲ ಶಾಸಕರೊಂದಿಗೆ ಸಭೆ ನಡೆಸುತ್ತಿದ್ದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಲಾಖಾವಾರು ಸಭೆ ನಡೆಸಿದ್ದಾರೆ. ಸೋಮವಾರ ಬೆಳಗ್ಗೆಯಿಂದಲೇ ಪ್ರಗತಿ ಪರಿಶೀಲನಾ ಸಭೆ ಆರಂಭಿಸಿದ ಅವರು, ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಇಲಾಖೆ, ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ, ಆರ್ಥಿಕ ಇಲಾಖೆ, ಗೃಹ ಇಲಾಖೆಯ ಸಭೆ ನಡೆಸಿದ್ದಾರೆ. ಈ ಸಭೆಗಳಲ್ಲಿ ಕೆಲ ಸಚಿವರು ಭಾಗವಹಿಸಿದ್ದಾರೆ. ಬಜೆಟ್‌ನಲ್ಲಿ ಘೋಷಿಸಲಾದ ಯೋಜನೆಗಳ ಮತ್ತು ಭರವಸೆಗಳ ಅನುಷ್ಠಾನ ಇಲಾಖಾವಾರು ಬಿಡುಗಡೆಯಾಗಿರುವ ಅನುದಾನ ಮತ್ತು ಅದರ ವೆಚ್ಚ, ಬಾಕಿ ಯೋಜನೆಗಳ ಅಧಿಸೂಚನೆಗಳು, ಅನುದಾನದ ಲಭ್ಯತೆ ಸೇರಿದಂತೆ ಹಲವಾರು ವಿಚಾರಗಳ ಬಗ್ಗೆ ಮುಖ್ಯ ಮಂತ್ರಿಗಳು ಸುದೀರ್ಘ ಚರ್ಚೆ ನಡೆಸಿದರು ಎಂದು ತಿಳಿದುಬಂದಿದೆ. ಈ ನಡುವೆ ಹಣಕಾಸು ಇಲಾಖೆಯಿಂದ ತೆರಿಗೆ ಸಂಪನ್ಮೂಲ ಸಂಗ್ರಹ ಮತ್ತು ಕೇಂದ್ರ ಸರಕಾರದಿಂದ ವಿವಿಧ ಯೋಜನೆಗಳ ಅನುದಾನ ಲಭ್ಯತೆ ಬಗ್ಗೆಯೂ ಮುಖ್ಯಮಂತ್ರಿ ಮಾಹಿತಿ ಕಲೆ ಹಾಕಿದ್ದಾರೆ. ಬಹಳಷ್ಟು ಇಲಾಖೆ ಗಳಲ್ಲಿ ಬಜೆಟ್ ಯೋಜನೆಗಳು ಈವರೆಗೂ ಅನುಷ್ಠಾನಗೊಳ್ಳದೆ ನನೆಗು ದಿಗೆ ಬಿದ್ದಿವೆ ಎನ್ನುವ ಆರೋಪದ ಹಿನ್ನೆಲೆಯಲ್ಲಿ ಇಲಾಖೆಗಳೊಂದಿಗೆ ಪ್ರತ್ಯೇಕ ಸಭೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಉಸ್ತುವಾರಿ ಇರುವಾಗಲೇ ದೆಹಲಿಗೆ ಸಿಎಂ, ಡಿಸಿಎಂ

ಸಾಮಾನ್ಯವಾಗಿ ರಾಜ್ಯ ಉಸ್ತುವಾರಿಗಳು ರಾಜ್ಯಕ್ಕೆ ಬಂದ ಸಮಯದಲ್ಲಿ ಕೆಪಿಸಿಸಿ ಅಧ್ಯಕ್ಷರು, ಮುಖ್ಯಮಂತ್ರಿಗಳು ಬೆಂಗಳೂರಿನಲ್ಲಿಯೇ ಉಳಿದುಕೊಳ್ಳುತ್ತಾರೆ. ಆದರೆ ಸುರ್ಜೇವಾಲ ಅವರು ಸರಣಿ ಸಭೆಗಳನ್ನು ಹಮ್ಮಿ ಕೊಂಡಿದ್ದರೂ ಡಿ.ಕೆ. ಶಿವಕುಮಾರ್ ಮಂಗಳವಾರ ಬೆಳ ಗ್ಗೆಯೇ ದೆಹಲಿಗೆ ಪ್ರಯಾಣಿಸಲಿದ್ದು, ಯಾವಾಗ ವಾಪಸಾ ಗಲಿದ್ದಾರೆ ಎನ್ನುವ ಸ್ಪಷ್ಟನೆಯಿಲ್ಲ. ಇನ್ನು ಸಿದ್ದರಾಮಯ್ಯ ಅವರು ಬುಧವಾರ ದೆಹಲಿಗೆ ಪ್ರಯಾಣಿಸಲಿದ್ದು, ಪಕ್ಷದ ಹೈಕಮಾಂಡ್ ಅನ್ನು ಭೇಟಿಯಾಗುವ ಸಾಧ್ಯತೆಯಿದೆ. ಆದರೆ ಮಂಗಳವಾರ ಬೆಂಗಳೂರಿನಲ್ಲಿಯೇ ಇದ್ದರೂ, ಇಡೀ ದಿನ ಯಾವುದೇ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿಲ್ಲ. ಇನ್ನು ಗೃಹ ಸಚಿವ ಡಾ.ಜಿ. ಪರಮೇಶ್ವರ ಸೇರಿದಂತೆ ಹಲವು ಹಿರಿಯ ಸಚಿವರು, ಸುರ್ಜೇವಾಲ ಭೇಟಿಗೆ ಹೆಚ್ಚು ಆಸಕ್ತಿ ತೋರಿಸಿಲ್ಲ ಎನ್ನುವುದು ಹಲವು ಕುತೂಹಲಕ್ಕೆ ಕಾರಣವಾಗಿದೆ.

ರಮೇಶ್ ಜಾರಕಿಹೊಳಿ ನೇತೃತ್ವದಲ್ಲಿ ಹಲವು ಮಹತ್ವದ ವಿಚಾರಗಳ ಚರ್ಚೆ

ಗೋಕಾಕ್‌ನಲ್ಲಿ ಬಿಜೆಪಿ ಅತೃಪ್ತರ ಸಭೆ

ಬೆಳಗಾವಿ: ರಾಜ್ಯ ಬಿಜೆಪಿಯಲ್ಲಿ ಎದ್ದಿರುವ ಅಸಮಾಧಾನ ಮೇಲ್ನೋಟಕ್ಕೆ ತಣ್ಣಗಾಗಿದ್ದರೂ, ಇನ್ನು ಒಳಗೊಳಗೆ ಕುದಿಯುತ್ತಿದೆ. ವಿಜಯೇಂದ್ರ ನಾಯಕತ್ವದ ವಿರುದ್ಧ ಬಂಡಾಯ ಎದ್ದಿರುವ ಬಿಜೆಪಿ ಅತೃಪ್ತರ ಬಣ ಬೆಳಗಾವಿ ಜಿಲ್ಲೆಯ ಗೋಕಾಕ್‌ನಲ್ಲಿ ಸಭೆ ನಡೆಸಿದೆ.

ಲಕ್ಷ್ಮೀ ದೇವಿ ಜಾತ್ರಾ ಮಹೋತ್ಸವದ ಹಿನ್ನೆಲೆ ಗೋಕಾಕ್‌ಗೆ ಭೇಟಿ ನೀಡಿದ ಬಿಜೆಪಿ ಅತೃಪ್ತರ ಬಣ ಮಾಜಿ ಸಚಿವ ರಮೇಶ್ ಜಾರಕಿಹೊಳಿ ನೇತೃತ್ವದಲ್ಲಿ ಸಭೆ ನಡೆಸಿದೆ. ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಪುನಃ ಪಕ್ಷಕ್ಕೆ ಕರೆತರುವ ಬಗ್ಗೆ, ರಾಜ್ಯಾಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಬದಲಾವಣೆ ಮಾಡುವ ಕುರಿತು ಮುಂದಿನ ನಡೆ ಬಗ್ಗೆ ಚರ್ಚೆ ನಡೆಸಿದ್ದಾರೆ ಎನ್ನಲಾಗಿದೆ.

ಎಂಎಲ್‌ಸಿ ಲಖನ್ ಜಾರಕಿಹೊಳಿ ಮನೆಯಲ್ಲಿ ಸೇರಿದ್ದ ಅತೃಪ್ತ ನಾಯಕರ ತಂಡ ಸಭೆ ನಡೆಸಿದೆ. ಬಿಜೆಪಿ ನಾಯಕರಾದ ಅರವಿಂದ ಲಿಂಬಾವಳಿ, ಕುಮಾರ ಬಂಗಾರಪ್ಪ, ಶ್ರೀಮಂತ ಪಾಟೀಲ, ಮಾಜಿ ಸಂಸದ ಬಿವಿ ನಾಯಕ, ಶಾಸಕರಾದ ಬಿ.ಪಿ ಹರೀಶ, ಮಾಜಿ ಶಾಸಕ ಮಹೇಶ ಕುಮಟಳ್ಳಿ, ಮುಖಂಡರಾದ ಕಿರಣ ಜಾಧವ ಸೇರಿದಂತೆ ಹಲವರು ಸಭೆಯಲ್ಲಿ ಪಾಲ್ಗೊಂಡಿದ್ದರು.



ಎಂಎಲ್‌ಸಿ ಲಖನ್ ಜಾರಕಿಹೊಳಿ ಅವರ ಗೋಕಾಕ್‌ನ ಮನೆಯಲ್ಲಿ ಬಿಜೆಪಿ ಅತೃಪ್ತರ ಬಣ ಸಭೆ ನಡೆಸಿತು.

ಯತ್ನಾಳ್‌ರನ್ನು ಸೇರಿಸಿಕೊಳ್ಳದಿದ್ದರೆ ಪಕ್ಷಕ್ಕೆ ಹೊಡೆತ

ರಾಜ್ಯಾಧ್ಯಕ್ಷರ ಬದಲಾವಣೆ ಸೇರಿದಂತೆ ಮಹತ್ವದ ನಿರ್ಣಯವನ್ನು ಪಕ್ಷದ ಹೈಕಮಾಂಡ್ ಸೂಕ್ತ ಸಮಯದಲ್ಲಿ ಕೈಗೊಳ್ಳುತ್ತದೆ. ಯತ್ನಾಳ್‌ರನ್ನು ಪಕ್ಷಕ್ಕೆ ವಾಪಸ್ ಕರೆತರುವ ನಿಟ್ಟಿನಲ್ಲಿ ಹೈಕಮಾಂಡ್ ಇನ್ನೊಮ್ಮೆ ಪರಿಶೀಲನೆ ಮಾಡಬೇಕು. ಉತ್ತರ ಕರ್ನಾಟಕ ಭಾಗದ ಅನೇಕ ಜಿಲ್ಲೆಗಳಲ್ಲಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅವರ ಅಪಾರ ಬೆಂಬಲಿಗರಿದ್ದಾರೆ. ಯತ್ನಾಳ್ ಅವರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳದಿದ್ದರೇ ಮುಂದಿನ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳಿಗೆ ಭಾರೀ ಹೊಡೆತ ಬೀಳಲಿದೆ. ಆದ್ದರಿಂದ ಯತ್ನಾಳ ಅವರನ್ನು ಪುನಃ ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳುವುದು ಉತ್ತಮ ಎಂದು ಮಾಜಿ ಶಾಸಕ ಮಹೇಶ್ ಕುಮಟಳ್ಳಿ ಹೇಳಿದರು.

ಅಂಜನಾದ್ರಿಯಲ್ಲಿ ಮತ್ತೆ ಪೂಜೆ ವಿವಾದ

ಕೊಪ್ಪಳ: ಜಿಲ್ಲೆಯ ಅಂಜನಾದ್ರಿಯಲ್ಲಿ ಮತ್ತೆ ಪೂಜೆ ವಿವಾದ ಶುರುವಾಗಿದೆ. ಆಂಜನೇಯ ಸ್ವಾಮಿ ದರ್ಶನಕ್ಕೆ ಬಂದ ನೂತನ ಡಿಸಿ ಸುರೇಶ್ ಅವರು ಹೊರಗಿನ ಅರ್ಚಕನಿಂದ ಪೂಜೆ ಮಾಡಿಸಿದ್ದು, ಆಕ್ರೋಶಕ್ಕೆ ಕಾರಣವಾಗಿದೆ.

ಕೊಪ್ಪಳ ನೂತನ ಜಿಲ್ಲಾಧಿಕಾರಿ ಸುರೇಶ್ ಇಟ್ನಾಳ್ ಅವರು ಮೊದಲ ಬಾರಿಗೆ ಅಂಜನಾದ್ರಿಗೆ ಭೇಟಿ ನೀಡಿದ್ದು, ಈ ವೇಳೆ ಆಂಜನೇಯ ಸ್ವಾಮಿ ದರ್ಶನ ಮಾಡುವಾಗ ಹೊರಗಿನಿಂದ ಅರ್ಚಕನನ್ನು ಕರೆತಂದು ಪೂಜೆ ನೆರವೇರಿ ಸಿದ್ದಾರೆ. ಸೌಜನ್ಯಕ್ಕಾದರೂ ಪ್ರಧಾನ ಅರ್ಚಕ ವಿದ್ಯಾದಾಸ ಬಾಬಾರನ್ನು ಮಾತನಾಡಿಸಬೇಕಿತ್ತು. ಆದರೆ ಮಾತಾಡಿಸದೇ ಹಾಗೇ ಹೋಗಿದ್ದಾರೆ. ಜಿಲ್ಲಾಧಿಕಾರಿಯ ಈ ನಡೆ ಆಂಜನೇಯಸ್ವಾಮಿ ಭಕ್ತರ ಅಸಮಾಧಾನಕ್ಕೆ ಕಾರಣವಾಗಿದೆ. ಸುಪ್ರೀಂ ಕೋರ್ಟ್ ವಿದ್ಯಾದಾಸ ಬಾಬಾ ಅವರಿಗೆ ಪೂಜೆಯ ಹಕ್ಕು ನೀಡಿದೆ. ಆದರೆ, ಕಳೆದ ಹಲವು ತಿಂಗಳಿನಿಂದ ಅಧಿಕಾರಿಗಳು ಬಾಬಾಗೆ ಕಿರುಕುಳ ನೀಡುತ್ತಾ ಧಾರ್ಮಿಕ ಕಾರ್ಯಗಳಿಗೆ ಅಡಚಣೆ ಉಂಟು ಮಾಡುತ್ತಿದ್ದಾರೆ ಎಂಬ ಆರೋಪವಿದೆ. ಈಗ ಡಿಸಿ ಕೂಡ ಇದೇ ವರ್ತನೆ ತೋರಿದ್ದಾರೆ. ಪೂಜಾ ಕಾರ್ಯಗಳ ಚಿತ್ರೀಕರಣದ ವೇಳೆಯೂ ಆಡಳಿತ ಅಧಿಕಾರಿ ಎಂ.ಎಚ್.ಪ್ರಕಾಶರಾವ್ ವಿದ್ಯಾದಾಸ ಬಾಬಾರನ್ನು ತಡೆದಿದ್ದಾರೆ. ಇಷ್ಟೆಲ್ಲಾ ಆದರೂ ಡಿಸಿ ಸುರೇಶ್ ಮಾತ್ರ ನನಗೂ ಇದಕ್ಕೂ ಸಂಬಂಧ ಇಲ್ಲ ಎನ್ನುವಂತೆ ದೇವರ ದರ್ಶನ ಪಡೆದು ಹೋಗಿದ್ದಾರೆ. ಭಕ್ತರಿಗೆ ಮಂಗಳಾರತಿ ನಿಷೇಧಿಸಿರುವ ಜಿಲ್ಲಾಡಳಿತ ಅಧಿಕಾರಿಗಳಿಗೆ ಮಾತ್ರ ಮಂಗಳಾರತಿ, ವಿಶೇಷ ಅರ್ಚಕರ ಸೌಲಭ್ಯ ಕಲ್ಪಿಸುತ್ತಿದೆ. ಇದು ಸರ್ವಾಧಿಕಾರಿ ಧೋರಣೆ ಎಂದು ಭಕ್ತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಂಭಾಪುರಿ ಶ್ರೀ ಹೇಳಿದ ಮಾತು ನಿಜ ಆಗುತ್ತೆ

ರಾಮನಗರ: ಶ್ರೀಗಳು ಹೇಳಿದ ಮಾತು ನಿಜ ಆಗುತ್ತದೆ. ಪವಿತ್ರವಾದ ನಾಲಿಗೆಯಲ್ಲಿ ಈ ವಿಚಾರವನ್ನು ನುಡಿದಿದ್ದಾರೆ. ಭಕ್ತಿಯಿಂದ ದೇವರ ಧ್ಯಾನ ಮಾಡುವ ಶ್ರೀಗಳು ಇದನ್ನ ಹೇಳಿದ್ದಾರೆ. ಭಗವಂತನೇ ಶ್ರೀಗಳ ಬಾಯಲ್ಲಿ ಇದನ್ನ ಹೇಳಿಸಿರ ಬಹುದು ಎಂದು ಶಾಸಕ ಇಕ್ಬಾಲ್ ಹುಸೇನ್ ಹೇಳಿದ್ದಾರೆ.

ಡಿಸಿಎಂ ಡಿಕೆಶಿಗೆ ಉನ್ನತ ಸ್ಥಾನ ಸಿಗಬೇಕು ಎಂಬ ರಂಭಾಪುರಿ ಶ್ರೀ ಹೇಳಿಕೆ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ಸಾಕಷ್ಟು ಶ್ರೀಗಳು, ಕಾರ್ಯಕರ್ತರು ಇದನ್ನ ಹೇಳುತ್ತಿದ್ದಾರೆ. ನಾನು ಕೂಡಾ ಹೇಳಿದ್ದೆ, ಅದಕ್ಕೆ ಈಗಲೂ ಬದ್ಧ. ಶರಣರು ಭಕ್ತಿಯಿಂದ ಅವರ ಬಾಯಲ್ಲಿ ನುಡಿದಿರೋದು ಫಲ ಕೊಡುತ್ತದೆ. ಕೋಟಿಜನ ಹೇಳೋದು ಒಂದೇ, ಶ್ರೀಗಳು ಹೇಳೋದು ಒಂದೇ. ಭಗವಂತ ಎಲ್ಲರ ಮಾತನ್ನ ಕೇಳಲು ಸಾಧ್ಯವಿಲ್ಲ, ಹಾಗಾಗಿ ಅವರ ನಾಲಿಗೆಯಲ್ಲಿ ಈ ಮಾತು ಬಂದಿದೆ ಎಂದು ತಿಳಿಸಿದರು.

ತಂಗಡಗಿ ಮೇಲಿನ ಆರೋಪ ಸತ್ಯಕ್ಕೆ ದೂರ: ಭೋವಿ ಶ್ರೀ

ಚಿತ್ರದುರ್ಗ: ಗಾಣಿಗ ಸಮಾಜದ ಶ್ರೀ ತೈಲೇಶ್ವರ ಸ್ವಾಮೀಜಿ ಸಚಿವ ಶಿವರಾಜ್ ತಂಗಡಗಿಯವರ ಮೇಲೆ ಮಾಡಿರುವ ಆರೋಪ ಸತ್ಯಕ್ಕೆ ದೂರ ಎಂದು ಭೋವಿ ಗುರು ಪೀಠದ ಶ್ರೀಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಆರೋಪವನ್ನು ತಳ್ಳಿ ಹಾಕಿದ್ದಾರೆ.



ಚಿತ್ರದುರ್ಗ ನಗರದದ ಭೋವಿ ಗುರು ಪೀಠದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶ್ರೀಗಳು, ಸಚಿವ ಶಿವರಾಜ್ ತಂಗಡಗಿಯವರು ಪ್ರಾಮಾಣಿಕವಾಗಿ ರಾಜಕೀಯವನ್ನು ನಡೆಸುತ್ತಿದ್ದಾರೆ. ಯಾರಿಂದಲೂ ಹಣವನ್ನು ಪಡೆದಿಲ್ಲ. ರಾಜಕೀಯದಿಂದ ಹಣವನ್ನು ಮಾಡುವ ಉದ್ದೇಶ ಅವರಿಗೆ ಇಲ್ಲ. ತಮ್ಮ ಜೀವನದಲ್ಲಿ ಕಾಯಕ ಪ್ರವೃತ್ತಿಯನ್ನು ರೂಢಿಸಿಕೊಂಡವರು. ತಮ್ಮಲ್ಲಿ ಇದ್ದದ್ದನ್ನು ಬೇರೆಯವರೊಂದಿಗೆ ಹಂಚಿಕೊಂಡು ಬದುಕುವವರಾಗಿದ್ದಾರೆ ಎಂದರು.

ಸರಕಾರದಲ್ಲಿ ಯಾವುದೇ ಅನುದಾನ ಬಿಡುಗಡೆಯಾಗಬೇಕಾದರೂ ಸಹ ಅದಕ್ಕೆ ತನ್ನದೆ ಆದ ನಿಯಮಗಳು ಇವೆ. ಅದನ್ನು ಪಾಲಿಸಬೇಕಿದೆ. ಅನುದಾನದ ಹಣ 1 ಕೋಟಿಗಿಂತ ಕಡಿಮೆ ಇದ್ದರೆ ಸಚಿವರೇ ಬಿಡುಗಡೆ ಮಾಡುತ್ತಾರೆ. ಆದರೆ 1 ಕೋಟಿಗಿಂತ ಜಾಸ್ತಿಯಾದರೆ ಆ ಫೈಲು ಮುಖ್ಯಮಂತ್ರಿ ಬಳಿ ಹೋಗುತ್ತದೆ. ಅವರು ಪರಿಶೀಲಿಸಿದ ನಂತರ ಹಣಕಾಸು ಇಲಾಖೆಗೆ ಬಂದು ಅಲ್ಲಿ ಅನುಮೋದನೆ ಪಡೆದ ನಂತರ ಹಣ ಬಿಡುಗಡೆಯಾಗುತ್ತದೆ ಎಂದು ಶ್ರೀಗಳು ಹೇಳಿದರು.

ರವಿಕುಮಾರ್ ಹೇಳಿಕೆಗೆ ಆರ್‌ಎಸ್‌ಎಸ್ ತರಬೇತಿ

ಕೊಪ್ಪಳ: ದೇಶಭಕ್ತಿ ಎಂದು ಬಿಂಬಿಸಿಕೊಳ್ಳುವ ಆರ್‌ಎಸ್‌ಎಸ್ ತರಬೇತಿಯಿಂದಲೇ ವಿಧಾನಪರಿಷತ್ ಸದಸ್ಯ ಎನ್. ರವಿಕುಮಾರ್ ಸರಕಾರದ ಮಹಿಳಾ ಅಧಿಕಾರಿಗಳ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುತ್ತಿದ್ದಾರೆ' ಎಂದು ಸಚಿವ ಶಿವರಾಜ ತಂಗಡಗಿ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಆರ್‌ಎಸ್‌ಎಸ್ ಅನ್ನು ಹಿಂದೆ ಮೂರು ಬಾರಿ ನಿಷೇಧ ಮಾಡಲಾಗಿತ್ತು. ಈಗಲೂ ಯಾಕೆ ಮಾಡಬಾರದು, ಕೋಮುಗಲಭೆ ಮಾಡುತ್ತಲೇ ಹೋದಾಗ ಕ್ರಮ ಕೈಗೊಂಡರೆ ತಪ್ಪೇನು. ಅಲ್ಲಿ ಮಹಿಳೆಯರಿಗೆ ಬೈಯುವ ತರಬೇತಿ ನೀಡಲಾಗುತ್ತದೆಯೇ' ಎಂದು ಪ್ರಶ್ನಿಸಿದರು. ಭ್ರಷ್ಟಾಚಾರದ ಸುಳ್ಳು ಆರೋಪ ಮಾಡಿರುವ ಮಾಜಿ ಸಚಿವ ಬಿ.ಜೆ. ಪುಟ್ಟಸ್ವಾಮಿಯವರು ಬಿಜೆಪಿಯಲ್ಲಿ ರೂಢಿಯಾಗಿದ್ದ ಸುಳ್ಳಿನ ರಾಜಕಾರಣ ಮಾಡಬಾರದು ಎಂದರು.

ಕಲುಷಿತ ನೀರು ಸೇವನೆ ಶಂಕೆ, ಹಲವರು ಆಸ್ಪತ್ರೆಗೆ ದಾಖಲು | ತಿಪ್ಪನಟಗಿ ಗ್ರಾಮದಲ್ಲಿ ಘಟನೆ

ವಾಂತಿಭೇದಿ: ಒಂದೇ ಗ್ರಾಮದ ಮೂವರ ಸಾವು

ಯಾದಗಿರಿ: ಕಲುಷಿತ ನೀರು ಸೇವನೆಯಿಂದಾಗಿ ವಾಂತಿಭೇದಿ ಉಲ್ಬಣಗೊಂಡು ಸುರಪುರ ತಾಲೂಕಿನ ತಿಪ್ಪನಟಗಿ ಗ್ರಾಮದಲ್ಲಿ ಮೂವರು ಸಾವನ್ನಪ್ಪಿರುವ ಶಂಕೆ ವ್ಯಕ್ತವಾಗಿದ್ದು, 20ಕ್ಕೂ ಹೆಚ್ಚು ಮಂದಿ ಅಸ್ವಸ್ಥರಾಗಿದ್ದಾರೆ.

ವಾಂತಿ ಭೇದಿಯಿಂದ ಆಸ್ಪತ್ರೆಗೆ ದಾಖಲಾಗಿ ದ್ದರೆನ್ನಲಾದ ತಿಪ್ಪನಟಗಿ ಗ್ರಾಮದ ಮೂವರು ಕಳೆದ ರೆಡು ದಿನಗಳ ಅಂತರದಲ್ಲಿ ಸಾವನ್ನಪ್ಪಿದ್ದು, ಕಲುಷಿತ ನೀರು ಸೇವನೆ ಶಂಕೆ ಗ್ರಾಮಸ್ಥರು ವ್ಯಕ್ತಪಡಿಸಿದ್ದಾರೆ. ಆದರೆ,ಅಧಿಕಾರಿ ವರ್ಗ ಇದನ್ನು ತಳ್ಳಿಹಾಕಿದ್ದು, ಬೇರೆ ಕಾಯಿಲೆಗಳಿಂದ ಮೃತಪಟ್ಟಿದ್ದಾರೆ ಎಂದು ಹೇಳುತ್ತಿದ್ದಾರೆ.

ಪ್ರಕರಣದ ವಿವರ: ಕಳೆದ ಹಲವು ದಿನಗಳಿಂದ ತಿಪ್ಪನಟಗಿ ಗ್ರಾಮದಲ್ಲಿ ವಾಂತಿ ಭೇದಿ ಉಲ್ಬಣಗೊಂಡು ಹಲವರು ಆಸ್ಪತ್ರೆಗೆ ಸೇರಿದ್ದಾರೆ. ಈ ನಡುವೆ ಕಳೆದ ಹತ್ತು ದಿನಗಳ ಹಿಂದೆ ವಾಂತಿ-ಭೇದಿಯಿಂದ ಖಾಸಗಿ ಹಾಗೂ ಬೇರೆ ಬೇರೆ ಸರಕಾರಿ ಆಸ್ಪತ್ರೆಗೆ ದಾಖಲಾಗಿದ್ದರೆನ್ನಲಾದ ದೇವಿಕೆಮ್ಮ ಹೊಟ್ಟಿ(48) ವೆಂಕಮ್ಮ (60) ರಾಮಣ್ಣ ಪೂಜಾರಿ(50) ಮೃತಪಟ್ಟಿದ್ದಾರೆ. ಇನ್ನೂ ನಾಲ್ವರು ಸ್ಥಿತಿ ಚಿಂತಾಜನಕವಾಗಿದ್ದು, ಕಲಬುರಗಿ ನಗರದ ವಿವಿಧ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇದಲ್ಲದೇ ತಾತ್ಕಾಲಿಕವಾಗಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಅಸ್ವಸ್ಥರ ಚಿಕಿತ್ಸೆಗೆ ತೆಗೆಯಲಾಗಿರುವ ಆರೋಗ್ಯ ಕೇಂದ್ರದಲ್ಲಿಯೂ ಸಹ 13ಕ್ಕೂಹೆಚ್ಚು ಮಂದಿ ದಾಖಲಾಗಿದ್ದಾರೆ. ಕೆಲವರು ಚೇತರಿಸಿಕೊಂಡಿದ್ದಾರೆ. ಇನ್ನೂ ಘಟನೆ ಯಿಂದಾಗಿ ಗ್ರಾಮದಲ್ಲಿರುವ ಜಲಮೂಲಗಳನ್ನು ಪರೀಕ್ಷೆಗೆ ಕಳುಹಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ ಅವರು ಸೋಮವಾರ ತಿಪ್ಪನಟಗಿ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸಚಿವ ದರ್ಶನಾಪುರ ಭೇಟಿ, ಪರಿಶೀಲನೆ

ಯಾದಗಿರಿ: ವಾಂತಿಭೇದಿ ಪ್ರಕರಣದ ಸುದ್ದಿ ತಿಳಿದ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ ಅವರು ಸೋಮವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಘಟನೆ ಕುರಿತು ಅಧಿಕಾ ರಿಗಳಿಂದ ಮಾಹಿತಿ ಪಡೆದುಕೊಂಡು ನಂತರ ಮಾತನಾಡಿದ ಅವರು, 2 ತಿಂಗಳಿ ಗೊಮ್ಮೆ ಟ್ಯಾಂಕರ್ ಸ್ವಚ್ಛಗೊಳಿಸುವು ದು. ಪೈಪ್ ಲೈನ್ ವ್ಯವಸ್ಥೆ ಪರಿಶೀಲನೆ ಸೇರಿ ಹಲವು ವಿಷಯಗಳ ಕುರಿತು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಿಡಿಒ ವಿರುದ್ಧ ಆಕ್ರೋಶ

ತಿಪ್ಪನಟಗಿ ಗ್ರಾಮದಲ್ಲಿ ವಾಂತಿ ಭೇದಿ ಉಲ್ಬಣದ ಹಿನ್ನೆಲೆಯಲ್ಲಿ ಗ್ರಾಮಕ್ಕೆ ಭೇಟಿ ನೀಡಿದ ಸಚಿವ ಮತ್ತು ಅಧಿಕಾರಿಗಳ ಮುಂದೆ ಮಾಲಗತ್ತಿ ಗ್ರಾಮ ಪಂಚಾಯಿತಿ ಪಿಡಿಒ ಮೇಲೆ ಗ್ರಾಮಸ್ಥರು ಸಾಲು ಸಾಲಾಗಿ ಆರೋಪಿಸಿದರು. ನೀರು ಪೂರೈಕೆ ಮಾಡುವ ಟ್ಯಾಂಕರ್ ಸ್ವಚ್ಛಗೊಳಿಸಿಲ್ಲ .ಯಾವತ್ತು ಇತ್ತ ಕಡೆ ಸುಳಿದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ತಿಪ್ಪನಟಗಿ ಗ್ರಾಮದಲ್ಲಿ ಮೂವರು ಬೇರೆ ಬೇರೆ ಕಾಯಿಲೆಗಳಿಂದ ಮೃತಪಟ್ಟಿದ್ದಾರೆ. ವಾಂತಿಭೇದಿಯಿಂದಾಗಿ ಯಾವುದೇ ಸಾವು ಸಂಭವಿಸಿಲ್ಲ. ವಾಂತಿಭೇದಿ ಕಾಣಿಸಿಕೊಂಡ ನಾಲ್ವರು ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

-ರಾಜಾ ವೆಂಕಟಪ್ಪ ನಾಯಕ, ತಾಲೂಕು ಆರೋಗ್ಯ ಅಧಿಕಾರಿ, ಸುರಪುರ

ಗ್ರಾಮಸ್ಥರಿಗೆ ನೀರು ಪೂರೈಕೆ ಮಾಡುವ ಕಿರು ನೀರು ಸರಬರಾಜು ಘಟಕದ ದೃಶ್ಯ.

ಪ್ರವಾಸಿ ಪ್ರಪಂಚ ಅಂದ್ರೆ ಬರೀ ಪತ್ರಿಕೆ ಅಷ್ಟೇ ಅಲ್ಲ! ಕ್ಷಣ ಕ್ಷಣಕ್ಕೂ ಮಾಹಿತಿ ನೀಡುವ ಸಮಗ್ರ ವೆಬ್‌ಸೈಟ್ ವಿಸಿಟ್ ಮಾಡಿ
www.pravasiprapancha.com

ವಿಶ್ವವಾಣಿ

ಸಂಪಾದಕೀಯ

ಬಳ್ಳಿಗಳಿಗೆ ನೀರೆರೆಯಬೇಕಿದೆ

ಇದು ಕ್ರಿಕೆಟ್ ಅಭಿಮಾನಿಗಳ ಪಾಲಿಗೆ ನಿಜಕ್ಕೂ ರೋಚಕ ಸುದ್ದಿಯೇ. ಭಾರತ ಮತ್ತು ಇಂಗ್ಲೆಂಡ್ ತಂಡಗಳ ನಡುವೆ ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದ ಎರಡನೇ ಟೆಸ್ಟ್ ಪಂದ್ಯದಲ್ಲಿ 336 ರನ್ನುಗಳ ಭರ್ಜರಿ ಗೆಲುವು ಸಾಧಿಸಿ ಭಾರತ ತಂಡವು ಬೀಗಿದೆ. ಇದು ಬರೋಬ್ಬರಿ 58 ವರ್ಷಗಳ ನಂತರ ಎಜ್‌ಬಾಸ್ಟನ್ ಕ್ರೀಡಾಂಗಣದಲ್ಲಿ ಭಾರತ ಮೊಳಗಿಸಿರುವ ಜಯಭೇರಿ ಎಂಬುದು ಹೆಮ್ಮೆ ಪಡುವ ಸಂಗತಿಯೇ ಸರಿ. ಈ ಗೆಲುವಿಗೆ ಮತ್ತಷ್ಟು ಕೊಡುಗೆ ನೀಡಿದವರು ಎರಡು ಇನ್ನಿಂಗ್ ಸೇರಿ ಒಟ್ಟು 10 ವಿಕೆಟ್ಟುಗಳನ್ನು ಕಬಳಿಸಿ ಯಶಸ್ವಿ ಬೌಲರ್ ಎನಿಸಿಕೊಂಡ ಆಕಾಶ್ ದೀಪ್. ಭಾರತೀಯ ಕ್ರಿಕೆಟಿಗರು ಎಂದಾಕ್ಷಣ ಮನ್ಸೂರ್ ಅಲಿಖಾನ್ ಪಟೌಡಿ, ಸುನಿಲ್ ಗಾವಸ್ಕರ್, ಕಪಿಲ್ ದೇವ್, ಸಚಿನ್ ತೆಂಡುಲ್ಕರ್, ಜಿ.ಆರ್.ವಿಶ್ವನಾಥ್, ಅನಿಲ್ ಕುಂಬ್ಳೆ ಎಂಬ ಹೆಸರುಗಳು ಕ್ರೀಡಾಪ್ರೇಮಿಗಳಿಗೆ ಅಪ್ರಯತ್ನವಾಗಿ ನೆನಪಾಗುವುದರಲ್ಲಿ ಅಚ್ಚರಿಯೇನಿಲ್ಲ. ಇವರೆಲ್ಲ ಸಾಧನೆ ಮೆರೆಯಲು ತಂತಮ್ಮ ನೆಲೆಯಲ್ಲಿ ಸಾಕಷ್ಟು ಬೆವರು ಬಸಿದವರೇ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಆಕಾಶ್ ದೀಪ್ ಅವರು ಈ ಹಂತವನ್ನು ತಲುಪಲು ಪಟ್ಟಿರುವ ಪರಿಶ್ರಮ, ಮಾಡಿರುವ ಕಸರತ್ತುಗಳನ್ನು ಒಮ್ಮೆ ಅವಲೋಕಿಸಿದರೆ, ಅವರ ಬಗ್ಗೆ ನಿಜಕ್ಕೂ ಹೆಮ್ಮೆ ಮೂಡುತ್ತದೆ. ಕಾರಣ, ಬಿಹಾರದ ಅದ್ಯಾವುದೋ ಮೂಲೆಯ ಹಳ್ಳಿಯವರಾದ ಆಕಾಶ್‌ಗೆ ಅವರಪ್ಪನೇ ಕ್ರಿಕೆಟ್ ಆಡುವುದನ್ನು ಉತ್ತೇಜಿಸಲಾಗದಂಥ ಬಡತನದಲ್ಲಿ ಬಳಲುತ್ತಿತ್ತು ಅವರ ಕುಟುಂಬ. ಆದರೆ, ಅದನ್ನೊಂದು ಕೊರತೆಯೆಂದು ಪರಿಗಣಿಸದೆ, ಶ್ರದ್ಧೆ ಮತ್ತು ಬದ್ಧತೆಯೊಂದಿಗೆ ಅಭ್ಯಾಸದಲ್ಲಿ ತೊಡಗಿಸಿಕೊಂಡ ಫಲವಾಗಿ ಇವತ್ತು ಈ ಹಂತವನ್ನು ತಲುಪಿದ್ದಾರೆ ಆಕಾಶ್ ದೀಪ್. ಹುಡುಕಿದರೆ ಇಂಥ ಹಲವು ಪ್ರತಿಭೆಗಳು ನಮ್ಮ ನಾಡಿನ ಮೂಲೆಮೂಲೆಯಲ್ಲಿಯೂ ಸಿಕ್ಕಾವು. ಆದರೆ ಹೊಟ್ಟೆ ಹೊರೆದುಕೊಳ್ಳುವುದೇ ಕಷ್ಟವಾಗಿರುವ ಕಾರಣಕ್ಕೆ ಇಂಥ ಪ್ರತಿಭೆಗಳಿಗೆ ಉತ್ತೇಜನ ಸಿಗಲಾಗದ ಸ್ಥಿತಿಯಲ್ಲಿ ಅವರ ಕುಟುಂಬಗಳಿರುತ್ತವೆ. ಇಂಥ 'ಪ್ರತಿಭಾ-ಬಳ್ಳಿಗಳಿಗೆ' ನೀರೆರೆಯಬೇಕಾದ ಕೆಲಸ ಆಗಬೇಕಿದೆ...

ಸೊಂಪಾದಕೀಯ

ಇದೊಂದು ಸುಳ್ ಸುದ್ದಿಯಾ?!

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬರೋ ಮುನ್ನ ಕೊಟ್ಟಿದ್ದ ಆಶ್ವಾಸನೆಗಳಲ್ಲಿ ಒಂದು ಅಂದ್ರೆ, ಅದು ಸುಳ್ಳು ಸುದ್ದಿಗಳನ್ನ ನಿಯಂತ್ರಣ ಮಾಡೋದು. ಇದು ಗ್ಯಾರಂಟಿಗಳ ಅಡಿಯಲ್ಲಿ ಬರೋದಿಲ್ಲ ಅನ್ನೋ ಕಾರಣಕ್ಕೋ ಏನೋ ಸರಕಾರ ಅದನ್ನು ಅನುಷ್ಠಾನಕ್ಕೆ ತರೋಕೆ ಇನ್ನೂ ಮನಸ್ಸು ಮಾಡಿರಲಿಲ್ಲ. ಇದರ ಬಗ್ಗೆ ಹಲವಾರು ಬಾರಿ ಅನೇಕರು ಮಾತಾಡಿದ್ದರೂ ಕಟ್ಟುನಿಟ್ಟಾಗಿ ಇದು ಜಾರಿಗೆ ಬಂದಿಲ್ಲ. ಸಾಮಾಜಿಕ ಜಾಲತಾಣಗಳು ಆಕ್ಟಿವ್ ಆದಮೇಲೆ ಸುಳ್ಳು ಸುದ್ದಿಗಳು ಒಂದು ಕಡೆ ಇರಲಿ, ಯಾವುದು ಸುದ್ದಿ, ಯಾವುದು ಸುದ್ದಿ ಅಲ್ಲ ಅನ್ನೋದೇ ಜನರಿಗೆ ಗೊಂದಲ ಆಗಿದೆ. ಇದರಲ್ಲಿ ಡಿಜಿಟಲ್ ಮಾಧ್ಯಮಗಳು ಮತ್ತು ಯುಟ್ಯೂಬ್ ಚಾನೆಲ್‌ಗಳ ಕಾಣಿಕೆ ದೊಡ್ಡದು. ಯಾವುದೋ ಸುದ್ದಿಗೆ ತಮಗೆ ತೋಚಿದ ಥರ ಇನ್ನೇನೋ ಹೆಡ್‌ಲೈನ್ ಹಾಕಿ ಜನರನ್ನು ಕ್ಲಿಕ್ ಮಾಡಿಸಿ ಆ ಮೂಲಕ ಸುದ್ದಿಗೆ ಹೆಚ್ಚಿನ ರೀಚ್ ಕೊಡುವ ಪ್ರಯತ್ನ ಮಾಡುವವರು ಈಗ ತುಂಬಿಹೋಗಿದ್ದಾರೆ. ಒಂದು ಕ್ವೆಶ್ಚನ್ ಮಾರ್ಕ್ ಮತ್ತು ಒಂದು ಆಶ್ಚರ್ಯಸೂಚಕ ಚಿಹ್ನೆ ಇವರ ಬಂಡವಾಳ. ಅವರೆಡನ್ನೂ ಹಾಕಿ ಏನು ಬೇಕಾದರೂ ಹೆಡ್‌ಲೈನ್ ಕೊಡಬಹುದು ಅನ್ನೋ ಧೋರಣೆ ಇವರದ್ದು. ಹೀಗಾಗಿ ಸುಳ್ಳು ಸುದ್ದಿಗಳಿಗೆ ಬಲಿ ಆಗುವವರ ಸಂಖ್ಯೆ ಜಾಸ್ತಿ ಆಗಿದೆ ಅಂದರೆ ತಪ್ಪೇನಿಲ್ಲ. 'ನೋಡಿದ್ರೆ ಶಾಕ್ ಆಗ್ತೀರಾ' ಅನ್ನೋ ಯುಟ್ಯೂಬ್ ಚಾನೆಲ್‌ಗಳ ಲಿಂಕ್ ಓಪನ್ ಮಾಡಿದರೆ ನೋಡುಗರಿಗೆ ಖಂಡಿತಾ ಶಾಕ್ ಆಗುತ್ತದೆ, ಯಾಕಂದ್ರೆ, ಅದರಲ್ಲಿ ಶಾಕ್ ಆಗುವಂಥ ಯಾವ ವಿಚಾರವೂ ಇಲ್ಲ ಅನ್ನೋ ಕಾರಣಕ್ಕೆ. ಇಂಥವನ್ನೆಲ್ಲ ನೋಡಿ ಸಾಕಾಗಿ ಈಗ ಗೃಹಸಚಿವ ಪರಮೇಶ್ವರ್ ಅವರು ಇನ್ನೊಂದು ಬಾರಿ 'ಸುಳ್ಳು ಸುದ್ದಿ ಹರಡೋದನ್ನ ತಡೆಗಟ್ಟೋಕೆ ಕ್ರಮ ಕೈಗೊಳ್ಳುತ್ತೇವೆ' ಅಂತ ಘೋಷಣೆ ಹೊರಡಿಸಿದ್ದಾರೆ. ಆದರೆ ಸುಳ್ಳು ಸುದ್ದಿಗಳನ್ನು ಬಲಿ ಹಾಕೋಕೆ ಇವರ ಬಳಿ ಏನು ಪ್ಲ್ಯಾನ್ ಇದೆ ಅಂತ ಗೊತ್ತಿಲ್ಲ, ಅಲ್ಲದೆ ಇದು ಸಾಧ್ಯವೇ ಅನ್ನೋ ಪ್ರಶ್ನೆ ಕೂಡಾ ಇದೆ. ಹಾಗಾಗಿ ಸುಳ್ಳು ಸುದ್ದಿ ತಡೆಗಟ್ಟುವ ಬಗೆಗಿನ ಈ ಸುದ್ದಿ ಸುಳ್ಳೋ ನಿಜವೋ ಅನ್ನೋದು ಗೊತ್ತಾಗಬೇಕು ಅಂದ್ರೆ, ಪರಮೇಶ್ವರ್ ಏನು ಮಾಡ್ತಾರೆ ಅಂತ ಕಾದು ನೋಡಲೇಬೇಕು.

ಸಂಪಾದಕರ ಸದ್ಯಶೋಧನೆ

ವಿಮಾನವನ್ನು ಪಾರ್ಕ್ ಮಾಡುವುದು

ವಿಮಾನ ನಿಲ್ದಾಣದಲ್ಲಿ ವಿಮಾನಗಳನ್ನು ನಿಲ್ಲಿಸಲು (ಪಾರ್ಕ್ ಮಾಡುವುದು) ಒಂದು ಕ್ರಮವಿದೆ. ವಿಮಾನವನ್ನು ಏರೋ ಬ್ರಿಡ್ಜ್ ಹತ್ತಿರ ನಿಲ್ಲಿಸುವ ಪ್ರಕ್ರಿಯೆ ಬಹುಮಟ್ಟಿಗೆ ಸೂಕ್ಷ್ಮ ಹಾಗೂ ನಿರ್ದಿಷ್ಟ ಮಾರ್ಗಸೂಚಿಗಳ ಪಾಲನೆಯಿಂದ ಕೂಡಿದೆ. ಈ ಪ್ರಕ್ರಿಯೆಯಲ್ಲಿ ಗ್ರೌಂಡ್ ಸ್ಟಾಫ್ ಅಥವಾ ನೆಲದ ಸಿಬ್ಬಂದಿಯ ಪಾತ್ರ ಅತ್ಯಂತ ಮುಖ್ಯ. ಅವರು ನೀಡುವ ಸೂಚನೆಗಳು ವಿಮಾನವನ್ನು ಸುರಕ್ಷಿತವಾಗಿ, ನಿರ್ದಿಷ್ಟ ಸ್ಥಳದಲ್ಲಿ ನಿಲ್ಲಿಸಲು ನೆರವಾಗುತ್ತದೆ. ವಿಮಾನಗಳ ದುರಸ್ತಿ ಅಥವಾ ನಿರ್ವಹಣಾ ಕಾರ್ಯಕ್ಕಾಗಿ ಹ್ಯಾಂಗರ್‌ನಲ್ಲಿ ನಿಲ್ಲಿಸುತ್ತಾರೆ. ಹ್ಯಾಂಗರ್ ಎಂದರೆ ವಿಮಾನಗಳನ್ನು ನಿರ್ವಹಣೆಗೆ ಒಳಪಡಿಸಲು ಬಳಸುವ ಒಂದು ದೊಡ್ಡ ಕಟ್ಟಡ ಅಥವಾ ಶೆಡ್. ಇವು ಸಾಮಾನ್ಯವಾಗಿ ವಿಮಾನ ನಿಲ್ದಾಣಗಳ ಬಳಿ ಇರುತ್ತವೆ. ಹ್ಯಾಂಗರ್‌ಗಳು ವಿವಿಧ ಗಾತ್ರಗಳಲ್ಲಿ ಇರುತ್ತವೆ ಹಾಗೂ ಅವುಗಳಲ್ಲಿ ಒಂದಕ್ಕಿಂತ ಹೆಚ್ಚು ವಿಮಾನಗಳು ನಿಲ್ಲಿಸಬಹುದಾದ ಸಾಮರ್ಥ್ಯವಿರುತ್ತದೆ. ಗ್ರೌಂಡ್ ಸ್ಟಾಫ್ ಅಥವಾ ವಿಮಾನ ನಿಲ್ದಾಣದಲ್ಲಿ ವಿಮಾನದ ಸುತ್ತಮುತ್ತ ನೆಲದ ಮೇಲೆ ಕಾರ್ಯನಿರ್ವಹಿಸುವ ಸಿಬ್ಬಂದಿ ವಿಮಾನದ ಚಲನವಲನಕ್ಕೆ ನೆರವಾಗುತ್ತಾರೆ. ಇವರಲ್ಲಿ ಮಾರ್ಷಲಿಂಗ್ ಸಿಬ್ಬಂದಿ (Marshalling staff), ಟೆಕ್ನಿಕಲ್ ಎಂಜಿನಿಯರ್‌ಗಳು, ತುರ್ತುಸಿದ್ಧತೆಯ ಸಿಬ್ಬಂದಿ, ನಿರ್ವಹಣಾ ತಂಡ (ಮೆಂಟೆನೆನ್ಸ್ ಟೀಮ್), ಟೋವಿಂಗ್ ಸಿಬ್ಬಂದಿ ಮುಂತಾದ ವಿಭಾಗಗಳಿರುತ್ತವೆ. ವಿಮಾನ ಹ್ಯಾಂಗರ್‌ಗೆ ಪ್ರವೇಶಿಸುವ ಸಮಯದಲ್ಲಿ ಮಾರ್ಷಲಿಂಗ್ ಸಿಬ್ಬಂದಿ ಪ್ರಮುಖ ಪಾತ್ರ ವಹಿಸುತ್ತಾರೆ. ಅವರ ನಿರ್ವಹಣೆಯು ವಿಮಾನವನ್ನು ಸರಿಯಾದ ಸ್ಥಳದಲ್ಲಿ ನಿಲ್ಲಿಸಿಕೊಳ್ಳಲು ಸಹಕಾರಿಯಾಗುತ್ತದೆ. ವಿಮಾನ ರನ್ ವೇಯಿಂದ ಬಂದ ನಂತರ ಏರೋ ಬ್ರಿಡ್ಜ್ ಹತ್ತಿರ ನಿಲ್ಲಿಸುವ ಪ್ರಕ್ರಿಯೆಯೂ ನಿರ್ದಿಷ್ಟ ಕ್ರಮ ಮತ್ತು ಸೂಚನೆಯಂತೆ ನಡೆಯುತ್ತದೆ. ವಿಮಾನಗಳನ್ನು ನಿಲ್ಲಿಸಲು ಪೈಲಟ್ ಕಣ್ಣಿಗೆ ಕಾಣುವ ರೀತಿಯಲ್ಲಿ ಸೂಚನೆ ನೀಡಿ ನೆರವಾಗುವುದು ಮಾರ್ಷಲಿಂಗ್ ವಿಭಾಗದವರ ಕರ್ತವ್ಯ. ಇದು ದೃಶ್ಯಸೂಚನೆಗಳ (visual signals) ಮೂಲಕವಾಗಿರುತ್ತದೆ. ಈ ಸೂಚನೆಗಳನ್ನು ನೀಡುವ ಸಿಬ್ಬಂದಿಯನ್ನು ಮಾರ್ಷಲರ್ ಎನ್ನುತ್ತಾರೆ. ಇವರು ಹೆಚ್ಚಿನ ಸಮಯ ಮಿನುಗುವ ಕೋಲು (Fluorescent baton) ಅಥವಾ ಹೊಳೆಯುವ ಜಾಕೆಟ್ ಧರಿಸುತ್ತಾರೆ. ಪೈಲಟ್ ಮತ್ತು ಮಾರ್ಷಲರ್ ಆಂಗಿಕ ಭಾಷೆಯ ಮೂಲಕ ಸಂವಹನ ನಡೆಸುತ್ತಾರೆ. ಉದಾಹರಣೆಗೆ, ಮುಂದಕ್ಕೆ ಹೋಗಿ ಎನ್ನಲು, ಎರಡೂ ಕೈಗಳನ್ನು ಜೋಡಿಸುವುದು, ಎಡಕ್ಕೆ / ಬಲಕ್ಕೆ ತಿರುಗಿ ಎನ್ನಲು ಒಂದೆಡೆ ಕೈ ತಿರುಗಿಸುವ ಮೂಲಕ ತಿರುಗುವ ದಿಕ್ಕು ಸೂಚಿಸುತ್ತಾರೆ, ವೇಗ ಕಡಿಮೆ ಮಾಡಿ ಎನ್ನಲು ಮೇಲಿಂದ ಕೆಳಗೆ ಕೈಗಳನ್ನು ತೋರಿಸುವುದು ಇತ್ಯಾದಿ. ವಿಮಾನವನ್ನು ನಿಲ್ಲಿಸಲು ಕೆಲವೊಮ್ಮೆ ಟೋವಿಂಗ್ ಟ್ರ್ಯಾಕ್ಟರ್ ಬಳಸಲಾಗುತ್ತದೆ. ಪೈಲಟ್ ಎಂಜಿನ್ ಆನ್ ಮಾಡದೇ ಇದ್ದರೂ, ಟೋವ್ ಟೀಮ್ ವಿಮಾನವನ್ನು ಹ್ಯಾಂಗರ್ ಒಳಗೆ ತರುತ್ತದೆ. ಟೋವಿಂಗ್ ವೇಳೆ ಟೈರ್ ಪ್ರೆಶರ್, ಬ್ರೇಕ್ ವ್ಯವಸ್ಥೆ, ಟೋ ಬಾರ್ ಕನೆಕ್ಷನ್ ಇತ್ಯಾದಿ ಪರಿಶೀಲಿಸಲಾಗುತ್ತದೆ. ವಿಮಾನದ ಹಿಂದೆ ಮತ್ತು ಮುಂದೆ ಎರಡೂ ತುದಿಗಳಲ್ಲೂ ಸಿಬ್ಬಂದಿಯು ನಿಂತು ವಿಮಾನವನ್ನು ಬಲವಾಗಿ ತಿರುಗಿಸದೆ ಸರಾಗವಾಗಿ ನಿಲ್ಲಿಸಲು ನೆರವಾಗುತ್ತಾರೆ. ಗ್ರೌಂಡ್ ಸ್ಟಾಫ್ ಸಿಬ್ಬಂದಿ ಇಂಟರ್ ಕಾಮ್ ಅಥವಾ ಹ್ಯಾಂಡ್ ಸೆಟ್ ಮೂಲಕ ಸಂಪರ್ಕದಲ್ಲಿರುತ್ತಾರೆ. ವಿಮಾನ ತಾನು ನಿಲ್ಲಿಸಬೇಕಾದ ನಿಖರ ಸ್ಥಾನವನ್ನು ತಲುಪಿದಾಗ, ಮಾರ್ಷಲರ್ ಸ್ಟಾಪ್ ಸೂಚನೆ ನೀಡುತ್ತಾನೆ. ವಿಮಾನ ನಿಲ್ಲಿಸುವಾಗ ಯಾವ ತಪ್ಪು ಸಂಭವಿಸದಂತೆ ಸುರಕ್ಷತಾ ಕ್ರಮಗಳನ್ನು ಪಾಲಿಸಬೇಕು. ವಿಮಾನವನ್ನು ನಿಖರವಾಗಿ ನಿಗದಿತ ಸ್ಥಳದಲ್ಲಿ ನಿಲ್ಲಿಸಲಾಗಿದೆಯೇ ಎಂಬುದನ್ನು ಸ್ಪಾಟ್ ಲೈಟ್ ಅಥವಾ ಸೆನ್ಸರ್ ಮೂಲಕ ಪರಿಶೀಲಿಸಲಾಗುತ್ತದೆ. ವಿಮಾನ ನಿಂತ ತಕ್ಷಣ ಎಲ್ಲ ಟೈರ್‌ಗಳಿಗೆ ತಡೆಪಟ್ಟಿ ಹಾಕಲಾಗುತ್ತದೆ. ಇದು ವಿಮಾನವು ಕದಲದಂತೆ ನಿಯಂತ್ರಿಸುತ್ತದೆ. ಎಲ್ಲ ಎಂಜಿನ್‌ಗಳು ನಿಂತಿರುವುದನ್ನು ದೃಢೀಕರಿಸಿದ ಮೇಲೆ ಸಿಬ್ಬಂದಿ ವಿಮಾನ ಹತ್ತಿರ ಬರುತ್ತಾರೆ. ಒಳಗೆ ಪ್ರವೇಶಿಸುತ್ತಾರೆ. ತುರ್ತು ಪರಿಸ್ಥಿತಿಗೆ ಅಗ್ನಿಶಾಮಕ ಉಪಕರಣಗಳು ಸದಾ ಸಿದ್ಧವಾಗಿರುತ್ತವೆ. ನಂತರ ಮೆಂಟೆನೆನ್ಸ್ ತಂಡ ಇಂಧನ ಮಟ್ಟ, ಎಂಜಿನ್ ತಾಪಮಾನ, ಹೈಡ್ರಾಲಿಕ್ ಲೈನ್, ಸಣ್ಣಪುಟ್ಟ ದುರಸ್ತಿ ಅಥವಾ ತುರ್ತು ತಪಾಸಣೆ ಮಾಡುತ್ತಾರೆ. ವಿಮಾನ ಹ್ಯಾಂಗರ್‌ನಲ್ಲಿ ವಿಮಾನ ನಿಲ್ಲಿಸುವುದು ಕೇವಲ ನಿಲ್ಲಿಸುವ ಕ್ರಿಯೆಯಲ್ಲ, ಅದು ಭದ್ರತೆ, ಸಂವಹನ, ಸಹಕಾರ ಮತ್ತು ಅನುಭವದ ಸಮೃದ್ಧ ಸಂಯೋಜನೆಯಾಗಿದೆ.

ಸಿದ್ಧಾಂತಕ್ಕಾಗಿ ಪಕ್ಷದಲ್ಲಿರುವವರಿಗೆಂದು ಅವಕಾಶ?

ಅಶ್ವತ್ಥಕಟ್ಟೆ

ರಂಜಿತ್ ಎಚ್. ಅಶ್ವತ್ಥ

vveditoped@gmail.com

ranjith.hoskere@gmail.com

ದೇಶ ಮೊದಲು, ಪಕ್ಷ ನಂತರ; ಪಕ್ಷ ಮೊದಲು, ವ್ಯಕ್ತಿ ನಂತರ' ಎನ್ನುವ ಮಂತ್ರದೊಂದಿಗೆ ದೇಶದಲ್ಲಿ ಆರಂಭಗೊಂಡ ಬಿಜೆಪಿಯ ಮೂಲ ಎನಿಸಿರುವ ಸಂಘ-ಪರಿವಾರವು (ಆರ್‌ಎಸ್‌ಎಸ್) ಶತಮಾನೋತ್ಸವದ ಸಂಭ್ರಮದಲ್ಲಿದೆ. ಅಧಿಕಾರಕ್ಕಿಂತ ಸೈದ್ಧಾಂತಿಕ ಹೋರಾಟವೇ ಮುಖ್ಯ ಎನ್ನುವ ಆಲೋಚನೆಗೆ ಇಂದಿಗೂ ಸಂಘ ಪರಿವಾರದ ಬಹುತೇಕರು ಬದ್ಧರಾಗಿದ್ದಾರೆ. ಆದರೆ ಪ್ರಜಾಪ್ರಭುತ್ವದಲ್ಲಿ 'ಧ್ವನಿ' ಇರಬೇಕು, ತಮ್ಮ ಸಿದ್ಧಾಂತವನ್ನು ಜನರಿಗೂ ತಿಳಿಸಬೇಕು ಎಂದರೆ ರಾಜಕೀಯ, ಅಧಿಕಾರ ಅನಿವಾರ್ಯ ಎನ್ನುವ ಕಾರಣಕ್ಕೆ ಸಂಘ ಪರಿವಾರದ ಮುಂದುವರಿದ ಭಾಗವಾಗಿ ಬಿಜೆಪಿ ರೂಪುಗೊಂಡಿದೆ. ಸಿದ್ಧಾಂತಕ್ಕೆ ಅಗ್ರಸ್ಥಾನ ನೀಡುವ ಸಂಘ-ಪರಿವಾರದ ಶತಮಾನೋತ್ಸವದ ಹೊಸ್ತಿಲಲ್ಲಿ ಬಿಜೆಪಿ ಅದರಲ್ಲಿಯೂ ರಾಜ್ಯ ಬಿಜೆಪಿಯಲ್ಲಿನ ಹತ್ತಾರು ಘಟನಾವಳಿಗಳು ಸಂಘದ 'ಮೂಲ' ತತ್ವವನ್ನೇ ಅನುಸರಿಸುತ್ತಿಲ್ಲ ಎನ್ನುವ ಅನುಮಾನವನ್ನು ಮೂಡಿಸುತ್ತಿವೆ.

ಹೌದು, ಸಂಧಿಕಾಲಕ್ಕೆ ಬಂದು ನಿಂತಿರುವ ಆರ್‌ಎಸ್‌ಎಸ್ ಶತಮಾನೋತ್ಸವದ ಹೊಸ್ತಿಲಲ್ಲಿ ದೇಶಾದ್ಯಂತ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ಇವು ಸಂಘ ಪರಿವಾರದ ಕಾರ್ಯಕ್ರಮಗಳಾದರೂ, ಬಿಜೆಪಿ ಈ ಎಲ್ಲ ಕಾರ್ಯಕ್ರಮಗಳ ಯಶಸ್ಸಿಗೆ ಹಾಗೂ ಆರ್‌ಎಸ್‌ಎಸ್‌ನ ಸೈದ್ಧಾಂತಿಕ ವಿಷಯದಲ್ಲಿನ 'ಅಚಲತೆ'ಯನ್ನು ಮುಂದಿನ ಪೀಳಿಗೆಗೆ ವರ್ಗಾಯಿಸಿ ಸಂಘಟನೆಯನ್ನು ಮತ್ತಷ್ಟು ಗಟ್ಟಿಗೊಳಿಸುವುದಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ರಾಜ್ಯ ಬಿಜೆಪಿ ನಾಯಕರೂ ರಾಜ್ಯದ ಹಲವೆಡೆ ಸಂಘ ಹಮ್ಮಿಕೊಂಡಿರುವ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಕಾಣಿಸಿಕೊಂಡು 'ಸೈದ್ಧಾಂತಿಕ' ವಿಷಯದಲ್ಲಿ ಸರಣಿ ಭಾಷಣಗಳನ್ನು ಮಾಡುತ್ತಿದ್ದಾರೆ.

ಸೈದ್ಧಾಂತಿಕ ಬದ್ಧತೆಯಲ್ಲಿ ಮುನ್ನಡೆದರೆ ಅವಕಾಶಗಳು ತಾನೇತಾನಾಗಿ ಮನೆ ಬಾಗಿಲಿಗೆ ಬರುತ್ತವೆ ಎನ್ನುವುದು ಸಂಘ ಪರಿವಾರದಿಂದ ಬಿಜೆಪಿಗೆ ಬಂದಿರುವ ಬಹುತೇಕ ಕಾರ್ಯಕರ್ತರ ಅಭಿಪ್ರಾಯವಾಗಿದೆ. ಆ ಕಾರಣಕ್ಕಾಗಿಯೇ, ಸೈದ್ಧಾಂತಿಕವಾಗಿ ಯಾವುದೇ ರಾಜಿ ಮಾಡಿಕೊಳ್ಳದೇ ತಾವಾಯಿತು, ತಮ್ಮ ಕೆಲಸವಾಯಿತು ಎಂದು ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡ ಅನೇಕ ನಾಯಕರಿದ್ದಾರೆ. ಆದರೆ ಇತ್ತೀಚಿನ ದಿನದಲ್ಲಿ ರಾಜ್ಯ ಬಿಜೆಪಿಯಲ್ಲಿ ಪಕ್ಷಕ್ಕಾಗಿ ದುಡಿದವರಿಗಿಂತ, ಅಧಿಕಾರಕ್ಕಾಗಿ ಪಕ್ಷವನ್ನು ಹುಡುಕಿಕೊಂಡು ಬಂದವರಿಗೆ ಅವಕಾಶ ನೀಡಲಾಗುತ್ತಿದೆಯೇ ಎನ್ನುವ ಅನುಮಾನ ಮೂಡುತ್ತದೆ.

ವರ್ಷದಿಂದ ವರ್ಷಕ್ಕೆ ಅಧಿಕಾರವನ್ನು ವಿಸ್ತರಿಸುತ್ತಲೇ ಸಾಗುತ್ತಿರುವ ಬಿಜೆಪಿ ನಾಯಕರಿಗೆ, ಕರ್ನಾಟಕದ ಇಂದಿನ ಸ್ಥಿತಿ 'ಗಂಭೀರ' ಎನಿಸದೇ ಇರಬಹುದು. ಆದರೆ ದಕ್ಷಿಣ ಭಾರತದಲ್ಲಿ ಪಕ್ಷದ ಬಾವುಟ ಕಟ್ಟಲು ಜನರಿಲ್ಲದ ಸಮಯದಲ್ಲಿ 'ನಿಷ್ಠಾವಂತ' ಕಾರ್ಯಕರ್ತರಿಂದಲೇ ಮಾದರಿ ಎನಿಸಿದ್ದ ರಾಜ್ಯ ಬಿಜೆಪಿಯಲ್ಲಿ ಇಂದು ವಲಸಿಗರದ್ದೇ ಕಾರುಬಾರಾಗುತ್ತಿರುವುದು ಹಲವು ಕಾರ್ಯಕರ್ತರ ಆಕ್ಷೇಪಕ್ಕೆ ಕಾರಣವಾಗಿದೆ ಎಂದರೆ ತಪ್ಪಾಗುವುದಿಲ್ಲ. ಕರ್ನಾಟಕ ಬಿಜೆಪಿಯಲ್ಲಿ ಸೂಕ್ಷ್ಮವಾಗಿ ಗಮನಿಸಿದರೆ, 'ಮೂಲ' ನಾಯಕರಿಗಿಂತ 'ಆಪರೇಷನ್ ಕಮಲ'ದ ಮೂಲಕ ಪ್ರವೇಶಿಸಿರುವ ನಾಯಕರಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗುತ್ತಿದೆ ಎನ್ನುವುದು ಸ್ಪಷ್ಟ.

ಯಾವುದೇ ರಾಜಕೀಯ ಪಕ್ಷವು ವಲಸಿಗರನ್ನು ಸೇರಿಸಿಕೊಳ್ಳದೆಯೇ ಪಕ್ಷ ನಡೆಸುತ್ತೇವೆ ಅಥವಾ ಅಧಿಕಾರಕ್ಕೆ ಬರುತ್ತೇವೆ ಎಂದು ಹೇಳುವ ಸ್ಥಿತಿಯಲ್ಲಿಲ್ಲ ಎನ್ನುವುದು ಸ್ಪಷ್ಟ. ಆದರೆ ವಲಸಿಗರನ್ನು ಸೇರಿಸಿಕೊಳ್ಳುವ ಭರದಲ್ಲಿ ಮೂಲ ನಿವಾಸಿಗಳನ್ನು ಮೂಲೆಗೆ ತಳ್ಳುವುದಕ್ಕೆ ಹಲವರ ಆಕ್ಷೇಪವಿದೆ. ಕಳೆದ ಒಂದೂವರೆ ದಶಕದಲ್ಲಿ ರಾಷ್ಟ್ರಮಟ್ಟದಲ್ಲಿ ಗಮನಿಸಿದರೆ ಬಿಜೆಪಿಗೆ ವಿವಿಧ ಮೂಲಗಳಿಂದ 'ಹೊಸ' ನೀರು ಸೇರ್ಪಡೆಯಾಗಿರುವುದು ಗೊತ್ತಿರುವಂಥದ್ದೇ. ಆದರೆ ಕರ್ನಾಟಕದಲ್ಲಿ ಮಾತ್ರ ಹೊಸಬರು ಬರುತ್ತಿದ್ದಂತೆ, ಅವರಿಗೆ ಅವಕಾಶ ನೀಡುವ ಜತೆಜತೆಗೆ ಮೂಲ ನಿವಾಸಿಗಳನ್ನು ಮೂಲೆಗುಂಪು ಮಾಡುತ್ತಿರುವುದು 'ಅಸಮಾಧಾನ'ದ ಮೂಲವಾಗಿದೆ.

ಬಿಜೆಪಿಯನ್ನು ಅಧಿಕಾರಕ್ಕೆ ತರಲು ಸಹಕರಿಸಿದ 'ಶಾಸಕರಿಗೆ' ಸ್ಥಾನಮಾನ ನೀಡುವುದು ಅನಿವಾರ್ಯ ಎನ್ನುವುದನ್ನು ಯಾರೂ ಅಲ್ಲಗಳೆಯುತ್ತಿಲ್ಲ. ಆದರೆ, ಪಕ್ಷವನ್ನು ಅಧಿಕಾರದ ಹೊಸ್ತಿಲಿಗೆ ತಂದು ನಿಲ್ಲಿಸಿದ ನಾಯಕರು ಹಾಗೂ ಕಾರ್ಯಕರ್ತರ ಪಡೆಯನ್ನು ಬದಿಗಿಟ್ಟು ಹೊರಗಿನಿಂದ ಬಂದಿರುವ ನಾಯಕರಿಗೆ ಅವಕಾಶ ನೀಡುತ್ತಿರುವುದು ಇಂದಿನ ರಾಜ್ಯ ಬಿಜೆಪಿಯ ಬಹುದೊಡ್ಡ ಸಮಸ್ಯೆಯಾಗಿದೆ. ಈ ಕಾರಣಕ್ಕಾಗಿಯೇ, 'ಶಿಸ್ತಿನ' ಪಕ್ಷವೆನಿಸಿದ್ದರೂ ಪಕ್ಷದೊಳಗಿರುವ ಕೆಲ ನಾಯಕರು ರಾಜ್ಯ ಬಿಜೆಪಿ ಸಂಘಟನೆ, ನಾಯಕತ್ವದ ವಿರುದ್ಧ ಬಹಿರಂಗ ಹೇಳಿಕೆ ನೀಡುತ್ತಿದ್ದಾರೆ. ಇನ್ನು ಕೆಲವರು, ಪಕ್ಷದ ವಿರುದ್ಧ ಹೇಳಿಕೆ ನೀಡದಿದ್ದರೂ ತಮ್ಮ ಅಸಮಾಧಾನವನ್ನು ನಿರಂತರವಾಗಿ ಸೂಕ್ತ ವೇದಿಕೆಯಲ್ಲಿ ಪರೋಕ್ಷವಾಗಿ ಹೊರಹಾಕುತ್ತಾ ಬರುತ್ತಿದ್ದಾರೆ. ಆದರೆ ಸಂಘ-ಪರಿವಾರದ ಶತಮಾನೋತ್ಸವದ ಈ ಸಂಧಿಕಾಲದಲ್ಲಿಯೂ ನಾಯಕರು ಈ ಬಗ್ಗೆ ಆಲೋಚನೆ ಮಾಡದಿದ್ದರೆ, ಕಾರ್ಯಕರ್ತರಿಗೆ ಯಾವ ಸಂದೇಶ ರವಾನಿಸುವ ಪ್ರಯತ್ನ ಮಾಡಲಾಗುತ್ತಿದೆ ಎನ್ನುವ ಪ್ರಶ್ನೆ ಏಳುವುದು ಸಹಜ.

ಈ ರೀತಿಯ ಸಮಸ್ಯೆ ಕರ್ನಾಟಕದಲ್ಲಿ ಮಾತ್ರ ಕಾಣಿಸುತ್ತದೆ. ಮೊದಲೇ ಹೇಳಿದಂತೆ, ರಾಜಕೀಯ ಪಕ್ಷವಾಗಿ 'ಅಧಿಕಾರ' ಹಿಡಿಯುವ ಕಾರಣಕ್ಕೆ ಅನೇಕ ರಾಜ್ಯಗಳಲ್ಲಿ ಹಲವು ಮೂಲಗಳಿಂದ ನಾಯಕರನ್ನು ಸೇರಿಸಿಕೊಂಡಿದ್ದಾರೆ. ಈ ಎಲ್ಲರಿಗೂ 'ಕೊಟ್ಟ' ಮಾತನ್ನು ಉಳಿಸಿಕೊಳ್ಳುವುದಕ್ಕೆ ಕೆಲ ಹುದ್ದೆಗಳನ್ನು ನೀಡಲಾಗಿದೆ. ಆದರೆ ಆಯಕಟ್ಟಿನ ಹುದ್ದೆಗಳನ್ನು ಮಾತ್ರ ಮೂಲನಿವಾಸಿಗಳಿಗೆ ಅಥವಾ ಸಂಘದ ಹಿನ್ನೆಲೆ ಇರುವವರಿಗೆ ನೀಡಲಾಗಿದೆ. ದೇಶದ ಬಹುತೇಕ ರಾಜ್ಯಗಳಲ್ಲಿನ ಬಿಜೆಪಿ ಘಟಕಗಳಲ್ಲಿ ಆಯಕಟ್ಟಿನ ಹುದ್ದೆಗಳಿಗೆ, ಪಕ್ಷ ಸಂಘಟನೆಯ ವಿಷಯದಲ್ಲಿ ಪ್ರಮುಖ ಪಾತ್ರವಹಿಸುವ ಸ್ಥಾನಗಳನ್ನು, ಸಂಘ ಪರಿವಾರದ ಹಿನ್ನೆಲೆ ಹಾಗೂ ಪಕ್ಷದ ಸೈದ್ಧಾಂತಿಕ ನಿಲುವಿಗೆ ಗಟ್ಟಿಯಾಗಿ ನಿಂತಿರುವರ ಕಾರ್ಯಕರ್ತರು, ನಾಯಕರಿಗೆ ನೀಡುವ ಕೆಲಸವಾಗುತ್ತಿದೆ. ಆದರೆ ಕರ್ನಾಟಕದಲ್ಲಿ ಮಾತ್ರ 'ಅಧಿಕಾರ' ಅಥವಾ 'ಟಿಕೆಟ್'ಗಾಗಿ ಪಕ್ಷಕ್ಕೆ ಸೇರ್ಪಡೆಯಾದ ಹಲವರಿಗೆ ಅವಕಾಶ ನೀಡಿರುವ ಉದಾಹರಣೆಗಳಿವೆ.

ಪಕ್ಷದ ಸಿದ್ಧಾಂತಕ್ಕೆ ಬದ್ಧರಾಗಿ ತಳಮಟ್ಟದಿಂದ ಕೆಲಸ ಮಾಡಿರುವ ಬಹುತೇಕ ಕಾರ್ಯಕರ್ತರನ್ನು ರಾಜ್ಯ ಬಿಜೆಪಿಯು ಬದಿಗಿಡುವ ಕೆಲಸ ಮಾಡುತ್ತಿದೆ ಎನ್ನುವ ಆರೋಪವಿದೆ. ಕಳೆದ ಬಾರಿ ಆಪರೇಷನ್ ಕಮಲದ ಮೂಲಕ ಪಕ್ಷಕ್ಕೆ ಬಂದಿರುವ ಅಥವಾ ಜನತಾದಳದಿಂದ ಬಿಜೆಪಿ ಕದತಟ್ಟಿದ ಅನೇಕರಿಗೆ ಪಕ್ಷದ 'ಉತ್ತಮ ಸ್ಥಾನ'ಗಳನ್ನು ನೀಡಲಾಗುತ್ತಿದೆ. ಈ ನಿಟ್ಟಿನಲ್ಲಿ ಪಕ್ಷದ ವರಿಷ್ಠರು ಇನ್ನಾದರೂ ಆಲೋಚಿಸುವ ಕೆಲಸ ಮಾಡಬೇಕಿದೆ. ಇಲ್ಲವಾದರೆ, ಸೈದ್ಧಾಂತಿಕ ಕಾರಣಕ್ಕಾಗಿ ಪಕ್ಷದೊಂದಿಗೆ ಇರುವ ಅನೇಕ ಕಾರ್ಯಕರ್ತರು ಮೌನವಾಗುವ ಅಪಾಯವಿದೆ ಎನ್ನುವ ಚರ್ಚೆ ಶುರುವಾಗಿದೆ.

ಉದಾಹರಣೆಗೆ ಕರ್ನಾಟಕದಲ್ಲಿ ಪಕ್ಷವನ್ನು ಕಟ್ಟುವಲ್ಲಿ ಪ್ರಮುಖ ಪಾತ್ರವಹಿಸಿದ್ದ ಕೆ.ಎಸ್.ಈಶ್ವರಪ್ಪ, ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಪಕ್ಷದಿಂದಲೇ ದೂರವಿಡುವ ಕೆಲಸವಾಗಿದೆ. ಇನ್ನು ಪಕ್ಷ ಸಂಘಟನೆಯಲ್ಲಿ ಪ್ರಮುಖ ಪಾತ್ರವಹಿಸಿದ್ದ ಅರವಿಂದ ಲಿಂಬಾವಳಿ ಅವರನ್ನು ಸದ್ದಿಲ್ಲದೇ ದೂರ ತಳ್ಳುವ ಪ್ರಯತ್ನವನ್ನು ಮಾಡಲಾಗಿದೆ. ಇನ್ನು ಸುನೀಲ್ ಕುಮಾರ್, ಸಿ.ಟಿ.ರವಿ, ಸುರೇಶ್ ಕುಮಾರ್ ಅವರಂಥ ನಾಯಕರನ್ನು 'ಶಾಸಕ' ಸ್ಥಾನಕ್ಕೆ ಸೀಮಿತಗೊಳಿಸಲಾಗಿದೆ ಎನ್ನುವುದು ಕಾರ್ಯಕರ್ತರಲ್ಲಿರುವ ಅಸಮಾಧಾನ. ಹಾಗೆ ನೋಡಿದರೆ ಸದ್ಯ ಬಿಜೆಪಿಯಲ್ಲಿ ರಾಜ್ಯ ನಾಯಕತ್ವದ ವಿರುದ್ಧ ಬಹಿರಂಗವಾಗಿ ಹೇಳಿಕೆ ನೀಡಿರುವ ಹಾಗೂ ಅಸಮಾಧಾನವನ್ನು ಹೊಂದಿರುವ ಬಹುತೇಕರು ಪಕ್ಷದ ಮೂಲನಿವಾಸಿಗಳು. ಅಧಿಕಾರದ ಕಾರಣಕ್ಕೆ, ಸಿದ್ಧಾಂತದಲ್ಲಿ 'ಹೊಂದಾಣಿಕೆ' ಮಾಡಿಕೊಂಡು ಪಕ್ಷದ ನಾಯಕತ್ವವನ್ನು ರೂಪಿಸುತ್ತಿರುವುದೇ ಈ ಎಲ್ಲರ ಕೊಸರಾಟಕ್ಕೆ ಕಾರಣ ಎಂದರೆ ತಪ್ಪಾಗುವುದಿಲ್ಲ.

ಈ ಹಿಂದೆ ಪಕ್ಷದ ಹಾಗೂ ಸಂಘ ಪರಿವಾರದ ವಿರುದ್ಧ ವಾಗ್ದಾಳಿ ನಡೆಸಿಕೊಂಡೇ ಓಡಾಡಿದ್ದ ಛಲವಾದಿ ನಾರಾಯಣಸ್ವಾಮಿ ಅವರನ್ನು ಇಂದು ವಿಧಾನಪರಿಷತ್ ಪ್ರತಿಪಕ್ಷ ನಾಯಕನನ್ನಾಗಿ ನೇಮಿಸಲಾಗಿದೆ. ಈ ಆಯ್ಕೆಗೆ ಪಕ್ಷ ನೀಡಿರುವ ಕಾರಣ 'ದಲಿತ' ಸಮುದಾಯಕ್ಕೆ ಅವಕಾಶ ಎನ್ನುವುದಾಗಿದೆ. ಇನ್ನುಳಿದಂತೆ ಪಕ್ಷದ ಪ್ರಧಾನ ಕಾರ್ಯದರ್ಶಿಗಳ ಪಟ್ಟಿಯಲ್ಲಿರುವ ಪಿ.ರಾಜೀವ್ ಕಾಂಗ್ರೆಸ್‌ಗೆ ಬೆಂಬಲಿಸಿ, ಅಲ್ಲಿ 'ರಾಜಕೀಯ' ಲಾಭ-ನಷ್ಟಗಳನ್ನು ಲೆಕ್ಕ ಹಾಕಿ ಬಿಜೆಪಿಗೆ ಬಂದವರು. ಇನ್ನು ಪ್ರೀತಂ ಗೌಡ, ವೈಯಕ್ತಿಕ ಕಾರಣಕ್ಕೆ ಪಕ್ಷದಿಂದ ಒಂದು ಕಾಲು ಹೊರಗಿಟ್ಟಿದ್ದರೂ, ಪ್ರಧಾನ ಕಾರ್ಯದರ್ಶಿ ಸ್ಥಾನದಲ್ಲಿ ಅವರನ್ನು ಮುಂದುವರಿಸಲಾಗಿದೆ. ಪಕ್ಷದ ಸಿದ್ಧಾಂತದಿಂದಲೇ ರಾಜಕೀಯ ಜೀವನ ಕಟ್ಟಿಕೊಂಡ ಸುನೀಲ್‌ಕುಮಾರ್ ಅವರು, ಈಗಾಗಲೇ ಪ್ರಧಾನ ಕಾರ್ಯದರ್ಶಿ ಹುದ್ದೆಯನ್ನು ಒಲ್ಲೆ ಎಂದಿದ್ದರೂ, ಮುಂದುವರಿಸಲಾಗಿದೆ. ಇನ್ನು ಬಿಜೆಪಿ ಉಪಾಧ್ಯಕ್ಷರ ಪಟ್ಟಿಯಲ್ಲಿರುವ ಬೈರತಿ ಬಸವರಾಜು, ರಾಜು ಗೌಡ, ಎನ್.ಮಹೇಶ್ ಅವರೆಲ್ಲರೂ ಬೇರೆ ಕಡೆಯಿಂದ ವಲಸೆ ಬಂದವರೇ ಆಗಿದ್ದಾರೆ. ಈ ಎಲ್ಲರನ್ನೂ ಮೀರಿ ಕೆಲ ವರ್ಷದ ಹಿಂದೆ ಪಕ್ಷದಿಂದ ಹೊರಹೋಗಿ ಪ್ರತ್ಯೇಕ ಪಕ್ಷ ಕಟ್ಟಿದ್ದ ಯಡಿಯೂರಪ್ಪ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡಿ, ಅವರೊಂದಿಗೆ ಕೆಜೆಪಿಯಿಂದ ಬಿಜೆಪಿಗೆ ಬಂದ ವಿಜಯೇಂದ್ರ ಅವರನ್ನು ರಾಜ್ಯಾಧ್ಯಕ್ಷರನ್ನಾಗಿ ಮಾಡಲಾಗಿದೆ.

ಕರ್ನಾಟಕದಲ್ಲಿ ಹಲವು ಕಾರಣಗಳಿಗೆ ಈ ರೀತಿ ಮೂಲ ಬಿಜೆಪಿಗರನ್ನು ಮೂಲೆಗುಂಪು ಮಾಡಿರುವ ಪಕ್ಷದ ನಾಯಕರು, ಇತರೆ ರಾಜ್ಯಗಳಲ್ಲಿ ಮೂಲ ಬಿಜೆಪಿಗರಿಗೆ 'ಅಗ್ರ' ಸ್ಥಾನ ನೀಡಿರುವುದು ಸ್ಪಷ್ಟ. ಉದಾಹರಣೆಗೆ, ಮಹಾರಾಷ್ಟ್ರದಲ್ಲಿ ದೇವೇಂದ್ರ ಫಡ್ನವೀಸ್, ಉತ್ತರ ಪ್ರದೇಶದಲ್ಲಿ ಯೋಗಿ ಆದಿತ್ಯನಾಥ್, ಮಧ್ಯಪ್ರದೇಶದಲ್ಲಿ ಶಿವರಾಜ್ ಸಿಂಗ್ ಚೌಹಾಣ್ ಅಷ್ಟೇ ಏಕೆ, ಪ್ರಧಾನಿ ನರೇಂದ್ರ ಮೋದಿ ಸಹ ಸಂಘ ಪರಿವಾರದ ಹಿನ್ನೆಲೆಯಿಂದ ಬಂದಿರುವವರು. ಆದರೆ ಕರ್ನಾಟಕದಲ್ಲಿ ಮಾತ್ರ, ಬೇರೆ ಪಕ್ಷದಿಂದ ವಲಸೆ ಬಂದಿರುವವರಿಗೆ ಮನ್ನಣೆ ನೀಡುತ್ತಿರುವುದು ರಾಜ್ಯ ಬಿಜೆಪಿಯ ಇಂದಿನ ಪರಿಸ್ಥಿತಿಗೆ ಕಾರಣ ಎನ್ನುವುದು ಸ್ಪಷ್ಟ.

ಇತರೆ ಪಕ್ಷಗಳಿಗೆ ಹೋಲಿಸಿದರೆ ಸಂಘದ ಕಾರಣಕ್ಕೆ ಪ್ರಬಲ ಕಾರ್ಯಕರ್ತರ ಪಡೆಯನ್ನು ಹೊಂದಿರುವ ಬಿಜೆಪಿಯಲ್ಲಿಯೂ ಸಿದ್ಧಾಂತಕ್ಕೆ ಬೆಲೆ ನೀಡುವುದಿಲ್ಲ ಎನ್ನುವ ಸಂದೇಶವನ್ನು ಕಟ್ಟರ್ ಕಾರ್ಯಕರ್ತರಿಗೆ ಈಗಲೂ ಅರಗಿಸಿಕೊಳ್ಳಲು ಸಾಧ್ಯವಾಗಿಲ್ಲ. ಈ ಕಾರಣಕ್ಕಾಗಿಯೇ, ಇತರೆ ರಾಜ್ಯಗಳಲ್ಲಿನ ಪಕ್ಷದ ಸಂಘಟನೆಗೂ ಕರ್ನಾಟಕದ ಸಂಘಟನೆಗೂ ಅಜಗಜಾಂತರವಿದೆ. ಸಂಘಟನೆ ನೆಲಕಚ್ಚಿದ ಬಳಿಕ ಇದೀಗ 'ಸಮನ್ವಯ' ಸಭೆಯ ನೆಪದಲ್ಲಿ ಮೂಲ ಬಿಜೆಪಿಗರನ್ನು ಮತ್ತೆ ಒಗ್ಗೂಡಿಸುವ ಪ್ರಯತ್ನವು ಸಂಘದ ಸೂಚನೆ ಮೇರೆಗೆ ಆರಂಭವಾಗಿದೆ. ಆದರೆ ಈ ಸಭೆಯಲ್ಲಿ ನಿಜಕ್ಕೂ ಸೈದ್ಧಾಂತಿಕ ಹಿನ್ನೆಲೆಯ ಚರ್ಚೆಗೆ ಅವಕಾಶವಿದೆಯೋ ಅಥವಾ ಸಂಘದ ಒತ್ತಡಕ್ಕೆ ಒಲ್ಲದ ಮನಸ್ಸಿನಿಂದ ಸಭೆ ನಡೆಸಿ, ಕೈಬಿಡುವ ಪ್ರಯತ್ನದಲ್ಲಿ ರಾಜ್ಯ ಬಿಜೆಪಿ ಇದೆಯೋ ಗೊತ್ತಿಲ್ಲ. ಈ ಹಂತದಲ್ಲಾದರೂ ಎಚ್ಚೆತ್ತುಕೊಳ್ಳದಿದ್ದರೆ, ಸಿದ್ಧಾಂತಕ್ಕೆ ಅಂಟಿಕೊಂಡಿರುವ ಅನೇಕರನ್ನು ಕಳೆದುಕೊಂಡಿರುವ ಬಿಜೆಪಿ ಮತ್ತಷ್ಟು ಕಟ್ಟರ್ ನಾಯಕರು ಹಾಗೂ ಕಾರ್ಯಕರ್ತರ ಪಡೆಯನ್ನು ಕಳೆದುಕೊಳ್ಳುವುದರಲ್ಲಿ ಅನುಮಾನವಿಲ್ಲ.

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಸಮಯೋಚಿತ ಬರಹ

ಡಾ. ಸಾಧನಶ್ರೀ ಅವರ 'ವೈದ್ಯನು ನಾರಾಯಣನಾಗುವ ಬಗೆ ಹೇಗೆ?' ಶೀರ್ಷಿಕೆಯ ಅಂಕಣಬರಹದಲ್ಲಿನ (ಜುಲೈ 5) ವಿಷಯವು ಅತ್ಯಂತ ಸಮಯೋಚಿತವಾಗಿದೆ ಎಂದು ಭಾವಿಸುವೆ. ರೋಗಿಗಳ ವಿಷಯದಲ್ಲಿ ಔಷಧಿಯನ್ನೂ ಮೀರಿದ್ದು ಅವರೊಂದಿಗೆ ವೈದ್ಯರು-ಶುಶ್ರೂಷಕರು ನಡೆದುಕೊಳ್ಳುವ ರೀತಿ ಎಂಬುದನ್ನು ಡಾ. ಸಾಧನಶ್ರೀ ಅವರು ಇಲ್ಲಿ ಮನಮುಟ್ಟುವಂತೆ ನಿರೂಪಿಸಿದ್ದಾರೆ. ಇದಕ್ಕೆ ಪೂರಕವಾಗಿ, ವಯಸ್ಕರೊಬ್ಬರಿಗೆ ಯಾವ ಔಷಧಿಯೂ ಇಲ್ಲದೆ ನೆಮ್ಮದಿ ಸಿಕ್ಕ ವಿಷಯವನ್ನು ಅವರು ಓದುಗರೊಂದಿಗೆ ಹಂಚಿಕೊಂಡಿರುವುದು ಅಭಿನಂದನೀಯ. ಇಂಥ ವೈದ್ಯರು ನರರಿಗೆ ನಾರಾಯಣರಂತೆಯೇ ಒದಗಿ ಸಮಾಧಾನ, ನೆಮ್ಮದಿ ಮತ್ತು ಸಹಾನುಭೂತಿಯನ್ನು ತೋರುವಂತಾಗಲೆಂದು ಆಶಿಸುವೆ. ಅಂಕಣಕಾರ್ತಿಗೆ ನಮನಗಳು.

- ಮುರಳೀಮೋಹನ್, ಬೆಂಗಳೂರು

ಮನಮುಟ್ಟಿದ ಲೇಖನ

ಕಿರಣ್ ಉಪಾಧ್ಯಾಯ ಅವರು ಬರೆದ 'ಪಾಪ... ಹಿರಣ್ಯಕಶಿಪು' ಶೀರ್ಷಿಕೆಯ ಅಂಕಣಬರಹವು (ಜು.7) ಓದುಗರನ್ನು ಹೊಸದೊಂದು ಲೋಕಕ್ಕೆ ಕರೆತಂದಂತೆ ಭಾಸವಾಯಿತು. ದಾನವರು, ದೇವತೆಗಳು ಇತ್ಯಾದಿ ಪರಿಚಯ ಮಾಡಿಸುತ್ತ, ಪ್ರಕೃತಿಯ ನಿಯಮಗಳನ್ನೂ ಅರುಹುತ್ತ, ಭಗವಂತನ ಚೋದ್ಯದ ವಿವರಗಳನ್ನೂ ಎಳೆಎಳೆಯಾಗಿ ಇದು ಬಿಡಿಸಿಟ್ಟಿದೆ.

ಯಾವೊಬ್ಬ ರಾಕ್ಷಸರೂ ಉತ್ತಮ ಆರೋಗ್ಯ, ಸೌಂದರ್ಯ, ನಿತ್ಯಯೌವನಕ್ಕಾಗಿ ಬೇಡಿಕೊಳ್ಳದೆ, ತಮಗೆ ಸಾವೇ ಬರಬಾರದೆಂದು ಬೇಡಿಕೊಂಡಿದ್ದು ವಿಪರ್ಯಾಸವೇ ಸರಿ. ಅದರಲ್ಲೂ ಹಿರಣ್ಯಕಶಿಪುವಿನ ಬೇಡಿಕೆಯು ಇನ್ನೂ ವಿಚಿತ್ರವಾಗಿದ್ದರೂ, ಭಗವಂತನು ಅದಕ್ಕೂ ಪರಿಹಾರ ಹುಡುಕಿದ. ಪಶು-ಪಕ್ಷಿಗಳೆಲ್ಲವನ್ನೂ ಸೃಷ್ಟಿಸಿದ ಆ ಭಗವಂತನೇ ಅವಕ್ಕೆ ಅಲ್ಪಾಯುಷ್ಯ ನೀಡಿ ಮನುಷರಿಗೆ ಮಾತ್ರ ಹೆಚ್ಚಿನ ಆಯಸ್ಸನ್ನು ಅದೇಕೆ ದಯಪಾಲಿಸಿದನೋ ಏನೋ? ಎಲ್ಲವನ್ನು ತಿಳಿದೂ ತಿಳಿಯದವನಂತೆ ವರ್ತಿಸುವ ಮನುಷ್ಯನ ಬುದ್ಧಿಯ ಬಗ್ಗೆಯೂ ಅಂಕಣಕಾರರು ವಿಷಾದ ವ್ಯಕ್ತಪಡಿಸಿದ್ದಾರೆ. ಒಟ್ಟಾರೆ ಹೇಳುವುದಾದರೆ, ಪುರಾಣ ಕಾಲದಿಂದ ಪ್ರಾರಂಭ ಗೊಂಡ ಬರಹ ಇಂದಿನ ಜೀವನಶೈಲಿಯವರೆಗೂ ಬೆಳಕು ಚೆಲ್ಲಿದೆ. ವಿಷಯವನ್ನು ಮನಮುಟ್ಟುವಂತೆ ವಿವರಿಸಬಲ್ಲ ಕಿರಣ್ ಉಪಾಧ್ಯಾಯರ ಹೊಸ ಅವತಾರದಂತೆ ಕಂಡಿತು ಈ ಲೇಖನ!

- ಶಂಕರನಾರಾಯಣ ಭಟ್, ಮಾಡಗೇರಿ

ಇದು ಉತ್ತಮ ನಡೆ

ಇತ್ತೀಚಿನ ದಿನಮಾನಗಳಲ್ಲಿ ಕಾಲೇಜು ವಿದ್ಯಾರ್ಥಿಗಳು ಸೇರಿದಂತೆ ಹೆಚ್ಚಿನ ಯುವಜನರು ಆನ್‌ಲೈನ್ ಬೆಟ್ಟಿಂಗ್ ಚಟಕ್ಕೆ ಸಿಲುಕಿ ಮಾನಸಿಕ ಖಿನ್ನತೆಗೆ ಒಳಗಾಗಿ, ತಮ್ಮ ಭವಿಷ್ಯವನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರಕಾರವು, ಪ್ರಸ್ತುತ ಇರುವ ಕಾಯ್ದೆಗೆ ತಿದ್ದುಪಡಿ ಮಾಡಿ ಆನ್‌ಲೈನ್ ಜೂಜಾಟಕ್ಕೆ ಅಂಕುಶ ಹಾಕಲು ಮುಂದಾಗಿರುವುದು ಮಹತ್ವದ ಹೆಜ್ಜೆಯಾಗಿದೆ. ಈ ಉಪಕ್ರಮವು ಕಟ್ಟುನಿಟ್ಟಾಗಿ ಕಾರ್ಯರೂಪಕ್ಕೆ ಬರುವಂತಾಗಲಿ ಎಂಬುದು ಸಹೃದಯಿಗಳ ಆಶಯ. ಇಲ್ಲಿ ಇನ್ನೊಂದು ಅಂಶವನ್ನೂ ಗಮನಿಸಬೇಕು- ಆನ್‌ಲೈನ್ ಬೆಟ್ಟಿಂಗ್ ಬಗ್ಗೆ ಜಾಹೀರಾತನ್ನು ನೀಡಿ ಯುವಜನರ ದಾರಿ ತಪ್ಪಿಸುವ ಕೆಲಸ ಮಾಡುತ್ತಿರುವ ಸಾಮಾಜಿಕ ಮಾಧ್ಯಮಗಳು ತಮ್ಮ ಹೊಣೆಯರಿತು ನಡೆಯಬೇಕಿದೆ.

- ಕೆ.ಎನ್. ರಂಗನಾಥ್, ಉಜಿರೆ

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಆಕಾಶ ದೀಪವು ನೀನು, ನಿನ್ನ ಕಂಡಾಗ ಸಂತೋಷವೇನು..

ತನ್ನ 'ರೋಲ್ ಮಾಡೆಲ್' ಮೊಹಮ್ಮದ್ ಶಮಿ ಉತ್ತರ ಪ್ರದೇಶದ ಅಮ್ರೋಹಾದಿಂದ ಕೋಲ್ಕತ್ತಾಗೆ ಬಂದಿದ್ದನ್ನು ನೆನಪು ಮಾಡಿಕೊಳ್ಳುತ್ತಾ ತಾನೂ ರೈಲನ್ನೇರಿ ದುರ್ಗಾಪುರದಿಂದ ಕೋಲ್ಕತ್ತಾಗೆ ಬಂದಿಳಿದ ಆಕಾಶ್ ದೀಪ್. ಆದರೆ ಅಲ್ಲಿ ಬದುಕು ತುಂಬಾ ಕ್ಲಿಷ್ಟಕರವಾಗಿ ಸಾಗುತ್ತಿತ್ತು. ಅಂಥ ವೇಳೆ ಊರಿಗೆ ವಾಪಸಾಗುವ ಯೋಚನೆ ಬಂದಾಗಲೆಲ್ಲ, 'ಏನಾದರಾಗಲಿ ಇಲ್ಲೇ ಬದುಕು, ಕ್ರಿಕೆಟ್‌ನ ಕನಸನ್ನು ನನಸಾಗಿಸಿಕೊಳ್ಳುವೆ' ಎಂದು ತನಗೆ ತಾನೇ ಹೇಳಿಕೊಂಡು ಆತ್ಮವಿಶ್ವಾಸವನ್ನು ಮತ್ತಷ್ಟು ಗಟ್ಟಿಮಾಡಿಕೊಳ್ಳುತ್ತಿದ್ದ.



ಕ್ರೀಡಾಕಾಶ

ರವೀ ಸಜಂಗದ್ದೆ

vveditoped@gmail.com

ಅದು ಇಂಗ್ಲೆಂಡಿನ ಎಡ್ಜ್ ಬಾಸ್ಟನ್ ಕ್ರಿಕೆಟ್ ಕ್ರೀಡಾಂಗಣ. ಭಾರತ ಮತ್ತು ಇಂಗ್ಲೆಂಡ್ ನಡುವಿನ ಎರಡನೆಯ ಟೆಸ್ಟ್ ಪಂದ್ಯದ ಕೊನೆಯ ದಿನ. ಗೆಲ್ಲುವ ಹುಮ್ಮಸ್ಸಿನೊಂದಿಗೆ ಭಾರತ ತಂಡವು ಮೈದಾನಕ್ಕಿಳಿಯಿತು. ಆ ದಿನದ ಕೊನೆಯ ಸೆಷನ್, ಭಾರತ ಗೆಲುವಿನ ದಡದಲ್ಲಿತ್ತು. ಇಂಗ್ಲೆಂಡಿನಲ್ಲಿ ಸೂರ್ಯ ಮುಳುಗಲು ಒಂದೆರಡು ಗಂಟೆ ಬಾಕಿಯಿದ್ದರೆ, ಭಾರತದಲ್ಲಿ ಸ್ಥಳೀಯ ಕಾಲಮಾನ ರಾತ್ರಿ 9.40 ಗಂಟೆಯಾಗಿತ್ತು. ಇಲ್ಲಿ ಸೂರ್ಯ ಮುಳುಗಿ, ರಾತ್ರಿಯು ತನ್ನ ಎರಡನೆಯ ಪಾಳಿಯೆಡೆಗೆ ನಿಧಾನವಾಗಿ ಹೊರಳುತ್ತಿತ್ತು.

ಭಾರತೀಯ ಬೌಲರ್ ಎಸೆದ ಚೆಂಡನ್ನು ಜೋರಾಗಿ ಹೊಡೆಯಲು ಇಂಗ್ಲೆಂಡಿನ ಬ್ಯಾಟ್ಸ್‌ಮನ್ ಯತ್ನಿಸಿದ, ಚೆಂಡು ಆಕಾಶದೆತ್ತರಕ್ಕೆ ಚಿಮ್ಮಿತು. ಅದನ್ನು ಹಿಡಿದು ಪಂದ್ಯವನ್ನು ಗೆಲ್ಲಲು ಚಾತಕಪಕ್ಷಿಯಂತೆ ಕಾಯುತ್ತಿದ್ದವನು, ಮೊದಲ ಇನ್ನಿಂಗ್ಸ್‌ನಲ್ಲಿ ದ್ವಿಶತಕ ಮತ್ತು ಎರಡನೆಯ ಇನ್ನಿಂಗ್ಸ್‌ನಲ್ಲಿ ಶತಕ ಬಾರಿಸಿದ ಯುವಕಪ್ತಾನ ಗಿಲ್. ಆತ ಕ್ಯಾಚ್ ಹಿಡಿದು ಥೇಟ್ ಸಿಂಹದಂತೆ ಗರ್ಜಿಸಿದ, ಪಂದ್ಯ ಗೆದ್ದ ಭಾರತದ ಸಂಭ್ರಮ ಮುಗಿಲುಮುಟ್ಟಿತ್ತು. ಈ ಪಂದ್ಯದಲ್ಲಿ ಹೀಗೆ ಹತ್ತನೆಯ ವಿಕೆಟ್ ಪಡೆದ ಆ ಪೋರನೇ 'ಆಕಾಶ್ ದೀಪ್'!

ಬದುಕಿನ ಏರಿಳಿತಗಳ ನಡುವೆ ತನ್ನ ಎಲ್ಲಾ ಪ್ರಯತ್ನಕ್ಕೆ ಫಲ ಸಿಕ್ಕಿದ ಅಂದಿನ ಕ್ಷಣದಲ್ಲಿ ಕಟ್ಟೆಯೊಡೆದ ಕಣ್ಣೀರನ್ನು ನಿಯಂತ್ರಿಸಿ, ಗೆಲುವಿನ ರೂವಾರಿ ಎನಿಸಿ ನಗೆಬೀರಿ, ಆದಿತ್ಯವಾರದ ರಾತ್ರಿಯಲ್ಲಿ ಭಾರತೀಯ ಕ್ರಿಕೆಟ್ ಪಾಲಿಗೆ ಅಕ್ಷರಶಃ 'ಆಕಾಶ ದೀಪ'ವಾಗಿ ಪ್ರಜ್ವಲಿಸಿ ಹೊಸ ಇತಿಹಾಸ ರಚಿಸಿಯೇ ಬಿಟ್ಟ ಈ ಹುಡುಗ! ಆಕಾಶ್ ದೀಪ್ ಮೂಲತಃ ಬಿಹಾರ ರಾಜ್ಯದ ಸಾಸರಾಮ್ ಪ್ರದೇಶದ 'ಬಡ್ಡಿ' ಹೆಸರಿನ ಪುಟ್ಟ ಹಳ್ಳಿಯ ಬಡಕುಟುಂಬದ ಹುಡುಗ. ಇತರರಂತೆ ಇವನಿಗೂ ಕ್ರಿಕೆಟ್ ಹುಚ್ಚು, ಮೊಹಮ್ಮದ್ ಶಫಿ ಮತ್ತು ಆಶಿಶ್ ನೆಹ್ರಾ ಬೌಲಿಂಗ್ ಶೈಲಿ ಈತನಿಗೆ ಅಚ್ಚುಮೆಚ್ಚು. ಆದರೆ, 'ಕ್ರಿಕೆಟ್' ಎನ್ನುವ ಶಬ್ದ ಕೇಳಿದರೆ ಕೆಂಡಾಮಂಡಲರಾಗುತ್ತಿದ್ದ ಈತನ ಅಪ್ಪ, "ಈ ಆಟ ನಮ್ಮಂಥ ಬಡವರಿಗೆ ಹೇಳಿ ಮಾಡಿಸಿದ್ದಲ್ಲ. ಅದೇನಿದ್ದರೂ ಶ್ರೀಮಂತರಿಗೆ. ಕ್ರಿಕೆಟ್ ಆಡಿ ಉದ್ಧಾರವಾದವರು ತೀರಾ ಕಡಿಮೆ. ನೀನು ಕ್ರಿಕೆಟ್ ಆಡಿ ನಮ್ಮನ್ನು, ನಮ್ಮೂರನ್ನು ಉದ್ಧಾರ ಮಾಡಬೇಕಿಲ್ಲ. ಮೊದಲು ಒಂದಷ್ಟು ಕಲಿತು, ನಂತರ ಒಂದು ಕೆಲಸ ಹುಡುಕಿಕೊಂಡು ನಿನ್ನ ಜೀವನ ನೋಡಿಕೋ. ಕ್ರಿಕೆಟ್ ನಮಗೆ ಅನ್ನ ಹಾಕಲಾರದು" ಎಂಬ ಖಡಕ್ ಆಜ್ಞೆಯನ್ನು ಮಾಡಿದ್ದರು.

ಆದರೆ, ಮನೆಯವರ ವಿರೋಧ ಮತ್ತು ತಂದೆಯ ಬುದ್ಧಿಮಾತಿಗೆ 'ಕ್ಯಾರೇ' ಎನ್ನದೆ, ಕ್ರಿಕೆಟ್‌ನಲ್ಲಿಯೇ ಬದುಕನ್ನು ಕಟ್ಟಿಕೊಳ್ಳಲು ನಿರ್ಧರಿಸಿ ಹುಟ್ಟೂರನ್ನು ತೊರೆದು, ಪಶ್ಚಿಮ ಬಂಗಾಳದ ದುರ್ಗಾಪುರಕ್ಕೆ ರೈಲಿನಲ್ಲಿ ಬಂದಿಳಿದ ಆಕಾಶ್ ದೀಪ್. ಕಿಸೆ ಖಾಲಿಯಿದ್ದರೂ ತಲೆತುಂಬಾ ಕ್ರಿಕೆಟ್ ತುಂಬಿತ್ತು! ಅಲ್ಲಿ ಸಣ್ಣ ಕೆಲಸ ಹುಡುಕಿಕೊಂಡು, ಬಿಡುವು ಮಾಡಿಕೊಂಡು ಸ್ಥಳೀಯ ಕ್ರಿಕೆಟ್ ಸಂಸ್ಥೆಯಲ್ಲಿ ಬೌಲಿಂಗ್ ಅಭ್ಯಾಸ ಮಾಡುತ್ತಾ ಜೀವನ ಸಾಗಿಸತೊಡಗಿದ. ದೇಶಕ್ಕಾಗಿ ಆಡಬೇಕೆಂಬ ತವಕ ದಿನಗಳೆದಂತೆ ಜಾಸ್ತಿಯಾಗುತ್ತಿತ್ತು. ಊರು ಬಿಟ್ಟ ಕೆಲ ತಿಂಗಳಲ್ಲಿ, ಪಾರ್ಶ್ವವಾಯು ಹೊಡೆತಕ್ಕೆ ಒಳಗಾಗಿ ತಂದೆಯವರ ಆರೋಗ್ಯ ಕ್ಷೀಣಿಸಿ ಇಹಲೋಕ ತ್ಯಜಿಸಿದ ಸುದ್ದಿ ಆಕಾಶ್‌ಗೆ ಬೌನ್ಸರ್‌ನಂತೆ ಅಪ್ಪಳಿಸಿತು. ಈ ದುಃಖದಿಂದ ಚೇತರಿಸಿಕೊಳ್ಳುವಷ್ಟರಲ್ಲೇ ಮನೆಯ ಆಧಾರಸ್ತಂಭವಾಗಿದ್ದ ಅಣ್ಣನೂ ಹಠಾತ್ ತೀರಿಕೊಂಡ. ಆಕಾಶ್‌ಗೆ ಮತ್ತೊಂದು ಡೆಡ್ಲಿ ಬೌನ್ಸರ್... ಆಕಾಶವೇ ಕಳಚಿ ತಲೆಯ ಮೇಲೆ ಬಿದ್ದಂಥ, ಭೂಮಿಯೇ ಬಾಯ್ತೆರೆದಂಥ ಅನುಭವ. 'ಬದುಕು ಯಾಕೋ ಕಷ್ಟ ಕೊಡುತ್ತಿದೆ, ಏನೇನನ್ನೋ ಕಲಿಸುತ್ತಿದೆ, ಜತೆಗೆ ಕಷ್ಟಗಳನ್ನು ಎದುರಿಸುವ ಸಾಮರ್ಥ್ಯವನ್ನೂ ನನ್ನೊಳಗೆ ತುಂಬುತ್ತಿದೆ' ಎಂದು ಸ್ವತಃ ಸಮಾಧಾನಮಾಡಿಕೊಂಡ ಆಕಾಶ್, ಮನೆಯಲ್ಲಿ ಒಂಟಿಯಾಗಿದ್ದ ತಾಯಿಗೋಸ್ಕರ ತನ್ನ ಕನಸನ್ನು ಕೈಬಿಟ್ಟು ಊರಿಗೆ ವಾಪಸಾದ. ಕ್ರಿಕೆಟ್ ಆಟದಿಂದ ಮೂರು ವರ್ಷದವರೆಗೆ 'ರಿಟೈರ್ಡ್ ಹರ್ಟ್' ಆದ.

ಹೊಂಡಗಳೇ ತುಂಬಿರುವ ರಸ್ತೆಯಲ್ಲಿ ಬ್ರೇಕಿಲ್ಲದ ವಾಹನದಂತಾಗಿದ್ದ ತನ್ನ ಬದುಕನ್ನು ಮತ್ತೆ ಹಳಿಗೆ ತಂದುಕೊಳ್ಳಲು ಆಕಾಶ್ ನಿರಂತರ ಯತ್ನಿಸುತ್ತಲೇ ಇದ್ದ. ಬದುಕಿನ ಗುರಿಯೇ ಆಗಿದ್ದ ಕ್ರಿಕೆಟ್‌ನಲ್ಲಿ ಭಾರತವನ್ನು ಪ್ರತಿನಿಧಿಸಬೇಕೆಂಬ ಕನಸು ಆಗಾಗ ಕಣ್ಣಮುಂದೆ ಬಂದುಹೋಗುತ್ತಿತ್ತು. ಅದನ್ನು ನನಸಾಗಿಸಿಕೊಳ್ಳಲು ದೃಢನಿರ್ಧಾರ ಮಾಡಿಯೇಬಿಟ್ಟ. ಜೀವನ ಒಂದಷ್ಟು ಸುಧಾರಿಸಿದೆ, ಅಮ್ಮ ತನ್ನನ್ನು ತಾನು ನಿಭಾಯಿಸಿಕೊಳ್ಳುವಷ್ಟು ಗಟ್ಟಿಯಾಗಿದ್ದಾಳೆ ಎನಿಸಿದಾಗ, ಒಂದು ಮುಂಜಾನೆ ಆಕೆಯ ಕಾಲಿಗೆರಗಿ, "ನನ್ನನ್ನು ನೀನು ಮುಂದೊಂದು ದಿನ ಟಿವಿಯಲ್ಲಿ ಕಾಣುವಿಯಂತೆ. ಆಗ ನಿನಗೊಂದು ಹೊಸ ಟಿವಿಯನ್ನು ತಂದುಕೊಡುವೆ. ಆಶೀರ್ವದಿಸು" ಎಂದು ಹೇಳಿದ. ಅಮ್ಮನ ಉತ್ತರಕ್ಕೂ ಕಾಯದೆ ತನ್ನೂರು 'ಬಡ್ಡಿ'ಯಿಂದ ದುರ್ಗಾಪುರ ನಗರಕ್ಕೆ ಬಂದ. ತನ್ನ 'ರೋಲ್ ಮಾಡೆಲ್' ಮೊಹಮ್ಮದ್ ಶಮಿ ಉತ್ತರ ಪ್ರದೇಶದ ಅಮ್ರೋಹಾದಿಂದ ಕೋಲ್ಕತ್ತಾಗೆ ಬಂದಿದ್ದನ್ನು ನೆನಪು ಮಾಡಿಕೊಳ್ಳುತ್ತಾ ತಾನೂ ರೈಲನ್ನೇರಿ ದುರ್ಗಾಪುರದಿಂದ ಕೋಲ್ಕತ್ತಾಗೆ ಬಂದಿಳಿದ. ಆಗ ಅವನಲ್ಲಿದ್ದುದು ನೂರರ ಕೆಲವೇ ನೋಟುಗಳು ಮತ್ತು ಕ್ರಿಕೆಟ್‌ನಲ್ಲಿ ಸಾಧಿಸುವ ಮಹತ್ವಾಕಾಂಕ್ಷೆ ಮಾತ್ರ. ಬಾಡಿಗೆಗೆ ಸಣ್ಣ ರೂಮು ಹಿಡಿದ. ಆದರೆ ಅಲ್ಲಿ ಬದುಕು ತುಂಬಾ ಕ್ಲಿಷ್ಟಕರವಾಗಿ ಸಾಗುತ್ತಿತ್ತು. ಅಂಥ ವೇಳೆ ಊರಿಗೆ ವಾಪಸಾಗುವ ಯೋಚನೆ ಬಂದಾಗಲೆಲ್ಲ, 'ಏನಾದರಾಗಲಿ ಇಲ್ಲೇ ಬದುಕು, ಕ್ರಿಕೆಟ್‌ನ ಕನಸನ್ನು ನನಸಾಗಿಸಿಕೊಳ್ಳುವೆ' ಎಂದು ತನಗೆ ತಾನೇ ಹೇಳಿಕೊಂಡು ಆತ್ಮವಿಶ್ವಾಸವನ್ನು ಮತ್ತಷ್ಟು ಗಟ್ಟಿಮಾಡಿಕೊಳ್ಳುತ್ತಿದ್ದ. ಅಲ್ಲಿ ಇಲ್ಲಿ ಕೆಲಸ ಮಾಡಿಕೊಂಡು ಟೆನಿಸ್ ಬಾಲ್ ಪಂದ್ಯಾವಳಿಗಳಲ್ಲಿ ಆಡಿ ಒಂದಷ್ಟು ಕಾಸು ಸಂಪಾದಿಸಿ ದಿನದೂಡತೊಡಗಿದ. ಸ್ಥಳೀಯ ಕ್ರಿಕೆಟ್ ಸಂಸ್ಥೆಯಲ್ಲಿ ದಿನವೂ ಬೌಲಿಂಗ್ ಅಭ್ಯಾಸ

ಜಾರಿಯಲ್ಲಿತ್ತು. ಈತನ ಪ್ರತಿಭೆಯು 23 ವರ್ಷಕ್ಕಿಂತ ಕಿರಿಯರ ಬಂಗಾಳ ಕ್ರಿಕೆಟ್ ತಂಡದಲ್ಲಿ ಸ್ಥಾನವನ್ನು ದಕ್ಕಿಸಿಕೊಟ್ಟಿತು, ಭಾಗ್ಯದ ಮೊದಲ ಬಾಗಿಲು ತೆರೆಯಿತು. ಅಂದೇ ಸಾಲ ಮಾಡಿ, ಗೆಳೆಯರಲ್ಲಿ ಹೇಳಿ ಊರಿನ ಮನೆಯಲ್ಲಿ ಅಮ್ಮನಿಗಾಗಿ ಸಣ್ಣದೊಂದು ಟಿವಿಯನ್ನು ವ್ಯವಸ್ಥೆ ಮಾಡಿದ. ಮಗನನ್ನು ಅದರಲ್ಲಿ ಕಂಡು ಅಮ್ಮನ ಕಣ್ಣುತುಂಬಿ ಬಂತು.

ಕಠಿಣ ಪರಿಶ್ರಮ ಮತ್ತು ಒಳ್ಳೆಯ ಪ್ರದರ್ಶನದ ಫಲವಾಗಿ ರಣಜಿ ತಂಡದಲ್ಲಿ ಆಕಾಶ್‌ಗೆ ಸ್ಥಾನ ದಕ್ಕಿತು. ಒಂದೆರಡು ಸ್ಥಿರ ಪ್ರದರ್ಶನಗಳ ಪರಿಣಾಮವಾಗಿ 'ಆರ್‌ಸಿಬಿ' ತಂಡದ ಐಪಿಎಲ್ ಆಟಗಾರನಾಗಿ ಬಡ್ತಿ ಸಿಕ್ಕಿತು, ಮನೆಯಲ್ಲೂ ದೊಡ್ಡ ಎಲ್‌ಇಡಿ ಟಿವಿ ಬಂತು! ದೇಶಕ್ಕೆ ಆಡುವ ತುಡಿತ ಇನ್ನೂ ಜಾಸ್ತಿಯಾಯಿತು. ಆ ಅದೃಷ್ಟದ ದಿನ ಬಂದೇಬಿಟ್ಟಿತು. 2024ರಲ್ಲಿ ರಾಂಚಿಯಲ್ಲಿ ನಡೆದ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಪಂದ್ಯದಲ್ಲಿ ಮೊದಲ ಬಾರಿಗೆ ಭಾರತದ ಕ್ಯಾಪ್ ಧರಿಸಿ ಮೈದಾನಕ್ಕಿಳಿದ. ಮಗನ ಆಟವನ್ನು ಕಂಡು, ಗ್ಯಾಲರಿಯಲ್ಲಿ ಕೂತಿದ್ದ ಅಮ್ಮ ಹೆಮ್ಮೆಪಟ್ಟರು. ಟೆನಿಸ್ ಬಾಲ್ ಆಡುತ್ತಿದ್ದ ಆಕಾಶ್ ದೀಪ್, ಹೀಗೊಂದು ಅವಕಾಶ ಸಿಕ್ಕಾಕ್ಷಣ ಅಂತಾರಾಷ್ಟ್ರೀಯ ಆಟಗಾರನಾಗಿ ಗುರುತಿಸಿಕೊಂಡ, ಉತ್ತಮ ಪ್ರದರ್ಶನ ನೀಡತೊಡಗಿದ.

ಈಗ ನಡೆಯುತ್ತಿರುವ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ, ಮೊದಲ ಪಂದ್ಯದಲ್ಲಿ ಆಡುವ ಅವಕಾಶ ಸಿಗಲಿಲ್ಲ. ಆದರೆ ಎರಡನೆಯ ಪಂದ್ಯಕ್ಕೆ ಬುಮ್ರಾ ಅಲಭ್ಯನಾದ ಹಿನ್ನೆಲೆಯಲ್ಲಿ ಅವಕಾಶ ಸಿಕ್ಕಿತ್ತು. ಎದುರಾಳಿ ತಂಡದ ಬ್ಯಾಟಿಂಗ್ ಬುಡವನ್ನು ಎರಡೂ ಇನ್ನಿಂಗ್ಸ್‌ಗಳಲ್ಲಿ ಅಲುಗಾಡಿಸಿದ ಆಕಾಶ್, ಪಂದ್ಯವೊಂದರಲ್ಲಿ 10 ವಿಕೆಟ್ ಗಳಿಸಿ 'ಗೆಲುವಿನ ರೂವಾರಿ' ಎನಿಸಿಕೊಂಡ. ಎಡ್ಜ್ ಬಾಸ್ಟನ್ ಕ್ರೀಡಾಂಗಣದಲ್ಲಿ ಟೆಸ್ಟ್ ಪಂದ್ಯವನ್ನು ಗೆದ್ದ ಏಷ್ಯಾದ ಮೊದಲ ತಂಡ ಎಂಬ ಗರಿಮೆಯನ್ನು ಭಾರತವು ದಕ್ಕಿಸಿಕೊಳ್ಳುವಂತಾಗುವಲ್ಲಿ ಮಹತ್ವದ ಕೊಡುಗೆ ನೀಡಿದ. ಮೈದಾನದಿಂದ ಹೊರಬರುವಾಗ, ಗೆಲುವಿನ ಸ್ಮರಣಾರ್ಥವಾಗಿ ಒಂದು ವಿಕೆಟ್ ಮತ್ತು ಬಾಲನ್ನು ಕೈಯಲ್ಲಿ ಹಿಡಿದು ಪೆವಿಲಿಯನ್‌ನತ್ತ ಸಾಗುವಾಗ ಅವನಲ್ಲಿ ಒಬ್ಬ ಶ್ರೇಷ್ಠ ಬೌಲರ್ ಮಾತ್ರವಲ್ಲದೆ, ಹೋರಾಟಗಾರನೂ ಕಾಣುತ್ತಿದ್ದ. What a journey!. ತಾನು ಪಡೆದ 10 ವಿಕೆಟ್ಟುಗಳ ಸಾಧನೆಯನ್ನು, ಕ್ಯಾನ್ಸರ್‌ನಿಂದ ಬಳಲುತ್ತಿರುವವರಿಗೆ ಅರ್ಪಿಸುವ ಮೂಲಕ ಮತ್ತಷ್ಟು ಗೌರವ ಸಂಪಾದಿಸಿಕೊಂಡ ಆಕಾಶ್ ದೀಪ್. ಒಂದು ಕಾಲಕ್ಕೆ 'ಕ್ರಿಕೆಟ್ ಆಡಬೇಡ' ಎಂದು ಹೇಳಿ ಸಿಟ್ಟಾಗಿದ್ದ ಅವನ ಅಪ್ಪ, ಮಗನ ಈ ಸಾಧನೆಯನ್ನು ಕಂಡು ತಾವಿರುವಲ್ಲಿಂದಲೇ ಹರಸಿ ಸಂತಸಪಡುತ್ತಿರಬಹುದು.

ಮೊಹಮ್ಮದ್ ಶಮಿ, ಬುಮ್ರಾ ನಂತರ ಭಾರತದ ವಿಶ್ವಾಸಾರ್ಹ ಬೌಲರ್ ಯಾರು? ಎಂಬ ಪ್ರಶ್ನೆಗೆ ತನ್ನ ಸ್ಥಿರ ಪ್ರದರ್ಶನದ ಮೂಲಕ ಉತ್ತರಿಸಿದ್ದಾನೆ ಆಕಾಶ್ ದೀಪ್. ಈ ಸರಣಿಯ ಮಿಕ್ಕ ಪಂದ್ಯಗಳಲ್ಲೂ ಈತ ಅವಕಾಶ ದಕ್ಕಿಸಿಕೊಂಡು ಉತ್ತಮ ಪ್ರದರ್ಶನವನ್ನು ನೀಡುವಂತಾಗಲಿ, ತನ್ನ ಸಾಮರ್ಥ್ಯ ಮತ್ತು ಶ್ರೇಷ್ಠ ಪ್ರದರ್ಶನದಿಂದ ಮತ್ತಷ್ಟು ಉತ್ತುಂಗಕ್ಕೇರಲಿ ಎಂದು ಹಾರೈಸೋಣ. ಭಾರತದ ಟೆಸ್ಟ್ ಕ್ರಿಕೆಟ್‌ನಲ್ಲಿ 'ಭರವಸೆಯ ನಾಳೆಗಳು ನಮ್ಮದು' ಎನಿಸಿದೆ...

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಭಟ್ಟರ್ ಸ್ಕಾಚ್

- **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ಹೇಳೋನು ಮಾಡಲ್ಲ, ಮಾಡೋನು ಹೇಳಲ್ಲ, ತಿಂದವನು?
– **ತೇಗಲ್ಲ!**

- **ಎಸ್.ರಘು, (ಇಮೇಲ್ ಮೂಲಕ)**
ಭಟ್ರೇ, ಹಿಂದಿನವರು 'ಮನೆ ಕಟ್ಟಿ ನೋಡು, ಮದುವೆ ಮಾಡಿ ನೋಡು' ಎನ್ನುತ್ತಿದ್ದರು. ಈಗಿನವರು?
– **'ತಾಳಿ ಕಟ್ಟಿ ನೋಡು, ಮಕ್ಕಳ ಮಾಡಿ ನೋಡು'**

- **ಸಾಮಗ ದತ್ತಾತ್ರಿ, ಬೆಂಗಳೂರು**
ಭಟ್ರೇ, ಡಿಕೆಶಿ–ಎಚ್ಡಿಕೆ ಕಾಳಗಕ್ಕೂ, ಗೂಳಿಗಳ ಕಾಳಗಕ್ಕೂ ಏನಾದರೂ ವ್ಯತ್ಯಾಸವಿದೆಯಾ?
– **ಇದು ಜೋಡೆತ್ತುಗಳ ಕಾಳಗ!**

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಸಿನಿಮಾದಲ್ಲಿ ನೋವು–ನಲಿವುಗಳಿಗೆ ಹಾಡುಗಳನ್ನು ಹಾಡ್ತಾರೆ. ನಿಜ ಜೀವನದಲ್ಲಿ?
– **ಎಣ್ಣೆ ಅಂಗಡಿಗೆ ಹೋಗ್ತಾರೆ!**

- **ಉಜ್ಜನಿ ಜಲೇಂದ್ರ, ಮಲ್ಲುಂಗೆರೆ**
ಭಟ್ರೇ, ನಿಮ್ಮ ಮಾಜಿ ಪ್ರೇಯಸಿ ಈಗಲೂ ಸಂಪರ್ಕದಲ್ಲಿ ಇದ್ದಾರಾ?
– **ಪ್ರೇಯಸಿ ಯಾವತ್ತೂ ಮಾಜಿ ಆಗುವುದಿಲ್ಲ ಗೊತ್ತಿರಲಿ!**

- **ಸತೀಶ ಎಲ್.ವಿ., (ಇಮೇಲ್ ಮೂಲಕ)**
ಭಟ್ರೇ, ಕಿತ್ತೋಗುತ್ತೆ ಅಂತ ಗೊತ್ತಿದ್ರೂ, ಕೆಲವರು ಎಳೆಯುವುದನ್ನು ಬಿಡುವುದಿಲ್ಲವಲ್ಲ?
– **ಕಿತ್ತೋಗಲಿ ಎಂಬುದೇ ಅವರ ಉದ್ದೇಶ ಆಗಿರುತ್ತದೆ!**

- **ರಾಜೇಶ ಶೆಟ್ಟಿ, ಬೆಳ್ತಂಗಡಿ**
ಭಟ್ರೇ, ಬಿಜೆಪಿಯಲ್ಲಿ ಯಾರಿಗೂ ಬೆಳೆಯಲು ಬಿಡುವುದಿಲ್ಲವಲ್ಲ?
– **ಗಡ್ಡ, ಕೂದಲು, ಉಗುರುಗಳನ್ನು ಬೆಳೆಸಿಕೊಳ್ಳುವವರಿಗಷ್ಟೇ ಪ್ರಾಶಸ್ತ್ಯವಂತೆ!**

- **ಹರಿಪ್ರಕಾಶ ಭಟ್, ಸಿದ್ದಾಪುರ**
ಭಟ್ರೇ, ಪ್ರೀತಿ ಅಂದ್ರೆ ನಿಮ್ಮ ದೃಷ್ಟಿಯಲ್ಲಿ ಕೆರೆ ನೀರಾ, ಹರಿವ ನೀರಾ?
– **ನಾವು ಅಂದುಕೊಂಡ ಹೊತ್ತಿಗೆ ಥಟ್ ಅಂತ ಬರುವ ನಲ್ಲಿ ನೀರಾದರೂ ಆಗಬಹುದು!**

- **ಸಂದೀಪ ಪೈ, (ಇಮೇಲ್ ಮೂಲಕ)**
ಭಟ್ರೇ, ಮುತ್ತು ಪರಿಶುದ್ಧವಾ?
– **ನೊರೆ ಬಂದ್ರೆ, ಸೋಡಾ ಬೆರೆಸಿರುವ ಸಾಧ್ಯತೆ ಇದೆ ಅಂತೀಯಾ?!**

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಉಗ್ರಗಾಮಿಗಳಿಗೂ, ನಕ್ಸಲಿಯರಿಗೂ ಇರುವ ವ್ಯತ್ಯಾಸವೇನು?
– **ಒಬ್ಬ ಭಾವ ಹಾಗೂ ಮತ್ತೊಬ್ಬ ಕಸಿನ್ಸ್ ಬ್ರದರ್!**

ಪಾಠ ಕಲಿಸಿದ ಎಲ್ಲರೂ ಗುರು ಸಮಾನರು!

ವಿಶ್ವರಂಗ

ರಂಗಸ್ವಾಮಿ ಮೂಕನಹಳ್ಳಿ
vveditoped@gmail.com
mookanahalli@gmail.com

ಸಿರಾ ತಾಲೂಕಿನ ಹೊಸೂರು ಅಮ್ಮನ ತವರು. ನನ್ನ ಹುಟ್ಟು ಮತ್ತು ಎರಡನೇ ತರಗತಿವರೆಗೆ ಕಲಿತದ್ದು ಅಲ್ಲಿ. ಶಾಲೆಯ ಬಗ್ಗೆ ಹೆಚ್ಚಿನ ನೆನಪಿಲ್ಲ, ನಮ್ಮ ಮನೆಯಿಂದ ಬಹಳ ಹತ್ತಿರದಲ್ಲಿತ್ತು ಎನ್ನುವ ಒಂದು ನೆನಪಿನ ಜತೆಗೆ 'ಅ ಆ ಇ ಈ' ತಿದ್ದಿಸುತ್ತಿದ್ದ ದಾನಪ್ಪ ಮೇಷ್ಟ್ರು ನೆನಪು ಕೂಡ ಹಸಿರಾಗಿದೆ. ದಾನಪ್ಪ ಮೇಷ್ಟ್ರು ನೆನಪು ಉಳಿಯಲು ಕಾರಣ ಅವರು ಕಲಿಸುತ್ತಿದ್ದ ರೀತಿ ಎಂದುಕೊಂಡರೆ ಅದು ನಿಮ್ಮ ತಪ್ಪು ಕಲ್ಪನೆ. ಅವರ ಬಳಿ ಒಂದು ಸಣ್ಣ ಬಿದಿರಿನ ಕಡ್ಡಿಯಿತ್ತು. ತಪ್ಪಾದರೆ, ಗಲಾಟೆ ಮಾಡಿದರೆ ಮುಲಾಜಿಲ್ಲದೆ ಬೀಸುತ್ತಿದ್ದರು. ಶಾಲೆಯಲ್ಲಿ ಅವರನ್ನ ಕಂಡರೆ ಸಾಕು ನಾವೆಲ್ಲಾ ನಡುಗುತ್ತಿದ್ದೆವು. ಬೇರೆ ಶಿಕ್ಷಕರೂ ಮಕ್ಕಳ ಗಲಾಟೆ ಹೆಚ್ಚಾದರೆ ಸಾಕು 'ದಾನಪ್ಪ ಮೇಷ್ಟನ್ನ ಕರೀತೀನಿ ನೋಡಿ' ಎನ್ನುತ್ತಿದ್ದರು. ಮರುಕ್ಷಣದಲ್ಲಿ ತರಗತಿಯಲ್ಲಿ ನಿಶ್ಶಬ್ದ! ಶಾಲೆಯಲ್ಲಿ ದಾನಪ್ಪ ಮೇಷ್ಟ್ರ ಈ ರೂಪ ಕಂಡ ನಮಗೆ ಅವರನ್ನ ದಾರಿಯಲ್ಲಿ ಕಂಡರೂ ಭಯವಾಗುತ್ತಿತ್ತು. ಈ ಕಾರಣಕ್ಕೆ ರಸ್ತೆಯಲ್ಲಿ ಅವರನ್ನ ಕಂಡರೆ ಬೇರೆ ರಸ್ತೆಯಲ್ಲಿ ಓಡಿಹೋಗುತ್ತಿದ್ದೆವು. ಹೀಗೆ ಮಕ್ಕಳಲ್ಲಿ ಭಯೋತ್ಪಾದನೆ ಮಾಡಿದ್ದ ಈ ಮೇಷ್ಟ್ರ ಮೇಲೆ ನನಗೆ ಇನ್ನಿಲ್ಲದ ಕೋಪ ಬರಲು ಕಾರಣ ಒಂದು ದಿನ ನನ್ನದಲ್ಲದ ತಪ್ಪಿಗೆ ಅವರ ಫೇಮಸ್ ಬಿದಿರಿನ ಕಡ್ಡಿಯಿಂದ ಬಾರಿಸಿದ್ದು. ಅವರು ಮನೆಗೆ ಹೋಗುವ ದಾರಿಯಲ್ಲಿ ಒಂದು ಟೈಲರ್ ಅಂಗಡಿಯಿತ್ತು. ಅಲ್ಲಿನ ಮಹಡಿಯ ಮೇಲೆ ನಿಂತು 'ಲೇ ದಾನಪ್ಪ, ನಾನು ನಿಮ್ಮಪ್ಪ' ಅಂತ ಕೂಗಿದ್ದು ಇನ್ನೂ ನೆನಪಿದೆ. ದಾನಪ್ಪ ಮೇಷ್ಟ್ರಿಗೆ ಹೀಗೆ ಕೂಗಿದ್ದು ಯಾರೆಂದು ಗೊತ್ತಾಗದೆ ಇದ್ದಾಗ ಅದ ಆನಂದವನ್ನ ವರ್ಣಿಸುವುದು ಹೇಗೆ? ಅಂದಿಗೆ ಇದು ತಪ್ಪು ಎನ್ನುವ ಕಲ್ಪನೆ ಕೂಡ ಇರಲಿಲ್ಲ. ಅದೇನೋ ಮೇಷ್ಟ್ರ ಮೇಲೆ ರಿವೆಂಜ್ ತೆಗೆದುಕೊಂಡೆ ಎನ್ನುವ ಹುಚ್ಚು ಕಲ್ಪನೆ.

ಮೂರನೇ ತರಗತಿಗೆ ಬೆಂಗಳೂರು ಸಮೀಪದ 'ವಿಜಯಪುರ'ದ ಸರಕಾರಿ ಪಾಠಶಾಲೆಗೆ ಸೇರಿಸಿದರು. ಅದು ನನ್ನ ಎರಡನೇ ಶಾಲೆ. ಇಲ್ಲಿ ಸಿಕ್ಕವರು ಕಮಲಮ್ಮ ಟೀಚರ್. ಅವರೊಬ್ಬರು ವಿಧವೆಯಾಗಿದ್ದರು ಎನ್ನುವುದು ಇಂದಿಗೆ ಗೊತ್ತಾಗಿದೆ. ಅಂದಿಗೆ ಒಬ್ಬರೇ ಇದ್ದಾರೆ ಮತ್ತು ಸಾಲದಕ್ಕೆ ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿ ಇದ್ದಾರೆ ಎನ್ನುವುದು ಕೆಲವೇ ದಿನಗಳಲ್ಲಿ ಅಂದಿಗೆ ನನ್ನ ಅರಿವಿಗೆ ಬಂದದ್ದು. ಈ ಶಾಲೆಯಲ್ಲಿ ಮಧ್ಯಾಹ್ನ ಗೋಧಿ ಉಪ್ಪಿಟ್ಟು ಕೊಡುತ್ತಿದ್ದರು. ನನ್ನ ಸಹಪಾಠಿ ನೀಲಕುಮಾರ ಕಡುಬಡವ. ಅವನ ಪೂರ್ತಿ ಫ್ಯಾಮಿಲಿ ಅಂದರೆ ಅಪ್ಪ, ಅಮ್ಮ, ಮತ್ತಿಬ್ಬರು ಮಕ್ಕಳು ಮಧ್ಯಾಹ್ನ ಶಾಲೆಯ ಬಳಿ ಬಂದಿರುತ್ತಿದ್ದರು. ನೀಲಕುಮಾರನಿಗೆ ಸಿಗುತ್ತಿದ್ದ ಉಪ್ಪಿಟ್ಟು ಐದಾರು ಪಾಲಾಗುತ್ತಿತ್ತು. ನಂತರದ ದಿನಗಳಲ್ಲಿ ನಾನು ಸಾಲಿನಲ್ಲಿ ನಿಂತು ಉಪ್ಪಿಟ್ಟು ಪಡೆದು ಅವನಿಗೆ ಕೊಡುತ್ತಿದ್ದೆ. ಒಂದು ದಿನ ಕಮಲಮ್ಮ ಟೀಚರ್ ಇದನ್ನ ನೋಡಿದರು. 'ನೀನು ತಿನ್ನುವುದಾದರೆ ಮಾತ್ರ ಕೊಡುತ್ತೇವೆ, ಇಲ್ಲದಿದ್ದರೆ ಇಲ್ಲ' ಎಂದು ಹೇಳಿದರು. ಏಕೆ ಹೀಗೆ ಮಾಡಿದರು ಎನ್ನುವುದು ಇವತ್ತಿಗೂ ಪ್ರಶ್ನೆಯಾಗೇ ಉಳಿದಿದೆ.

ಆಮೇಲೆ ಐದನೇ ತರಗತಿಗೆ ಪೀಣ್ಯದ ಸರಕಾರಿ ಮಾದರಿ ಶಾಲೆಗೆ ಸೇರಿಸಿದರು. ಇಲ್ಲಿಂದ ನೆನಪುಗಳು ಹೆಚ್ಚು ಸ್ಪಷ್ಟವಾಗಿವೆ. ತರಗತಿಯಲ್ಲಿ ಪಾಠ ಮಾಡುತ್ತಾ ಒಂದೆರಡು ನಿಮಿಷ ಹೊರಗೆ ಹೋಗಿ ಬೀಡಿ ಸೇದುತ್ತಿದ್ದವರು ಹನುಮಂತಪ್ಪ ಮೇಷ್ಟ್ರು. ತಮ್ಮ ಬಳಿಯಿದ್ದ ರೂಲರ್ ದೊಣ್ಣೆಯಿಂದ ಅಕಾರಣ ಮಕ್ಕಳಿಗೆ ಬಡಿಯುತಿದ್ದ ಅವರನ್ನ ಮರೆಯುವುದಾದರೂ ಹೇಗೆ? ಇದ್ದುದರಲ್ಲಿ ವಿಜ್ಞಾನ ತೆಗೆದುಕೊಳ್ಳುತ್ತಿದ್ದ ರಾಮಸ್ವಾಮಿ ಮೇಷ್ಟ್ರು ಒಕೆ, ಒಂದಷ್ಟು ಸಂಯಮದಿಂದ ವರ್ತಿಸುತ್ತಿದ್ದರು. ಇನ್ನು ಕನ್ನಡ ಮೇಷ್ಟ್ರು ಬೊಮ್ಮಣ್ಣ ಅವರು ಸದಾ ಕಣ್ಣಲ್ಲಿ ಬೆಂಕಿಯನ್ನ ಉಗುಳುತ್ತಿದ್ದರು. ಪೀಣ್ಯದಲ್ಲಿ ಯಾವುದೇ ಕಾರ್ಯಕ್ರಮ ನಡೆದರೆ ಸಾಕು ಬೊಮ್ಮಣ್ಣ ಮೇಷ್ಟನ್ನ ಮಾತನಾಡಲು ಕರೆಯುತ್ತಿದ್ದರು. ಅವರ ಮಾತು ಅಂದರೆ ಅದು ನಿಲ್ಲದ ಜಡಿ ಮಳೆಯಂತೆ. ಆ ನಂತರದ ದಿನಗಳಲ್ಲಿ ಗೊತ್ತಾಗಿದ್ದು ಏನೆಂದರೆ ಅವರು ಕುಡಿದು ಶಾಲೆಗೆ ಬರುತ್ತಾರೆ ಎನ್ನುವುದು. ಈ 'ಕುಡಿದು' ಎಂದರೇನು? ಏನನ್ನ ಕುಡಿದು ಬರುತ್ತಾರೆ? ಎನ್ನುವುದು ನನಗೆ ಅಂದಿನ ದಿನದಲ್ಲಿ ಕೊನೆಗೂ ತಿಳಿಯಲೇ ಇಲ್ಲ. ಇನ್ನು ಹೆಡ್ ಮೇಷ್ಟ್ರು ಮಹದೇವಪ್ಪ ಅವರದು ವಿಚಿತ್ರ ಬುದ್ಧಿ. ಶಾಲೆಯಲ್ಲಿ ಪ್ರತಿದಿನ ಸುಭಾಷಿತ ಓದಿಸುತ್ತಿದ್ದರು, ಜತೆಗೆ ಸುದ್ದಿ ಮುಖ್ಯಾಂಶ ಕೂಡ ಓದಿಸುತ್ತಿದ್ದರು. ಎಲ್ಲಕ್ಕೂ ಪರ್ಮನೆಂಟ್ ಅವರ ಮಗ ಉದಯರವಿ ಫಿಕ್ಸ್ ಆಗಿದ್ದ. ಏಳನೇ ತರಗತಿಯಲ್ಲಿ ಇಲ್ಲದ ಧೈರ್ಯ ಹೊಂದಿಸಿಕೊಂಡು ಮಹದೇವಪ್ಪ ಅವರನ್ನ 'ಯಾಕೆ ಸರ್, ಯಾವಾಗಲು ನಿಮ್ಮ ಮಗನೆ ಓದಬೇಕು?' ಅಂತ ಕೇಳಿದೆ. 'ಸ್ಟೇಜ್ ಮೇಲೆ ನಿಂತು ನಡುಗದೆ ಓದಕ್ಕೆ ಬರುತ್ತೇನೋ ಮುಂಡೇದೆ?' ಎಂದು ಕೇಳಿದ್ದರು. ಬರುತ್ತೆ ಅಂತ ಮುಗುಮ್ಮಾಗಿ ಉತ್ತರಿಸಿದ್ದೆ. ನಂತರ ಒಂದು ವರ್ಷ ಸುಭಾಷಿತಕ್ಕೆ ನಾನು, ಮುಖ್ಯಾಂಶಕ್ಕೆ ಉದಯರವಿ ಕಾಯಂ ಆದೆವು.

ಸರೋಜಮ್ಮ ಟೀಚರ್ ಅಮ್ಮನ ಪ್ರೀತಿ ಕೊಟ್ಟವರು. ತಿಂಗಳಿಗೊಮ್ಮೆ ಚೆಕ್ ಕೊಟ್ಟು ಕ್ಯಾಶ್ ತರಲು ಹೇಳುತ್ತಿದ್ದರು. ಹೀಗಾಗಿ 6–7 ತರಗತಿಯಿಂದಲೇ ಬ್ಯಾಂಕಿಗೆ ಹೋಗಿಬರುವುದು ಅಭ್ಯಾಸವಾಯ್ತು. ನನಗೆ ಅಪೆಂಡಿಕ್ಸ್ ಆಪರೇಷನ್ ಆದಾಗ ದಿನಾ ಬಂದು ನೋಡಿಕೊಂಡು ಹೋಗುತ್ತಿದ್ದರು. ಇನ್ನು ಲೀಲಾ ಟೀಚರ್ ಅಂತ ಒಬ್ಬರಿದ್ದರು. ಅವರ ಮಗಳು ಕ್ವೀನಿ ಕಾನ್ವೆಂಟ್‌ನಲ್ಲಿ ಓದುತ್ತಿದ್ದಳು. ಆಗಾಗ ನಮ್ಮ ಶಾಲೆಗೆ ಬಂದು ಅವಳೇ ಪಾಠ ಮಾಡುತ್ತಿದ್ದಳು. ಲೀಲಾ ಟೀಚರ್ ಯಾವುದೋ ಮ್ಯಾಗಜಿನ್ ಓದುತ್ತಾ ಕುಳಿತಿರುತ್ತಿದ್ದರು. ಹೇಳಿಕೇಳಿ ನಮ್ಮದು ಸರಕಾರಿ ಶಾಲೆ. ಕನ್ನಡ ಮಾಧ್ಯಮ ಬೇರೆ! ಅಂದಿಗೆ ಲೀಲಾ ಟೀಚರ್ ಮಗಳು ನನ್ನ ಕಣ್ಣಿಗೆ ಮಹಾಮೇಧಾವಿಯಂತೆ ಕಾಣುತ್ತಿದ್ದಳು. ಮಾತಿನ ಮಧ್ಯೆ ಇಂಗ್ಲಿಷ್ ಬೆರೆಸುತ್ತಿದ್ದಳು ನೋಡಿ!

ಹೈಸ್ಕೂಲ್‌ನಲ್ಲಿ ಸಿಕ್ಕ 'ಎಸ್.ಎಸ್ ಮೇಷ್ಟ್ರು' (ಹೆಸರು ನೆನಪಿಲ್ಲ– 'ಎಸ್.ಎಸ್' ಎಂದೇ ನೆನಪು) ಭೌತಶಾಸ್ತ್ರ ಪಾಠ ಮಾಡುವಾಗ ಪ್ರಥಮ ಬಾರಿಗೆ ಮನಸ್ಸು ಅಥವಾ ನನ್ನ ಆತ್ಮ ದೇಹದಿಂದ ಬೇರ್ಪಟ್ಟ ಭಾವನೆ ಉಂಟಾಯಿತು. ನನ್ನ ತರಗತಿಯಲ್ಲಿ ನಾನು ನನ್ನ ಸಹಪಾಠಿಗಳು ಕುಳಿತಿದ್ದೇವೆ, ಎಸ್.ಎಸ್ ಮೇಷ್ಟ್ರು ಪಾಠ ಮಾಡುತ್ತಾ ಇದ್ದಾರೆ, ಅವರನ್ನ ನಾನು ಬೇರೆಲ್ಲೋ ದೂರದಲ್ಲಿ ನಿಂತು ನೋಡಿದ ಅನುಭವವಾಯ್ತು. ಅದೊಂದು ಅಲೌಕಿಕ ಅನುಭವ. 9ನೇ ತರಗತಿಯಲ್ಲಿ ಮಿಡ್–ಟರ್ಮ್ ಪರೀಕ್ಷೆಯಲ್ಲಿ ಆರು ವಿಷಯದಲ್ಲಿ ಐದರಲ್ಲಿ ನಪಾಸಾಗಿದ್ದೆ. ಮುಂದಿನ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾದರೆ ನೂರು ರುಪಾಯಿ ಕೊಡುವುದಾಗಿ ಅಣ್ಣ ಹೇಳಿದ್ದರು. ಮುಂದಿನ ಪರೀಕ್ಷೆಯಲ್ಲಿ ಮೂರನೇ ರಾಂಕ್ ಪಡೆದಿದ್ದೆ. ವಿಜ್ಞಾನ ನೂರಕ್ಕೆ ನೂರು ತೆಗೆದಿದ್ದು ಸ್ಮೃತಿಪಟಲದಲ್ಲಿ ಹಸಿರಾಗಿದೆ. 10ನೇ ತರಗತಿಯಲ್ಲಿ ಕ್ಲಾಸ್ ಟೀಚರ್ ವಿಜಯಲಕ್ಷ್ಮಿಯವರು, ಜಿ.ಪಿ. ರಾಜರತ್ನಂ ಅವರ ಮೊಮ್ಮಗಳು. 'ನೀನು ಎಸೆಸ್ಸೆಲ್ಸಿ ಪಾಸಾಗಲು ಸಾಧ್ಯವೇ ಇಲ್ಲ' ಎಂದು ನನ್ನ ಬಗ್ಗೆ ಷರಾ ಹೊರಡಿಸಿದ್ದರು. ಅವರು ಹಾಗೆ ಹೇಳಲು ಕಾರಣವೂ ಇತ್ತು. ಅವರ ಮಾತನ್ನು ಸುಳ್ಳು ಮಾಡಿದ ಸಣ್ಣ ಹೆಮ್ಮೆ ನನ್ನದು.

ನಂತರ ಪಿಯುಸಿಯಲ್ಲಿ ಸಿಕ್ಕವರು ವೆಂಕಟೇಶ್ ಸರ್ (ಐಎಎಸ್ ಪಾಸಾಗಿ ಒಂದೆರಡು ವರ್ಷ ಕೆಲಸ ಮಾಡಿ ನಂತರ ಬೇಡ ಎಂದು ರಾಜೀನಾಮೆ ನೀಡಿ ಮತ್ತೆ ಶಿಕ್ಷಣ ಕ್ಷೇತ್ರಕ್ಕೆ ಬಂದವರು. ಸದ್ಯಕ್ಕೆ ಆಚಾರ್ಯ ಬೆಂಗಳೂರು ಬಿಸಿನೆಸ್ ಸ್ಕೂಲ್‌ನ ನಿರ್ದೇಶಕರು) ಮತ್ತು ಪ್ರಸಾದ್ ಸರ್ (ಪ್ರಸಾದ್‌ರವರು ಐಪಿಎಸ್ ಪಾಸು ಮಾಡಿದ್ದಾರೆ, ಸದ್ಯಕ್ಕೆ 'ಇಂಟರ್ನಲ್ ಸೆಕ್ಯುರಿಟಿ ಕರ್ನಾಟಕ'ದಲ್ಲಿ ಕೆಲಸ ಮಾಡುತ್ತಿದ್ದಾರೆ) ಇವರಿಬ್ಬರ ಗರಡಿಯಲ್ಲಿ ಕಲಿತದ್ದು ಇಂದಿಗೂ ಕಾಯುತ್ತಿದೆ. ಇದು ಬದುಕಿನಲ್ಲಿ ಸಿಕ್ಕ ಮೊದಲ ಟರ್ನಿಂಗ್ ಪಾಯಿಂಟ್. ಇಲ್ಲಿಯವರೆಗೆ ಸಿಕ್ಕ ಗುರುಗಳು ಕೆಟ್ಟವರು ಅಂತಲ್ಲ, ಆದರೆ ಯಾರೂ ಬದುಕನ್ನ ಬದಲಿಸುವ ಮಟ್ಟಿಗೆ ಪ್ರೇರಣೆ ನೀಡಿರಲಿಲ್ಲ ಅಷ್ಟೇ. ಪದವಿಯಲ್ಲಿ ಸಿಕ್ಕವರು ಭಾಸ್ಕರ್ ಮತ್ತು ರಾಮಪ್ಪ ಸರ್. ಬದುಕಿಗೆ ಇವರ ಕೊಡುಗೆಯೂ ಇದೆ. ಬಿಕಾಂ ಫೈನಲ್ ಪರೀಕ್ಷೆ ಮುಗಿಸಿ ಎರಡು ದಿನವಾಗಿತ್ತು ಅಷ್ಟೇ. ಆದರೆ ನನಗೆ ಮನೆಯಲ್ಲಿ ಕುಳಿತು ಅಭ್ಯಾಸವಿಲ್ಲ! ಆಗ ಸಿಕ್ಕವರು ಮಾಧವಮೂರ್ತಿ ಸರ್. ಪರೀಕ್ಷೆ ಫಲಿತಾಂಶ ಬರುವುದಕ್ಕೆ ಮುಂಚೆಯೇ ಇವರಲ್ಲಿ ಸೇರಿದೆ. ಆ ದಿನಗಳಲ್ಲಿ ಕಾಲಿಗೆ ಇದ್ದದ್ದು ಹವಾಯ್ ಚಪ್ಪಲಿ. 'ರಂಗೂ, ಬಾಪ್ಪಾ ಇಲ್ಲಿ' ಎಂದು ಕರೆದು ನೂರರ ಎರಡು ನೋಟು ನೀಡಿ, 'ಹೋಗು ಒಳ್ಳೆ ಚಪ್ಪಲಿ ಖರೀದಿ ಮಾಡು, ಕ್ಲೈಂಟ್ ಜಾಗಕ್ಕೆ ಹೀಗೆಲ್ಲಾ ಹೋಗಬಾರದು' ಎಂದರು. ಆ ನಂತರ ಕೂಡ ಸಮಯ ಸಮಯಕ್ಕೆ ಅವರು ಜೇಬಿಗೆ ಇಡುತ್ತಿದ್ದ ಐವತ್ತು, ನೂರು ರುಪಾಯಿ ಮರೆಯುವುದಾದರೂ ಹೇಗೆ? ಇವತ್ತಿನ ಈ ದಿನ ಕಾಣಲು ಅವರ ಕೊಡುಗೆ ಕೂಡ ದೊಡ್ಡದು. ಸೈಕಲ್ ಹೊಡೆಯಲು ಕಲಿಸಿದ ಸೈಕಲ್ ಶಾಪಿನ ಸತ್ತಿ, ಆಡಿಟ್ ಟಿಕ್ ಹೊಡೆಯುವುದು ಕಲಿಸಿದ ಶ್ರೀಧರ ಮೂರ್ತಿ, ಊರಿನ ಕಾಲುವೆಯಲ್ಲಿ ಸೊರೆ ಬುರುಡೆ ಕಟ್ಟಿ ನೀರಿಗಿಳಿಸಿ ಈಜಾಡಲು ಕಲಿಸಿದ ನಿಂಗಯ್ಯ, ಓಲಾ ಎನ್ನಲು ಬಾರದ ನನಗೆ ಸ್ಪ್ಯಾನಿಷ್ ಕಲಿಸಿದ ಸಹೋದ್ಯೋಗಿ/ಸಹೋದರಿ ಇವಾ, ಇನ್ನೊಬ್ಬ ಸ್ಪ್ಯಾನಿಷ್ ಗುರು ಸಾಲ್ವದೂರ್, ಮೊದಲ ಬಾರಿ ವಿಮಾನ ಏರಿದಾಗ ಸೀಟ್ ಬೆಲ್ಟ್ ಹಾಕಿದ ಕ್ಯಾಥೆ ಪೆಸಿಫಿಕ್‌ನ ಏರ್ ಹೋಸ್ಟೆಸ್... ಓಹ್ ಪಟ್ಟಿ ಬಹಳ ದೊಡ್ಡದು. ಗೊತ್ತಿಲ್ಲದ ವಿಷಯಗಳನ್ನ ಕಲಿಸಿದವರೆಲ್ಲಾ ಗುರುಗಳೇ. ಇದೇ ತಿಂಗಳು ಅಂದರೆ ಜುಲೈ 10ರಂದು ಗುರು ಪೂರ್ಣಿಮೆ. ಈ ಶುಭ ಸಂದರ್ಭದಲ್ಲಿ, ಹೀಗೆ ತೆರೆಮರೆಯಲ್ಲಿ ನಿಂತು ಕಲಿಸುತ್ತಿರುವ ಗುರುಗಳಿಗೂ, ಮುಖ್ಯವಾಹಿನಿಯಲ್ಲಿ ನಿಂತು ಕಲಿಸಿದ, ಕಲಿಸುತ್ತಿರುವ ಎಲ್ಲಾ ಗುರುಗಳಿಗೂ, ಹಾಗೇ ಮನಸ್ಸಿನಲ್ಲೇ ದ್ರೋಣಾಚಾರ್ಯರಂತೆ ನಿಂತು ಕಲಿಸಿದ ಗುರುಗಳಿಗೂ ಗುರು ಪೂರ್ಣಿಮೆಯ ಶುಭಾಶಯಗಳು.

ನಿಜಕ್ಕೂ ಕರಾಳವಾಗಿತ್ತೇ ತುರ್ತುಪರಿಸ್ಥಿತಿ?

ಭಿನ್ನಭಾವ

ರಮಾನಂದ ಶರ್ಮಾ

1975ರ ಜೂನ್ 25ರಂದು ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರು ತುರ್ತುಪರಿಸ್ಥಿತಿ ಹೇರಿ ಪತ್ರಿಕಾ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯವನ್ನು ಹತ್ತಿಕ್ಕಿ, ರಾಜಕೀಯ ಧುರೀಣರನ್ನು ಬಂಧಿಸಿ, ಲಕ್ಷಾಂತರ ಜನರನ್ನು ಜೈಲಿಗೆ ತಳ್ಳಿ, ಪತ್ರಿಕೆಗಳನ್ನು ಸೆನ್ಸಾರ್‌ಗೆ ಒಳಪಡಿಸಿ ಒಂದು ರೀತಿಯ ದಮನಕಾರಿ ಆಡಳಿತಕ್ಕೆ ಶುರುಹಚ್ಚಿದ್ದರು. ಎಲ್ಲಾ ಅಧಿಕಾರವನ್ನು ತಾವೇ ಕೈಗೆತ್ತಿಕೊಂಡಿದ್ದರು. ಈ ಚಟುವಟಿಕೆಯಲ್ಲಿ ಆ ಕಾಲದ ಚಾಣಾಕ್ಷ ವಕೀಲ ಮತ್ತು ಚತುರ ರಾಜಕಾರಣಿ ಸಿದ್ಧಾರ್ಥ ಶಂಕರ ರೇ ನೇಪಥ್ಯದಲ್ಲಿದ್ದು ಕಾನೂನಿನ ಸರಪಳಿಯನ್ನು ಸಡಿಲಗೊಳಿಸುತ್ತಿದ್ದರೆ, ಸಂಜಯ ಗಾಂಧಿ ಆಡಳಿತದಲ್ಲಿ ಇಂದಿರಾರ ಬಲಗೈ ಬಂಟರಾಗಿದ್ದರು.

ದೇಶದಲ್ಲಿ ಏನಾಗುತ್ತಿದೆ ಎನ್ನುವುದರ ಬಗೆಗೆ ಒಂದು ರೀತಿಯ ಗೊಂದಲ ಏರ್ಪಟ್ಟಿತ್ತು, ಪ್ರಜಾಪ್ರಭುತ್ವವು ಸರ್ವಾಧಿಕಾರಕ್ಕೆ ದಾರಿಮಾಡಿಕೊಟ್ಟಿದೆಯೇ ಎನ್ನುವ ಸಂದೇಹ ಕಾಡತೊಡಗಿತ್ತು. ತಮ್ಮ ಆಡಳಿತವನ್ನು, ತಾವು ತೆಗೆದುಕೊಳ್ಳುವ ನಿರ್ಣಯಗಳನ್ನು ವಿರೋಧಿಸುವವರನ್ನು ಇಂದಿರಾ ಗಾಂಧಿಯವರು ದಯ–ದಾಕ್ಷಿಣ್ಯವಿಲ್ಲದೆ ಜೈಲಿಗಟ್ಟಿದ್ದರು. 'ಆನೆ ನಡೆದಿದ್ದೇ ದಾರಿ' ಎನ್ನುವ ರೀತಿಯಲ್ಲಿ ಆಡಳಿತವನ್ನು ನಡೆಸಿಕೊಂಡು ಹೋಗಿದ್ದರು. ಸಂಸತ್ತಿನಲ್ಲಿ ತಮಗಿದ್ದ ಆನೆಬಲದಿಂದ ಹಲವಾರು ಕಾನೂನುಗಳನ್ನು ರೂಪಿಸಿದರು ಮತ್ತು ತಮ್ಮ ಹಾದಿಗೆ ಮುಳ್ಳಾಗಿದ್ದ ಕೆಲವು ಕಾನೂನುಗಳಿಗೆ ತಮಗೆ ಬೇಕಿದ್ದಂತೆ ತಿದ್ದುಪಡಿ ಮಾಡಿಕೊಂಡರು. 'ಇಂದಿರಾ ಗಾಂಧಿಯವರು ಹತಾಶೆ ಮತ್ತು ಅಧಿಕಾರ ಲಾಲಸೆಯಿಂದ ಸಂವಿಧಾನದ ಹತ್ಯೆಮಾಡಿ ತುರ್ತು ಪರಿಸ್ಥಿತಿ ಹೇರಿದ್ದಾರೆ' ಎಂದು ಅವರ ರಾಜಕೀಯ ವಿರೋಧಿಗಳು, ಬುದ್ಧಿಜೀವಿಗಳು ಗಂಟಲು ಹರಿಯುವಂತೆ ಕೂಗಿದರು. ಆದರೆ ಈ ಕೂಗು ಅರಣ್ಯರೋದನವಾಯಿತು. ಇಂದಿರಾ ಇದಕ್ಕೆಲ್ಲ ಜಾಣಕಿವುಡುತನ ತೋರಿದರು. ಉಕ್ಕಿನ ಮಹಿಳೆಯಾಗಿದ್ದ ಅವರು ಯಾವುದೇ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಒತ್ತಡಗಳಿಗೆ, ಸಲಹೆಗಳಿಗೆ ಮಣಿಯಲಿಲ್ಲ. ಪ್ರಜಾಪ್ರಭುತ್ವದ ಉಡುಗೆಯಲ್ಲಿದ್ದ ಅವರ ಕರಾಳ ಸರ್ವಾಧಿಕಾರವು 21 ತಿಂಗಳು ಅಡೆತಡೆಯಿಲ್ಲದೆ ನಡೆಯಿತು. ಆದರೆ ಅಚ್ಚರಿಯೆಂದರೆ, 1977ರ ಮಾರ್ಚ್ 21ರಂದು ತುರ್ತುಪರಿಸ್ಥಿತಿಯನ್ನು ತೆಗೆದಾಗ, 'ಇದನ್ನು ಇನ್ನೂ ಕೆಲಕಾಲ ಮುಂದುವರಿಸಬಾರದಿತ್ತೇ?' ಎಂದು ಕೆಲವರು ಗೊಣಗಿದ್ದುಂಟು; ಈ ಆಡಳಿತ ವೈಖರಿಯನ್ನು ಮೊದಲು ವಿರೋಧಿಸಿದ್ದ ಹಲವರು ಕೊನೆಗೆ ಅವರನ್ನು ಅಪರಾಧಿಯನ್ನಾಗಿ ನೋಡುವುದನ್ನು ಬಿಟ್ಟಿದ್ದರು.

ತುರ್ತು ಪರಿಸ್ಥಿತಿ ಜಾರಿಯಾದ ದಿನವನ್ನು 'ಸಂವಿಧಾನ ಹತ್ಯಾ ದಿವಸ' ಎಂದು ವರ್ಷವಿಡೀ ಆಚರಿಸಲು ಬಿಜೆಪಿಯು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ತುರ್ತು ಪರಿಸ್ಥಿತಿಯ ಕರಾಳತೆಯನ್ನೂ, ಆ ಕಾಲಘಟ್ಟದಲ್ಲಿ ತಾವು ಅನುಭವಿಸಿದ ಯಾತನೆಯನ್ನೂ, ದೇಶವು ಬಳಲಿದ ಬಗೆಯನ್ನೂ ಹಲವರು ನೆನಪಿಸಿಕೊಂಡು ಪತ್ರಿಕೆಗಳಲ್ಲಿ ಸುದೀರ್ಘವಾಗಿ ಬರೆಯುತ್ತಿದ್ದಾರೆ. ಅದರ ಸತ್ಯಾಸತ್ಯತೆ ಬೇರೆ ಮಾತು. ಆ ಕರಾಳ ಅವಧಿಯಲ್ಲಿ ಪತ್ರಿಕಾ ಸ್ವಾತಂತ್ರ್ಯದ ಹರಣವಾಗಿದ್ದನ್ನು ಪ್ರತಿಭಟಿಸಿ ತಮ್ಮ ಅಂದಿನ ಸಂಚಿಕೆಯಲ್ಲಿ ಸಂಪಾದಕೀಯ ಬರಹದ ವಿಭಾಗವನ್ನು ಖಾಲಿ ಇರಿಸಿದ್ದನ್ನು ಕೆಲವು ಪತ್ರಿಕೆಗಳು ತಮ್ಮ ಹಳೆಯ ಕಡತಗಳಿಂದ ಹೆಕ್ಕಿ ತೆಗೆದು, ಇಂದಿನ ಜನಾಂಗದ ಮುಂದೆ ಹರವಿಟ್ಟಿವೆ.

ಆದರೆ ತುರ್ತು ಪರಿಸ್ಥಿತಿಯ ಕರಾಳಮುಖವನ್ನು ಹೀಗೆ ತೋರಿಸುವ ಧಾವಂತದಲ್ಲಿ ಕೆಲವರು, ಇಂಥ ದೊಂದು ಸ್ಥಿತಿಗೆ ಕಾಂಗ್ರೆಸ್ ಪಕ್ಷದ ಹೊರತಾಗಿ ಜನಸಾಮಾನ್ಯರ ವರ್ಗದಿಂದಲೂ ಸಾಕಷ್ಟು 'ಚಂದಾದಾರರಿದ್ದರು' ಎಂಬ ಸತ್ಯವನ್ನು ತೋರಿಸಲಿಲ್ಲ. ತುರ್ತುಸ್ಥಿತಿಯ ಆರಂಭದ ದಿನಗಳಲ್ಲಿ ಗೊಂದಲ, ನಿರಾಶೆ, ಭ್ರಮನಿರಸನ ಮತ್ತು ಇಂದಿರಾ ಗಾಂಧಿಯವರ ಆಡಳಿತ ವೈಖರಿ ಬಗೆಗೆ ಭಾರಿ ಆಕ್ರೋಶ ವ್ಯಕ್ತವಾದರೂ, ಜನಸಾಮಾನ್ಯರ ಬದುಕು ಎಂದಿನಂತೆ ಇತ್ತು. ಯಾರಿಗೂ ಯಾವ ವ್ಯತ್ಯಾಸ ಅಥವಾ ಬದಲಾವಣೆ ಕಾಣಲಿಲ್ಲ, ವಾಸ್ತವದಲ್ಲಿ ಅದು ಎಂದಿನ ಇನ್ನೊಂದು ದಿನವಾಗಿತ್ತು. ಅಚ್ಚರಿಯೆಂಬಂತೆ ರೈಲುಗಳು, ಬಸ್ಸುಗಳು ಮತ್ತು ವಿಮಾನಗಳು ಸಮಯಕ್ಕೆ ಸರಿಯಾಗಿ ಓಡತೊಡಗಿದ್ದವು. ಅವುಗಳ ನಿಲ್ದಾಣಗಳಲ್ಲಿ ಸ್ವಚ್ಛತೆ ಅನಾವರಣಗೊಳ್ಳತೊಡಗಿತ್ತು. ಕಚೇರಿಗಳಿಗೆ ನೌಕರರು ಸಮಯಕ್ಕೆ ಸರಿಯಾಗಿ ಬರತೊಡಗಿದ್ದರು, ಅವರ ಸಂಪೂರ್ಣ ಹಾಜರಾತಿಯನ್ನು ಅಲ್ಲಿ ಕಾಣಬಹುದಿತ್ತು. 'ಇಂದಲ್ಲ, ನಾಳೆ ಬನ್ನಿ' ಎಂಬ ಮಾತುಗಳು ಅಲ್ಲಿ ಕಡಿಮೆಯಾಗಿದ್ದವು. ಆಡಳಿತಯಂತ್ರ ಚುರುಕಾಗಿತ್ತು ಮತ್ತು ಶಿಸ್ತು ಗೋಚರಿಸತೊಡಗಿತ್ತು. ಕೆಂಪುಬಾವುಟ ಹಿಡಿದು, ಮುಷ್ಟಿಯನ್ನು ಮೇಲಕ್ಕೆತ್ತಿ 'ಮುರ್ದಾಬಾದ್ ಮುರ್ದಾಬಾದ್, ಹಮಾರಿ ಮಾಂಗ್ ಪೂರಿ ಕರೋ, ನಹೀ ತೋ ಕುರ್ಸೀ ಖಾಲಿ ಕರೋ' ಮುಂತಾದ, ಕಾರ್ಮಿಕ ವರ್ಗದವರ ಘೋಷಣೆಗಳು ದಿಢೀರ್ ಎಂದು ನಿಂತಿದ್ದವು. ಒಟ್ಟಾರೆಯಾಗಿ ಹೇಳುವುದಾದರೆ, ಮುಷ್ಕರ, ಹರತಾಳ, ಬಂದ್, ಪ್ರತಿಭಟನೆ, ಪಾದಯಾತ್ರೆ, ರಾಜಕೀಯ ಪಕ್ಷಗಳ ರ‍್ಯಾಲಿಗಳು ಮಾಯವಾಗಿದ್ದವು. ಜನಸಾಮಾನ್ಯರ ದಿನಬಳಕೆಯ ವಸ್ತುಗಳ ಬೆಲೆ ನಿಯಂತ್ರಣದಲ್ಲಿತ್ತು ಮತ್ತು ಅವರ ಜೀವನ ಅಷ್ಟರಮಟ್ಟಿಗೆ ಸುಗಮವಾಗಿತ್ತು.

ತುರ್ತು ಪರಿಸ್ಥಿತಿಯ ವೇಳೆ ಬದುಕು ದುಸ್ತರವಾಗಿದ್ದು ವಿಪಕ್ಷಗಳಿಗೆ, ಅಧಿಕಾರವಿಲ್ಲದೇ ಚಡಪಡಿಸುತ್ತಿದ್ದ ರಾಜಕಾರಣಿಗಳಿಗೆ, ಗಲಭೆಕೋರರಿಗೆ, ಕಪ್ಪುಹಣದಲ್ಲಿ 'ಡೀಲ್' ಮಾಡುವವರಿಗೆ, ಕರ್ತವ್ಯವನ್ನು ಮರೆತು ಹಕ್ಕುಗಳನ್ನು ಮಾತ್ರ ಪ್ರತಿಪಾದಿಸುವವರಿಗೆ, ದೇಶದ ಕಾನೂನನ್ನು ಉಲ್ಲಂಘಿಸುವವರಿಗೆ. ಭ್ರಷ್ಟಾಚಾರಿಗಳು ಮತ್ತು ಕ್ರಿಮಿನಲ್‌ಗಳ ಸದ್ದಡಗಿತ್ತು, ನ್ಯಾಯ–ನೀತಿ–ಧರ್ಮ–ಕಾನೂನಿನ ಚೌಕಟ್ಟಿನೊಳಗೆ ಬದುಕುವವರಿಗೆ ಬದುಕಿನಲ್ಲಿ ಆಶಾಭಾವನೆ ಮೂಡಿತ್ತು. ಕೇವಲ ಆರೋಪ–ಪ್ರತ್ಯಾರೋಪ ಮಾಡುತ್ತಾ ದೇಶದಲ್ಲಿ ಹುಯಿಲೆಬ್ಬಿಸುತ್ತಿದ್ದ ರಾಜಕಾರಣಿಗಳಿಗೆ ಬದುಕು ದುಸ್ತರವಾಗಿತ್ತು, 'ಒಲ್ಲದ ಗಂಡನಿಗೆ ಮೊಸರಲ್ಲೂ ಕಲ್ಲು' ಎನ್ನುವಂತೆ ಸರಕಾರದ ಎಲ್ಲಾ ಕಾರ್ಯಗಳಲ್ಲಿ ತಪ್ಪುಹುಡುಕುತ್ತಿದ್ದ ಬುದ್ಧಿಜೀವಿಗಳ ಬಾಯಿಗೆ ಬೀಗ ಬಿದ್ದಿತ್ತು.

ತುರ್ತು ಪರಿಸ್ಥಿತಿಯು ಕೆಲವರಿಗೆ ನೋವು ಕೊಟ್ಟಿರಬಹುದು. ಆದರೆ, ಬಹುತೇಕರು ಆರೋಪಿಸುವಂತೆ ಅದು ಅಷ್ಟು ಕರಾಳವಾಗಿರಲಿಲ್ಲ, ದೇಶವನ್ನು ಲೂಟಿಮಾಡಿ ಹೋದರೂ ಕೆಲವರು ಇಂಗ್ಲಿಷರ ಆಡಳಿತವನ್ನು ನೆನಪಿಸಿಕೊಂಡು ಶ್ಲಾಘಿಸುವಂತೆ, ಕೆಲವು ಖಂಡನೀಯ ಕ್ರಮಗಳ (ಉದಾಹರಣೆಗೆ ಬಲವಂತವಾಗಿ ಸಂತಾನಶಕ್ತಿಯ ಹರಣಕ್ಕೆ ಮುಂದಾಗಿದ್ದು) ಹೊರತಾಗಿಯೂ ತುರ್ತು ಪರಿಸ್ಥಿತಿ ಅವಧಿಯಲ್ಲಿನ ಆಡಳಿತವು ಹಲವರ ಮೆಚ್ಚುಗೆ ಗಳಿಸಿತ್ತು. ದೇಶವು ತ್ವರಿತವಾಗಿ ಅಭಿವೃದ್ಧಿ ಹೊಂದಬೇಕಾದರೆ ಇಂಥದೊಂದು ಕ್ರಮ ಅನಿವಾರ್ಯ ಎಂಬ ಹೊಸ ವಿಶ್ಲೇಷಣೆಗೆ ಅದು ನಾಂದಿ ಹಾಡಿತ್ತು. ಸಂವಿಧಾನವು ಜನರಿಗೆ ಹಕ್ಕುಗಳೊಂದಿಗೆ ಕರ್ತವ್ಯವನ್ನು ಕೂಡ ಕೊಟ್ಟಿದೆ ಎಂಬುದನ್ನು ಇಂದಿರಾ ಗಾಂಧಿಯವರು ಜನರಿಗೆ ನೆನಪಿಸಿದ್ದರು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಅಧಿಕಾರ ದುರುಪಯೋಗವಾಗಿತ್ತು, ದಮನಕಾರಿಯಾಗಿತ್ತು ಎನ್ನುವುದು ಸತ್ಯವಾದರೂ, ಪೊಲೀಸರಿಂದ ಅಮಾಯಕರಿಗೆ ತೊಂದರೆಯೇನೂ ಆಗಿರಲಿಲ್ಲ (ಆಗ ದೆಹಲಿಯಲ್ಲಿದ್ದ ನಾನು ಪೊಲೀಸರ ಕಾರ್ಯಾಚರಣೆಯನ್ನು ಪ್ರತ್ಯಕ್ಷ ಕಂಡಿದ್ದುಂಟು). ತುರ್ತು ಪರಿಸ್ಥಿತಿ ಕಾಲಘಟ್ಟದ ಆಡಳಿತವನ್ನು ಖಂಡಿಸುವ ಧಾವಂತದಲ್ಲಿ ಮೇಲೆ ಉಲ್ಲೇಖಿಸಿದ ಒಂದಷ್ಟು ಸಕಾರಾತ್ಮಕ ಅಂಶಗಳು ಹೊರಬರದಿರುವುದು ಆಶ್ಚರ್ಯ.

(ಲೇಖಕರು, ರಾಜಕೀಯ ವಿಶ್ಲೇಷಕರು)

ಮಮ್ದಾನಿ: ಅಮೆರಿಕದ ಬೀದಿಗಳಿಂದ ಎದ್ದ ಕೋಪ ಸಂದೇಶ



ಅಕ್ಬರ್‌ನಾಮಾ

ಎಂ.ಜೆ.ಅಕ್ಬರ್
vveditoped@gmail.com

ಅಮೆರಿಕದ ಗಾಳಿಯಲ್ಲಿ ಈಗಲೂ ಅರವತ್ತರ ದಶಕದ ಕೊನೆಕೊನೆಯ ವಿಚಿತ್ರ ನಿಡುಸುಯ್ಯುವಿಕೆಯೊಂದು ಹರಿದಾಡುತ್ತಿದೆ. ಶಾಂತಿ ಸ್ಥಾಪನೆಯ ಪ್ರಕ್ರಿಯೆಗೆ ಮಿಲಿಟರಿ ಬಳಕೆ ಅನಿವಾರ್ಯ ಎಂದು ನಂಬುವ ಕಟ್ಟರ್ ಬಲಪಂಥೀಯ ಚಿಂತನೆಯೊಂದು ಶ್ವೇತಭವನದ ಕೋಣೆಯೊಳಗೆ ಸುಳಿದಾಡುವುದು ಒಂದೆಡೆಯಾದರೆ, ಇನ್ನೊಂದೆಡೆ ಯುದ್ಧದಲ್ಲಿ ಸಂತ್ರಸ್ತರಾದವರ ಬಗ್ಗೆ ಅತ್ಯಂತ ಕಕ್ಕುಲಾತಿಯಿಂದ ಉರಿಯುವ ಬೆಂಕಿಯೊಂದು ಅದೇ ಶ್ವೇತಭವನದ ಕ್ಯಾಂಪಸ್‌ನಲ್ಲೇ ಕಾಣಸಿಗುತ್ತದೆ. ಹಿಂದೆ ರಿಚರ್ಡ್ ನಿಕ್ಸನ್ ಮತ್ತು ವಿಯೆಟ್ನಾಂ ಯುದ್ಧ; ಈಗ ಡೊನಾಲ್ಡ್ ಟ್ರಂಪ್ ಮತ್ತು ಗಾಜಾ ಹಿಂಸಾಚಾರ. ಸಮಾನಾಂತರಗಳು ಸಮಾನವಾಗಿರುವುದು ಅಪರೂಪ. ಅವು ಸಮಾನವಾಗಿರಲು ಸಾಧ್ಯ ಕೂಡ ಇಲ್ಲ, ಏಕೆಂದರೆ ಇತಿಹಾಸ ಮತ್ತು ಭೂಗೋಳದ ನಡುವಿನ ಸಂಘರ್ಷ ಯಾವಾಗಲೂ ವಿಭಿನ್ನವಾಗಿಯೇ ಇರುತ್ತದೆ. ಟ್ರಂಪ್ ಬಳಿ ಆಗಾಗ ಪ್ರಾರ್ಥಿಸಲು, ಪದೇ ಪದೆ ಮನವೊಲಿಸಲು ಹಾಗೂ ನಿರಂತರವಾಗಿ ರಾಜತಾಂತ್ರಿಕ ಜಾಣ್ಮೆಯನ್ನು ಮೆರೆಯಲು ಹೆನ್ರಿ ಕಿಸಿಂಜರ್ ಇಲ್ಲ. ಆದರೆ ಟ್ರಂಪ್ ತಮಗೆ ತಾವೇ ಕಿಸಿಂಜರ್ ಆಗುತ್ತಾರೆ ಎಂಬುದು ಗಮನಾರ್ಹ ವಿಚಾರ.

ಬೀದಿಗಳು ಹೊತ್ತಿ ಉರಿಯುತ್ತಿದ್ದಾಗ ಕನ್ನಡಿ ಯಾವಾಗಲೂ ಹೆಚ್ಚು ಸ್ಪಷ್ಟವಾಗಿ ಕಾಣಿಸುತ್ತದೆ. ಆ ಉರಿ ಈಗ ಅಟ್ಲಾಂಟಿಕ್ ಸಮುದ್ರವನ್ನೂ ದಾಟಿ ಯುರೋಪ್‌ಗೆ ಹೋಗಿ ತಲುಪಿದೆ. ಗಾಜಾ ಪಟ್ಟಿಯಲ್ಲಿ ಆಹಾರದ ಪೊಟ್ಟಣಕ್ಕಾಗಿ ಓಡುವ ಜನರು ಬಾಂಬ್ ಸ್ಫೋಟದಲ್ಲಿ ಛಿದ್ರಗೊಂಡು ಮಾಂಸದ ಮುದ್ದೆಯಾಗಿ ಹಾರುವ ಹಾಗೂ ಮಕ್ಕಳು ಅಸಹಾಯಕರಾಗಿ ಸಾವಿರಾರು ಸಂಖ್ಯೆಯಲ್ಲಿ ಸಾಯುವ ಭಯಾನಕ ಚಿತ್ರಗಳು ಜಗತ್ತಿನೆಲ್ಲೆಡೆ ಹರಿದಾಡುತ್ತಿರುವಾಗ ಅದರಿಂದ ತನ್ನ ವಿಶ್ವಾಸಾರ್ಹತೆಗೆ ದೀರ್ಘಾವಧಿಯಲ್ಲಿ ಆಗುವ ಹಾನಿಯನ್ನು ಲೆಕ್ಕಹಾಕಿದರೆ ಕ್ರಮೇಣ ಇಸ್ರೇಲ್‌ಗೇ ಶಾಕ್ ಆಗಬಹುದು. ಇಸ್ರೇಲಿನಲ್ಲಿ ನಡೆಯುತ್ತಿದ್ದ ಸಂಗೀತೋತ್ಸವದ ಮೇಲೆ ಹಮಾಸ್ ಬಂಡುಕೋರರು ಭೀಕರ ಹಾಗೂ ಅಕ್ಷಮ್ಯ ದಾಳಿ ನಡೆಸಿ ನೂರಾರು ಜನರನ್ನು ಕೊಂದಾಗ ಇಡೀ ಜಗತ್ತು ಇಸ್ರೇಲ್‌ನ ಪರ ನಿಂತಿತ್ತು. ಆದರೆ ಈಗ ಬ್ರಿಟನ್ನಿನ ಅತ್ಯಂತ ಜನಪ್ರಿಯ ಗ್ಲಾಸ್ಟನ್‌ಬರಿ ಸಂಗೀತೋತ್ಸವದಲ್ಲಿ 'ಐಡಿಎಫ್ ಸಾಯಲಿ' ಎಂಬ ಪ್ರತಿಧ್ವನಿ ಮೊಳಗುತ್ತಿದೆ. ಸ್ಟಾರ್ ಸಂಗೀತಗಾರರು ಪ್ಯಾಲೆಸ್ತೀನ್‌ನ ಸಂಕಷ್ಟವನ್ನು ಇಡೀ ಜಗತ್ತಿಗೆ ಕೂಗಿ ಹೇಳುತ್ತಿದ್ದಾರೆ. ಬ್ರಿಟನ್ನಿನ ಅಧಿಕಾರಿಗಳು ಈ ದಾಳಿಯ ವಿಡಿಯೋ ತುಣುಕು ಬಿಬಿಸಿಗೆ ಸಿಕ್ಕಿದ್ದು ಹೇಗೆ ಎಂದು ತಲೆಕೆಡಿಸಿಕೊಳ್ಳುತ್ತಿದ್ದಾರೆ.

ಪ್ರಜಾಪ್ರಭುತ್ವದಲ್ಲಿ ಸರಕಾರಗಳು ಬೀದಿ ಹೋರಾಟದ ಬಿಸಿ ತಟ್ಟಿಸಿಕೊಳ್ಳದೆ ಇರಲು ಸಾಧ್ಯವಿಲ್ಲ. ಐರ್ಲೆಂಡ್ ದೇಶ ಇಸ್ರೇಲ್‌ನಿಂದ ಆಮದು ವ್ಯವಹಾರಗಳನ್ನು ನಿಷೇಧಿಸಿದೆ. ಸ್ಪೇನ್ ಮತ್ತು ದಕ್ಷಿಣ ಆಫ್ರಿಕಾ ದೇಶಗಳು ಇಸ್ರೇಲ್ ಬಗ್ಗೆ ಆಕ್ರೋಶ ವ್ಯಕ್ತಪಡಿಸಿವೆ. ಈಗ, ಪ್ಯಾಲೆಸ್ತೀನ್‌ನ ಹೋರಾಟವನ್ನು ಹೊಗಳಿದ ಮೇಲೂ ನ್ಯೂಯಾರ್ಕ್ ನಗರದಲ್ಲಿ ಜಗತ್ತಿನ ಅತ್ಯಂತ ಶಕ್ತಿಶಾಲಿ ಮೇಯರ್ ಹುದ್ದೆಗೆ ಡೆಮಾಕ್ರಟಿಕ್ ಪಕ್ಷದಿಂದ ಸಂಪೂರ್ಣ ಹೊರಗಿನ ವ್ಯಕ್ತಿಯೊಬ್ಬ ಪ್ರಾಥಮಿಕ ಆಯ್ಕೆ ಪ್ರಕ್ರಿಯೆಯಲ್ಲಿ ಜಯ ಗಳಿಸಿದ್ದಾನೆ. ಆತ ಜೊಹ್ರಾನ್ ಮಮ್ದಾನಿ. ಈಗ ನ್ಯೂಯಾರ್ಕ್ ಮೇಯರ್ ಚುನಾವಣೆಯಲ್ಲಿ ಅತ್ಯಂತ ಪ್ರಬಲ ಹುರಿಯಾಳು. ಜನರಿಗೂ ಆತ ಅಚ್ಚುಮೆಚ್ಚು. ಆದರೆ, ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿದ್ದ ಆ್ಯಂಡ್ರೂ ಕೌಮೋ ಎಂಬ ರಾಜಕುಮಾರ ಕಮ್ ವಕೀಲನನ್ನು ಜೊಹ್ರಾನ್ ಮಮ್ದಾನಿ ಸೋಲಿಸಿದ್ದಕ್ಕೆ ಇದೇ ಪ್ರಮುಖ ಕಾರಣವೇನಲ್ಲ. ಎಲ್ಲರಿಗೂ ಗಂಟೆಗೆ 30 ಡಾಲರ್ ಕನಿಷ್ಠ ವೇತನ, ಸಾರ್ವತ್ರಿಕ ಮಕ್ಕಳ ಆರೈಕೆ ಯೋಜನೆ, ಉಚಿತ ಬಸ್ ಪ್ರಯಾಣ ಹಾಗೂ ಬಾಡಿಗೆ ಮೊತ್ತದ ಮೇಲೆ ಮಿತಿ ಹೇರುವುದೇ ಮೊದಲಾದ ಸೌಕರ್ಯಗಳನ್ನು ಜನರಿಗೆ ನೀಡುವ ಭರವಸೆಯನ್ನು ಮಮ್ದಾನಿ ನೀಡುತ್ತಿದ್ದಾರೆ. ಅದಕ್ಕೆ ಬೇಕಾದ ಹಣ ಸಂಗ್ರಹಿಸಲು ಶತಕೋಟ್ಯಧಿಪತಿಗಳು ಮತ್ತು ಕೋಟ್ಯಧೀಶರಿಗೆ ದುಬಾರಿ ತೆರಿಗೆ ವಿಧಿಸುವ ಚಿಂತನೆ ನಡೆಸಿದ್ದಾರೆ. ಅದರ ಜತೆಗೆ, ನ್ಯೂಯಾರ್ಕ್ ನಗರಕ್ಕೆ ಇಸ್ರೇಲಿನ ಪ್ರಧಾನಮಂತ್ರಿ ಬೆಂಜಮಿನ್ ನೆತನ್ಯಾಹು ಕಾಲಿಟ್ಟರೆ ಬಂಧಿಸುವುದಾಗಿಯೂ ಹೇಳಿಕೊಂಡಿದ್ದಾರೆ. ಇದನ್ನೆಲ್ಲ ಕೇಳಿದ ಮೇಲೆ ಡೊನಾಲ್ಡ್ ಟ್ರಂಪ್ ಸುಮ್ಮನಿರುತ್ತಾರಾ? ಮಮ್ದಾನಿ ಒಬ್ಬ ಕಮ್ಯುನಿಸ್ಟ್ ಹುಚ್ಚ ಎಂದು ವಾಗ್ದಾಳಿ ನಡೆಸಿದ್ದಾರೆ. ಮಮ್ದಾನಿಯನ್ನು ಜನರು ಆಯ್ಕೆ ಮಾಡಿದರೆ ಮತ್ತು ಮೇಯರ್ ಆದಮೇಲೆ ಅವರೇನಾದರೂ ಈಗ ಹೇಳುತ್ತಿರುವುದನ್ನೇ ಕಾರ್ಯರೂಪಕ್ಕೆ ಇಳಿಸಿದರೆ ನ್ಯೂಯಾರ್ಕ್ ನಗರಕ್ಕೆ ನೀಡುವ ಅನುದಾನದಲ್ಲಿ 100 ಬಿಲಿಯನ್ ಡಾಲರ್ ಕಡಿತಗೊಳಿಸುವುದಾಗಿಯೂ ಟ್ರಂಪ್ ಬೆದರಿಕೆ ಹಾಕಿದ್ದಾರೆ.

ತನಗೆ ರೆವರೆಂಡ್ ಮಾರ್ಟಿನ್ ಲೂಥರ್ ಕಿಂಗ್ ಅವರೇ ಸ್ಫೂರ್ತಿಯೆಂದು ಮಮ್ದಾನಿ ಹೇಳಿಕೊಳ್ಳುತ್ತಾರೆ. ಅಲ್ಲಿಗೆ, ಅರವತ್ತರ ದಶಕದ ಜತೆಗೆ ಅವರ ವಿಷಯದಲ್ಲಿದ್ದ ಕಂದಕ ಕೂಡ ಮುಚ್ಚಿದಂತಾಯಿತು.

• • •

ತಲೆಬಾಗಿ ಸೇವೆಗೆ ನಿಂತ ಮಹಾರಾಜನ ಲೋಗೋವನ್ನು ಏರ್ ಇಂಡಿಯಾ ಬದಲಿಸಿಕೊಳ್ಳುವ ಸಮಯ ಬಂದಿದೆ. ಕಣ್ಣೀರು ಸುರಿಸುವ ಮೊಸಳೆಯ ಲೋಗೋ ಈಗ ಏರ್ ಇಂಡಿಯಾಕ್ಕೆ ಚೆನ್ನಾಗಿ ಹೊಂದುತ್ತದೆ. ನಮ್ಮಲ್ಲಿ ಬಹುತೇಕರು ಮೊಸಳೆಯ ಕಣ್ಣೀರನ್ನು ನೋಡಿರುವುದಿಲ್ಲ. ಆದರೆ, ಏರ್ ಇಂಡಿಯಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕ್ಯಾಂಪೆಲ್ ವಿಲ್ಸನ್ ಜೂನ್ 12ರಂದು ಅಹಮದಾಬಾದ್‌ನಲ್ಲಿ ವಿಮಾನ ಪತನಗೊಂಡ ನಂತರ ಕಣ್ಣೀರು ಹಾಕಿದ್ದನ್ನು ನೋಡಿದ್ದೇವಲ್ಲವೆ? ಮೊಸಳೆ ಕಣ್ಣೀರನ್ನು ನೋಡಿದಂತೆಯೇ ಆಯಿತು ಬಿಡಿ.

ಆ ಕಣ್ಣೀರನ್ನು ಅಕ್ಷರ ರೂಪಕ್ಕೆ ಇಳಿಸಿ ಏರ್ ಇಂಡಿಯಾದ ಮಹಾರಾಜ ಕ್ಲಬ್‌ಗೆ ಸಂದೇಶವೊಂದನ್ನು ಕಳುಹಿಸಿಕೊಡಲು ಅವರು ಹೆಚ್ಚುಕಮ್ಮಿ ಒಂದು ವಾರ ತೆಗೆದುಕೊಂಡರು. ಕೃತಿಚೌರ್ಯಕ್ಕಿಂತ ದೊಡ್ಡ ಅಪ್ರಾಮಾಣಿಕತೆ ಇನ್ನೊಂದಿಲ್ಲ. ವರದಿಗಳ ಪ್ರಕಾರ ಕ್ಯಾಂಪೆಲ್ ಬರೆದ ಪತ್ರದಲ್ಲಿ ಅರ್ಧದಷ್ಟು ವಾಕ್ಯಗಳು ವಾಷಿಂಗ್ಟನ್ ಡಿ.ಸಿ.ಯಲ್ಲಿ ಅಮೆರಿಕನ್ ಏರ್‌ಲೈನ್ಸ್‌ನ ವಿಮಾನ ಮಿಲಿಟರಿ ಹೆಲಿಕಾಪ್ಟರ್‌ಗೆ ಡಿಕ್ಕಿ ಹೊಡೆದು 67 ಜನರು ಮೃತಪಟ್ಟ ದುರಂತದ ಬಳಿಕ ಆ ಏರ್‌ಲೈನ್ಸ್‌ನ ಸಿಇಒ ರಾಬರ್ಟ್ ಇಸೋಮ್ ಬರೆದಿದ್ದ ಪತ್ರದಿಂದ ಅನಾಮತ್ತಾಗಿ 'ಕಟ್ ಆ್ಯಂಡ್ ಪೇಸ್ಟ್' ಮಾಡಿದ್ದ ವಾಕ್ಯಗಳಾಗಿದ್ದವು.

ದುರಂತಗಳು ಭಯಾನಕವಾಗಿರುತ್ತವೆ. ಯಾವುದೇ ಏರ್‌ಲೈನ್ಸ್‌ನ ಅಧಿಕಾರಿಯೂ ವಿಮಾನ ಅಪಘಾತವಾಗಲಿ ಎಂದು ಬಯಸುವುದಿಲ್ಲ. ಆದರೆ, ಏರ್ ಇಂಡಿಯಾದ ಸಿಇಒ ಕ್ಯಾಂಪೆಲ್ ಹಾಕಿದ ಕಣ್ಣೀರು ನಿಜವಾಗಿಯೂ ಮೊಸಳೆ ಕಣ್ಣೀರೇ. ಏಕೆಂದರೆ, ಒಂದು ಕಾಲದಲ್ಲಿ ದೇಶದ ಹೆಮ್ಮೆಯ ಏರ್‌ಲೈನ್ಸ್ ಆಗಿದ್ದ ಏರ್ ಇಂಡಿಯಾ ಈಗ ತನ್ನ ಸೇವೆ ಮತ್ತು ಮ್ಯಾನೇಜ್‌ಮೆಂಟ್ ಎರಡೂ ಕ್ಷೇತ್ರದಲ್ಲಿ ದಿನದಿಂದ ದಿನಕ್ಕೆ ಅವಸಾನದತ್ತ ಸಾಗುತ್ತಿದೆ. ಸರಕಾರಿ ಸ್ವಾಮ್ಯದಲ್ಲಿದ್ದ ಕಂಪನಿಯ ಚುಕ್ಕಾಣಿ ಖಾಸಗಿ ಸಂಸ್ಥೆಗೆ ಬಂದ ಮೇಲೂ ಹೆಚ್ಚು ಬದಲಾವಣೆ ಆಗಿಲ್ಲ. ಉದ್ಯಮ ಲೋಕದ ದಿಗ್ಗಜ ಜೆಆರ್‌ಡಿ ಟಾಟಾ ಅವರ ಕನಸಿನ ಕೂಸು ಏರ್ ಇಂಡಿಯಾ ಆಗಿತ್ತು. ನಾನೊಮ್ಮೆ ಜೆಆರ್‌ಡಿಯನ್ನು ಭೇಟಿಯಾಗಿದ್ದೆ. ಅದೊಂದು ಪೂರ್ವಕೃತ ಪುಣ್ಯ. ಅವರು ಭಾರತದ ಹೀರೋ ಆಗಿದ್ದರು. ಅವರ ನೆನಪು ದೇಶಕ್ಕೆ ಸದಾ ಇರುತ್ತದೆ. ಆದರೆ ಅವರ ಪರಂಪರೆಗೆ ಈಗ ಧಕ್ಕೆ ಬಂದಿದೆ.

ಹಿಂದೆ ಮನೆಮಾತಾಗಿದ್ದ ಏರ್ ಇಂಡಿಯಾ ಇವತ್ತು ಎಂಥ ಅಧೋಗತಿಗೆ ಸಾಗಿದೆ ಎಂಬುದನ್ನು ತಿಳಿಯಲು ಯಾವುದೇ ತನಿಖೆ ನಡೆಸುವ ಅಗತ್ಯವಿಲ್ಲ. ಏರ್ ಇಂಡಿಯಾದಲ್ಲಿ ಪ್ರಯಾಣಿಸಿದ ಅನುಭವವಿದ್ದರೆ ಸಾಕು, ನಿಮಗೆ ಎಲ್ಲವೂ ಅರ್ಥವಾಗುತ್ತದೆ. ಅಹಮದಾಬಾದ್ ದುರಂತ ಘಟಿಸುವುದಕ್ಕೆ ಕೆಲ ದಿನಗಳಿದ್ದಾಗ ನಾವು ಏರ್ ಇಂಡಿಯಾದಲ್ಲಿ ವಿಯೆನ್ನಾದಿಂದ ದೆಹಲಿಗೆ ಪ್ರಯಾಣಿಸಿದ್ದೆವು. ನಾವು ಕುಳಿತ ಮೂಲೆಯ ಕಡೆಗೆ ಕಣ್ಣೆತ್ತಿಯೂ ನೋಡದೆ ಅಲ್ಲಿದ್ದ ಸಿಬ್ಬಂದಿ ಬೇರೇನೇನೋ ಕೆಲಸ ಹಾಗೂ ಹರಟೆಯಲ್ಲಿ ನಿರತರಾಗಿದ್ದರು. ತಾಳ್ಮೆಗೂ ಒಂದು ಮಿತಿಯಿದೆಯಲ್ಲವೆ. ನನ್ನ ಪಕ್ಕ ಕುಳಿತಿದ್ದವರಿಗೆ ನಿದ್ದೆಗೂ ಮುನ್ನ ಸಣ್ಣದೊಂದು ಊಟ ಬೇಕಿತ್ತು. ಎರಡು ತಾಸುಗಳ ಕಾಲ ಸಿಬ್ಬಂದಿಗಾಗಿ ಕಾದು ಕಾದು ಸುಸ್ತಾಗಿ ಕೊನೆಗೆ ಇವರೇ ಎದ್ದು ಹೋಗಿ, 'ನಾವೇನು ಪಾಪ ಮಾಡಿದ್ದೇವೆ ಎಂದು ಈ ಕಡೆ ಅಪ್ಪಿತಪ್ಪಿಯೂ ನೀವು ನೋಡುತ್ತಿಲ್ಲ' ಎಂದು ಕೇಳಿದರು. ಅವರಿಂದ ಅದೇನು ಉತ್ತರ ಬಂತೋ ಗೊತ್ತಿಲ್ಲ. ಇವರಿಗೆ ತುಂಬಾ ಕಿರಿಕಿರಿಯಾಗಿತ್ತು. ಅವರು ಎಷ್ಟು ತಾಳ್ಮೆಗೆಟ್ಟಿದ್ದರು ಅಂದರೆ, ಅವರಿಗೀಗ ಊಟ ಬೇಕಿರಲಿಲ್ಲ. ತಮ್ಮ ಸೀಟು ಹಾಸಿಗೆಯ ರೀತಿ ಹಿಂದೆ ಚಾಚಿಕೊಳ್ಳುತ್ತಿಲ್ಲ ಎಂಬ ಏಕೈಕ ಸಮಸ್ಯೆಗೆ ಅವರು ಪರಿಹಾರ ಹುಡುಕುತ್ತಿದ್ದರು. ಅವರ ಸೀಟಿನ ಹಿಂಜ್ ಮುರಿದುಹೋಗಿತ್ತು. ಬಿಸಿನೆಸ್ ಕ್ಲಾಸ್ ಸೀಟು ಅದು. ಹಾಗಂತ ಅದು ವಿಯೆನ್ನಾದಲ್ಲಿ ಮುರಿದಿರಲಿಲ್ಲ. ಭಾರತದಿಂದ ವಿಮಾನ ಹೊರಡುವುದಕ್ಕೂ ಮೊದಲೇ ಮುರಿದುಹೋಗಿತ್ತು. ಆದರೂ ಸಿಬ್ಬಂದಿ ತಲೆಕೆಡಿಸಿಕೊಂಡಿರಲಿಲ್ಲ. ಸೀಟು ಮುರಿದಿದ್ದರೂ ವಿಮಾನ ಹಾರುತ್ತಲೇ ಇರಬೇಕು ಎಂಬುದು ಮ್ಯಾನೇಜ್‌ಮೆಂಟಿನ ನೀತಿಯಾಗಿತ್ತು. ಕೊನೆಯ ಪಕ್ಷ ಆ ಸೀಟನ್ನು ಖಾಲಿ ಬಿಡುವುದಕ್ಕೂ ಅವರು ಮನಸ್ಸು ಮಾಡಿರಲಿಲ್ಲ. ನನ್ನ ಸ್ನೇಹಿತರಿಗೆ ಇದಕ್ಕೆಲ್ಲ ಯಾವುದೇ ಸ್ಪಷ್ಟನೆ ಸಿಗಲಿಲ್ಲ. ಏಕೆಂದರೆ ಏರ್ ಇಂಡಿಯಾ ಬಳಿ ಆ ನಿರ್ಲಕ್ಷ್ಯಕ್ಕೆ ಯಾವುದೇ ಸ್ಪಷ್ಟನೆ ಇರಲಿಲ್ಲ. ವಿಮಾನದಲ್ಲಿ ಪ್ರಯಾಣಿಕರು ಹೇಳುವ ದೂರುಗಳಿಗೆ ಪರಿಹಾರ ಸಿಗುವುದು ಕಡಿಮೆ. ಹೆಚ್ಚಿನ ಪ್ರಯಾಣಿಕರು ತಮ್ಮ ಊರು ಬಂದಾಗ ಇಳಿದು ಸುಮ್ಮನೆ ಹೋಗಿಬಿಡುತ್ತಾರೆ. ದೂರನ್ನು ಮೇಲ್ಮಟ್ಟಕ್ಕೆ ಕೊಂಡೊಯ್ದು ಪರಿಹಾರ ಪಡೆದುಕೊಳ್ಳುವಷ್ಟು ತಾಳ್ಮೆ ಬಹುತೇಕರಿಗೆ ಇರುವುದಿಲ್ಲ. ನಾನಿದನ್ನು ಬರೆಯುತ್ತಿರುವ ಹೊತ್ತಿಗೆ ಟೋಕಿಯೋದಿಂದ ದೆಹಲಿಗೆ ಬರಬೇಕಿದ್ದ ಏರ್ ಇಂಡಿಯಾ ಬೋಯಿಂಗ್ 787 ವಿಮಾನವನ್ನು ಕೊಲ್ಕತ್ತಾಕ್ಕೆ ಕೊಂಡೊಯ್ದ ಸುದ್ದಿ ಬರುತ್ತಿದೆ. ವಿಮಾನದಲ್ಲಿ ಏರ್ ಕಂಡೀಷನಿಂಗ್ ವ್ಯವಸ್ಥೆ ಕೆಲಸ ಮಾಡುತ್ತಿರಲಿಲ್ಲವಂತೆ. ಅಹಮದಾಬಾದ್ ದುರಂತಕ್ಕೂ ಮೊದಲು ಹೀಗೆ ಆಗಿದ್ದರೆ ಏರ್ ಕಂಡೀಷನ್ ಇಲ್ಲದಿದ್ದರೂ ಆ ವಿಮಾನ ದೆಹಲಿಗೆ ಹಾರುವ ಸಾಧ್ಯತೆಯೇ ಹೆಚ್ಚಿತ್ತು.

ಮಹಾರಾಜ ಕ್ಲಬ್‌ಗೆ ಬರೆದ ಪತ್ರವನ್ನು ಏರ್ ಇಂಡಿಯಾ ಸಿಇಒ ವಿಲ್ಸನ್ ದುಃಖದೊಂದಿಗೆ ಮುಗಿಸುವ ಬದಲು 'ವಾರ್ಮ್ ರಿಗಾರ್ಡ್ಸ್' ಎಂದು ಮುಗಿಸಿದ್ದಾರೆ. ನಿಜವಾಗಿಯೂ ಆತ ಯಾವ ಜಗತ್ತಿನಲ್ಲಿ ಬದುಕುತ್ತಿದ್ದಾರೆ? ಸ್ವಲ್ಪವೂ ಸೂಕ್ಷ್ಮತೆ ಬೇಡವೆ? ಏರ್ ಇಂಡಿಯಾದಲ್ಲಿ ಅತ್ಯುನ್ನತ ಹುದ್ದೆಗಳಲ್ಲಿರುವವರು ಹೀಗೆ ಸೂಕ್ಷ್ಮತೆಯನ್ನು ಮರೆತರೆ ಅವರಿಗೆ ಯಾವುದೇ ಶಿಕ್ಷೆಯಾಗುವುದಿಲ್ಲ. ಆದರೆ ಅವರ ಕಂಪನಿಯ ಕೆಳಹಂತದ ಸಿಬ್ಬಂದಿ ಹೀಗೆ ನಡೆದುಕೊಂಡರೆ ಖಂಡಿತ ಶಿಕ್ಷೆ ನೀಡಲಾಗುತ್ತದೆ. ಅಹಮದಾಬಾದ್ ದುರಂತದ ಕೆಲ ದಿನಗಳ ಬಳಿಕ ಯಾವುದೋ ಖಾಸಗಿ ಪಾರ್ಟಿಯಲ್ಲಿ ಡ್ಯಾನ್ಸ್ ಮಾಡಿದರು ಎಂಬ ಕಾರಣಕ್ಕೆ ಏರ್ ಇಂಡಿಯಾದ ಕೆಲ ಸಿಬ್ಬಂದಿಯನ್ನು ಅಮಾನತು ಮಾಡಿರುವುದು ಇದಕ್ಕೆ ಜ್ವಲಂತ ಉದಾಹರಣೆ. ವಿಮಾನದ ಸಿಬ್ಬಂದಿ ಯಾವಾಗಲೂ ಒತ್ತಡದಲ್ಲಿರುತ್ತಾರೆ. ಅಪಘಾತಗಳು ಸಂಭವಿಸಿದರೆ ಅವರೂ ಸಾಯುತ್ತಾರೆ. ಮೇಲಾಗಿ ಅವರು ದಿನನಿತ್ಯ ವಿಮಾನದಲ್ಲಿ ಹಾರಾಡುತ್ತಲೇ ಇರುತ್ತಾರೆ. ಅಂದರೆ ಪ್ರತಿದಿನ ಅವರು ಅಪಾಯದಲ್ಲಿರುತ್ತಾರೆ. ಅಹಮದಾಬಾದ್‌ನಲ್ಲಿ ಅವರೂ ಮೃತಪಟ್ಟರು. ಹೀಗಾಗಿ ವಿಮಾನದ ಸಿಬ್ಬಂದಿಯನ್ನು 'ಹರಕೆಯ ಕುರಿ' ಮಾಡುವುದು ಅವರ ಸೇವೆಗೇ ಅವಮಾನ ಮಾಡಿದಂತೆ. ದುರಂತದ ಬಳಿಕ ಪಾರ್ಟಿ ಮಾಡಿದ್ದು ಸರಿಯೆಂದು ನಾನು ಹೇಳುವುದಿಲ್ಲ, ಆದರೆ ಅದರಿಂದ ಯಾರ ಜೀವಕ್ಕೂ ಅಪಾಯವಿರಲಿಲ್ಲ. ಹೀಗಾಗಿ ಯಾರನ್ನಾದರೂ ಅಮಾನತು ಮಾಡುವುದಿದ್ದರೆ ಆ ಸಿಬ್ಬಂದಿಯನ್ನು ಅಮಾನತು ಮಾಡಿದವರನ್ನು ಅಮಾನತು ಮಾಡಬೇಕಿತ್ತು. ಶಿಕ್ಷೆಗೆ ಅವರೇ ಅರ್ಹರು.

ಇಂದು ಸೀಟು ಕೆಟ್ಟಿರಬಹುದು, ನಾಳೆ ಎಂಜಿನ್ ಕೆಡುತ್ತದೆ.

• • •

ಕಾಕತಾಳೀಯವೇ ಇರಬಹುದು. ವಿಮಾನಯಾನ ಉದ್ದಿಮೆಯನ್ನು ಹತ್ತಿರದಿಂದ ಗಮನಿಸುವವರ ವಲಯದಲ್ಲಿ ಇದೊಂದು ಮಾಹಿತಿ ಹರಿದಾಡುತ್ತಿದೆ. ಅಹಮದಾಬಾದ್ ದುರಂತದಲ್ಲಿ ಒಬ್ಬನೇ ಒಬ್ಬ ಪ್ರಯಾಣಿಕ ಬದುಕುಳಿದಿದ್ದಾನಲ್ಲವೇ? ಹಾಗೆ ದೊಡ್ಡ ವೈಮಾನಿಕ ದುರಂತಗಳಲ್ಲಿ ಏಕೈಕ ಪ್ರಯಾಣಿಕ ಬದುಕುಳಿದ 5 ಘಟನೆಗಳು ಇತಿಹಾಸದಲ್ಲಿ ದಾಖಲಾಗಿವೆ. 1987ರ ಆಗಸ್ಟ್ 16ರಂದು ಸಂಭವಿಸಿದ ವಿಮಾನ ದುರಂತದಲ್ಲಿ 156 ಪ್ರಯಾಣಿಕರು ಮೃತಪಟ್ಟು, ಸಿಸಿಲಿಯಾ ಸಿಚಾನ್ ಎಂಬ ಏಕೈಕ ವ್ಯಕ್ತಿ ಬದುಕುಳಿದಿದ್ದರು. 2003ರ ಮಾರ್ಚ್ 6ರಂದು ಏರ್ ಅಲ್ಜೀರಿಯಾ ದುರಂತದಲ್ಲಿ 102 ಮಂದಿ ಮೃತಪಟ್ಟು, ಯೌಸೆಫ್ ಜಿಲ್ಲಾಲಿ ಎಂಬ ಒಬ್ಬರೇ ವ್ಯಕ್ತಿ ಬಚಾವಾಗಿದ್ದರು. ಸುಡಾನ್‌ನಲ್ಲಿ 2003ರ ಜುಲೈ 8ರಂದು ಸಂಭವಿಸಿದ ವಿಮಾನ ದುರಂತದಲ್ಲಿ ಮೊಹಮ್ಮದ್ ಎಲ್ ಫತೆ ಎಂಬ ಒಬ್ಬರು ಪಾರಾಗಿದ್ದರು. 2009ರ ಜೂನ್ 30ರಂದು ಯೆಮನ್‌ನಲ್ಲಿ ಸಂಭವಿಸಿದ ವಿಮಾನ ದುರಂತದಲ್ಲಿ ಬಹಿಯಾ ಬಕಾರಿ ಎಂಬ ಒಬ್ಬರು ಜೀವ ಉಳಿಸಿಕೊಂಡಿದ್ದರು. 2010ರ ಮೇ 12ರಂದು ಟ್ರಿಪೋಲಿಯಲ್ಲಿ ವಿಮಾನ ಪತನಗೊಂಡಾಗ 9 ವರ್ಷದ ರೂಬೆನ್ ವಾನ್ ಅಸ್ಸೌವಾ ಎಂಬ ಮಗುವೊಂದು ಬದುಕುಳಿದಿತ್ತು.

• • •

ಲಂಡನ್‌ನಲ್ಲಿ ಬೇಸಿಗೆ ರಜೆ ಕಳೆಯಲು ಯಾರಾದರೂ ವಿಮಾನ ಹತ್ತುವವರಿದ್ದರೆ ಒಂದು ಸಲ ಇಲ್ಲಿರುವ ಕೆಲ ಅಂಕಿ–ಅಂಶಗಳನ್ನು ಗಮನಿಸಿ. 'ದಿ ಟೈಮ್ಸ್' ಪತ್ರಿಕೆಯಲ್ಲಿ ಪ್ರಕಟವಾದ ಮಾಹಿತಿಯಿದು. ಲಂಡನ್‌ನಲ್ಲಿ ಪ್ರತಿ ವರ್ಷ 60,000 ಮೊಬೈಲ್ ಫೋನ್‌ಗಳನ್ನು ಕಸಿದುಕೊಂಡು ಪರಾರಿಯಾಗುವ ಘಟನೆಗಳು ನಡೆಯುತ್ತಿವೆ. ಅಂದರೆ ಪ್ರತಿ ಮೂರು ನಿಮಿಷಕ್ಕೊಂದು ಫೋನ್ ಕಳ್ಳತನ. ಅವುಗಳ ಪೈಕಿ 10,000 ಫೋನ್‌ಗಳು ಪ್ರವಾಸಿಗರಿಂದ ತುಂಬಿರುವ ವೆಸ್ಟ್ ಎಂಡ್‌ನಲ್ಲೇ ಕಳವಾಗುತ್ತವೆ. ಅಲ್ಲೇ ಸಮೀಪದ ವೆಸ್ಟ್‌ಮಿನ್‌ಸ್ಟರ್ ಸೇಂಟ್ ಜೇಮ್ಸ್ ಬಳಿ ಎರಡನೇ ಅತಿಹೆಚ್ಚು ಫೋನ್‌ಗಳು ಕಳವಾಗುತ್ತವೆ. ಕಳೆದ ನಾಲ್ಕು ವರ್ಷಗಳಲ್ಲಿ ಬ್ರಿಟನ್ನಿನಲ್ಲಿ 2,31,000 ಫೋನ್‌ಗಳು ಕಳ್ಳತನವಾಗಿವೆ. ಅವುಗಳಲ್ಲಿ ಲಂಡನ್ನಿನ ಪಾಲು 90,000. ನಿಜವಾದ ಸಂಖ್ಯೆ ಇನ್ನೂ ಜಾಸ್ತಿಯಿರುತ್ತದೆ. ಏಕೆಂದರೆ ಫೋನ್ ಕಳೆದುಕೊಂಡವರಲ್ಲಿ ಅನೇಕರು ಹೇಗಿದ್ದರೂ ಅದು ಮರಳಿ ಸಿಗುವುದಿಲ್ಲ ಎಂದು ದೂರು ನೀಡುವುದಕ್ಕೇ ಹೋಗುವುದಿಲ್ಲ. ಅವರ ಲೆಕ್ಕಾಚಾರ ಸರಿಯಾಗಿಯೇ ಇದೆ. ಕಳುವಾದ ಫೋನ್‌ಗಳು ಮರಳಿ ಸಿಗುವ ಉದಾಹರಣೆಗಳು ಲಂಡನ್ನಿನಲ್ಲಿ ಇಲ್ಲ. ಪೊಲೀಸರು ಕಳ್ಳರಿಗೆ ಶರಣಾಗಿದ್ದಾರೆ. ಶೇ.1ಕ್ಕೂ ಕಡಿಮೆ ಕಳ್ಳತನ ಪ್ರಕರಣಗಳು ಅಥವಾ ಮನೆಯ ಬಾಗಿಲು ಮುರಿದ ಪ್ರಕರಣಗಳು ಮಾತ್ರ ಪೊಲೀಸರಿಂದ ಭೇದಿಸಲ್ಪಡುತ್ತಿವೆ. ಹೀಗಾಗಿ ಮಾಸ್ಕೋಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿರುವುದರಲ್ಲಿ ಯಾವುದೇ ಆಶ್ಚರ್ಯವಿಲ್ಲ. 2024ರಿಂದ ಈಚೆಗೆ ಮಾಸ್ಕೋಗೆ ಪ್ರವಾಸಿಗರ ಸಂಖ್ಯೆ ಶೇ.40ರಷ್ಟು ಹೆಚ್ಚಾಗಿದೆ. ಅರಬ್ಬರು ಕೂಡ ಲಂಡನ್ನನ್ನು ತೊರೆಯುತ್ತಿದ್ದಾರೆ. ಸೌದಿಯಿಂದ ಮಾಸ್ಕೋಗೆ ತೆರಳುವವರ ಸಂಖ್ಯೆಯಲ್ಲಿ ಶೇ.570ರಷ್ಟು ಏರಿಕೆಯಾಗಿದೆ. ಇದು ರಷ್ಯಾದ ಆರ್ಥಿಕತೆಗೆ ಅತ್ಯಂತ ಒಳ್ಳೆಯ ಸುದ್ದಿ.

2025ರ ಮೇ 7ರಂದು 'ಸ್ಪೆಕ್ಟೇಟರ್' ವಾರಪತ್ರಿಕೆಯ ಸಂಪಾದಕೀಯದಲ್ಲಿ ಬ್ರಿಟನ್ ಬಗ್ಗೆ ತುಂಬಾ ಪ್ರಾಮಾಣಿಕವಾದ ಕೆಲ ವಾಕ್ಯಗಳು ಅಚ್ಚಾಗಿವೆ. 'ನಮ್ಮ ರಸ್ತೆಗಳಲ್ಲಿ ಅರಾಜಕತೆ ತಾಂಡವವಾಡುತ್ತಿದೆ. ಯಾರೂ ಕಾನೂನು ಪಾಲಿಸುತ್ತಿಲ್ಲ. ಹೇಳುವವರು ಕೇಳುವವರು ಇಲ್ಲವಾಗಿದೆ... ಅಂಗಡಿಗಳಲ್ಲಿ ಕಳ್ಳತನ ಮಾಡುವವರನ್ನು ಹಿಡಿಯುವವರಿಲ್ಲ. ಕೈಯಿಂದ ಕಿತ್ತುಕೊಂಡು ಓಡುವ ಘಟನೆಗಳು ದಿನೇದಿನೆ ಹೆಚ್ಚುತ್ತಿವೆ. ಸಾರ್ವಜನಿಕವಾಗಿ ಡ್ರಗ್ಸ್ ಸೇವಿಸುವುದು ಹಾಗೂ ಮಾರುವುದು ಬಹಳ ಸಾಮಾನ್ಯವಾಗುತ್ತಿದೆ. ಒಂದು ತಲೆಮಾರಿನ ಹಿಂದೆ ಸಾಮಾಜಿಕ ಬದುಕಿನಿಂದ ಕಂಗೊಳಿಸುತ್ತಿದ್ದ ಬ್ಯುಸಿ ವಾಣಿಜ್ಯ ಪ್ರದೇಶಗಳಲ್ಲಿ ಇಂದು ಸಾಲುಸಾಲಾಗಿ ಬಾರ್ಬರ್ ಶಾಪ್‌ಗಳಿವೆ. ಅವುಗಳಲ್ಲಿ ಹೆಚ್ಚಿನವು ಅಕ್ರಮ ಹಣಕಾಸು ವ್ಯವಹಾರ ನಡೆಸುವ, ಗಾಂಜಾ ಸೇವಿಸುವ, ಡ್ರಗ್ಸ್ ಮಾರುವ ಜಾಗಗಳಾಗಿವೆ. ಇನ್ನೊಂದಷ್ಟು ಜಾಗಗಳು ಬಹಳ ಸಮಯದಿಂದ ಖಾಲಿ ಬಿದ್ದಿವೆ. ಅಲ್ಲಿ ಏನಾದರೂ ಮಾಡಬೇಕು ಎಂದು ಮಾಲೀಕರಿಗೆ ಅನ್ನಿಸುತ್ತಿಲ್ಲ. ಒಟ್ಟಿನಲ್ಲಿ ಅವಸಾನದ ಕಡೆ ಲಂಡನ್ ಸಾಗುತ್ತಿದೆ. ಗಾಂಜಾದ ಹೊಗೆ ಹಾಗೂ ಘಮಲಿನಲ್ಲಿ ಅದು ಯಾರಿಗೂ ಸರಿಯಾಗಿ ಗೋಚರಿಸುತ್ತಿಲ್ಲ'.

ಕವಿ ರುಡ್ಯಾರ್ಡ್ ಕಿಪ್ಲಿಂಗ್ ಬ್ರಿಟಿಷ್ ಕೊಲ್ಕತ್ತಾವನ್ನು 'ಭಯಾನಕ ರಾತ್ರಿಗಳ ನಗರ' ಎಂದು ಕರೆದಿದ್ದ. ಲಂಡನ್ ಈಗ 'ಭಯಾನಕ ಹಗಲುಗಳ ನಗರ'ವಾಗುತ್ತಿದೆಯೇ?

(ಲೇಖಕರು ಹಿರಿಯ ಪತ್ರಕರ್ತರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:175

ಸಮಾಚಾರ ಸಣ್ಣದಲ್ಲ

ಪಾತ್ರೆಗೆ ಉಗುಳಿದ ಕ್ಷೀರ ವಿತರಕ ಸೆರೆ

ಲಖನೌ: ಉತ್ತರ ಪ್ರದೇಶದ ಗೋಮತಿ ನಗರದಲ್ಲಿ ಗ್ರಾಹಕರ ಮನೆ ಮನೆಗೆ ಹಾಲು ವಿತರಿಸುವ ಮೊದಲು ಪಾತ್ರೆಗೆ ಉಗುಳಿದ ಹಾಲು ವಿತರಕನನ್ನು ಸೋಮವಾರ ಬಂಧಿಸಲಾಗಿದೆ. ಮೊಹಮ್ಮದ್ ಷರೀಫ್ ಬಂಧಿತ ಆರೋಪಿ. ಈತ ಹಾಲಿನ ಪಾತ್ರೆಗೆ ಎಂಜಲು ಉಗುಳಿದ ದೃಶ್ಯ ಗೋಮತಿ ನಗರದ ವಿನಯ್ ಖಾಂಡ್ ನಿವಾಸಿ ಲವ ಶುಕ್ಲಾ ಎಂಬವರ ಮನೆಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಸಿಸಿಟಿವಿ ದೃಶ್ಯಾವಳಿ ವೀಕ್ಷಿಸಿದ ಶುಕ್ಲಾ ಬಳಿಕ ಸ್ಥಳೀಯ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದರು. ಆರೋಪಿ ಮೊಹಮ್ಮದ್ ಷರೀಫ್‌ನನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಅಧಿಕಾರಿ ಬ್ರಿಜೇಶ್ ತಿವಾರಿ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಹೋಶಿಯಾರ್‌ಪುರ: ಬಸ್ ಪಲ್ಟಿ, 8 ಸಾವು

ಹೋಶಿಯಾರ್‌ಪುರ: ಪಂಜಾಬ್ ರಾಜ್ಯದ ಹೋಶಿ ಯಾರ್‌ಪುರ ಜಿಲ್ಲೆಯ ದಾಸುಯಾ–ಹಾಜಿಪುರ ರಸ್ತೆ ಯಲ್ಲಿ ಸಗ್ರಾ ಪಟ್ಟಣದ ಬಳಿ ಬಸ್ಸೊಂದು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಮಧ್ಯದಲ್ಲಿ ಸೋಮವಾರ ಪಲ್ಟಿಯಾಗಿದೆ. ಪರಿಣಾಮ 8 ಪ್ರಯಾಣಿಕರು ಸಾವಿಗೀಡಾಗಿ, 25 ಮಂದಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ದಾಸುಯಾ ಸಿವಿಲ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಅಪಘಾತ ಪ್ರಕರಣ ದಾಖ ಲಾಗಿದೆ. ಅಪಘಾತಕ್ಕೆ ಕಾರಣವೇನು ಎಂಬುದನ್ನು ತಿಳಿಯಲು ಚಾಲಕ ಮತ್ತು ಪ್ರಯಾಣಿಕರು ಹೇಳಿಕೆ ಪಡೆಯಲಾಗುವುದು ಎಂದು ಮುಕೇರಿಯನ್ ಉಪ ಪೊಲೀಸ್ ವರಿಷ್ಠಾಧಿಕಾರಿ ಕುಲ್ವಿಂದರ್ ಸಿಂಗ್ ವಿರ್ಕ್ ಸುದ್ದಿಸಂಸ್ಥೆಗೆ ಸೋಮವಾರ ತಿಳಿಸಿದ್ದಾರೆ.

ಉದ್ಯಮಿ ಖೇಮ್ಕಾ ಹಂತಕ ಅಂತ್ಯಕ್ರಿಯೆ ವೇಳೆ ಸೆರೆ

ಪಟನಾ: ಬಿಹಾರದ ಉದ್ಯಮಿ, ಬಿಜೆಪಿ ನಾಯಕ ಗೋಪಾಲ್ ಖೇಮ್ಕಾ ಶುಕ್ರವಾರ ರಾತ್ರಿ 11.40ರಲ್ಲಿ ಕೊಲೆಯಾಗಿದ್ದರು. ಈ ಪ್ರಕರಣದ ಆರೋಪಿಗಳಲ್ಲಿ ಒಬ್ಬನನ್ನು ಪೊಲೀಸರು ಬಂಧಿಸಿದ್ದಾರೆ. ಖೇಮ್ಕಾ ಅವರ ಅಂತ್ಯಸಂಸ್ಕಾರಕ್ಕೆ ಬಂದಿದ್ದಾಗಲೇ ಸೆರೆ ಸಿಕ್ಕಿದ್ದಾನೆ ಎಂಬುದು ಗಮನಾರ್ಹ. ರೋಷನ್ ಎಂಬಾತನೇ ಬಂಧಿತ. ಖೇಮ್ಕಾ ಕೊಲೆಯ ಪಿತೂರಿಯಲ್ಲಿ ರೋಷನ್ ಪಾತ್ರವಿದೆ ಎಂಬ ಶಂಕೆಯ ಮೇರೆಗೆ ಆತನನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ. ಉದ್ಯಮಿ ಖೇಮ್ಕಾ ಹತ್ಯೆ ತನಿಖೆಗೆ ವಿಶೇಷ ಪಡೆ ಅಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ಅಧಿಕಾರಿಗಳನ್ನು ಒಳಗೊಂಡ ವಿಶೇಷ ತನಿಖಾ ತಂಡವನ್ನು(ಎಸ್ಐಟಿ) ರಚಿಸಲಾಗಿದೆ. ಪ್ರಕರಣ ಸಂಬಂಧ ಶಂಕೆಯ ಮೇರೆಗೆ ತನಿಖಾ ತಂಡ 12 ಜನರನ್ನು ವಶಕ್ಕೆ ಪಡೆದು ಪ್ರಶ್ನೆ ಮಾಡುತ್ತಿದೆ ಎಂದು ಡಿಜಿಪಿ ವಿನಯ್ ಕುಮಾರ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಖೇಮ್ಕಾ ಅವರ ಪುತ್ರ ಕೂಡಾ 2018ರಲ್ಲಿ ಹಾಜಿಪುರದಲ್ಲಿ ಭೂ ವಿವಾದಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಕೊಲೆಯಾಗಿದ್ದ. ನಂತರ ಖೇಮ್ಕಾ ಅವರಿಗೆ ಭದ್ರತೆ ಒದಗಿಸಲಾಗಿತ್ತು. 2024ರ ಏಪ್ರಿಲ್‌ನಲ್ಲಿ ಭದ್ರತೆ ಹಿಂತೆಗೆದುಕೊಳ್ಳಲಾಗಿತ್ತು.

16 ದಿನದಲ್ಲಿ 19 ಬಾರಿ ಮೇಘಸ್ಫೋಟ, 23 ಬಾರಿ ದಿಢೀರ್ ಪ್ರವಾಹ | 78 ಜನ, 214 ಗೋವು ಸಾವು, 30 ಮಂದಿ ಕಣ್ಮರೆ, 121 ಜನಕ್ಕೆ ಗಾಯ

ಸತತ ಮೇಘಸ್ಫೋಟ, ಪ್ರವಾಹಕ್ಕೆ ಹಿ.ಪ್ರ ತತ್ತರ

ಶಿಮ್ಲಾ: 2024ರ ಜುಲೈ ಮಾಸ. ಸರಿಯಾಗಿ ಒಂದು ವರ್ಷದ ಹಿಂದೆ ಭಾರತದ ದಕ್ಷಿಣ ತುದಿಯ ಕರಾವಳಿ ಪ್ರದೇಶದ ಪುಟ್ಟ ರಾಜ್ಯ ಕೇರಳ, ಮೇಘಸ್ಫೋಟ, ಧಾರಾಕಾರ ಮಳೆ, ದಿಢೀರ್ ಪ್ರವಾಹ, ಭೂಕುಸಿತದಿಂದ ತತ್ತರಿಸಿಹೋಗಿತ್ತು. 2 ಗ್ರಾಮಗಳೇ ಕಣ್ಮರೆಯಾಗಿದ್ದವು. ಪರಿಣಾಮ 254 ಮಂದಿ ಸಾವಿಗೀಡಾಗಿ, 118 ಜನರು ಕಣ್ಮರೆಯಾಗಿದ್ದರು.

ಸರಿಯಾಗಿ 1 ವರ್ಷದ ಬಳಿಕ, ಅದೇ ಜುಲೈ ತಿಂಗಳಲ್ಲೇ ಉತ್ತರದ ತುದಿಯ ಹಿಮಾಚಲ ಪ್ರದೇಶದಲ್ಲಿಯೂ ಸತತ ಮೇಘಸ್ಫೋಟವಾಗಿದೆ, ಧಾರಾಕಾರ ಮಳೆ, ನದಿಗಳು ಉಕ್ಕೇರಿ ದಿಢೀರ್ ಪ್ರವಾಹ ಸೃಷ್ಟಿಯಾಗಿದೆ. ಹಲವಾರು ಕಡೆ ಭೂಕುಸಿತವಾಗಿದೆ. ಹಿಮಾಲಯದ ತಪ್ಪಲಿನ ಪುಟ್ಟ ರಾಜ್ಯ ಪ್ರಕೃತಿಯ ಆರ್ಭಟ, ಆಕ್ರೋಶದಿಂದ ಅಕ್ಷರಶಃ ನಲುಗಿ ಹೋಗಿದೆ. 78 ಜನ ಸಾವಿಗೀಡಾಗಿದ್ದಾರೆ, 215 ಜಾನುವಾರುಗಳು ಜೀವ ಕಳೆದುಕೊಂಡಿವೆ.

ಹಿಮಾಚಲ ಪ್ರದೇಶ ರಾಜ್ಯದಲ್ಲಿ ಕಳೆದ 16 ದಿನಗಳಲ್ಲಿ 19 ಬಾರಿ ಮೇಘಸ್ಫೋಟವಾಗಿದೆ, ಪರಿಣಾಮ ಧಾರಾಕಾರ ಮಳೆ ಸುರಿದಿದೆ. ಇದರಿಂದ ರಾಜ್ಯದ ನದಿಗಳೆಲ್ಲಾ ಉಕ್ಕಿ ಹರಿಯುತ್ತಿವೆ. ಇದರಿಂದ ರಾಜ್ಯದ ವಿವಿಧೆಡೆ 23 ಬಾರಿ ದಿಢೀರ್ ಪ್ರವಾಹ ಸೃಷ್ಟಿಯಾಗಿದೆ. ನೂರಾರು ಕಟ್ಟಡಗಳ ಕುಸಿದಿವೆ, ನೂರಾರು ವಾಹನಗಳು ಕೊಚ್ಚಿ ಹೋಗಿವೆ. ಸೇತುವೆಗಳು, ರಸ್ತೆಗಳು ಪ್ರವಾಹದಲ್ಲಿ ತೀವ್ರ ಸ್ವರೂಪದಲ್ಲಿ ಹಾನಿಗೀಡಾಗಿವೆ. ರಾಜ್ಯದಲ್ಲಿನ 260 ಹೆದ್ದಾರಿಗಳಿಗೆ ಹಾನಿಯಾಗಿದ್ದು, ವಾಹನ ಸಂಚಾರ ಬಹುತೇಕ ಸ್ಥಗಿತವಾಗಿದೆ. ಈ 16 ದಿನಗಳ ವರ್ಷಧಾರೆ–ಪ್ರವಾಹದಿಂದಾಗಿ ಹಿಮಾಚಲ ಪ್ರದೇಶದಲ್ಲಿ 700 ಕೋಟಿ ರು.ಗೂ ಹೆಚ್ಚಿನ ಪ್ರಮಾಣದ ಹಾನಿಯಾಗಿದೆ.

78 ಸಾವು: ಪ್ರವಾಹ, ಭೂಕುಸಿತ ಸೇರಿದಂತೆ ಮಳೆ ಸಂಬಂಧಿತ ಅವಘಡಗಳಲ್ಲಿ ಒಟ್ಟು 78 ಮಂದಿ ಸಾವಿಗೀಡಾಗಿದ್ದಾರೆ. 30 ಜನರು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ. 121 ಮಂದಿ ಗಾಯಗೊಂಡಿದ್ದು, ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. 494 ಜನರನ್ನು ರಕ್ಷಿಸಲಾಗಿದೆ.

ದಿಢೀರ್ ಸೃಷ್ಟಿಯಾದ ಪ್ರವಾಹ ಎದುರಿಗೆ ಸಿಕ್ಕಿದ್ದೆಲ್ಲವನ್ನೂ ಆಪೋಷನ ತೆಗೆದುಕೊಂಡ ಬಳಿಕದ ಪರಿಸ್ಥಿತಿಯ ಚಿತ್ರಣ ಇದು.

ಹಿಮಾಚಲ ಪ್ರದೇಶದ ಮಂಡಿ ಜಿಲ್ಲೆಯಲ್ಲಿ ಪ್ರವಾಹಕ್ಕೆ ಸಿಲುಕಿ ಕುಸಿದ ಸೇತುವೆಗಳಲ್ಲಿ ಇದೂ ಒಂದು.

ನಾನು ಸಚಿವೆ ಅಲ್ಲ: ಕಂಗನಾ

ಬಿಜೆಪಿ ಸಂಸದೆ ಕಂಗನಾ ರಾಣಾವತ್ ಲೋಕಸಭೆಗೆ ಪ್ರತಿನಿಧಿಸುವ ಹಿಮಾಚಲ ಪ್ರದೇಶದ ಮಂಡಿ ಜಿಲ್ಲೆಯಲ್ಲಿ 2 ವಾರದಿಂದ ಧಾರಾಕಾರ ಮಳೆ ಸುರಿಯುತ್ತಿದ್ದು, ಎಲ್ಲೆಲ್ಲೂ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿದೆ. ಹಲವಾರು ಕಡೆ ಭೂಕುಸಿತವಾಗಿದೆ. ಮೇಘಸ್ಫೋಟ, ಧಾರಾಕಾರ ಮಳೆ, ಪ್ರವಾಹದ ಕಾರಣದಿಂದಾಗಿ ಮಂಡಿ ಜಿಲ್ಲೆಯೊಂದರಲ್ಲಿಯೇ 225 ಮನೆಗಳು, 7 ಅಂಗಡಿಗಳು, 243 ಗೋಶಾಲೆಗಳು, 31 ವಾಹನಗಳು, 14 ಸೇತುವೆಗಳು ಮತ್ತು ಹಲವಾರು ರಸ್ತೆಗಳು ಹಾನಿಗೀಡಾಗಿವೆ. ಪ್ರವಾಹದಲ್ಲಿ ತತ್ತರಿಸಿರುವ ಲೋಕಸಭಾ ಕ್ಷೇತ್ರದಲ್ಲಿಯೇ ಸಂಸದೆ ಕಂಗನಾ ರಾಣಾವತ್ ಕೆಲವು ದಿನಗಳಿಂದ ಉಳಿದುಕೊಂಡಿದ್ದು, ಹಾನಿಗೀಡಾದ ಪ್ರದೇಶಗಳಿಗೆ ಭೇಟಿ ನೀಡಿ ಸಂತ್ರಸ್ತ ಜನರಿಗೆ ನೆರವಾಗುತ್ತಿದ್ದಾರೆ. ಇದೇ ವೇಳೆ, ಪರಿಹಾರ ಧನ ವಿತರಣೆ ಕುರಿತು ಮಾಧ್ಯಮದವರು ಕೇಳಿದ ಪ್ರಶ್ನೆಗೆ 'ನಾನು ಕೇವಲ ಸಂಸದೆ ಅಷ್ಟೆ, ಸಂಪುಟ ಸಚಿವೆ ಅಲ್ಲ. ನನ್ನ ಬಳಿ ಈಗ ಯಾವುದೇ ಅನುದಾನ ಮೊತ್ತವಿಲ್ಲ' ಎಂದು ಹೇಳಿರುವುದು ವೈರಲ್ ಆಗಿದ್ದು, ಸಂಸದೆ ಟ್ರೋಲ್‌ಗೆ ಒಳಗಾಗಿದ್ದಾರೆ.

ಕಣ್ಮರೆಯಾದವರ ಪತ್ತೆಗೆ ಶ್ವಾನ -ಡ್ರೋನ್ ನೆರವು

ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದವರು, ನಾಪತ್ತೆ ಯಾದ ವರ ಪತ್ತೆಗಾಗಿ ಡ್ರೋನ್ ಮತ್ತು ಸ್ನಿಫರ್ ಡಾಗ್(ವಾಸನೆ ಹಿಡಿದು ಶೋಧಿಸುವ ಶ್ವಾನ ಪಡೆ) ನೆರವು ಪಡೆಯಲಾಗಿದೆ. ಪ್ರವಾಹ ಪರಿಸ್ಥಿತಿಯ ನಡುವೆಯೇ ಶೋಧ ನಡೆಸಲಾ ಗುತ್ತಿದ್ದು, ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಸೇರಿದಂತೆ ರಾಜ್ಯದ ವಿವಿಧ ರಕ್ಷಣಾ ತಂಡಗಳು ಪ್ರವಾಹದಲ್ಲಿ ಸಿಲುಕಿ ರುವವರನ್ನು ರಕ್ಷಿಸುವ ಕಾರ್ಯಾಚರಣೆ ನಡೆಸುತ್ತಿವೆ. ಈವರೆಗೆ 494 ಜನರನ್ನು ರಕ್ಷಿಸಲಾಗಿದೆ ಎಂದು ಅಧಿಕಾರಿಗಳು ಸೋಮ ವಾರ ತಿಳಿಸಿದ್ದಾರೆ. ರಾಜ್ಯದಲ್ಲಿ ಜೂ.20ರಂದು ಮುಂಗಾರಿನ ಮೊದಲ ಮಳೆ ಆರಂಭವಾಗಿದ್ದು, ಆಗಿನಿಂದಲೇ ಪ್ರಕೃ ತಿಯ ಮುನಿಸು ಶುರುವಾಗಿದೆ. ಭಾರತೀಯ ಸೇನೆಯ ಇಂಜಿನಿ ಯರಿಂಗ್ ವಿಭಾಗ ಮತ್ತು ಇಂಡೋ- ಟಿಬೆಟಿ ಯನ್ ಬಾರ್ಡರ್ ಪೊಲೀಸ್(ಐಟಿಬಿಪಿ)ನ ನೂರಾರು ಯೋಧರ ಜತೆಗೆ ಗೃಹರಕ್ಷಕ ದಳದ 250 ಸಿಬ್ಬಂದಿಯೂ ರಕ್ಷಣಾ ಕಾರ್ಯಾ ಚರಣೆಯಲ್ಲಿ ಕೈಜೋಡಿಸಿದ್ದಾರೆ. ಸ್ಥಳೀಯ ಆಡಳಿತದ ವಿವಿಧ ಇಲಾಖೆಗಳ ಸಿಬ್ಬಂದಿ ಮತ್ತು ಸ್ಥಳೀಯ ಸ್ವಯಂ ಸೇವಕರೂ ಶೋಧ ಮತ್ತು ರಕ್ಷಣಾ ಕಾರ್ಯದಲ್ಲಿ ತೊಡಗಿದ್ದಾರೆ.

ಮುಖ್ಯಾಂಶಗಳು

- ಪ್ರವಾಹ ತೀವ್ರತೆಗೆ ಹಿ.ಪ್ರದೇಶದ 260 ಹೆದ್ದಾರಿಗೆ ಹಾನಿ, ಸಂಚಾರ ಸ್ಥಗಿತ
- ಕಟ್ಟಡಗಳ ಕುಸಿತ, ಕೊಚ್ಚಿಹೋದ ಸೇತುವೆ-ರಸ್ತೆ, ರು.700 ಕೋಟಿ ಹಾನಿ
- 241 ವಿದ್ಯುತ್ ಪರಿವರ್ತಕ ಹಾಳು, 278 ನೀರು ಪೂರೈಕೆ ಯೋಜನೆಗೆ ಧಕ್ಕೆ
- ವರ್ಷದ ಹಿಂದಿನ ಕೇರಳದ ವಯನಾಡು ದುರಂತ ನೆನಪಿಸಿದ ಹಿ.ಪದೇಶ
- 1,538 ಪಡಿತರ ಕಿಟ್, ತಕ್ಷಣದ ಪರಿಹಾರ ಕಾರ್ಯಕ್ಕೆ 12.44 ಲಕ್ಷ ರು.

ಪಡಿತರ ಕಿಟ್ ವಿತರಣೆ

ರಾಜ್ಯದಲ್ಲಿ ಮಳೆ–ಪ್ರವಾಹದಿಂದ ಹಾನೀಗೀಡಾದ ಪ್ರದೇ ಶಗಳಲ್ಲಿ ಸಂತ್ರಸ್ತ ಜನರಿಗೆ ಸ್ವಯಂಸೇವಕರ 20 ತಂಡಗಳು ಪಡಿತರ ಮತ್ತು ವೈದ್ಯಕೀಯ ಕಿಟ್ ವಿತರಿಸುತ್ತಿವೆ. ಸೋಮ ವಾರದವರೆಗೆ 1,538 ಪಡಿತರ ಕಿಟ್‌ಗಳನ್ನು ವಿತರಿಸಲಾಗಿದೆ. ಪರಿಹಾರ ಕಾರ್ಯಗಳಿ ಗಾಗಿ ರಾಜ್ಯ ಸರಕಾರ ತಕ್ಷಣಕ್ಕೆ 12.44 ಲಕ್ಷ ರು. ಬಿಡುಗಡೆ ಮಾಡಿದೆ. ಅಲ್ಲದೇ ತುನಾಗ್ ಮತ್ತು ಜಾಂಜೆಲಿ ಪ್ರದೇಶಗಳಿಗೆ ಹೆಚ್ಚುವರಿ ಯಾಗಿ 5 ಲಕ್ಷ ರು. ಹಣ ಕಳುಹಿಸಲಾಗುತ್ತಿದೆ ಎಂದು ರಾಜ್ಯ ಸರಕಾರದ ಅಧಿಕಾರಿಗಳು ಸುದ್ದಿಗಾರರಿಗೆ ಮಾಹಿತಿ ನೀಡಿದ್ದಾರೆ. ರಾಜ್ಯದಲ್ಲಿ ಸೋಮವಾರದವರೆಗೆ ಒಟ್ಟು 243 ಪ್ರಮುಖ ರಸ್ತೆಗಳು, ಹೆದ್ದಾರಿಗಳಿಗೆ ಹಾನಿಯಾಗಿದ್ದು, ವಾಹನ ಸಂಚಾರ ಸ್ಥಗಿತಗೊಳಿಸಲಾಗಿದೆ. ಮಂಡಿ ಜಿಲ್ಲೆಯಲ್ಲೊಂದರಲ್ಲೇ 183 ರಸ್ತೆಗಳು ಹಾನಿಗೀಡಾಗಿವೆ. 241 ವಿದ್ಯುತ್ ಪರಿವರ್ತಕಗಳು ಮಳೆ–ಪ್ರವಾಹದ ಆರ್ಭಟದಲ್ಲಿ ಪೂರ್ಣ ಹಾಳಾಗಿವೆ. ಇದು 278 ನೀರು ಸರಬರಾಜು ಯೋಜನೆಗಳ ಮೇಲೆ ಪರಿಣಾಮ ಬೀರಿದೆ ಎಂದು ರಾಜ್ಯದ ತುರ್ತು ಕಾರ್ಯಾಚರಣೆ ಕೇಂದ್ರದ ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಮೇಘ ಸ್ಫೋಟ, ಧಾರಾಕಾರ ಮಳೆ, ದಿಢೀರ್ ಪ್ರವಾಹ ಸೃಷ್ಟಿಯಿಂದ ರಾಜ್ಯದಲ್ಲಿ ಆಗಿರುವ ಹಾನಿಯ ಮೊತ್ತ ₹700 ಕೋಟಿಗಳನ್ನು ಮೀರಲಿದೆ ಎಂದು ಸಿಎಂ ಹೇಳಿದ್ದಾರೆ.

ನಾಗಾಲ್ಯಾಂಡಲ್ಲೂ ಪ್ರವಾಹ: 3 ಸಾವು

ಕೊಹಿಮಾ: ನಾಗಾಲ್ಯಾಂಡ್‌ನಲ್ಲಿಯೂ ಕಳೆದ 2-3 ದಿನಗಳಿಂದ ಭಾರೀ ಮಳೆಯಾಗುತ್ತಿದ್ದು, ರಾಜ್ಯದ ವಿವಿಧೆಡೆ ಪ್ರವಾಹ ಪರಿಸ್ಥಿತಿ ಎದುರಾಗಿದೆ. ದಿಮಾಪು ರದಲ್ಲಿ ಮಳೆ ಅವಘಡದಲ್ಲಿ ಒಬ್ಬ ಮಹಿಳೆ ಸೇರಿದಂತೆ ಮೂವರು ಸಾವಿಗೀಡಾಗಿದ್ದಾರೆ. ಕೊಹಿಮಾ- ದಿಮಾಪುರ ರಾಷ್ಟ್ರೀಯ ಹೆದ್ದಾರಿ 29ರಲ್ಲಿ ವಾಹನ ಸಂಚಾರ ಸ್ಥಗಿತಗೊಳಿಸಲಾಗಿದೆ. ವಿಮಾನ ನಿಲ್ದಾಣದ ಲ್ಲಿನ ಹವಾಮಾನ ಪರಿಸ್ಥಿತಿಯಲ್ಲಿಯೂ ದಿಢೀರ್ ಏರುಪೇರು ಕಾಣಬರುತ್ತಿದೆ. ಅಲ್ಲದೇ ರನ್‌ವೇನಲ್ಲಿ ನೀರು ನಿಂತಿರುವುದರಿಂದ ವಿಮಾನಗಳ ಹಾರಾ ಟವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಏರ್ ಇಂಡಿಯ, ಇಂಡಿಗೊ ಮತ್ತಿತರ ವಿಮಾನಯಾನ ಸಂಸ್ಥೆಗಳು ವಿಮಾನ ಹಾರಾಟವನ್ನು ಪರಿಸ್ಥಿತಿ ಸರಿಹೋಗುವವರೆಗೂ ರದ್ದು ಮಾಡಿವೆ.

ಒಡಿಶಾದಲ್ಲೂ ಭಾರೀ ಪ್ರವಾಹ

ಭುವನೇಶ್ವರ: ಒಡಿಶಾ ರಾಜ್ಯದಲ್ಲಿಯೂ ಕಳೆದೆರಡು ದಿನಗಳಿಂದ ಭಾರೀ ಮಳೆಯಾಗುತ್ತಿದ್ದು, ಹಲವು ಪ್ರದೇಶಗಳು ಪ್ರವಾಹದಲ್ಲಿ ಸಿಲುಕಿವೆ. ಮಹಾನದಿ ಸೇರಿದಂತೆ ರಾಜ್ಯದ ಕೆಲವು ಪ್ರಮುಖ ನದಿಗಳ ಹರಿವು ಅಪಾಯದ ಮಟ್ಟ ಮೀರಿವೆ. ನುವಾಪಾ ಜಿಲ್ಲೆಯ ಲಖಾನಾ ಪ್ರದೇಶದಲ್ಲಿ ಪ್ರವಾಹದ ಕಾರಣದಿಂದಾಗಿ ಕೋಳಿಫಾರಂನ ಗೋಡೆ ಕುಸಿದು 61 ವರ್ಷದ ವೃದ್ಧೆ ಸೇರಿದಂತೆ ಇಬ್ಬರು ಮಹಿಳೆಯರು ಸಾವಿಗೀಡಾಗಿದ್ದಾರೆ. ಇದೇ ಅವಘಡದಲ್ಲಿ 8 ವರ್ಷದ ಬಾಲಕಿ ಗಾಯಗೊಂಡಿದ್ದಾಳೆ. ಸೋಮವಾರವೂ ರಾಜ್ಯದ 16 ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ 'ಯೆಲ್ಲೋ ಅಲರ್ಟ್' ಘೋಷಿಸಿದ್ದರಿಂದ ಮುಂಜಾಗರೂಕತಾ ಕ್ರಮಗಳನ್ನು ರಾಜ್ಯ ಸರಕಾರ ಕೈಗೊಂಡಿದೆ. ಪ್ರವಾಹ ಪೀಡಿತ ಪ್ರದೇಶಗಳಲ್ಲಿನ ಜನರನ್ನು ಸುರಕ್ಷಿತವಾಗಿ ಸ್ಥಳಾಂತರಿಸುವ ಕಾರ್ಯ ನಡೆಸಲಾಗುತ್ತಿದೆ. ಮೀನುಗಾರರಿಗೆ ಸಮುದ್ರಕ್ಕೆ ಇಳಿಯದಂತೆ ಎಚ್ಚರಿಕೆ ನೀಡಲಾಗಿದೆ.

ಹಿಮಾಚಲ ಪ್ರದೇಶದಲ್ಲಿ ನದಿಯೊಂದು ಉಕ್ಕಿ ಹರಿಯುತ್ತಿರುವುದು

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಪಾಕ್ ಬೇಹು ಜ್ಯೋತಿಗೆ ಕೇರಳ ಸರಕಾರದ ಆತಿಥ್ಯ

ದೆಹಲಿ: ಪಾಕಿಸ್ತಾನ ಪರ ಭಾರತದಲ್ಲಿ ಬೇಹುಗಾರಿಕೆ ನಡೆಸುತ್ತಿದ್ದ ಆರೋಪದ ಮೇಲೆ ಇತ್ತೀಚೆಗೆ ಬಂಧನಕ್ಕೊಳಗಾದ ಹರಿಯಾಣದ 33 ವರ್ಷದ ಯು ಟ್ಯುಬರ್ ಜ್ಯೋತಿ ಮಲ್ಹೋತ್ರಾಳನ್ನು ಈ ಹಿಂದೆ ಕೇರಳ ಸರಕಾರವೇ ಪ್ರವಾಸೋ ದ್ಯಮ ಇಲಾಖೆ ಪ್ರಚಾರಕ್ಕಾಗಿ ಆಹ್ವಾನಿ ಸಿತ್ತು, ಪ್ರಚಾರದ ವಿಡಿಯೋ ಮಾಡಿ ಸಿತ್ತು ಎಂಬುದು ತಡವಾಗಿ ಬೆಳಕಿಗೆ ಬಂದಿದೆ. ಕೇರಳ ಪ್ರವಾಸೋದ್ಯಮ ಇಲಾಖೆ ಪರವಾಗಿ ಪಾಕ್ ಗುಪ್ತಚರೆ ಜ್ಯೋತಿ ಸೇರಿದಂತೆ ಸಾಮಾಜಿಕ ಮಾಧ್ಯ ಮದ ಹಲವು ಇನ್‌ಫ್ಲುಯೆನ್ಸರ್‌ಗಳು ಕಳೆದ ಎರಡು ವರ್ಷಗಳಿಂದ ರಾಜ್ಯಾದ್ಯಂತ ಸಂಚರಿಸಿ ವಿಡಿಯೊ ಮಾಡಿದ್ದಾರೆ. ಜ್ಯೋತಿ ಮತ್ತು ಸಹಚರರ ಪ್ರಯಾಣ, ವಾಸ್ತವ್ಯ, ಆಹಾರ ಮತ್ತಿತರ ವೆಚ್ಚವನ್ನು ಕೇರಳ ಸರಕಾರವೇ ಪೂರ್ಣ ಭರಿಸಿದೆ ಎಂದು ತಿಳಿದುಬಂದಿದೆ. ಜನವರಿ 2024 ಮತ್ತು ಮೇ 2025ರ ನಡುವಿನ ಅವಧಿಯಲ್ಲಿ ಜ್ಯೋತಿ ಮತ್ತು ತಂಡ ಕಣ್ಣೂರು, ಕೋಯಿಕ್ಕೋಡ್, ಕೊಚ್ಚಿ, ಆಲಪ್ಪುಳ ಮತ್ತು ಮುನ್ನಾರ್ ಪ್ರವಾಸ ಮಾಡಿದ್ದಾರೆ. ನಡುವೆ ಜ್ಯೋತಿ ರಾಜ್ಯದ ವಿವಿಧೆಡೆ ಸಂಚರಿಸಿರುವುದು ತಿಳಿದುಬಂದಿದೆ. ಜ್ಯೋತಿ ಪಾಕ್‌ಗೆ ಹಲವು ಬಾರಿ ತೆರಳಿದ್ದಳು, ಪಾಕ್ ಗುಪ್ತಚರ ಸಂಸ್ಥೆಗಳ ಸಂಪರ್ಕ ದಲ್ಲಿದ್ದಳು, ದೆಹಲಿಯಲ್ಲಿನ ಪಾಕ್ ಹೈಕಮಿಷನ್ ಸಿಬ್ಬಂದಿ ಸಂಪರ್ಕವೂ ಇದೆ ಎಂಬುದು ತನಿಖೆ ವೇಳೆ ತಿಳಿದುಬಂದಿದೆ.ಜ್ಯೋತಿ ಸೇರಿದಂತೆ 12 ಜನರನ್ನು ಪಾಕ್ ಪರ ಬೇಹುಗಾರಿಕೆ ನಡೆಸಿದ ಆರೋಪದಡಿ ಪಂಜಾಬ್, ಹರಿಯಾಣ, ಉತ್ತರ ಪ್ರದೇಶದಲ್ಲಿ ಬಂಧಿಸಲಾಗಿದೆ.

ಮುಂಬೈ ಬಳಿ ಕಡಲಲ್ಲಿ ಶಂಕಾಸ್ಪದ ದೋಣಿ ಪತ್ತೆ

ಮುಂಬೈ: ಮಹಾರಾಷ್ಟ್ರದ ರಾಯಗಢ ಜಿಲ್ಲೆಯ ರೇವದಂಡ ಕರಾವಳಿ ಸಮೀಪದ ಕಡಲಲ್ಲಿ ಅನುಮಾನಾಸ್ಪದವಾಗಿ ದೋಣಿಯೊಂದು ಭಾನುವಾರ ರಾತ್ರಿ ಕಾಣಿಸಿಕೊಂಡಿದ್ದು, ಆತಂಕದ ಸ್ಥಿತಿ ಸೃಷ್ಟಿಯಾಗಿದೆ. ಪ್ರದೇಶದಲ್ಲಿನ ಭದ್ರತಾ ವ್ಯವಸ್ಥೆಯನ್ನು ಮತ್ತಷ್ಟು ಹೆಚ್ಚಿಸಲಾಗಿದೆ.

ರೇವದಂಡ ಕೊರ್ಲೈರ್ ಕರಾವಳಿಯಿಂದ 2 ನಾಟಿಕಲ್ ಮೈಲು ದೂರದಲ್ಲಿ ಅಪರಿಚಿತ ದೋಣಿಯನ್ನು ಭದ್ರತಾ ಸಿಬ್ಬಂದಿ ನೋಡಿದ್ದಾರೆ. ಅದು ಪಾಕಿಸ್ತಾನದ ಮೀನುಗಾರಿಕಾ ದೋಣಿ ಆಗಿರಬಹುದು ಎಂದು ಕರಾವಳಿ ಭಾಗದ ಪೊಲೀಸರು ಶಂಕಿಸಿದ್ದಾರೆ.ಭಾನುವಾರ ರಾತ್ರಿ ಭಾರಿ ಮಳೆ ಮತ್ತು ಬಲವಾದ ಗಾಳಿ ಬೀಸುತ್ತಿದ್ದುದರಿಂದ ದೋಣಿ ಇರುವ ಸ್ಥಳಕ್ಕೆ ತಲುಪಲು ಸಾಧ್ಯವಾಗಲಿಲ್ಲ ಎಂದು ಅಧಿಕಾರಿ ಯೊಬ್ಬರು ತಿಳಿಸಿದ್ದಾರೆ. ಈ ಮಧ್ಯೆ ರಾಯಗಢ ಪೊಲೀಸ್ ಅಧೀಕ್ಷಕ ಅಂಚಲ್ ದಲಾಲ್ ಮತ್ತು ಇತರ ಹಿರಿಯ ಪೊಲೀಸ್ ಅಧಿಕಾರಿಗಳು ಕರಾವಳಿಗೆ ಭೇಟಿ ನೀಡಿ ಪರಿಸ್ಥಿತಿಯನ್ನು ಪರಿಶೀಲಿಸಿದ್ದಾರೆ. ಮುನ್ನೆಚ್ಚರಿಕೆ ಕ್ರಮವಾಗಿ ಜಿಲ್ಲೆಯಲ್ಲಿ ಹೆಚ್ಚಿನ ಭದ್ರತಾ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.ಆ ಬಳಿಕ ಸುದ್ದಿ ತಿಳಿದು, ಬಾಂಬ್ ಪತ್ತೆ ಮತ್ತು ನಿಷ್ಕ್ರಿಯ ದಳ(ಬಿಡಿಡಿಎಸ್), ಕರಾವಳಿ ಕಾವಲು ಪಡೆ, ಭಾರತೀಯ ನೌಕಾಪಡೆ ಸಿಬ್ಬಂದಿ ಮತ್ತು ಕ್ಷಿಪ್ರ ಪ್ರತಿಕ್ರಿಯೆ ದಳದ ಸಿಬ್ಬಂದಿ ಭಾನುವಾರ ರಾತ್ರಿಯೇ ಸ್ಥಳಕ್ಕೆ ಧಾವಿಸಿದ್ದು, ಶೋಧ ಕಾರ್ಯ ಆರಂಭಿಸಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ಸೋಮವಾರ ತಿಳಿಸಿದ್ದಾರೆ.

ಪಾಕ್ ಸೇನೆ ಏಜೆಂಟ್: ರಾಣಾ ತಪ್ಪೊಪ್ಪಿಗೆ

ದೆಹಲಿ: ನಾನು ಪಾಕ್ ಸೇನೆಯ ನಂಬಿಕಸ್ಥ ಏಜೆಂಟ್ ಆಗಿದ್ದೆ. 2008ರಲ್ಲಿ ಮುಂಬೈ ಮೇಲೆ ದಾಳಿ ನಡೆಸಿದಾಗ ನಾನೂ ಮುಂಬೈ ನಗರದಲ್ಲೇ ಇದ್ದೆ ಎಂದು 26/11 ಮುಂಬೈ ಭಯೋ ತ್ಪಾದಕ ದಾಳಿಯ ರೂವಾರಿ, ಪಾಕ್ ಮೂಲದ ಭಯೋತ್ಪಾದಕ ಉದ್ಯಮಿ ತಹಾವುರ್ ಹುಸೇನ್ ರಾಣಾ ತಪ್ಪು ಒಪ್ಪಿಕೊಂಡಿದ್ದಾನೆ. ಮುಂಬೈ ಕ್ರೈಂ ಬ್ರಾಂಚ್ ಪೊಲೀಸರು ನಡೆಸುತ್ತಿ ರುವ ವಿಚಾರಣೆ ವೇಳೆ ಕೆಲವು ಸ್ಫೋಟಕ ಮಾಹಿತಿಗಳನ್ನು ಹೊರ ಹಾಕಿದ್ದಾನೆ. ಆತ ಹೇಳಿರುವ ಅಂಶಗಳು 2008ರ ನ.26 ರಲ್ಲಿ ನಡೆದ ಮುಂಬೈ ದಾಳಿಯಲ್ಲಿ ಪಾಕಿಸ್ತಾನ ಕೈವಾಡ ಇತ್ತು ಎಂಬ ಭಾರತದ ಆರೋಪವನ್ನು ದೃಢಪಡಿಸುತ್ತದೆ. ತಹಾ ವುರ್ ರಾಣಾ ಪರ ವಕೀಲ ಪಿಯೂಷ್ ಸಚ್‌ದೇವ್ ವಕಾಲತು ವಹಿಸಿದ್ದು, ನ್ಯಾಯದಲ್ಲಿ ವಾದ ಮಂಡಿಸಲು ಸಿದ್ಧತೆ ನಡೆಸಿದ್ದಾರೆ ಎಂಬ ಮಾಹಿತಿಯೂ ಲಭ್ಯವಾಗಿದೆ. ಟಾಟಾ ಸಮೂಹದ ಒಡೆತನದಲ್ಲಿನ ಪಂಚತಾರಾ ಹೋಟೆಲ್ ತಾಜ್ ಸೇರಿದಂತೆ ಮುಂಬೈನ ಹಲವು ಜನನಿಬಿಡ ಸ್ಥಳಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿದ ಪಾಕ್ ಮೂಲದ ಭಯೋತ್ಪಾದಕರು 166 ಜನ ರನ್ನು ಕೊಂದು 300ಕ್ಕೂ ಹೆಚ್ಚು ಜನರನ್ನು ಗಾಯಗೊಳಿಸಿದ್ದರು.



ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.

ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/2225/ಟೆ.ಪ್ರ/ತಾಸ–1/2025–26/566 ದಿನಾಂಕ:04.07.2025

ಸಂಕ್ಷಿಪ್ತ ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

1) ಕಾಮಗಾರಿಗಳ ವಿವರ.: ಸುರಪೂರ ತಾಲೂಕಿನ ನಗನೂರ ಗ್ರಾಮದಲ್ಲಿ ಶ್ರೀ ಸಿದ್ದರೂಡ ದೇವಸ್ಥಾನದ ಕಲ್ಯಾಣ ಮಂಟಪ ನಿರ್ಮಾಣ (Indent No. RDPR/2025-26/BD/WORK_INDENT16491) **2) ಲೆಕ್ಕ ಶೀರ್ಷಿಕೆ:** 2024–25ನೇ ಸಾಲಿನ 2225– ಮಾನ್ಯ ಮುಖ್ಯಮಂತ್ರಿ ವಿಶೇಷ ಅನುದಾನ ಯೋಜನೆ **3) ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ ಮತ್ತು ಗರಿಷ್ಠ ರೂ. 75.00ಲಕ್ಷ **4) ಗುತ್ತಿಗೆದಾರರ ದರ್ಜೆ:** 3ನೇ ಮೇಲ್ಪಟ್ಟು ದರ್ಜೆ ಮೇಲ್ಪಟ್ಟು **5) ಟೆಂಡರ ಫಾರಂ ಪಡೆಯಲು ಕೊನೆಯ ದಿನಾಂಕ:** 05.07.2025 ರಿಂದ 14.07.2025 ಸಾಯಂಕಾಲ 4:00 ಗಂಟೆವರೆಗೆ **6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ:** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶುಲ್ಕು ಹಿಂದಿರುಗಿಸಲಾಗುವುದಿಲ್ಲಾ) **7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ:** 14.07.2025 ಸಾಯಂಕಾಲ 4:00 ಗಂಟೆವರೆಗೆ **8) ಟೆಂಡರ ತೆರೆಯುವ ದಿನಾಂಕ ತಾಂತ್ರೀಕ:** 16.07.2025 ಬೆಳ್ಳಿಗೆ 11:00 ನಂತರ **9) ಟೆಂಡರ ತೆರೆಯುವ ದಿನಾಂಕ ಆರ್ಥಿಕ:** 21.07.2025 ಬೆಳ್ಳಿಗೆ 11:00 ನಂತರ **10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ):** ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ. **11) ಅಂತರಜಾಲ ತಾಣದ ವಿಳಾಸ:** https://kppp.karnataka.gov.in

ಸೂಚನೆ :– ಟೆಂಡರರಿಗೆಸಂಬಂದಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳು ಹೊರತುಪಡಿಸಿ).

ಸಹಿ/–ಕಾರ್ಯಪಾಲಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,
ಯಾದಗಿರ.

ವಾ.ಸಾ.ಸಂ.ಇ/ಯಾದಗಿರಿ/141/ಕೆ.ಎಸ್.ಎಂ.ಸಿ.ಎ/2025–26

ಮಹಾನಗರ ಪಾಲಿಕೆ, ಕಲಬುರಗಿ
ದೂ: 08472/ 278675 ಫ್ಯಾಕ್ಸ : 08472 / 260776 ಇ ಮೇಲ್– itstaff_ulb_gulbarga@yahoo.com

No: KMP/EE/TS-02/ 15th FC /AMRUT2.0/2025-26 ದಿನಾಂಕ: 05.07.2025.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ:09/2025–26

1) ಕಾಮಗಾರಿಯ ವಿವರ : ಕಲಬುರಗಿ ಮಹಾನಗರ ಪಾಲಿಕೆಯಿಂದ 2024–25ನೇ ಸಾಲಿನ 15ನೇ ಹಣಕಾಸು ಆಯೋಗದ ಪರಿಷ್ಕೃತ ಕ್ರಿಯಾ ಯೋಜನೆಯ ಹಾಗೂ ಅಮೃತ 2.0 Reform Incentive Grant ಅನುದಾನದಲ್ಲಿ ಅನುಮೋದನೆಗೊಂಡ ಮೂರು ಕಾಮಗಾರಿಗಳಿಗೆ ಕೆ.ಪಿ.ಪಿ. ಪ್ರೋರ್ಟಲ್–2.0 ನಲ್ಲಿ ಕೆ.ಟಿ.ಪಿ.ಪಿ ರ ಪ್ರಕಾರ ಕೆ.ಡಬ್ಲ್ಯೂ–3 ರ ಮೂಲಕ 15 ದಿನಗಳ ಅಲ್ಪಾವಧಿ ಟೆಂಡರ್‌ನ್ನು ಕರೆಯಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಥವಾ ಯಾವುದೇ ತರಹದ ಬದಲಾವಣೆಯನ್ನು www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 2) ಪ್ರತಿ ಕಾಮಗಾರಿ ಅಂದಾಜು ಮೊತ್ತ **ಗರಿಷ್ಠ ರೂ. 210.00 ಲಕ್ಷಗಳು** & **ಕನಿಷ್ಠ ರೂ. 85.20 ಲಕ್ಷಗಳು.** 3) ಗುತ್ತಿಗೆದಾರರ ಅರ್ಹತೆ ವಿವರ: 2&3ನೇ ದರ್ಜೆ ಮತ್ತು ಹೆಚ್ಚು, 4) ಟೆಂಡರ ಅರ್ಜಿಯ ಬೆಲೆ ರೂ. ಕೆ.ಪಿ.ಪಿ.ಪಿ ಪ್ರೋರ್ಟಲ್–2.0 ನ ಪ್ರತಿ ಕಾಮಗಾರಿಗೆ ಮತ್ತು ಇ.ಎಂ.ಡಿ. ಕನಿಷ್ಠ ರೂ. 72,100.00 ಗಳು & ಗರಿಷ್ಠ ರೂ. 2,67,000.00, 5) ಪೂರ್ವಭಾವಿ ಸಭೆ ದಿನಾಂಕ: 22.07.2025 ರಂದು ಬೆಳಿಗ್ಗೆ 11:00 ಗಂಟೆಗೆ. 6) ಬಿಡ್ ಸಲ್ಲಿಸುವ ಕೊನೆಯ ದಿನಾಂಕ: 22.07.2025 ರಂದು ಸಾಯಂಕಾಲ 4:30 ಗಂಟೆಗೆ. 7) ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ: 23.07.2025 ರಂದು ಸಾಯಂಕಾಲ 04:35 ಗಂಟೆಗೆ. 8) ಆರ್ಥಿಕ ಬಿಡ್ ತೆರೆಯುವ ದಿನಾಂಕ: 24.07.2025 ರಂದು ಬೆಳಿಗ್ಗೆ 11:30 ಗಂಟೆಗೆ. ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 9) ಹೆಚ್ಚಿನ ವಿವರಗಳಿಗೆ : ಕಾರ್ಯಾಪಾಲಕ ಅಭಿಯಂತರರು, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿರವರನ್ನು ಸಂಪರ್ಕಿಸಬಹುದಾಗಿದೆ. 10) ಹೆಚ್ಚಿನ ಮಾಹಿತಿಯು ಪಾಲಿಕೆಯ ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತದೆ http://www.kalaburagicity.mrc.gov.in/
Note: All subsequent corrigendum/amendment shall be published only on website and not in press. Hence, tenderers are advoised to always be in touch with our said website until the tender is finally opened.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/268/ಕೆ.ಎಸ್.ಎಂ.ಸಿ.&ಎ/2025–26

ರಾಜಕೀಯ ಲಾಭಕ್ಕಾಗಿ ಭಯೋತ್ಪಾದನೆ ಬೆಂಬಲಿಸುವುದು ತಪ್ಪು | ಬ್ರಿಕ್ಸ್ ಶೃಂಗಸಭೆಯಲ್ಲಿ ಮೋದಿ

ಪಹಲ್ಗಾಮ್ ದಾಳಿ: 'ಬ್ರಿಕ್ಸ್'ಶೃಂಗ ಒಕ್ಕೊರಲ ಖಂಡನೆ

ಬ್ರೆಸಿಲಿಯಾ: ಜಮ್ಮು–ಕಾಶ್ಮೀರದ ಅನಂತನಾಗ್ ಜಿಲ್ಲೆಯ ಪಹಲ್ಗಾಮ್ ಪ್ರವಾಸಿ ತಾಣದಲ್ಲಿ ವಿಹರಿಸುತ್ತಿದ್ದ ಭಾರತ–ನೇಪಾಳದ ಪುರುಷ ಪ್ರವಾಸಿಗರ ಮೇಲೆರಗಿ 26 ಜನರ ಸಾವಿಗೆ ಕಾರಣವಾದ 'ಪಹಲ್ಗಾಮ್ ಭಯೋತ್ಪಾದಕ ದಾಳಿ' ಸರ್ವತಾ ಖಂಡನಾರ್ಹ ಎಂದು 11 ಸದಸ್ಯ ದೇಶಗಳ ಒಕ್ಕೂಟವಾದ 'ಬ್ರಿಕ್ಸ್' ಬ್ರೆಜಿಲ್ ಶೃಂಗಸಭೆಯಲ್ಲಿ ಒಕ್ಕೊರಲಿನಿಂದ ಖಂಡಿಸಿದೆ. ಆ ಮೂಲಕ ಪಾಕಿಸ್ತಾನ ಜಾಗತಿಕ ಮಟ್ಟದಲ್ಲಿ ಮತ್ತೊಮ್ಮೆ ದೋಷಿಯಾಗಿ ನಿಂತಿದೆ.

ರಿಯೊ ಡಿ ಜನ್ನೈರೊದಲ್ಲಿ ನಡೆದ 17ನೇ ಬ್ರಿಕ್ಸ್ ಶೃಂಗದಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಭಯೋತ್ಪಾದನೆಯನ್ನು ಎಲ್ಲರೂ ಖಂಡಿಸಬೇಕು. ಅದುವೇ ನಮ್ಮ ದೇಶಗಳ ತತ್ವವಾಗಬೇಕು. ಭಯೋತ್ಪಾದಕರ ವಿರುದ್ಧ ನಿರ್ಬಂಧಗಳನ್ನು ವಿಧಿಸುವಲ್ಲಿ ಯಾವುದೇ ಹಿಂಜರಿಕೆ ಬೇಡ. ಭಯೋತ್ಪಾದನೆಗೆ ಸಂಬಂಧಿಸಿದಂತೆ ಮಾತು ಮತ್ತು ಕ್ರಿಯೆಯ ನಡುವೆ ಯಾವುದೇ ವ್ಯತ್ಯಾಸ ಇರಬಾರದು ಎಂದು ಆಗ್ರಹಿಸಿದರು.

ಯಾವ ದೇಶದ ಮೇಲೆ ಯಾವ ದೇಶ ದಾಳಿ ಮಾಡಿದೆ, ಏಕೆ ಮಾಡಿದ್ದಾರೆ? ಎಂಬುದನ್ನೆಲ್ಲಾ ಪರಿಶೀಲಿಸುತ್ತಾ, ಮಧ್ಯೆ ಪ್ರವೇಶಿಸಿದರೆ ನಮಗೇನು ಲಾಭ? ಎಂಬ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಕೇವಲ ಸ್ವಂತದ ಅನುಕೂಲವನ್ನು ನೋಡುತ್ತಾ ಹೋದರೆ ಅದು ಮಾನವೀಯತೆಗೆ ಮಾಡಿದ ದ್ರೋಹವಾಗುತ್ತದೆ ಎಂದು ಪ್ರಧಾನಿ ಮೋದಿ ಹೇಳಿದರು.

ಜಗತ್ತಿನ ವಿವಿಧೆಡೆ ನಡೆಯುತ್ತಿರುವ ಸಂಘರ್ಷಗಳ ಬಗ್ಗೆ ಕಳವಳ ವ್ಯಕ್ತಪಡಿಸಿದ ಪ್ರಧಾನಿ ಮೋದಿ, ಗಾಜಾದಲ್ಲಿನ ಮಾನವೀಯ ಪರಿಸ್ಥಿತಿ ಬಗೆಗೂ ನೋವು ವ್ಯಕ್ತಪಡಿಸಿದರು. 'ಶಾಂತಿ ಮಾರ್ಗವೇ ಏಕೈಕ ಆಯ್ಕೆ' ಎಂಬುದೇ ಭಾರತ ನಂಬಿಕೆ-ನಿಲುವು. ವಿಭಜನೆ ಮತ್ತು ಸಂಘರ್ಷದಿಂದ ಜಗತ್ತನ್ನು ದೂರವಿಡುವ ಮಾತುಕತೆಗೆ ಭಾರತದ ಬೆಂಬಲವಿರುತ್ತದೆ. ಒಗ್ಗಟ್ಟು, ವಿಶ್ವಾಸ ಹೆಚ್ಚಿಸುವ ಪ್ರತಿ ಪ್ರಯತ್ನವನ್ನೂ ಭಾರತ ಬೆಂಬಲಿಸುತ್ತದೆ ಎಂದರು. ಉಗ್ರವಾದದಿಂದ ತೊಂದರೆಗೆ ಒಳಗಾದವರು ಹಾಗೂ ಭಯೋತ್ಪಾದಕರನ್ನು ಒಂದೇ ತಕ್ಕಡಿಯಲ್ಲಿ ತೂಗಬಾರದು ಎಂದ ಮೋದಿ, ಭಯೋತ್ಪಾದನೆ ಮಾನವೀಯತೆಗೆ ಗಂಭೀರ ಸವಾಲಾಗಿದೆ. ಅದರ ವಿರುದ್ಧದ ಕ್ರಮದಲ್ಲಿ ಭಾರತ ರಾಜಿ ಮಾಡಿಕೊಳ್ಳುವುದಿಲ್ಲ ಎಂದು ಹೇಳಿದರು.

ಜಗತ್ತಿನಲ್ಲಿ ಶಾಂತಿ ಮತ್ತು ಸುರಕ್ಷತೆ ಬಹಳ ಮುಖ್ಯ. ಇದು ನಮ್ಮೆಲ್ಲರಿಗೂ ಸಾಮಾನ್ಯ ಭವಿಷ್ಯದ ಅಡಿಪಾಯ. ಪರಿಸರ ಶಾಂತಿಯುತ ಮತ್ತು ಸುರಕ್ಷಿತವಾಗಿದ್ದರೆ ಮಾತ್ರ ಜನರು ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ. ಈ ಗುರಿಯನ್ನು ಸಾಧಿಸುವಲ್ಲಿ ಬ್ರಿಕ್ಸ್ ಪ್ರಮುಖ ಪಾತ್ರ ವಹಿಸಬಹುದು. ನಾವು ಒಟ್ಟಾಗಿ ಸವಾಲುಗಳನ್ನು ಎದುರಿಸಬೇಕು ಮತ್ತು ಒಟ್ಟಾಗಿ ಮುಂದುವರಿಯಬೇಕು ಎಂದು ಹೇಳಿದರು.

ಬ್ರೆಜಿಲ್‌ನ ರಿಯೊ ಡಿ ಜನ್ನೈರೊದಲ್ಲಿ 17ನೇ ಬ್ರಿಕ್ಸ್ ಶೃಂಗದಲ್ಲಿ ಅತಿಥೇಯ ದೇಶದ ಅಧ್ಯಕ್ಷ ಲುಲಾ ಡಾ ಸಿಲ್ವ ಭಾಷಣ ವೇಳೆ ಪ್ರಧಾನಿ ನರೇಂದ್ರ ಮೋದಿ, ದಕ್ಷಿಣ ಆಫ್ರಿಕಾ ಅಧ್ಯಕ್ಷ ಸಿರಿಲ್ ರಾಮಫೋಸಾ ಉಪಸ್ಥಿತಿ.

ವಿಶ್ವಸಂಸ್ಥೆ ಬದಲಾಗಲಿ

ವಿಶ್ವಯುದ್ಧದ ಸಮಯದಲ್ಲಿ ರೂಪುಗೊಂಡ ವಿಶ್ವಸಂಸ್ಥೆ ಈಗ ಪಕ್ಷಪಾತಿಯಾಗಿದೆ. ಬಹಳಷ್ಟು ಸಂದರ್ಭಗಳಲ್ಲಿ ಭಾರತದ ವಿರುದ್ಧವಾಗಿ, ಭಯೋತ್ಪಾದಕ ದೇಶಗಳ ಪರವಾಗಿ ವಿಶ್ವಸಂಸ್ಥೆ ನಿಲುವು ಹೊಂದಿರುತ್ತದೆ. ವಿಶ್ವಸಂಸ್ಥೆಯ ಈ ನಡೆ ಬದಲಾಗಬೇಕಿದೆ. ಅದರ ಆಡಳಿತ ಮಂಡಳಿ, ಕಾರ್ಯವೈಖರಿಯಲ್ಲಿ ಬದಲಾವಣೆ ಆಗಬೇಕಿದೆ ಎಂದು ಪ್ರಧಾನಿ ಮೋದಿ ಶೃಂಗಸಭೆಯಲ್ಲಿ ಆಗ್ರಹಿಸಿದರು. ಇದೇ ವೇಳೆ, ಭಾರತದಲ್ಲಿ 2026ರಲ್ಲಿ ನಡೆಯಲಿರುವ ಶೃಂಗಸಭೆಗೆ ಸದಸ್ಯ ರಾಷ್ಟ್ರಗಳ ನಾಯಕರಿಗೆ ಮೋದಿ ಆಹ್ವಾನ ನೀಡಿದರು.

ಸಮಾಚಾರ ಸಣ್ಣದಲ್ಲ

ಶುಭಾಂಶು ಶುಕ್ಲಾರಿಂದ ನೀರುಕರಡಿ ಪ್ರಯೋಗ

ದೆಹಲಿ: ಆಕ್ಸಿಯೋಂ-4 ಮಿಷನ್ ಭಾಗವಾಗಿ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಿರುವ ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ, ನೀರುಕರಡಿ ಪ್ರಯೋಗ ಪೂರ್ಣಗೊಳಿಸಿದ್ದಾರೆ. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಈ ಪ್ರಯೋಗವನ್ನು ಸಿದ್ಧಪಡಿಸಿತ್ತು. ಈ ಬಗ್ಗೆ ಇಸ್ರೋ ಮಾಹಿತಿ ಹಂಚಿಕೊಂಡಿದ್ದು, ಶುಭಾಂಶು ಶುಕ್ಲಾ ಐಎಸ್‌ಎಸ್‌ನಲ್ಲಿ ನೀರುಕರಡಿಗಳನ್ನು ಒಳಗೊಂಡ ಸೂಕ್ಷ್ಮ ಗುರುತ್ವಾಕರ್ಷಣೆಯ ಪ್ರಯೋಗ ಪೂರ್ಣಗೊಳಿಸಿದ್ದಾರೆ. ಅಧ್ಯಯನವು ಬಾಹ್ಯಾಕಾಶದಲ್ಲಿ ಅವುಗಳ ಬದುಕುಳಿಯುವಿಕೆ, ಪುನರುಜ್ಜೀವನ ಮತ್ತು ಸಂತಾನೋತ್ಪತ್ತಿ ಮೇಲೆ ಕೇಂದ್ರೀಕರಿಸುತ್ತದೆ. ಸೂಕ್ಷ್ಮ ಗುರುತ್ವಾಕರ್ಷಣೆಯ ಪರಿಸರದಲ್ಲಿ ನೀರುಕರಡಿಗಳ ಜೈವಿಕ ಕಾರ್ಯವಿಧಾನಗಳ ಬಗ್ಗೆ ಅಧ್ಯಯನ ನಡೆಯಲಿದೆ ಎಂದು ತಿಳಿಸಿದೆ. 14 ದಿನಗಳ ಕಾಲ ಐಎಸ್‌ಎಸ್‌ನಲ್ಲಿ ಇರಲಿರುವ ಶುಕ್ಲಾ ಒಟ್ಟು 7 ಪ್ರಯೋಗಗಳನ್ನು ಕೈಗೊಳ್ಳಲಿದ್ದಾರೆ. ಈ ಪೈಕಿ 4 ಪ್ರಯೋಗಗಳನ್ನು ಕರ್ನಾಟಕದ ವಿಜ್ಞಾನಿಗಳು ಸಿದ್ಧಪಡಿಸಿದ್ದಾರೆ. ಗಗನಯಾತ್ರಿ ಶುಭಾಂಶು ಶುಕ್ಲಾ ಐಎಸ್‌ಎಸ್‌ನ ಕಿಟಕಿ ಎಂದೇ ಕರೆಯಲಾಗುವ ಕಪೋಲಾ ರಂಧ್ರದಿಂದ ಹೊರ ಪ್ರಪಂಚವನ್ನು ವೀಕ್ಷಿಸುತ್ತಿರುವ ಚಿತ್ರವನ್ನು ನಾಸಾ ಬಿಡುಗಡೆ ಮಾಡಿದೆ.

ಸ್ಮಾರ್ಟ್ ಕನ್ನಡಕ ಧರಿಸಿ ದೇಗುಲ ಪ್ರವೇಶಕ್ಕೆ ಯತ್ನ

ತಿರುವನಂತಪುರ: ಸ್ಮಾರ್ಟ್ ಕನ್ನಡಕ ಧರಿಸಿ ಇಲ್ಲಿನ ಖ್ಯಾತ ಪದ್ಮನಾಭಸ್ವಾಮಿ ದೇವಾಲಯಕ್ಕೆ ಪ್ರವೇಶಿಸಲು ಯತ್ನಿಸಿದ ಗುಜರಾತ್ ಮೂಲದ ವ್ಯಕ್ತಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ದೇವಾಲಯದಲ್ಲಿ ಕ್ಯಾಮೆರಾ ಹೊಂದಿದ ಕನ್ನಡಕದಂತಹ ಸಾಧನಗಳನ್ನು ನಿಷೇಧಿಸಲಾಗಿದೆ. ಆದರೆ ಆರೋಪಿ ಸುರೇಂದ್ರ ಶಾ (66) ಅವರನ್ನು ಭಾನುವಾರ ಸಂಜೆ ದೇವಾಲಯದ ಭದ್ರತಾ ಸಿಬ್ಬಂದಿ ವಶಕ್ಕೆ ಪಡೆದಿದ್ದರು. 'ಮುಖ್ಯದ್ವಾರದ ಮೂಲಕ ಪ್ರವೇಶಿಸಿದ್ದ ಆರೋಪಿಯನ್ನು ಸಂಶಯಗೊಂಡ ಭದ್ರತಾ ಸಿಬ್ಬಂದಿ ತಪಾಸನೆ ನಡೆಸಿದ್ದರು. ಈ ವೇಳೆ ಅವರ ಕನ್ನಡಕದಲ್ಲಿ ರಹಸ್ಯ ಕ್ಯಾಮೆರಾ ಇರುವುದು ಪತ್ತೆಯಾಗಿತ್ತು' ಎಂದು ಪೊಲೀಸ್ ಅಧಿಕಾರಿ ಹೇಳಿದ್ದಾರೆ. 'ನಂತರ ಅವರನ್ನು ದೇವಾಲಯದಿಂದ ಹೊರಗೆ ಕರೆದೊಯ್ಯಲಾಯಿತು ಮತ್ತು ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಯಾವುದೇ ದುರುದ್ದೇಶ ಶಂಕಿಸಲಾಗಿಲ್ಲವಾದರೂ, ವಿವರವಾದ ತನಿಖೆ ನಡೆಯುತ್ತಿದೆ. ವಿಚಾರಣೆಗೆ ಹಾಜರಾಗುವಂತೆ ಆರೋಪಿಗೆ ನೋಟಿಸ್ ನೀಡಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಬಿಹಾರ: ಆರ್‌ಜೆಡಿಗೆ ಎಸ್‌ಪಿ ಬೆಂಬಲ

ಲಖನೌ: ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ, ಸಮಾಜವಾದಿ ಪಕ್ಷದ ಮುಖಂಡ ಅಖಿಲೇಶ್ ಯಾದವ್, ಬಿಹಾರದಲ್ಲಿ ಸದ್ಯದಲ್ಲೇ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ನಮ್ಮ ಪಕ್ಷ ಬಿಹಾರದ ರಾಷ್ಟ್ರೀಯ ಜನತಾ ದಳ(ಆರ್‌ಜೆಡಿ) ಪಕ್ಷಕ್ಕೆ ಸಂಪೂರ್ಣ ಬೆಂಬಲ ನೀಡಲಿವೆ ಎಂದು ಸೋಮವಾರ ಹೇಳಿದ್ದಾರೆ. ನಮ್ಮ ಪಕ್ಷ ಲಾಲೂ ಪ್ರಸಾದ್ ಯಾದವ್ ಮತ್ತು ಮಾಜಿ ಡಿಸಿಎಂ ತೇಜಸ್ವಿ ಯಾದವ್ ಅವರನ್ನು ಪೂರ್ಣ ಬೆಂಬಲಿಸುತ್ತದೆ ಎಂದಿದ್ದಾರೆ. ಈ ಬಾರಿ ನಿತೀಶ್ ಕುಮಾರ್ ಅವರನ್ನು ಎನ್‌ಡಿಎ ಮೈತ್ರಿಕೂಟದ ಮುಖ್ಯಮಂತ್ರಿ ಮಾಡು ವುದಿಲ್ಲ. ಆ ಉದ್ದೇಶವೂ ಬಿಜೆಪಿಗೆ ಇಲ್ಲ. ಬದಲಾಗಿ ಸ್ವಯಂ ನಿವೃತ್ತಿ ತೆಗೆದುಕೊಳ್ಳುವಂತೆ ಕಮಲ ಪಕ್ಷ ತಂತ್ರ ಮಾಡಲಿದೆ ಎಂದೂ ಅಖಿಲೇಶ್ ಭವಿಷ್ಯ ನುಡಿದಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಸೊಳ್ಳೆಗಳನ್ನು ಕೊಲ್ಲಲು 'ಕ್ಷಿಪಣಿ ವ್ಯವಸ್ಥೆ' ನಿರ್ಮಿಸಿದ ಭಾರತೀಯ ವ್ಯಕ್ತಿ

ಸುದ್ದಿ



ಗಣತಿ ದತ್ತಾಂಶ ದಾಖಲಿಸಲು ಪೋರ್ಟಲ್

ಕೇಂದ್ರ ಸರಕಾರದ ಜನಗಣತಿ | ದತ್ತಾಂಶಗಳನ್ನು ಕಡಿಮೆ ಅವಧಿಯಲ್ಲಿ ಕ್ರೋಢೀಕರಿಸಲು ಪ್ರಯತ್ನ

ದೆಹಲಿ: ಕೇಂದ್ರ ಸರಕಾರ ನಡೆಸಲಿರುವ ಜನಗಣತಿಗೆ ನಾಗಕರಿಕರು ಸ್ವಯಂ ದತ್ತಾಂಶ ದಾಖಲಿಸುವ ಸೌಕರ್ಯ ಒದಗಿಸುವಂತಹ ವೆಬ್ ಪೋರ್ಟಲ್ ಸಿದ್ಧ ಗೊಳ್ಳುತ್ತಿದೆ ಎಂದು ಕೇಂದ್ರ ಸರಕಾರದ ಗಣತಿ ಆಯುಕ್ತರಾದ ಮೃತ್ಯುಂಜಯ್ ಕುಮಾರ್ ನಾರಾಯಣ್ ತಿಳಿಸಿದ್ದಾರೆ.

ದೇಶದಲ್ಲಿಯೇ ಮೊದಲ ಬಾರಿಗೆ ಡಿಜಿಟಲ್ ಗಣತಿ ನಡೆಯಲಿದ್ದು, ಗಣತಿದಾರರು ನಾಗರಿಕರ ಮಾಹಿತಿಗಳನ್ನು ಮೊಬೈಲ್ ಅಪ್ಲಿಕೇಶನ್ ಮೂಲಕ ದಾಖಲಿಸಲಿದ್ದಾರೆ. ಮನೆಗಳ ಪಟ್ಟಿ ಹಾಗೂ ಮನೆಗಳ ಗಣತಿ (ಎಚ್‌ಎಲ್‌ಒ) ಮತ್ತು ಜನಗಣತಿಯ (ಪಿಇ) ಸಂದರ್ಭದಲ್ಲಿಯೂ ಇಂತಹುದೇ ಅವಕಾಶ ನಾಗರಿಕರಿಗೆ ಸಿಗಲಿದೆ.

'ಡಿಜಿಟಲ್ ಗಣತಿಯು ಪರಿವರ್ತನೆಯ ಹೆಜ್ಜೆಯಾಗಿದೆ. ದತ್ತಾಂಶಗಳನ್ನು ಸಂಗ್ರಹಿಸಿ, ಎಲೆಕ್ಟ್ರಾನಿಕ್ ಮಾದರಿಯಲ್ಲಿ ಕೇಂದ್ರೀಕೃತ ಸರ್ವರ್‌ಗೆ ವರ್ಗಾಯಿಸಲಾಗುತ್ತದೆ, ಇದರಿಂದ ಗಣತಿ ದತ್ತಾಂಶಗಳನ್ನು ಕಡಿಮೆ ಅವಧಿಯಲ್ಲಿ ಕ್ರೋಢೀಕರಿಸಲು ಸಾಧ್ಯವಾಗಲಿದೆ' ಎಂದು ಅವರು ವಿವರಿಸಿದರು. ದತ್ತಾಂಶ ಸಂಗ್ರಹ, ವರ್ಗಾವಣೆ ಹಾಗೂ ಶೇಖರಣೆ ವೇಳೆ ಅತ್ಯಂತ ಕಟ್ಟುನಿಟ್ಟಾಗಿ ಸುರಕ್ಷತೆಗೆ ಕ್ರಮ ಕೈಗೊಳ್ಳಲಾಗುವುದು. ಈ ಹಿಂದೆ ಗಣತಿ ಪ್ರಕ್ರಿಯೆ ನಡೆದ ಎರಡರಿಂದ ಮೂರು ವರ್ಷಗಳ ಬಳಿಕ ದತ್ತಾಂಶಗಳನ್ನು ಸಾರ್ವಜನಿಕರ ಮುಂದೆ ಇಡಲಾಗುತ್ತಿತ್ತು. ಡಿಜಿಟಲ್ ದತ್ತಾಂಶ ಸಂಗ್ರಹದಿಂದ ಕೆಲವೇ ತಿಂಗಳಲ್ಲಿ ಜನರಿಗೆ ಮಾಹಿತಿ ದೊರಕಲಿದೆ. 'ನಿಯಾಮವಳಿಗಳ ಪ್ರಕಾರ, ಗಡುವು ಗೊತ್ತುಪಡಿಸಿದ ದಿನದಿಂದ ಮೂರು ತಿಂಗಳ ಒಳಗಾಗಿ ಗಣತಿ ಪ್ರಕ್ರಿಯೆ ಮುಗಿಯಲಿದೆ. ಜಿಲ್ಲೆ, ಉಪ ವಿಭಾಗ, ತಾಲ್ಲೂಕು ಹಾಗೂ ಪೊಲೀಸ್ ಠಾಣಾ ವ್ಯಾಪ್ತಿವಾರು ವಿಭಜಿಸಿ ಗಣತಿ ಪ್ರಕ್ರಿಯೆ ನಡೆಸಲಾಗುತ್ತದೆ. 2026ರ ಏಪ್ರಿಲ್ 1ರಿಂದ ಮನೆಗಳ ಪಟ್ಟಿ ಮಾಡುವ ಕಾರ್ಯ ಆರಂಭಗೊಳ್ಳಲಿದ್ದು, ಮೇಲ್ವಿಚಾರಕರು, ಗಣತಿದಾರರ ಕೆಲಸಗಳ ಹಂಚಿಕೆ ಪ್ರಕ್ರಿಯೆ ನಡೆಯಲಿದೆ' ಎಂದು ಭಾರತದ ರಿಜಿಸ್ಟ್ರಾರ್ ಜನರಲ್, ಗಣತಿ ಆಯುಕ್ತರಾದ ಮೃತ್ಯುಂಜಯ್ ಕುಮಾರ್ ನಾರಾಯಣ್ ತಿಳಿಸಿದ್ದಾರೆ.

(ಸಾಂದರ್ಭಿಕ ಚಿತ್ರ)

ಗಣತಿ ಪ್ರಕ್ರಿಯೆ ಯಾವಾಗ?

ಮನೆಗಳ ಗಣತಿ ಪ್ರಕ್ರಿಯೆಯು 2026ರ ಏಪ್ರಿಲ್ 1ರಿಂದ ಆರಂಭಗೊಳ್ಳಲಿದ್ದು, 2027ರ ಫೆಬ್ರುವರಿ 1ರಿಂದ ನಡೆಯುವ ಎರಡನೇ ಹಂತದಲ್ಲಿ ಜನಗಣತಿ ಪ್ರಕ್ರಿಯೆಯೂ ನಡೆಯಲಿದೆ, ಆ ವೇಳೆ ಜಾತಿವಾರು ಗಣತಿ ಪ್ರಕ್ರಿಯೆಯೂ ನಡೆಯಲಿದೆ.

ಬಹು ಆಯಾಮದ ತರಬೇತಿ ಜಾಗೃತಿ

ಮೂರು ಹಂತಗಳಲ್ಲಿ ಕೇಂದ್ರೀಕೃತ ಹಾಗೂ ಅಗತ್ಯ ತರಬೇತಿಯನ್ನು ನೀಡಲು ರಾಷ್ಟ್ರೀಯ ಟ್ರೇನರ್ ಮಾಸ್ಟರ್ ಹಾಗೂ ಫೀಲ್ಡ್ ಟ್ರೇನರ್‌ಗಳನ್ನು ನಿಯೋಜಿಸಲಾಗುವುದು. ಫೀಲ್ಡ್ ಟ್ರೇನರ್‌ಗಳು 34 ಲಕ್ಷ ತರಬೇತುದಾರರನ್ನು ಅಣಿಗೊಳಿಸಲಿದ್ದಾರೆ ಎಂದು ಮೃತ್ಯುಂಜಯ್ ಕುಮಾರ್ ನಾರಾಯಣ್ ತಿಳಿಸಿದ್ದಾರೆ. ಗಣತಿ ಪ್ರಕ್ರಿಯೆಯನ್ನು ಯಶಸ್ವಿಗೊಳಿಸಲು ದೇಶದಾದ್ಯಂತ ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ, ಇದರಿಂದ ಕೊನೆಯ ಹಂತದವರೆಗೂ ಜನರ ಸಹಭಾಗಿತ್ವ ಹಾಗೂ ನೆರವು ಪಡೆಯಲು ಸಾಧ್ಯ. ನಿಖರ ಅಧಿಕೃತ ಹಾಗೂ ಸಕಾಲಿತ ಮಾಹಿತಿ ಕಲೆಹಾಕುವ ಗಣತಿ ಪ್ರಕ್ರಿಯೆಯನ್ನು ಯಶಸ್ವಿಗೊಳಿಸುವ ಗುರಿ ಹೊಂದಲಾಗಿದೆ' ಎಂದು ವಿವರಿಸಿದ್ದಾರೆ.

ಪರವಾನಗಿ ರದ್ದು, ಟರ್ಕಿ ಕಂಪನಿ ಅರ್ಜಿ ವಜಾ

ದೆಹಲಿ: ಭಾರತದ ವಾಯುಯಾನ ಭದ್ರತಾ ನಿಯಂತ್ರಕ ಸಂಸ್ಥೆಯಾದ 'ಬ್ಯೂರೋ ಆಫ್ ಸಿವಿಲ್ ಏವಿಯೇಷನ್ ಸೆಕ್ಯುರಿಟಿ' ತನಗೆ ನೀಡಲಾಗಿದ್ದ ಸೇವಾ ಪರವಾನಗಿಯನ್ನು ರದ್ದುಗೊಳಿಸಿರುವುದನ್ನು ಪ್ರಶ್ನಿಸಿ ಟರ್ಕಿ ದೇಶದ ಕಂಪನಿಯಾದ 'ಸೆಲೆಬಿ' ಸಲ್ಲಿಸಿದ್ದ ಅರ್ಜಿ ದೆಹಲಿ ಹೈಕೋರ್ಟ್‌ನಲ್ಲಿ ಸೋಮವಾರ ವಜಾಗೊಂಡಿದೆ. ಭಾರತದಲ್ಲಿನ ಕೆಲವು ವಿಮಾನ ನಿಲ್ದಾಣಗಳಲ್ಲಿ ಸರಕು ಸಾಗಣೆ ಸೇವೆಯ ಗುತ್ತಿಗೆ ಪಡೆದಿದ್ದ ಸೆಲೆಬಿ ಏರ್‌ಪೋರ್ಟ್ ಸರ್ವೀಸಸ್ ಇಂಡಿಯ ಪ್ರೈ.ಲಿ. ಮತ್ತು ಸೆಲೆಬಿ ದೆಹಲಿ ಕಾರ್ಗೋ ಟರ್ಮಿನಲ್ ಮ್ಯಾನೇಜ್‌ಮೆಂಟ್ ಇಂಡಿಯ ಪ್ರೈ.ಲಿ. ಸಲ್ಲಿಸಿದ್ದ ಅರ್ಜಿಗಳನ್ನು ನ್ಯಾ.ಸಚಿನ್ ದತ್ತ ವಜಾಗೊಳಿಸಿದ್ದಾರೆ.

ಭಯೋತ್ಪಾದಕ ರಾಷ್ಟ್ರ ಪಾಕಿಸ್ತಾನ ಪಹಲ್ಗಾಮ್ ದಾಳಿಗೆ ಕಾರಣವಾಗಿದ್ದರೂ ಆ ದೇಶವನ್ನು ಮುಸ್ಲಿಂ ರಾಷ್ಟ್ರ ಟರ್ಕಿ ಬಹಿರಂಗವಾಗಿಯೇ ಬೆಂಬಲಿಸಿತ್ತು. ಅಲ್ಲದೇ, ಭಾರತದ ಆಪರೇಷನ್ ಸಿಂದೂರ್ ಕಾರ್ಯಾಚರಣೆಯನ್ನು ಖಂಡಿಸಿತ್ತು. ಈ ಹಿನ್ನೆಲೆ ಕೇಂದ್ರ ಸರಕಾರ ಮೇ 15 ರಂದು 'ಸೆಲೆಬಿ'ಗೆ ವಹಿಸಿದ್ದ ಗುತ್ತಿಗೆಗಳನ್ನು ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದ ರದ್ದುಗೊಳಿಸಿತ್ತು.

ದೇಶದ ವಿಮಾನ ನಿಲ್ದಾಣಗಳಲ್ಲಿ ಟರ್ಕಿ ದೇಶದ 'ಸೆಲೆಬಿ' ಕಂಪನಿಯ ಸೇವೆ ಮುಂದುವರಿಸುವುದು ದೇಶದ ಭದ್ರತೆಗೆ ಅಪಾಯವನ್ನುಂಟು ಮಾಡುವಂತಹುದಾಗಿದೆ ಎಂಬ ಗುಪ್ತಚರ ಮಾಹಿತಿಗಳನ್ನು ಆಧರಿಸಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಕೇಂದ್ರ ಸರಕಾರ ತನ್ನ ಕ್ರಮವನ್ನು ಸಮರ್ಥಿಸಿಕೊಂಡಿತ್ತು.

ಪರವಾನಗಿ ರದ್ದು ಮಾಡಿದ್ದರಿಂದ ಸೆಲೆಬಿ ಏರ್‌ಪೋರ್ಟ್ ಸರ್ವೀಸ್‌ನ 3,791 ನೌಕರರಿಗೆ ತೊಂದರೆಯಾಗಿದೆ. ಕೇಂದ್ರ ಸರಕಾರ ಪರವಾನಗಿ ರದ್ದು ಮಾಡುವ ಮುನ್ನ ಸೂಚನೆ ನೀಡಿಲ್ಲ. ಇದು ಒಪ್ಪಂದದ ಉಲ್ಲಂಘನೆ ಎಂದು ಆರೋಪಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು.

ಸ್ಮಾರ್ಟ್ ಮೀಟರ್‌ನ ಹೆಚ್ಚಿನ ದರ ಬಗ್ಗೆ ಹೈಕೋರ್ಟ್ ಗರಂ

ಮೀಟರ್ ದರ ಸಂಬಂಧ ಪ್ರಶ್ನಿಸಿದ ಅರ್ಜಿ | ನಾಳೆ ಮುಂದಿನ ವಿಚಾರಣೆ

ಬೆಂಗಳೂರು: ಬೆಸ್ಕಾಂನ ಸ್ಮಾರ್ಟ್ ಮೀಟರ್ ಕಡ್ಡಾಯಕ್ಕೆ ಸಂಬಂಧಿಸಿದಂತೆ ಹೈಕೋರ್ಟ್, ಪ್ರತಿಕ್ರಿಯಿಸಲು ಸರಕಾರಕ್ಕೆ ಸೂಚನೆ ನೀಡಿದೆ.

ಸ್ಮಾರ್ಟ್ ಮೀಟರ್ ದರ ಸಂಬಂಧ ಬೆಸ್ಕಾಂ ಕ್ರಮ ಪ್ರಶ್ನಿಸಿ ಜಯಲಕ್ಷ್ಮೀ ಎಂಬುರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್, ಪಕ್ಕದ ರಾಜ್ಯದಲ್ಲಿ 900 ರು. ಇದೆ. ಆದರೆ ನಮ್ಮ ರಾಜ್ಯದಲ್ಲಿ 10 ಸಾವಿರ ರುಪಾಯಿ ಏಕೆ ಎಂದು ಪ್ರಶ್ನಿಸಿದೆ. ಈ ಬಗ್ಗೆ ಪ್ರತಿಕ್ರಿಯಿಸಲು ಸರಕಾರಕ್ಕೆ ಸೂಚಿಸಿರುವ ಹೈಕೋರ್ಟ್, ಮುಂದಿನ ವಿಚಾರಣೆಯನ್ನು ಜುಲೈ 9ಕ್ಕೆ ಮುಂದೂಡಿದೆ. ರಾಜ್ಯ ಸರಕಾರದ ಪರ ಎ.ಜಿ ಶಶಿಕಿರಣ್ ಶೆಟ್ಟಿ ವಾದ ಮಂಡಿಸಿದ್ದು, ತಾತ್ಕಾಲಿಕ ವಿದ್ಯುತ್ ಸಂಪರ್ಕಕ್ಕೆ ಪ್ರಿಪೇಯ್ಡ್ ಸ್ಮಾರ್ಟ್ ಮೀಟರ್, ಹೊಸ ವಿದ್ಯುತ್ ಸಂಪರ್ಕಕ್ಕೆ ಪೋಸ್ಟ್ ಪೇಯ್ಡ್ ಸ್ಮಾರ್ಟ್ ಮೀಟರ್, ಹೊಸ ಗ್ರಾಹಕರಿಗೆ ಮಾತ್ರ ಈ ಸ್ಮಾರ್ಟ್ ಮೀಟರ್ ಕಡ್ಡಾಯ ಎಂದು ತಿಳಿಸಿದರು. ಇದಕ್ಕೆ ಪ್ರತಿವಾದ ಮಂಡಿಸಿದ ಅರ್ಜಿದಾರ ಜಯಲಕ್ಷ್ಮೀ ಪರ ವಕೀಲ ಲಕ್ಷ್ಮೀ ಐಯ್ಯಂಗಾರ್, 3 ಫೇಸ್ ಸ್ಮಾರ್ಟ್ ಮೀಟರ್‌ಗೆ 10 ಸಾವಿರ ವಿಧಿಸಲಾಗುತ್ತಿದೆ. ಪ್ರತಿ ತಿಂಗಳು ಗುತ್ತಿಗೆದಾರ 75 ರುಪಾಯಿ ರಾಜಶ್ರೀ ಎಲೆಕ್ಟ್ರಿಕಲ್ಸ್ ಗೆ ನೀಡಬೇಕಾಗಿದೆ ಎಂದರು.



ಈ ವಾದ ಪ್ರತಿವಾದ ಆಲಿಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಹೈಕೋರ್ಟ್ ಪೀಠ, ಗ್ರಾಹಕರಿಗೆ ಗೊಂದಲ ಉಂಟುಮಾಡುವ ನೀತಿ ಏಕೆ ರೂಪಿಸಿದ್ದೀರಿ? ನೆರೆ ರಾಜ್ಯಗಳಿಗಿಂತ ನಮ್ಮ ಗ್ರಾಹಕರಿಗೆ ದರ ಏರಿಕೆ ಹೊಡೆತ ಬೀಳಬಾರದು ಎಂದು ರಾಜ್ಯಕ್ಕೆ ಸೂಚನೆ ನೀಡಿತು.

ವಿದ್ಯುತ್ ಬಳಕೆ ಸಂಬಂಧ ರಿಯಲ್ ಟೈಮ್‌ನಲ್ಲಿ ವಿದ್ಯುತ್ ಬಳಕೆ ಬಗ್ಗೆ ನಿಖರ ಮಾಹಿತಿ ಒದಗಿಸುವ ಸ್ಮಾರ್ಟ್ ಮೀಟರ್‌ಗಳಿಗೆ ಭಾರಿ ಮೊತ್ತದ ಹೆಚ್ಚುವರಿ ದರ ನಿಗದಿ ಆಕ್ಷೇಪಿಸಿ ಜಯಲಕ್ಷ್ಮೀ ಎಂಬವರು ಸಲ್ಲಿಸಿದ್ದರು. ಈ ಅರ್ಜಿಯನ್ನು ಈ ಹಿಂದೆ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಹೈಕೋರ್ಟ್ ಪೀಠ, ಸ್ಮಾರ್ಟ್ ಮೀಟರ್ ಶುಲ್ಕಕ್ಕೆ ಮಧ್ಯಂತರ ತಡೆ ನೀಡಿತ್ತು, ಅಲ್ಲದೇ ಬಡವರಿಂದ ಇಷ್ಟು ಹಣ ಕಿತ್ತುಕೊಂಡರೆ ಎಲ್ಲಿಗೆ ಹೋಗಬೇಕು? ಎಲ್ಲರೂ ಸ್ಮಾರ್ಟ್ ಮೀಟರ್ ಹಾಕಬೇಕೆಂದರೆ ಬಡವರೇನು ಮಾಡಬೇಕು ಎಂದು ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿತ್ತು.

ತಿರುಪತಿ: ಅನ್ನ ಪ್ರಸಾದದ ಜತೆಗೆ ವಡೆ

ಹೈದರಾಬಾದ್: ತಿರುಮಲ ತಿರುಪತಿ ದೇವಸ್ಥಾನಂ ಇನ್ನುಮುಂದೆ ದೇವಾಸ್ಥಾನಕ್ಕೆ ಬರುವ ಭಕ್ತರಿಗೆ ದಿನಕ್ಕೆ ಎರಡು ಬಾರಿ ವಡೆ ವಿತರಣೆ ಮಾಡುವುದಾಗಿ ಅಧಿಕೃತವಾಗಿ ಘೋಷಿಸಿದೆ. ಲಘು ಉಪಹಾರದ ವೇಳೆ ವಡೆಯನ್ನು ತಾರಿಗೊಂಡ ಅನ್ನಪ್ರಸಾದ ಕೇಂದ್ರದಲ್ಲಿ ಬೆಳಗ್ಗೆ ಮತ್ತು ಸಂಜೆ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ. ಈ ನೂತನ ಕ್ರಮವು ಈಗಾಗಲೇ ನಡೆಯುತ್ತಿರುವ ಉಚಿತ ಅನ್ನಪ್ರಸಾದ ಸೇವೆಯ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತರಿಸಿದ್ದು, ದೇವಾಲಯಕ್ಕೆ ಬರುವ ಭಕ್ತರಿಗೆ ಅನುಕೂಲ ಒದಗಿಸಲಿದೆ.

ದೇವಾಸ್ಥಾನದ ಅಧ್ಯಕ್ಷ ಬಿ.ಆರ್. ನಾಯ್ಡು ಪರಂಪರೆಯ ಪ್ರಕಾರ ಪೂಜೆ ಸಲ್ಲಿಸಿ, ಈ ಸೇವೆಯನ್ನು ಅಧಿಕೃತವಾಗಿ ಪ್ರಾರಂಭಿಸಿದರು. ಈ ಸಂದರ್ಭದಲ್ಲಿ ಅವರು ಭಕ್ತರಿಗೆ ಸ್ವತಃ ವಡೆಗಳನ್ನು ವಿತರಿಸುವ ಮೂಲಕ ಯೋಜನೆಗೆ ಚಾಲನೆ ನೀಡಿದರು. ಈ ಹಿಂದೆ ಅನ್ನಪ್ರಸಾದ ಕೇಂದ್ರದಲ್ಲಿ ಪ್ರತಿ ದಿನ ಸುಮಾರು 40,000 ವಡೆಗಳನ್ನು ಮಧ್ಯಾಹ್ನದೂಟದ ಸಮಯದಲ್ಲಿ ಮಾತ್ರ ತಯಾರಿಸಲಾಗುತ್ತಿತ್ತು. ಸೋಮವಾರದಿಂದ ಬೆಳಗ್ಗೆ 11 ಗಂಟೆಯಿಂದ ರಾತ್ರಿ 10.30ರವರೆಗೆ ವಡೆ ಲಭ್ಯವಿರುವಂತೆ ಕ್ರಮ ಕೈಗೊಳ್ಳಲಾಗಿದೆ.

ಭಕ್ತರ ರಾತ್ರಿಯೂಟಕ್ಕೂ ವಡೆ ನೀಡಬೇಕೆಂಬ ಬೇಡಿಕೆಯು ಬಂದ ಹಿನ್ನೆಲೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ನಾಯ್ಡು ಹೇಳಿದರು.

ಈ ನೂತನ ಸೇವೆಯಿಂದ ಪ್ರತಿದಿನ 70,000ರಿಂದ 75,000 ವಡೆಗಳವರೆಗೆ ತಯಾರಿಸಬೇಕಾಗಬಹುದು ಎನ್ನುವ ಲೆಕ್ಕಾಚಾರವಿದೆ. ದೇವಾಸ್ಥಾನದಲ್ಲಿ ತಯಾರಿಸುವ ವಡೆಗಳನ್ನು ಬೆಂಗಾಲ್ ಗ್ರಾಂ, ಹಸಿಮೆಣಸು, ಶುಂಠಿ, ಕರಿಬೇವು, ಕೊತ್ತಂಬರಿ, ಪುದೀನಾ ಬಳಸಿ ರುಚಿಕರ ರೀತಿಯಲ್ಲಿ ತಯಾರಿಸಲಾಗುತ್ತಿದ್ದು, ಇದಕ್ಕೆ ಭಕ್ತರಿಂದ ಉತ್ತಮ ಪ್ರತಿಕ್ರಿಯೆ ದೊರೆಯುತ್ತಿದೆ.

ಹಲ್ಲೆ ಪ್ರೇರಣೆ ಅಧ್ಯಯನ ಅಗತ್ಯ: ಪರಂ

ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣ ಸಮಾಜದ ಮೇಲೆ ಪ್ರೇರೇಪಣೆಯಾಗಿದೆಯೇ ಎಂಬ ಬಗ್ಗೆ ಮಾನಸಿಕ ಅಥವಾ ಸಾಮಾಜಿಕ ತಜ್ಞರು ಅಧ್ಯಯನ ನಡೆಸಬೇಕಿದೆ ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನೆಲಮಂಗಲ ತಾಲೂಕಿನ ಸೋಲದೇವನಹಳ್ಳಿ ಬಳಿ ನಡೆದಿರುವ ಹಲ್ಲೆ ಪ್ರಕರಣದ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇಲ್ಲ. ಆರೋಪಿಗಳು ಬಂಧನವಾಗಿರುವ ಬಗ್ಗೆ ತಿಳಿಸಲಾಗಿದ್ದು, ಮತ್ತಷ್ಟು ಮಾಹಿತಿ ಪಡೆದು ಅನಂತರ ಪ್ರತಿಕ್ರಿಯಿಸುತ್ತೇನೆ. ಹಲ್ಲೆ ನಡೆಸಿದ ಆರೋಪಿಗಳು ಚಿತ್ರದುರ್ಗದ ರೇಣುಕಾಸ್ವಾಮಿ ಮಾದರಿಯ ಪ್ರಕರಣ ಇದು ಎಂದು ವಿಡಿಯೊದಲ್ಲಿ ಹೇಳಿಕೊಂಡಿದ್ದಾರೆ. ನಟ ದರ್ಶನ್ ಅವರು ಆರೋಪಿಯಾಗಿರುವ ರೇಣುಕಾಸ್ವಾಮಿ ಕೊಲೆ ಪ್ರಕರಣ ಪ್ರೇರೇಪಣೆಯಿಂದ ಈ ರೀತಿಯ ಇತರ ಘಟನೆಗಳು ವರದಿಯಾಗುತ್ತಿವೆ ಎಂಬ ಬಗ್ಗೆ ನಾನು ಹೇಳಲೂ ಸಾಧ್ಯವಿಲ್ಲ. ದರ್ಶನ್ ಪ್ರಕರಣ ಸಮಾಜದ ಯುವಕರಲ್ಲಿ ಪರಿಣಾಮ ಬೀರಿದೆಯೇ ಎಂಬ ಬಗ್ಗೆ ಸಾಮಾಜಿಕ ಅಥವಾ ಮಾನಸಿಕ ತಜ್ಞರು ಅಧ್ಯಯನ ನಡೆಸಬೇಕು ಎಂದು ಹೇಳಿದರು.

ವಾಟ್ಸಾಪ್ ಮೂಲಕ ಬೈಕ್ ಸೇವೆ ಪಡೆಯುತ್ತಿರುವ ಪ್ರಯಾಣಿಕರು

ಬೈಕ್‌ಸೇವೆ ಸ್ಥಗಿತ: ವಾಟ್ಸಾಪ್ ಮೂಲಕ ಸಂಪರ್ಕ

ಬೆಂಗಳೂರು: ರಾಜ್ಯ ಸರಕಾರ ಬೈಕ್ ಟ್ಯಾಕ್ಸಿಗಳನ್ನು ನಿಷೇಧಿಸಿದ್ದರೂ ಹಲವಾರು ಭಾಗದಲ್ಲಿ ಸದ್ದಿಲ್ಲದೇ ಈ ಸೇವೆಯು ಚಾಲ್ತಿಯಲ್ಲಿದ್ದು, ಪ್ರಯಾಣಿಕರು ವಾಟ್ಸ್ ಅಪ್ ಮೂಲಕ ಸವಾರರನ್ನು ಸಂಪರ್ಕಿಸಿ ಸೇವೆ ಪಡೆಯುತ್ತಿದ್ದಾರೆ.

ನಗರದ ಪ್ರಮುಖ ಟೆಕ್ ಪಾರ್ಕ್‌ಗಳು, ಮೆಟ್ರೋ ನಿಲ್ದಾಣಗಳು ಮತ್ತು ಕಚೇರಿ ಕೇಂದ್ರಗಳಿಂದ ನಿಯಮಿತವಾಗಿ ಬೈಕ್ ಟ್ಯಾಕ್ಸಿ ಸೇವೆಗಳನ್ನು ಜನರು ಬಳಕೆ ಮಾಡುತ್ತಿದ್ದರು. ಆದರೆ ನಿಷೇಧದ ಬಳಿಕ ಇದೀಗ ಸವಾರರಿಗೆ ವೈಯಕ್ತಿಕ ಸಂದೇಶಗಳನ್ನು ರವಾನಿಸಿ, ಸೇವೆ ಪಡೆಯುತ್ತಿದ್ದಾರೆ. ಚಾಟ್‌ನಲ್ಲಿ ಚಾಲಕರು ತಮ್ಮ ಲೈವ್ ಲೊಕೇಶನ್‌ಗಳನ್ನು ಜನರೊಂದಿಗೆ ಹಂಚಿಕೊಳ್ಳುತ್ತಿದ್ದು, ಬಳಿಕ ಪ್ರಯಾಣಿಕರಿಗೆ ಸೌಲಭ್ಯಗಳನ್ನು ಒದಗಿಸುತ್ತಿದ್ದಾರೆ. ಹಿಂದಿನ ದರದಲ್ಲೇ ಸೇವೆ ಬಳಕೆ ಮಾಡಲಾಗುತ್ತಿದೆ. ಪಾರ್ಸೆಲ್‌ಗಳನ್ನು ಬುಕ್ ಮಾಡುವ ಕೆಲವರಿಗೆ ಸವಾರರು ಕರೆ ಮಾಡುತ್ತಿದ್ದು, ಪ್ರಯಾಣದ ಸೇವೆ ಬೇಕೆಂದರೆ ಸಂಪರ್ಕಿಸುವಂತೆ ತಿಳಿಸುತ್ತಿದ್ದಾರೆ. ಜತೆಗೆ ಈ ಹಿಂದೆ ಪ್ರಯಾಣಿಸಿದ್ದ ಸವಾರರ ಫೋನ್ ಸಂಖ್ಯೆಗಳನ್ನು ಸೇವ್ ಮಾಡಿಟ್ಟುಕೊಂಡು, ಸೌಲಭ್ಯಗಳನ್ನು ಪಡೆಯಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಪಾರ್ಸಲ್ ಡ್ರಾಪ್: ಪ್ರಯಾಣಕ್ಕೆ ಬಳಕೆ: ಮೆಟ್ರೋ ನಿಲ್ದಾಣದಿಂದ ಕಚೇರಿಕೆ ತೆರಳಲು ಬೈಕ್ ಟ್ಯಾಕ್ಸಿಯನ್ನು ನಿಯಮಿತವಾಗಿ ಬುಕ್ ಮಾಡುತ್ತಿದ್ದವರಿಗೆ ಸವಾರರು ವಾಟ್ಸಾಪ್ ನಲ್ಲಿ ಸಂದೇಶ ಕಳುಹಿಸಿ, ಡ್ರಾಪ್ ಬೇಕಾ ಎಂದು ಕೇಳುತ್ತಿದ್ದು, ನಂತರ ಆತನ ಲೈವ್ ಲೊಕೇಶನ್‌ನ್ನು ರವಾನಿಸುತ್ತಾನೆ ಎಂದು ಪ್ರಯಾಣಿಕರು ಹೇಳಿದ್ದಾರೆ. ಮೊದಲು ಪಾರ್ಸೆಲ್ ಬುಕ್ ಮಾಡಲಾಗುತ್ತದೆ. ಆ ಬಳಿಕ ಬುಕಿಂಗ್ ಕ್ಯಾನ್ಸಲ್ ಮಾಡಿ ಅನೌಪಚಾರಿಕವಾಗಿ ನೇರ ಪಿಕ್‌ಅಪ್ ಪಡೆಯಲಾಗುತ್ತಿದೆ. ಕೆಲ ಸವಾರರು ಪ್ರಯಾಣಿಕರಿಗೆ ತಮ್ಮ ದೂರವಾಣಿ ಸಂಖ್ಯೆಗಳನ್ನು ನೀಡುತ್ತಿದ್ದು, ಅಗತ್ಯವಾದರೆ, ಸಂಪರ್ಕಿಸುವಂತೆ ತಿಳಿಸುತ್ತಿದ್ದಾರೆ.

ಆಟೋಗಳಲ್ಲಿ 2 ಕಿ.ಮೀ.ಗಿಂತ ಕಡಿಮೆ ದೂರಕ್ಕೂ 130-160 ರು.ಗಳವರೆಗೆ ಶುಲ್ಕ ವಿಧಿಸುತ್ತಾರೆ. ಕಡಿಮೆ ದೂರದ ಪ್ರಯಾಣ ಬೇಡಿಕೆಯನ್ನು ನಿರಾಕರಿಸುತ್ತಾರೆ. ಹೆಚ್ಚಿನ ದರ ಬರುವ ಪ್ರಯಾಣಕ್ಕಷ್ಟೇ ಸೇವೆ ನೀಡುತ್ತಾರೆ. ಹೀಗಾಗಿ ಬೈಕ್ ಟ್ಯಾಕ್ಸಿ ಸೇವೆ ನಮಗೆ ಅಗತ್ಯವಿದೆ.

-ಪ್ರಯಾಣಿಕರು

ಸ್ಥಗಿತಗೊಂಡಿದ್ದ ಬೌನ್ಸ್ ಬೈಕ್ ಸೇವೆ ಆರಂಭ

ರಾಜ್ಯ ಸಾರಿಗೆಯೂ ಬೈಕ್ ಟಾಕ್ಸಿಗೆ ನಿಷೇಧ ಹೇರಿದ ಬೆನ್ನಲ್ಲೇ ಮೂರು ವರ್ಷಗಳ ಹಿಂದೆ ಸ್ಥಗಿತಗೊಂಡಿದ್ದ ಬೌನ್ಸ್ ಬೈಕ್‌ಗಳು ಹೊಸ ರೂಪ ಹಾಗೂ ಹೊಸ ನಿಯಮದೊಂದಿಗೆ ಮತ್ತೆ ಸೇವೆಯನ್ನು ಆರಂಭಿಸಿದೆ. ನಗರದಲ್ಲಿ ಅಗ್ರಿಗೇಟರ್ ಕಂಪನಿಗಳಾದ ಓಲಾ, ಉಬರ್, ಆಟೋ ಚಾಲಕರ ಸುಲಿಗೆಯಿಂದಾಗಿ ಪ್ರತಿನಿತ್ಯ ಕೆಲಸಕ್ಕಾಗಿ ಸಂಚಾರ ನಡೆಸುವವರಿಗೆ ಸಮಸ್ಯೆಯಾಗುತ್ತಿದ್ದು, ಇದರ ನಡುವೆ ಸ್ಥಗಿತಗೊಂಡಿದ್ದ ಬೌನ್ಸ್ ಬೈಕ್ ಬಾಡಿಗೆ ಸೇವೆಯನ್ನು ಮತ್ತೆ ಆರಂಭಿಸಲಾಗಿದೆ. ರಾಜ್ಯ ಸಾರಿಗೆ ಇಲಾಖೆಯ ರೆಂಟ್ ಎ ಮೋಟಾರ್ ಸೈಕಲ್ ಸ್ಕೀಮ್ - 1987ರಲ್ಲಿ ಅನುಮತಿ ಪಡೆದು ಈ ಬೈಕ್ ಸೇವೆಯನ್ನು ನೀಡಲಾಗುತ್ತಿದ್ದು, ನಗರದಲ್ಲಿ ಮತ್ತೆ ಬಾಡಿಗೆ ಬೈಕ್‌ಗಳು ರಸ್ತೆಗಿಳಿದಿವೆ. ಈ ಬಾಡಿಗೆ ಬೈಕ್‌ಗಳು ಬೌನ್ಸ್ ಎಲೆಕ್ಟ್ರಿಕ್ ಬೈಕ್‌ಗಳಾಗಿದ್ದು, ಮೊದಲ ಹಂತದಲ್ಲಿ ಗಿಗ್ ವರ್ಕರ್ಸ್‌ಗಳಾದ ಫುಡ್ ಡೆಲಿವರಿ, ಕೊರಿಯರ ಬಾಯ್ಸ್, ಸೇಲ್ಸ್ ಮ್ಯಾನ್‌ಗಳಿಗೆ ಬಾಡಿಗೆಗೆ ನೀಡಲಾಗುತ್ತಿದೆ. ಒಂದು ದಿನಕ್ಕೆ 240-280 ರು.ನಂತೆ ದರ ನಿಗದಿಪಡಿಸಲಾಗಿದೆ.

ಬಿಬಿಎಂಪಿ ಶಾಲಾ ಮಕ್ಕಳಿಗೆ ಸಿಗದ ಸಮವಸ್ತ್ರ

ಸಮವಸ್ತ್ರ ಮತ್ತು ಶೂಗಳಿಗಾಗಿ ಕಾಯುತ್ತಿರುವ 22,000ಕ್ಕೂ ಹೆಚ್ಚು ವಿದ್ಯಾರ್ಥಿಗಳು

ಬೆಂಗಳೂರು: ನಗರದಲ್ಲಿ ಶಾಲೆ ಆರಂಭವಾಗಿ ತಿಂಗಳೂ ಕಳೆದರೂ ಬಿಬಿಎಂಪಿ ಶಾಲೆಯ ಮಕ್ಕಳಿಗೆ ಸಮವಸ್ತ್ರ, ಶೂ ಇನ್ನೂ ವಿತರಣೆಯಾಗಿಲ್ಲ.

ಬಿಬಿಎಂಪಿ ಶಾಲೆಗಳಲ್ಲಿ 22,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸಮವಸ್ತ್ರ ಮತ್ತು ಶೂಗಳಿಗಾಗಿ ಕಾಯುತ್ತಿದ್ದು, ಜೂನ್‌ನಲ್ಲಿ ಆರಂಭವಾದ ಟೆಂಡರ್ ಪ್ರಕ್ರಿಯೆ ಇನ್ನೂ ಪೂರ್ಣಗೊಳ್ಳದ ಹಿನ್ನೆಲೆ ಶಾಲೆಗಳು ಆರಂಭವಾದ ಒಂದು ತಿಂಗಳಾದರೂ ವಿದ್ಯಾರ್ಥಿಗಳಿಗೆ ಸಮವಸ್ತ್ರ ಮತ್ತು ಬೂಟುಗಳನ್ನು ವಿತರಿಸಲು ಸಾಧ್ಯವಾಗಿಲ್ಲ. ಪಾಲಿಕೆಯು ಶೂ ಮತ್ತು ಸಮವಸ್ತ್ರದ ಟೆಂಡರ್‌ನ್ನು ಜೂನ್‌ನಲ್ಲೇ ಕರೆದಿದ್ದು, ಟೆಂಡರ್ ಪಡೆಯಲು ಅನೇಕ ಕಂಪನಿಗಳು ಮುಂದೆ ಬಂದಿವೆ. ಆದರೆ ಯಾವ ಕಂಪನಿಗೆ ಟೆಂಡರ್ ನೀಡಬೇಕು ಎನ್ನುವುದು ಅಂತಿಮವಾಗದ ಹಿನ್ನೆಲೆ ವಿದ್ಯಾರ್ಥಿಗಳಿಗೆ ಸಮವಸ್ತ್ರ ಹಾಗೂ ಶೂ ವಿತರಣೆಯಾಗಿಲ್ಲ. ವಿದ್ಯಾರ್ಥಿಗಳು ಸಮವಸ್ತ್ರ ಹಾಗೂ ಶೂಗಾಗಿ ಇನ್ನೊಂದು ತಿಂಗಳು ಕಾಯಬೇಕಾಗಿದೆ.

ಬಿಬಿಎಂಪಿಯ 93 ಶಿಶುವಿಹಾರ, 17 ಪ್ರಾಥಮಿಕ ಶಾಲೆ, 35 ಪ್ರೌಢಶಾಲೆ, 20 ಪಿ.ಯು ಕಾಲೇಜು, 6 ಸ್ನಾತಕೋತ್ತರ ಪದವಿ ಕಾಲೇಜುಗಳಿವೆ. ಬಿಬಿಎಂಪಿ ಶಾಲೆಗಳಿಗೆ ಪ್ರಸಕ್ತ ವರ್ಷ 22 ಸಾವಿರಕ್ಕೂ ಅಧಿಕ ಮಕ್ಕಳು ದಾಖಲಾತಿ ಪಡೆದುಕೊಂಡಿದ್ದಾರೆ. ಈಗಾಗಲೇ ಶಾಲೆಗಳು ಆರಂಭಗೊಂಡು 35 ದಿನ ಕಳೆದಿವೆ. ಆದರೂ ಕೂಡ ಬಿಬಿಎಂಪಿಯ ಶಾಲಾ, ಕಾಲೇಜು ವಿದ್ಯಾರ್ಥಿಗಳಿಗೆ ಸಮವಸ್ತ್ರ, ಶೂ, ಸಾಕ್ಸ್ ನೀಡಿಲ್ಲ ಎನ್ನುವ ಆರೋಪ ಕೇಳಿಬಂದಿದೆ.

ವಿದ್ಯಾರ್ಥಿಗಳು ಹೊಸ ಶೂ, ಸಮವಸ್ತ್ರ ಧರಿಸಲು ಇನ್ನೂ ಒಂದು ತಿಂಗಳು ಕಾಯಬೇಕಾಗಿದ್ದು, ಪಾಲಿಕೆಯ ಶಾಲಾ-ಕಾಲೇಜಿಗೆ ಜುಲೈ 31ರವರೆಗೆ ದಾಖಲಾತಿಗೆ ಅವಕಾಶ ಇದೆ. ಇನ್ನೂ ಸಾಕಷ್ಟು ವಿದ್ಯಾರ್ಥಿಗಳು ದಾಖಲಾಗುವ ಸಾಧ್ಯತೆ ಇದೆ. ಕಂಪನಿಗಳಿಂದ ಶೂ, ಸಮವಸ್ತ್ರಗಳ ಸ್ಯಾಂಪಲ್ ಪಡೆಯಲಾಗಿದೆ. ಸಮಿತಿ ನೇತೃತ್ವದಲ್ಲಿ ಯಾವ ಕಂಪನಿಗೆ ಟೆಂಡರ್ ನೀಡಬೇಕು ಎಂದು ಫೈನಲ್ ಮಾಡಿದ ಮೇಲೆ ಸಮವಸ್ತ್ರ, ಶೂ ಖರೀದಿಸಲಾಗುತ್ತದೆ ಎಂದು ಪಾಲಿಕೆ ಅಧಿಕಾರಿಗಳು ಹೇಳಿದ್ದಾರೆ.

1951ರಿಂದಲೇ ಚಾಲ್ತಿಯಲ್ಲಿರುವ ಹೆಸರು | ದ.ಕ. ಜಿಲ್ಲೆ ಹೆಸರು ಬದಲಾವಣೆಗೆ ಬೆಂಬಲದ ಮಹಾಪೂರ | ಅಭಿಯಾನ ಆರಂಭ

ಮಂಗಳೂರು ಜಿಲ್ಲೆ: ಹೋರಾಟ ಸಮಿತಿ ಅಸ್ತಿತ್ವಕ್ಕೆ

ಜಿತೇಂದ್ರ ಕುಂದೇಶ್ವರ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯನ್ನು ಮಂಗಳೂರು ಜಿಲ್ಲೆಯಾಗಿ ಬದಲಾಯಿಸಬೇಕು ಎಂಬ ಮನವಿ ಈಗ ಅಭಿಯಾನದ ಸ್ವರೂಪ ಪಡೆದುಕೊಂಡಿದ್ದು, ಸಂಘಟನೆಗಳು, ಉದ್ಯಮಿಗಳ ಜತೆ ರಾಜಕಾರಣಿಗಳು, ಜನಪ್ರತಿನಿಧಿಗಳು ಕೈ ಜೋಡಿಸಿಕೊಂಡಿದ್ದಾರೆ. ಅಭಿಯಾನಕ್ಕಾಗಿ ಮಂಗಳೂರು ಜಿಲ್ಲೆ ಹೋರಾಟ ಸಮಿತಿ ಸೋಮವಾರ ಸಂಜೆ ಅಸ್ತಿತ್ವಕ್ಕೆ ಬಂದಿದೆ. ಎಲ್ಲ ರಾಜಕೀಯ ಪಕ್ಷ, ಸಂಘಟನೆ, ಉದ್ಯಮಿಗಳು, ಜನಪ್ರತಿನಿಧಿಗಳು ಒಟ್ಟು ಸೇರಿ ಸಭೆ ನಡೆಸಿದ್ದಾರೆ.

ಒಕ್ಕೊರಲಿನ ಅಭಿಪ್ರಾಯ ರೂಪುಗೊಳ್ಳುತ್ತಿದೆ ಎನ್ನುವ ಹೊತ್ತಿಗೆ ಭಿನ್ನ ಸ್ವರ, ಅಪಸ್ವರವೂ ಅಲ್ಲಲ್ಲಿ ಕೇಳಿ ಬರುತ್ತಿದ್ದರೂ ರಾಜ್ಯದಲ್ಲಿ ಮತ್ತು ರಾಜಧಾನಿಯಲ್ಲಿ ಮಂಗಳೂರೇ ಹೆಚ್ಚು ಪ್ರಚಲಿತದಲ್ಲಿರುವುದರಿಂದ, ಆ ಭಾಗದಲ್ಲಿ ಮಂಗಳೂರು ಜಿಲ್ಲೆ ಎಂದು ಈಗಾಗಲೇ ರೂಢಿಯಲ್ಲಿ ಬಳಸುತ್ತಿರುವುದರಿಂದ ವಿವಾದ ಸ್ವರೂಪ ಪಡೆದುಕೊಂಡಿಲ್ಲ.

ಜಿಲ್ಲಾ ಕೇಂದ್ರವಾದ ಮಂಗಳೂರು, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬ್ಯಾಂಕಿಂಗ್, ಡೀಮ್ಡ್ ಯುನಿವರ್ಸಿಟಿಗಳು, ಶಿಕ್ಷಣ, ಹೈಟೆಕ್ ಆಸ್ಪತ್ರೆಗಳು, ಹೋಟೆಲ್ ಆತಿಥ್ಯ ಉದ್ಯಮದ ಕೇಂದ್ರವಾಗಿ ಬಲವಾದ ಬ್ರ್ಯಾಂಡ್ ಮಂಗಳೂರು ರೂಪುಗೊಳ್ಳಲು ಇದು ಸಹಾಯವಾಗಲಿದೆ ಎನ್ನುವುದು ಜನರ ಅಭಿಪ್ರಾಯ.

ದಕ್ಷಿಣ ಕನ್ನಡ ಜಿಲ್ಲೆಯಿಂದ ಉಡುಪಿ ಜಿಲ್ಲೆ ಪ್ರತ್ಯೇಕವಾದಾಗ ಉಡುಪಿ ತಾಲೂಕಿನ ಹೆಸರನ್ನೇ ಕುಂದಾಪುರ, ಕಾರ್ಕಳ ತಾಲೂಕು ಒಳಗೊಂಡ ಜಿಲ್ಲೆಗೆ ನಾಮಕರಣ ಮಾಡಲಾಗಿತ್ತು. ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರವನ್ನು ಅಧಿಕೃತವಾಗಿ ಮಂಗಳೂರು ಕ್ಷೇತ್ರ ಎಂದು ಕರೆಯಲಾಗುತ್ತಿದ್ದು, 1951ರಿಂದಲೂ ಇದೇ ಹೆಸರು ಚಾಲ್ತಿಯಲ್ಲಿದೆ.

ದ.ಕ ಜಿಲ್ಲೆ: ಹಿನ್ನೆಲೆ

ದಕ್ಷಿಣ ಕನ್ನಡ ಜಿಲ್ಲೆಯ ಕೇಂದ್ರಸ್ಥಳ ಹಾಗೂ ಮುಖ್ಯ ನಗರ ಮಂಗಳೂರು, ಜನಸಂಖ್ಯೆ2.5 ಲಕ್ಷ. ಜಿಲ್ಲೆಯಲ್ಲಿ ಇರುವ ಒಟ್ಟು 9 ತಾಲ್ಲೂಕುಗಳೆಂದರೆ ಮಂಗಳೂರು, ಬಂಟ್ವಾಳ, ಪುತ್ತೂರು, ಸುಳ್ಯ, ಬೆಳ್ತಂಗಡಿ, ಮೂಡಬಿದ್ರೆ ಹಾಗೂ ಕಡಬ. ಜಿಲ್ಲೆಯಲ್ಲಿ ಒಟ್ಟು 223 ಗ್ರಾಮ ಪಂಚಾಯತ್‌ಗಳಿವೆ. ಕೆಲವು ವರ್ಷಗಳ ಹಿಂದೆ ಉಡುಪಿ, ಕುಂದಾಪುರ ಮತ್ತು ಕಾರ್ಕಳ ತಾಲೂಕುಗಳು ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ್ದವು. ಆಗಸ್ಟ್ 1997ರಲ್ಲಿ ಈ ತಾಲೂಕುಗಳನ್ನು ಉಡುಪಿ ಜಿಲ್ಲೆಯ ಭಾಗವಾಗಿ ಘೋಷಿಸಲಾ ಯಿತು. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ, ಕಾಸರಗೋಡು ಸೇರಿ ತುಳುನಾಡು ಎಂದು ಕರೆಯಲಾಗುತ್ತದೆ. ಮಂಗಳೂರು ನಗರವು ಇಲ್ಲಿನ ಜಿಲ್ಲಾ ಕೇಂದ್ರ. ಅಭಿವೃದ್ಧಿ ಹೊಂದುತ್ತಿರುವ ನಗರಗಳಲ್ಲಿ ಮಂಗಳೂರು 2ನೇ ಸ್ಥಾನದಲ್ಲಿದೆ. ತುಳು , ಕನ್ನಡ, ಅರೆಭಾಷೆ, ಕೊಂಕಣಿ, ಬ್ಯಾರಿ ಭಾಷೆ ಇಲ್ಲಿನ ಇತರ ಭಾಷೆಗಳು.

ತುಳುನಾಡು ಹೆಸರಿಡುವ ಕುರಿತು ಸಲಹೆಗಳು ಬಂದಿದ್ದವು. ಆದರೆ ಇದಕ್ಕೆ ರಾಜ್ಯದ ಇತರ ಕಡೆಗಳಿಂದ ಆಕ್ಷೇಪ ಬರುವ ಸಾಧ್ಯತೆ ಇದೆ. ಮಂಗಳೂರು ಸರ್ವ ಸಮ್ಮತ ಹೆಸರು ಎಂಬ ಕಾರಣಕ್ಕೆ ಸಭೆಯಲ್ಲಿ ಮಂಗಳೂರು ಜಿಲ್ಲೆ ನಾಮಕರಣ ಮಾಡುವಂತೆ ಒತ್ತಾಯಿಸಲು ಒಕ್ಕೊರಲ ನಿರ್ಣಯ ಕೈಕೊಳ್ಳಲಾಗಿದೆ.

-ದಯಾನಂದ ಕತ್ತಲ್‌ಸಾರ್,
ಮಾಜಿ ಅಧ್ಯಕ್ಷರು, ತುಳು ಅಕಾಡೆಮಿ

ಮಂಗಳೂರು ಜಿಲ್ಲೆ ಸಮಿತಿ: ಬಹುತೇಕ ಉದ್ಯಮಿಗಳು, ರಾಜಕಾರಣಿಗಳು, ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿದೆ. ಆದರೂ ಬೆರಳೆಣಿಕೆ ಸಂಘಟನೆಗಳು, ಜನರು ದಕ್ಷಿಣ ಕನ್ನಡ ಜಿಲ್ಲೆ ಇರಲಿ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಶಾಸಕ ವೇದವ್ಯಾಸ ಕಾಮತ್, ವಿಧಾನಪರಿಷತ್ ಸದಸ್ಯ ಐವನ್ ಡಿಸೋಜ ಕೂಡಾ ಸಮ್ಮತಿ ಮಾತ್ರವಲ್ಲದೆ ಅಭಿಯಾನಕ್ಕೆ ಕೈ ಜೋಡಿಸಿದ್ದಾರೆ. ಮಂಗಳೂರು ಜಿಲ್ಲೆ ಹೋರಾಟ ಸಮಿತಿ ಸೋಮವಾರ ಸಂಜೆ ಅಸ್ತಿತ್ವಕ್ಕೆ ಬಂದಿದೆ.

{ರಾಜನಾಥ್ ಸಿಂಗ್} ರಕ್ಷಣಾ ಸಚಿವ

ಶಾಂತಿಯ ಸಮಯ ಎನ್ನುವುದೇ ಒಂದು ಭ್ರಮೆ. ಭಾರತ ದೇಶ ಶಾಂತಿ ಪರಿಪಾಲನೆ ಮಾಡಿದರೂ ಕೆಲ ಸಂದರ್ಭಗಳಲ್ಲಿ ಅನಿಶ್ಚಿತತೆ ಎದುರಾಗುತ್ತದೆ. ನಾವು ಎಲ್ಲದಕ್ಕೂ ಸಿದ್ಧವಾಗಿರಬೇಕು. ಹಠಾತ್ ಬೆಳವಣಿಗೆಗಳು ಕಾರ್ಯಾಚರಣೆಗೆ ಭಾರೀ ಬದಲಾವಣೆ ತಂದುಬಿಡುತ್ತವೆ. ಇದಕ್ಕೆ ಆಪರೇಷನ್ ಸಿಂದೂರ ಸಂದರ್ಭವೇ ಸಾಕ್ಷಿ. ಆಗಿನ ಸಶಸ್ತ್ರ ಪಡೆಗಳ ಕಾರ್ಯಶೈಲಿ ಪ್ರಶಂಸಾರ್ಹ.



ಮೇರೇ ದೋಸ್ತ್, ಪಿಕ್ಚರ್ ಅಭಿ ಬಾಕಿ ಹೈ...

'ವಿಶ್ವವಾಣಿ ಪುಸ್ತಕ' ಪ್ರಕಾಶನವು ಪ್ರಕಟಿಸಿರುವ ವಿಭಿನ್ನ ಪುಸ್ತಕಗಳ ಕಿರುಮಾಹಿತಿಯನ್ನು ಕಳೆದೆರಡು ವಾರಗಳಿಂದ ಅವಲೋಕಿಸುತ್ತಿರುವುದರ ಜತೆಗೆ, ಭಾರಿ ಸಂಖ್ಯೆಯಲ್ಲಿ ಪುಸ್ತಕಗಳನ್ನು ಮನೆಗೇ ತರಿಸಿಕೊಳ್ಳುತ್ತಿರುವ ಓದುಗ ದೊರೆಗಳೇ, ನಿಮಗಿದೋ ನಮನ. ಓದುಗರ ಆತ್ಮೀಯ ಸಂಗಾತಿ 'ವಿಶ್ವವಾಣಿ ಪುಸ್ತಕ'ದ ಮತ್ತಷ್ಟು ವೈವಿಧ್ಯಮಯ ಹಾಗೂ ಚಿತ್ತಾಕರ್ಷಕ ಕೃತಿಗಳ ಕಿರು ವಿವರ ಇಲ್ಲಿದೆ. 'ಕೃತಿಹಬ್ಬ' ಇಲ್ಲಿಗೇ ಮುಗಿಯಲಿಲ್ಲ, ಈ ತಿಂಗಳ 26ರಂದು ಮತ್ತೊಂದು 'ಹಬ್ಬದೂಟ' ವಿದೆ. ಅಂದು ಮತ್ತಷ್ಟು ಪುಸ್ತಕಗಳು ಬಿಡುಗಡೆ ಯಾಗಲಿವೆ. ಆ ಕಾರ್ಯಕ್ರಮದ ಸ್ಥಳ-ಸಮಯ ಮುಂತಾದ ವಿವರಗಳು ಸದ್ಯದಲ್ಲೇ ನಿಮ್ಮೆದುರು ತೆರೆದುಕೊಳ್ಳಲಿವೆ. ಈ ಸಂಭ್ರಮಕ್ಕೆ ನೀವು ಸಾಕ್ಷಿಯಾಗದಿದ್ರೆ, 'ಅಟ್ಟಂಬಟ್ಟೆ ಕೋಳಿ ಮೊಟ್ಟೆ...' ಅಂತ ಹೇಳಿ 'ರೂ' ಬಿಡಬೇಕಾಗುತ್ತೆ, ಅಷ್ಟೇ!

ನಿಮ್ಮ ಮನೆ ಬಾಗಿಲಿಗೆ ನಮ್ಮ ಖರ್ಚಿನಲ್ಲಿ ಪುಸ್ತಕ ಕಳಿಸುತ್ತೇವೆ
ಪುಸ್ತಕವನ್ನು ಖರೀದಿಸ ಬಯಸುವವರು ಫೋನ್ ಪೇ ಮಾಡಿದ ಸ್ಕ್ರೀನ್ ಶಾಟ್ ಅನ್ನು ಕೆಳಗಿನ ನಂಬರ್‌ಗೆ ಶೇರ್ ಮಾಡಿ
63623 93966

ಶಿಶಿರಕಾಲ-2

ಲೇಖಕರು: ಶಿಶಿರ ಹೆಗಡೆ (ಬೆಲೆ: 250 ರು.)



ಅಮೆರಿಕದಂಥ ದೇಶದಲ್ಲಿ ಕುಳಿತು ಕನ್ನಡ ಭಾಷೆಯಲ್ಲಿ ಕರ್ನಾಟಕದ ಪತ್ರಿಕೆಗೆ ಬರೆಯುವುದೆಂದರೆ, ಸಮುದ್ರತಟದಲ್ಲಿ ಕುಳಿತು ಬಾವಿಯನ್ನು ಕಣ್ಮುಂದೆ ತಂದುಕೊಂಡು ಬರೆದಂತೆ. ವಿಷಯಗಳನ್ನು ಆಯ್ಕೆಮಾಡಿಕೊಳ್ಳುವುದ ರಿಂದ ಹಿಡಿದು, ಯಾವ ವಿಷಯವನ್ನು ಎಷ್ಟು ಕೊಡಬೇಕು, ಯಾವ ಮಾಹಿತಿ ಎಷ್ಟು ಪ್ರಸ್ತುತ, ಓದುಗ ಬಯಸುವುದೇನು, ನನಗೆ ಗೊತ್ತಿದೆಯೆಂದು ಹೇಳುತ್ತಾ ಹೊರಟರೆ ಓದುಗನಿಗೆ ಅವು ಹಿಡಿಸುವುದಾ, ಸೊಂಡಿಲಿನಲ್ಲಿ ಹೀರಿಕೊಂಡಿದ್ದನ್ನು ಕಿವಿಯೊಳಗೆ ಬಿಡುವುದು ಹೇಗೆ.... ಹೀಗೆ ಹತ್ತಾರು ಸವಾಲುಗಳು ಲೇಖಕನನ್ನು ಕಾಡುವುದುಂಟು. ಅದಕ್ಕಿಂತ ಮುಖ್ಯವಾಗಿ ಅಮೆರಿಕದಲ್ಲಿ ಕುಳಿತು ಬರೆಯುವ ಅಂಕಣಕಾರನಿಗೆ ತನ್ನ ಓದುಗರನ್ನು ಕಂಡುಕೊಳ್ಳುವ, ಅವರನ್ನು ಅರ್ಥಮಾಡಿಕೊಳ್ಳುವ ವಿಶೇಷ ಮೂಗಾಳಿ ಬೇಕು. ಆ ಆಘ್ರಾಣಿಸುವ ಗುಣವನ್ನು ಬೆಳೆಸಿಕೊಳ್ಳದೇ ಏನೇ ಬರೆದರೂ ಅದು ಓದುಗನ ಮನಸ್ಸನ್ನು ತಟ್ಟುವುದಿಲ್ಲ. ಈ ವಿಷಯದಲ್ಲಿ ಶಿಶಿರ ಹೆಗಡೆಯವರ ಸಾಮರ್ಥ್ಯವನ್ನು ಮೆಚ್ಚಲೇಬೇಕು. ಇದಕ್ಕೆ ಮೂಲಕಾರಣ, ಅವರು ಅಮೆರಿಕದಲ್ಲಿ ವಾಸಿಸಿದರೂ ಈ ಮಣ್ಣಿನ ನೆಲದ ಯೋಚನೆ, ಚಿಂತನಾಕ್ರಮ, ವಿಚಾರಶೀಲತೆಯ ಶಿಸ್ತನ್ನು ರೂಢಿಸಿಕೊಂಡಿರುವುದು. ಹೀಗಾಗಿ ಅಲ್ಲಿ ಕಂಡ ಹೊಸ ವಿಷಯಗಳನ್ನು ಕನ್ನಡ ಮತ್ತು ಕರ್ನಾಟಕದ ಸಂದರ್ಭದಲ್ಲಿ ಪ್ರಸ್ತುತವಾಗುವಂತೆ ನಿವೇದಿಸುವುದು ಅವರಿಗೆ ಸಾಧ್ಯವಾಗಿದೆ. ಸ್ಥಳೀಯ ಸಮಸ್ಯೆಯೊಂದನ್ನು ಜಾಗತಿಕ ಮಟ್ಟಕ್ಕೇರಿಸಿ ಅಥವಾ ಇಳಿಸಿ ನೋಡುವುದು ಸಹ ಅವರಿಗೆ ಸುಲಭವಾಗಿದೆ. ಹೀಗಾಗಿ ಶಿಶಿರ ಹೆಗಡೆಯವರು ಭಾರತದ ಹಗಲಿನ ಬಗ್ಗೆ ಅಮೆರಿಕದ ರಾತ್ರಿಯಲ್ಲಿ ಬರೆದರೂ, ದಿನದ ಒಟ್ಟು ಸೊಬಗು ಅನುಭವಕ್ಕೆ ಸಿಗುತ್ತದೆ. ಇದು ಖಂಡಾಂತರದಲ್ಲಿ ನೆಲೆಸುವ ಲೇಖಕ ತನ್ನನ್ನು ಕಂಡುಕೊಳ್ಳುತ್ತಾ ಓದುಗನನ್ನು ಶೋಧಿಸುವ, ಓದುಗನಿಗೆ ಶೋಭಿಸುವ ಪರಿಯೂ ಹೌದು.

ಸುದ್ದಿಮನೆ ಕತೆ-4

ಲೇಖಕರು: ವಿಶ್ವೇಶ್ವರ ಭಟ್ (ಬೆಲೆ: 250 ರು.)



ಕದನ, ಅಪಘಾತ, ದುರಂತ, ಚಂಡಮಾರುತ, ಪ್ರವಾಹ, ಸುನಾಮಿ, ಹವಾಮಾನ ವೈಪರೀತ್ಯ, ಕೊಲೆ, ಸುಲಿಗೆ, ದರೋಡೆ, ಅತ್ಯಾಚಾರ, ಭ್ರಷ್ಟಾಚಾರ, ಹಗರಣ, ಕರ್ಮಕಾಂಡ, ಪ್ರಣಯ, ವಿಚ್ಛೇದನ, ಆರೋಪ-ಪ್ರತ್ಯಾರೋಪ, ಚುನಾವಣೆ, ಬೆದರಿಕೆ, ಕನಲಿಕೆ, ಟೀಕೆ, ಘೋಷಣೆ, ಪ್ರಕಟಣೆ, ಸಾವು-ನೋವು, ಜನನ-ಮರಣಗಳೆಲ್ಲಾ ಎಲ್ಲಿಯೇ ನಡೆಯಲಿ, ಅವೆಲ್ಲವುಗಳಿಗೂ ಸಾಕ್ಷಿ ಸುದ್ದಿಮನೆಯೇ. ಸುದ್ದಿಮನೆಯ ಕದ ತಟ್ಟದೇ ಯಾವ ಸುದ್ದಿಯೂ ಓದುಗನ ಒಳಮನೆ, ಒಳಮನಗಳನ್ನು ಪ್ರವೇಶಿಸಲು ಸಾಧ್ಯವಿಲ್ಲ. ಜಗತ್ತಿನ ಎಲ್ಲಾ ವಿದ್ಯಮಾನಗಳೂ ಸುದ್ದಿಮನೆಯ ಜಗುಲಿಯಲ್ಲಿ ಅಂಗಾತ ನಗ್ನ. ಅದು ಜಗತ್ತಿನ ಎಲ್ಲಾ ಆಗು-ಹೋಗುಗಳಿಗೂ ರಂಗಸ್ಥಳ. ವರ್ಷದಲ್ಲಿ ಮೂರ್ನಾಲ್ಕು ದಿನಗಳನ್ನು ಬಿಟ್ಟರೆ, ಸುದ್ದಿಮನೆಯಲ್ಲಿ ದೀಪ ಆರಿದ್ದೇ ಇಲ್ಲ. ಅದು ಮಲಗಿದ್ದನ್ನು ಕಂಡವರಿಲ್ಲ. ಪ್ರತಿ ಸುದ್ದಿಮನೆಯೂ ನಿತ್ಯಪ್ರಸೂತಿಗೃಹ ಇದ್ದಂತೆ. ದಿನವೂ ಸುದ್ದಿಯ ಗರ್ಭ ತಳೆದು, ಅದೇ ದಿನ ಹೆರಲೇಬೇಕಾದ ಅನಿವಾರ್ಯತೆ. ಇಲ್ಲೇ ಕುಳಿತು ಇಡೀ ವಿಶ್ವದ ಸುದ್ದಿಯನ್ನೆಲ್ಲ ತನ್ನ ಒಳಮನೆಯೊಳಗೆ ಸುರುವಿಕೊಳ್ಳುವ ಸಾಮರ್ಥ್ಯವಿರುವುದು ಸುದ್ದಿಮನೆಗೊಂದೇ. ಇಬ್ಬರು ಪತ್ರಕರ್ತರು ಎಂದೂ ಪರಸ್ಪರರ ಅಭಿಪ್ರಾಯವನ್ನು ಒಪ್ಪದಿದ್ದರೂ, ಅವರಿಬ್ಬರೂ ಸೇರಿ ಮೂರನೆಯವನನ್ನು ತಿರಸ್ಕರಿಸಿದರೂ, ಒಂದು ತಂಡವಾಗಿ ಒಟ್ಟಾಗಿ ಕೆಲಸ ಮಾಡಲು ಸಾಧ್ಯವಾಗುವುದಾದರೆ ಅದು ಸುದ್ದಿಮನೆಯಲ್ಲಿ ಮಾತ್ರ. ಈ ಕೃತಿ ಇಂಥ ಅದ್ಭುತ, ಅನೂಹ್ಯ ಪ್ರಪಂಚದಲ್ಲೊಂದು ಸುತ್ತಾಟ!

ಸಂಪಾದಕರ ಸದ್ಯಶೋಧನೆ-4

ಲೇಖಕರು: ವಿಶ್ವೇಶ್ವರ ಭಟ್ (ಬೆಲೆ: 250 ರು.)



ಈ ಕೃತಿಯ ಕುರಿತು ಕೃತಿಕಾರ ವಿಶ್ವೇಶ್ವರ ಭಟ್ ಅವರು ಹೇಳಿಕೊಂಡಿರುವ ಮಾತುಗಳಿವು:

''ಪತ್ರಿಕೆಗೆ ನಿತ್ಯವೂ ಅಂಕಣ ಬರೆಯುವುದು ಕಷ್ಟ. ಬಹಳ ಬೇಗ ಬರಿದಾಗಿಬಿಡುತ್ತೇವೆ. ಅದರಲ್ಲೂ ವಾರಕ್ಕೆ ಮೂರ್ನಾಲ್ಕು ಬೇರೆ ಅಂಕಣಗಳನ್ನಿಟ್ಟುಕೊಂಡು, ದೈನಂದಿನ ಅಂಕಣಕ್ಕೆ ಸಜ್ಜಾಗುವುದು ಕಷ್ಟವೇ. ತುಂಬಿಕೊಳ್ಳಲು ಅವಕಾಶವಿಲ್ಲದಿದ್ದರೆ, ಬರಿದಾಗುವುದೊಂದೇ ಅಲ್ಲ, ಬಹುಬೇಗ ಬರಡೂ ಆಗಿಬಿಡುತ್ತೇವೆ. 'ಸಂಪಾದಕರ ಸದ್ಯಶೋಧನೆ' ಅಂಕಣವನ್ನು ಆರಂಭಿಸುವಾಗ ನನಗೆ ಈ ಆತಂಕವಿತ್ತು. ಯಾವ ಬ್ಯಾಟರ್ ಕೂಡ ಮೈದಾನಕ್ಕಿಳಿಯುವಾಗ ತ್ರಿವಳಿ ಶತಕ ಹೊಡೆಯುತ್ತೇನೆ ಎಂದು ಅಂದುಕೊಂಡಿರುವುದಿಲ್ಲ.

ಆದರೆ ಆಟದ ಗತಿ, ಸನ್ನಿವೇಶ, ಮನಸ್ಥಿತಿ ಆತನನ್ನು ಆ ಸಾಹಸ-ಸಾಧನೆಗೆ ಪ್ರೇರೇಪಿಸಿ ಅಣಿಗೊಳಿಸುತ್ತದೆ. ಈ ಅಂಶವನ್ನು ಗಮನಿಸಿಯೇ ನಾನು 'ಸದ್ಯಶೋಧನೆ'ಯನ್ನು ಮೈಮೇಲೆ ಎಳೆದುಕೊಂಡೆ. ಈಗಿರುವ ಅಂಕಣಗಳು ಸಾಲದು ಎಂಬಂತೆ, ದೈನಂದಿನ ಅಂಕಣವನ್ನೂ ಸುತ್ತಿಕೊಂಡೆ. 'ಸದ್ಯಶೋಧನೆ' ಆರಂಭಿಸಿದ್ದರಿಂದ ಮತ್ತಷ್ಟು ಹೊರೆಯಾಗಬಹುದೆಂಬ ನನ್ನ ದುಗುಡ ಶೀಘ್ರ ನಿವಾರಣೆಯಾಯಿತು. ಆ ನೆಪದಲ್ಲಿ ನಾನು ಮತ್ತಷ್ಟು ಅಕ್ಷರಮುಖಿಯಾದೆ. ಓದುವವರು ಹೆಚ್ಚು ಓದಿದರೆ, ಬರೆಯುವವರು ಇನ್ನೂ ಹೆಚ್ಚು ಬರೆದರೆ ಚೆಂದವಲ್ಲವೇ? 'ಸದ್ಯಶೋಧನೆ'ಗೆ ನಿಲುಕದ ವಸ್ತುಗಳಿಲ್ಲ. ಇದೊಂಥರಾ ಗಜಭೋಜನ ಹಾಗೂ ಎಲ್ಲ ಫಾರ್ಮ್ಯಾಟುಗಳಲ್ಲೂ ಕ್ರಿಕೆಟ್ ಆಡಿದಂತೆ! ಬರೆದು, ಬರೆದು ಅಕ್ಷರಗಳಲ್ಲಿ ಮತ್ತಷ್ಟು ಭರವಸೆ ತುಂಬಿಕೊಳ್ಳಬಹುದು ಎಂಬುದು ನನ್ನ ಸದ್ಯದ ಶೋಧನೆ! ಉಳಿದಿದ್ದನ್ನು ನೀವೇ ಹೇಳಬೇಕು...''.

ಒಂದೊಳ್ಳೆ ಮಾತು-2

ಲೇಖಕಿ: ರೂಪಾ ಗುರುರಾಜ್ (ಬೆಲೆ: 250 ರು.)

ಈ ಕೃತಿಯ ಕುರಿತು 'ವಿಶ್ವವಾಣಿ' ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರು ವ್ಯಕ್ತಪಡಿಸಿರುವ ಅಭಿಪ್ರಾಯ ಹೀಗಿದೆ:

''ರೂಪಾ ಅವರು ಇಷ್ಟೊಂದು Passionate ಆಗಿ ಬರೆಯಬಹುದು ಎಂದು ನಾನು ಆರಂಭದಲ್ಲಿ ನಿರೀಕ್ಷಿಸಿರಲಿಲ್ಲ. ಕಾರಣ, ದೈನಂದಿನ ಅಂಕಣಗಳನ್ನು ಬರೆಯುವುದು, ಪೊರೆಯುವುದು ಅಷ್ಟು ಸುಲಭವಲ್ಲ. ಅದಕ್ಕೆ ಓದು, ಓಡಾಟ, ಅಧ್ಯಯನ, ಸಂವಾದ, ಶೋಧನೆ ಅಗತ್ಯ. ತಮ್ಮ ದೈನಂದಿನ ಇತರ ಕೆಲಸ, ವೃತ್ತಿ, ಒತ್ತಡಗಳ ನಡುವೆ, ದೈನಿಕ ಅಂಕಣವನ್ನೂ ನಿತ್ಯಕಾಯಕದಂತೆ ಮುಂದುವರಿಸಿಕೊಂಡು ಹೋಗುವುದು ಸವಾಲು. ಅವರು ಆರು ತಿಂಗಳು ಬರೆದು ಕೈಚೆಲ್ಲಬಹುದು ಎಂದು ಭಾವಿಸಿದ್ದೆ. ಅದಕ್ಕೂ ಮುನ್ನ ಅವರು ನಿಯತವಾಗಿ ಪತ್ರಿಕೆಗಳಿಗೆ ಬರೆದವರಲ್ಲ. ಬರಹ ಮತ್ತು ಅಂಕಣ ಬರಹ ಅವರಿಗೆ ಹೊಸತು. ಆದರೆ ದಿನಗಳೆದಂತೆ ಅವರು ತೀವ್ರತೆಯಿಂದ, ಆಪ್ತವಾಗಿ ಬರೆಯಲಾರಂಭಿಸಿದರು. ಹಾಗೆಯೇ ಬರೆಯುತ್ತಾ ಬರೆಯುತ್ತಾ ಓದುಗರಿಗೂ ಆಪ್ತರಾಗುತ್ತಾ ಹೋದರು. ಈಗ ಅವರಂತೂ ಬೆಳಗಿನ ಓದಿನ ಭಾಗವೇ ಆಗಿದ್ದಾರೆ. ಆ ಮೂಲಕ ಆ ದಿನಕ್ಕೆ, ಬದುಕಿಗೆ ಬೇಕಾದ ಪ್ರೇರಣೆಯ ಗುಟುಕನ್ನು ನಿತ್ಯವೂ ನೀಡುತ್ತಿದ್ದಾರೆ. ಈ ಕೃತಿಯಲ್ಲಿರುವ ಪ್ರತಿ ಬರಹವೂ ಅದಕ್ಕೆ ಸಾಕ್ಷಿ. ಅಂಥ ಪ್ರೇರಣೆ ನಿಮ್ಮದೂ ಆಗಲಿ''.

ಆಸ್ಕ್ ದಿ ಎಡಿಟರ್-2

ಲೇಖಕರು: ವಿಶ್ವೇಶ್ವರ ಭಟ್ (ಬೆಲೆ: 250 ರು.)



'ಆಸ್ಕ್ ದಿ ಎಡಿಟರ್-2' ಕುರಿತು ಪತ್ರಕರ್ತ ನವೀನ್ ಸಾಗರ್ ಹೇಳಿಕೊಂಡಿರುವ ಈ ಮಾತುಗಳ ಮೇಲೆ ಒಮ್ಮೆ ಕಣ್ಣಾಡಿಸಿದರೆ, ಈ ಕೃತಿಯ ಮಹತ್ವ ನಿಮಗೆ ಅರಿವಾದೀತು:

''ಭಾನುವಾರ ಮುಂಜಾನೆ 'ವಿಶ್ವವಾಣಿ' ಪತ್ರಿಕೆ ತೆರೆದಾಕ್ಷಣ ಕಾಣುವ 'ಆಸ್ಕ್ ದಿ ಎಡಿಟರ್' ಅಂಕಣದ ಪ್ರಶ್ನೆಗಳನ್ನು ನೋಡಿದಾಕ್ಷಣ ಅನಿಸೋದು, 'ಅರೇ, ಇದು ನಾನು ಕೇಳಬೇಕೆಂದಿದ್ದ ಪ್ರಶ್ನೆ ಅಲ್ವಾ?' ಅಂತ. ಅದೇ ರೀತಿ, ಉತ್ತರ ನೋಡಿದ ಕೂಡಲೇ ಅನಿಸೋದು, 'ನನಗೆ ಯಾರಾದರೂ ಈ ಪ್ರಶ್ನೆ ಕೇಳಿದ್ದರೆ ನಾನು ಕೂಡ ಹೀಗೆಯೇ ಉತ್ತರಿಸುತ್ತಿದ್ದನೋ ಏನೋ?' ಅಂತ. ಸಂಕೀರ್ಣ ಅನಿಸುವ ಪ್ರಶ್ನೆಗೆ ಸರಳ ಅನಿಸುವ ಉತ್ತರ, ಸಿಲ್ಲಿ ಅನಿಸೋ ಪ್ರಶ್ನೆಗೆ 'ವಾಹ್' ಅನಿಸುವ ಉತ್ತರ ಈ ಅಂಕಣದ ಗಮ್ಮತ್ತು. ಮನಸ್ಸಿನ ಮತ್ತು ಬದುಕಿನ ಕಗ್ಗಂಟುಗಳಿಗೆ ಇದೊಂದು ನಿಘಂಟು ಎನ್ನಬಹುದು. ಮನಸ್ಸು ಗೊಂದಲಕ್ಕೊಳಗಾದಾಗ ಒಮ್ಮೆ ಈ ಪುಸ್ತಕ ತೆರೆದು ನೋಡಿದರೆ ಯಾವುದಾದರೊಂದು ಪುಟದಲ್ಲಿ ಗೊಂದಲಕ್ಕೆ ಉತ್ತರ ಸಿಕ್ಕಿರುತ್ತದೆ. ಎಡಿಟರ್ ನೀಡುವ ಉತ್ತರ ಓದಿದಾಗ, 'ಅಯ್ಯೋ ಇಷ್ಟು ಸರಳವಾಗಿದೆಯಲ್ಲ... ನಂಗ್ಯಾಕೆ ಈ ಥರ ಯೋಚಿಸೋಕಾಗ್ಲಿಲ್ಲ?!' ಅನ್ನೋ ಹಾಗಿರುತ್ತದೆ. ಭಟ್ಟರು ತಮ್ಮದೇ ಶೈಲಿಯ ಪಂಚ್‌ಗಳೊಂದಿಗೆ ರಾಜಕಾರಣದ, ರಾಜಕಾರಣಿಗಳ ಎಕ್ಸಾಂಪಲ್‌ಗಳನ್ನು ತಂದು, ಉತ್ತರದಲ್ಲೊಂದು ಜೀವಂತಿಕೆ ತುಂಬಿಬಿಡ್ತಾರೆ. ಹೇಳೋದೆಲ್ಲವನ್ನೂ ಹೇಳಿ... ಇಷ್ಟೇ ಗುರೂ ವಿಷ್ಯ.... ನೀನು ಸುಮ್ನೆ ಅತಿಯಾಗಿ ಹಚ್ಕೊಂಡ್ ಬಿಟ್ಟಿದ್ದೀಯಾ ಅನ್ನೋ ಧಾಟಿಯಲ್ಲಿ ಮುಗಿಸಿಬಿಡ್ತಾರೆ. ಭಟ್ರು ಡ್ರೋನ್ ಮೂಲಕ ನಮಗೆ ಸುಂದರ ಜಗತ್ತು ತೋರಿಸುವಂತೆ, ನಮ್ಮ ಬದುಕನ್ನು ನಾವು ಡ್ರೋನ್ ಕಣ್ಣಿನಿಂದ ನೋಡಿಕೊಳ್ಳಬೇಕು ಎನ್ನುವ ಸಂದೇಶವನ್ನು ಈ ಪುಸ್ತಕದ ಮೂಲಕ ದಾಟಿಸುತ್ತಾರೆ. 'ಆಸ್ಕ್ ದಿ ಎಡಿಟರ್' ಒಂದು ಜಾಲಿ ರೀಡ್. ನಮ್ಮಲ್ಲೂ ಒಂದು ಪ್ರಶ್ನೆ ಮೂಡಿ, ಭಟ್ಟರಿಂದ ಉತ್ತರ ಪಡೆಯೋಣ ಅನಿಸುವಂತೆ ಮಾಡುವ ಪ್ರಶ್ನೋತ್ತರ ಗುಚ್ಛ. ಡಿಪ್ರೆಸ್ಡ್ ಓದುಗನಲ್ಲೂ ಕಿರುನಗೆ ಮೂಡಿಸಬಲ್ಲ ಪಾಸಿಟಿವ್ ಪುಸ್ತಕ...''.

ಒಂದೊಳ್ಳೆ ಮಾತು-3

ಲೇಖಕಿ: ರೂಪಾ ಗುರುರಾಜ್ (ಬೆಲೆ: 260 ರು.)



ಪ್ರತಿದಿನ ಪತ್ರಿಕೆಗಳಿಗೆ ಬರೆಯುವುದು ಕಷ್ಟ. ಅದರಲ್ಲೂ ಓದುಗರನ್ನು Motivate ಮಾಡುವ ಅಂಕಣ ಬರೆಯುವುದು ಇನ್ನೂ ಕಷ್ಟ. ಕಾರಣ, ಬೇರೆಯವರನ್ನು Motivate ಮಾಡುವುದಕ್ಕಿಂತ ಮುನ್ನ ನಮ್ಮನ್ನು ಮಾಡಿಕೊಳ್ಳಬೇಕು. ನಮ್ಮನ್ನು ಯಾರೂ ಬಂದು Motivate ಮಾಡುವುದಿಲ್ಲ. ಆ ಕೆಲಸವನ್ನು ನಾವೇ ಮಾಡಿಕೊಳ್ಳಬೇಕು ಮತ್ತು ದಿನವೂ ಮಾಡಿಕೊಳ್ಳಬೇಕು. ಇದು ಒಂಥರಾ ಕಬ್ಬಿಣವನ್ನು ಅಯಸ್ಕಾಂತಕ್ಕೆ ಉಜ್ಜಿ ಉಜ್ಜಿ, ಕಬ್ಬಿಣವನ್ನೇ ಅಯಸ್ಕಾಂತವಾಗಿ ಮಾಡಿಕೊಂಡಂತೆ. ಇದು ತುಸು ಕಷ್ಟದ ಕೆಲಸ. ಆದರೆ ಈ ಕೆಲಸವನ್ನು ರೂಪಾ ಗುರುರಾಜ್ ಅತ್ಯಂತ ಪ್ರೀತಿ, ನಿಷ್ಠೆ, ಜವಾಬ್ದಾರಿಯಿಂದ ಮಾಡುತ್ತಾ ಬರುತ್ತಿದ್ದಾರೆ. 'ಒಂದೊಳ್ಳೆ ಮಾತು' ಅಂಕಣದಿಂದ ತಮ್ಮ ದಿನಚರಿಯನ್ನು ಆರಂಭಿಸುವ ಅಸಂಖ್ಯ ಓದುಗರಿದ್ದಾರೆ. ಈ ಅಂಕಣ ಒಂದು ದಿನ ಪ್ರಕಟವಾಗದಿದ್ದರೆ ಅಥವಾ ಬೇರೆ ಪುಟಗಳಲ್ಲಿ ಪ್ರಕಟವಾದರೂ ಸಿಡಿಮಿಡಿಗೊಳ್ಳುವ ಓದುಗರಿದ್ದಾರೆ. ಅಷ್ಟರಮಟ್ಟಿಗೆ 'ಒಂದೊಳ್ಳೆ ಮಾತು' ಅವರನ್ನು ಗಪ್ಪಾಗಿ ಕುಳ್ಳಿರಿಸಿಬಿಟ್ಟಿದೆ. ಬಿಸಿಬಿಸಿ ಕಾಫಿಯಂತೆ, ದಿನದ ಆರಂಭಕ್ಕೆ ಬೇಕಾಗುವ ಒಂದು ಹಿತವಾದ ಪ್ರೇರಣೆಯ ಗುಟುಕನ್ನು ರೂಪಾ ನೀಡುತ್ತಿದ್ದಾರೆ. ಇದು ಎಲ್ಲ ವರ್ಗದ ಓದುಗರಿಗೆ, ಎಲ್ಲ ಕಾಲಕ್ಕೆ ಆಪ್ತವಾಗುವ ಬರಹ. ಇದನ್ನು ಹೀರಿಕೊಂಡವನೇ ಪುಣ್ಯವಂತ!

▶▶ ಗದ್ದುಗೆ ಹಿಡಿಯಲು ಬಿಜೆಪಿ-ಕಾಂಗ್ರೆಸ್ ತಂತ್ರ ▶▶ ಸದ್ಯ ಕಾಂಗ್ರೆಸ್‌ನಲ್ಲಿಯೇ ಭುಗಿಲೆದ್ದ ಅಪಸ್ವರ

ಮನಗೂಳಿ ಪಂಚಾಯಿತಿಯಲ್ಲಿ ಬಿರುಗಾಳಿ

ಜಿಲ್ಲಾ ನೋಟ

ಮಂಜು ಕಲಾಲ, ಬಸವನಬಾಗೇವಾಡಿ

ಸಚಿವ ಶಿವಾನಂದ ಪಾಟೀಲ ಅವರ ನಿರ್ದೇಶನದ ಮೇರೆಗೆ ಡಾ.ಎಂ.ಡಿ.ಮೇತ್ರಿ ಮನಗೂಳಿ ಪಟ್ಟಣ ಪಂಚಾಯಿತಿಗೆ ಅಧ್ಯಕ್ಷರಾಗಿ ಆಯ್ಕೆ ಆಗಿದ್ದರು. ಸದ್ಯ ತಮ್ಮ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿ ಮತ್ತೆ ವಾಪಸ್ ಪಡೆಯುವ ಮೂಲಕ ಡಾ.ಎಂ.ಡಿ.ಮೇತ್ರಿ ಸಚಿವರಿಗೆ ವಿಶ್ವಾಸ ದ್ರೋಹ ಎಸಗಿದರೇ ..? ಎಂಬ ಆರೋಪ ಕೇಳಿ ಬರ ತೊಡಗಿವೆ.

ಪಪಂ 16 ಸದಸ್ಯ ಬಲಾಬಲ

ಹೌದು ! ಕೆಲ ದಿನಗಳಿಂದ ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲೂಕಿನ ಮನಗೂಳಿ ಪಟ್ಟಣ ಪಂಚಾಯಿತಿ ಅಧ್ಯಕ್ಷರ ರಾಜೀನಾಮೆ ಹಾಗೂ ರಾಜೀನಾಮೆ ವಾಪಸ್ ಪಡೆದ ಪ್ರಕರಣದ ಬಗ್ಗೆ ಭಾರಿ ಚರ್ಚೆಯಾಗುತ್ತಿದೆ. ಒಟ್ಟು 16 ಸದಸ್ಯರ ಬಲ ಹೊಂದಿರುವ ಪಟ್ಟಣ ಪಂಚಾಯಿತಿಯಲ್ಲಿ ಕಳೆದ ಮೂರು ತಿಂಗಳ ಹಿಂದೆ ನಡೆದ ಅಧ್ಯಕ್ಷ - ಉಪಾಧ್ಯಕ್ಷರ ಚುನಾವಣೆಯಲ್ಲಿ ಮೇತ್ರಿ ಪರವಾಗಿ 12 ಸದಸ್ಯರು ಕೈ ಎತ್ತುವ ಮೂಲಕ ನೂತನ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದರು.

ಕಾಂಗ್ರೆಸ್‌ಗೆ ಶಾಕ್

ಸದ್ಯ ಅಧ್ಯಕ್ಷ ಸ್ಥಾನಕ್ಕೆ ಎಂ.ಡಿ.ಮೇತ್ರಿ ರಾಜೀನಾಮೆ ನೀಡಿ ಮತ್ತೆ ವಾಪಸ್ ಪಡೆದಿದ್ದಾರೆ. ಸದ್ಯದ ರಾಜಕೀಯ ಬೆಳವಣಿಗೆ ನೋಡಿದರೆ ಅಧಿಕಾರ ಹೊಂದಾಣಿಕೆ ಮಾಡಿಕೊಂಡಿರುವುದು ಸ್ಪಷ್ಟ. ಸುಮಾರು ವರ್ಷಗಳ ನಂತರ ಮನಗೂಳಿ ಪಟ್ಟಣ ಪಂಚಾಯಿತಿ ಗದ್ದುಗೆ ಏರಿದ್ದ ಕಾಂಗ್ರೆಸ್‌ಗೆ ಸದ್ಯದ ಬೆಳವಣಿಗೆ ಶಾಕ್ ನೀಡಿದೆ..!

ಬಹುಮತದ ಬಿಜೆಪಿ ಕತೆ

16 ಸದಸ್ಯರಲ್ಲಿ 12 ಸದಸ್ಯರು ಬಿಜೆಪಿಯಿಂದ ಆಯ್ಕೆ ಆಗಿದ್ದರೆ 4 ಸದಸ್ಯರು ಮಾತ್ರ ಕಾಂಗ್ರೆಸ್‌ನಿಂದ ಆಯ್ಕೆಯಾಗಿದ್ದರು. ಇನ್ನೂ 12 ಬಿಜೆಪಿ ಸದಸ್ಯರ ಪೈಕಿ 8 ಸದಸ್ಯರನ್ನ ಕಾಂಗೆಸ್‌ಗೆ ಸೆಳೆಯುವ ಮೂಲಕ 12 ಸದಸ್ಯರ ಬಲ ಪಡೆದ ಕಾಂಗ್ರೆಸ್ ಪಕ್ಷ ಮನಗೂಳಿ ಪಟ್ಟಣ ಪಂಚಾಯಿತಿಯ ಗದ್ದುಗೆ ಏರಿತ್ತು. ಸದ್ಯ ಕಾಂಗ್ರೆಸ್‌ನಲ್ಲಿಯೇ ಅಪಸ್ವರ ಭುಗಿಲೆದ್ದಿದೆ.



ಮನಗೂಳಿ ಪ.ಪಂ. ಹೊರ ನೋಟ.

ಮತ್ತೆ ಯಾರ ಪಾಲು

ಮತ್ತೆ ಎಲ್ಲ ಬಿಜೆಪಿ ಸದಸ್ಯರೂ ಒಂದಾಗಿ ಮನಗೂಳಿಯ ಪಟ್ಟಣ ಪಂಚಾಯಿತಿಯ ಅಧಿಕಾರದ ಗದ್ದುಗೆ ಪಡೆಯಲು ಹೊರಟರೆ ಅದು ಮತ್ತೆ ಬಿಜೆಪಿ ಪಾಲಾಗುವುದಾ..? ಅಥವಾ ಎಲ್ಲವನ್ನು ಸರಿ ಪಡಿಸಿ ಮತ್ತೆ ಕಾಂಗ್ರೆಸ್ ತನ್ನ ಅಧಿಕಾರ ಉಳಿಸಿಕೊಳ್ಳುತ್ತದೆಯೋ..? ಎನ್ನುವುದು ಮಾತ್ರ ಸದ್ಯಕ್ಕೆ ನಿಗೂಢ. ಮತ್ತೆ ಮನಗೂಳಿ ಪಟ್ಟಣ ಪಂಚಾಯಿತಿ ಅಧಿಕಾರದ ಚುಕ್ಕಾಣಿ ಹಿಡಿಯಲು ಬಿಜೆಪಿ - ಕಾಂಗ್ರೆಸ್ ಎರಡೂ ಪಕ್ಷಗಳು ತಂತ್ರಗಾರಿಕೆ ಹೆಣೆಯುತ್ತಿವೆಯಾ..? ಎಂಬ ಪ್ರಶ್ನೆಗಳೂ ಕೂಡ ಚರ್ಚೆಯಾಗುತ್ತಿವೆ.



ಶಿವಾನಂದ ಪಾಟೀಲ

ಡಾ.ಮೇತ್ರಿ

ಸಚಿವರ ಮಾತಿಗೆ ಬದ್ಧ

ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿ ವಾಪಸ್ ಪಡೆಯಲು ಕಾರಣವೇನು ಎಂದು ಮೇತ್ರಿ ಅವರನ್ನ ಕೇಳಿದರೆ ಅವರು ಹೇಳುವುದು ಹೀಗೆ. 'ನಾನು ಸಚಿವರ ಸೂಚನೆ ಮೇರೆಗೆ ಅಧ್ಯಕ್ಷನಾಗಿ ಆಯ್ಕೆಯಾಗಿದ್ದೆ. ಹಾಗೇ ಅವರ ಸೂಚನೆ ಮೇರೆಗೆ ರಾಜೀನಾಮೆ ನೀಡಿದ್ದೆ. ಆದರೆ ಯಾರು ನಮ್ಮ ಏಳಿಗೆಯನ್ನ ಸಹಿಸದವರು ಸಚಿವರ ಮುಂದೆ ನಾನು ನಮ್ಮ ವಿರೋಧಿ ಬಣದೊಂದಿಗೆ ಕೈ ಜೋಡಿಸಿದ್ದೇನೆ ಎಂದು ನನ್ನ ಬಗ್ಗೆ ಇಲ್ಲ ಸಲ್ಲದ ಆರೋಪಗಳನ್ನ ಮಾಡಿದ್ದಾರೆ. ಇದರಿಂದ ನನ್ನ ಗೌರವಕ್ಕೆ ಧಕ್ಕೆ ಬರುವಂತಾಗಿದೆ. ಹೀಗಾಗಿ ನಾನು ರಾಜೀನಾಮೆ ವಾಪಸ್ ಪಡೆದೆ. ನಾನು ವಿರೋಧಿ ಬಣದೊಂದಿಗೆ ಕೈ ಜೋಡಿಸಿರುವ ಬಗ್ಗೆ ನನಗೆ ಸಚಿವರು ಸಾಕ್ಷಿ ನೀಡಬೇಕು. ಈಗಲೂ ನಾನು ಸಚಿವರ ಮಾತಿಗೆ ಬದ್ಧ. ಜೊತೆಗೆ ನನ್ನ ಅಧಿಕಾರದ ಅವಧಿಯಲ್ಲಿ ಸಚಿವರ ಹೆಸರಿಗೆ ಚ್ಯುತಿ ಬರದಂತೆ ಮನಗೂಳಿ ಪಟ್ಟಣದ ಅಭಿವೃದ್ಧಿಗೆ ಶ್ರಮಿಸಿದ್ದೇನೆ' ಎಂದು ಪಪಂ ಅಧ್ಯಕ್ಷ ಡಾ.ಮೇತ್ರಿ 'ವಿಶ್ವವಾಣಿ'ಗೆ ತಿಳಿಸಿದ್ದಾರೆ.

ಕಳೆದ ಕೆಲ ತಿಂಗಳ ಹಿಂದೆ ಮನಗುಳಿ ಪಟ್ಟಣದ ಕೆನರಾ ಬ್ಯಾಂಕ್ ದರೋಡೆ ಪ್ರಕರಣದ ಸುದ್ದಿ ಭಾರೀ ಸದ್ದು ಮಾಡಿತ್ತು. ಸದ್ಯಕ್ಕೀಗ ಮನಗೂಳಿ ಪಟ್ಟಣ ಪಂಚಾಯಿತಿ ಅಧ್ಯಕ್ಷರ ರಾಜೀನಾಮೆಯ ವಿಷಯವೇ ಇಡೀ ಜಿಲ್ಲೆಯ ರಾಜಕೀಯ ವಲಯದಲ್ಲಿ ಭಾರಿ ಚರ್ಚೆ ಹುಟ್ಟು ಹಾಕಿದೆ.

ನನ್ನ ಗೌರವಕ್ಕೆ ಧಕ್ಕೆ

ಡಾ.ಮೇತ್ರಿ ಅವರು ತಮ್ಮ ಅಧಿಕಾರದ ದುರಾಸೆಯಿಂದ ರಾಜೀನಾಮೆ ವಾಪಸ್ ಪಡೆದಿದ್ದಾರೆ. ಸಚಿವರಿಗೆ ವಿಶ್ವಾಸ ದ್ರೋಹ ಬಗೆದಿದ್ದಾರೆ ಎನ್ನುವದು ಸಾರ್ವಜನಿಕರ ಆರೋಪವಾದರೆ, ನಾನು ಪ್ರಾಮಾಣಿಕವಾಗಿ ಸಚಿವರ ನಿರ್ದೇಶನದಂತೆ ಕಾರ್ಯ ನಿರ್ವಹಿಸಿದ್ದೇನೆ. ಸದ್ಯ ನನ್ನ ಗೌರವಕ್ಕೆ ಧಕ್ಕೆಯಾಗಿದೆ. ಅದಕ್ಕಾಗಿ ರಾಜೀನಾಮೆ ವಾಪಸ್ ಪಡೆಯಬೇಕಾಯಿತು ಎನ್ನುವುದು ಮೇತ್ರಿ ಅವರ ವಾದವಾಗಿದೆ.

ಒಟ್ಟಾರೆಯಾಗಿ ನಿಮ್ಮ ಆತಂರಿಕ ವಿಚಾರಗಳು ಏನೇ ಇರಲಿ. ನಿಮ್ಮ ನಿಮ್ಮ ಪಕ್ಷದ ಕಚೇರಿಯಲ್ಲಿ ಕುಳಿತು ಬಗೆಹರಿಸಿಕೊಳ್ಳಿ, ಆಂತರಿಕ ವಿಚಾರಗಳನ್ನು ಬಹಿರಂಗವಾಗಿ ಹೊರ ಹಾಕುವ ಮೂಲಕ ಜನರಲ್ಲಿ ಗೊಂದಲ ಸೃಷ್ಟಿಸಬೇಡಿ. ಅಧ್ಯಕ್ಷರು ಯಾರೇ ಆಗಲಿ. ಮನಗೂಳಿ ಪಟ್ಟಣದ ಅಭಿವೃದ್ಧಿ ಕುಂಠಿತವಾಗದಂತೆ ನೋಡಿಕೊಳ್ಳಿ ಎನ್ನುವುದು ಪಟ್ಟಣದ ಪ್ರಜ್ಞಾವಂತರ ಅರಿಕೆಯ ಅಖೈರು ಮಾತು.

▶▶ ಅಕ್ರಮ ಮರಳು ಸಾಗಣೆಗೆ ಬೀಳುತ್ತಿಲ್ಲ ಕಡಿವಾಣ ▶▶ ಕನಕಗಿರಿ, ಕುಷ್ಟಗಿ, ಯಲಬುರ್ಗಾ ಟಾರ್ಗೆಟ್

ಇತ್ತ ಸಂಪತ್ತೂ ಇಲ್ಲ, ಅತ್ತ ರಾಜಸ್ವವೂ ಇಲ್ಲ

ಜಿಲ್ಲಾ ನೋಟ

ಶರಣು ಬಸವ, ಹುಲಿಹೈದರ, ಕೊಪ್ಪಳ

ಗಣಿ ಮತ್ತು ಭೂ ವಿಜ್ಞಾನ ಇಲಾಖೆ ನೇತೃತ್ವದ ಮರಳು ಮಾನಿಟರಿಂ ಸಮಿತಿ, ಕೊಪ್ಪಳ ತಾಲೂಕು ಹಿರೇಸಿಂಧೋಗಿ ಬಳಿ ಹಿರೇಹಳ್ಳದಲ್ಲಿ ನಡೆಯುತ್ತಿದ್ದ ಮರಳು ಅಕ್ರಮ ಗಣಿಗಾರಿಕೆ ಮೇಲೆ ದಾಳಿ ಮಾಡಿತ್ತು. ಕಳೆದ ಜೂ. 18 ರಂದು ನಡೆದಿದ್ದ ದಾಳಿ ಜಿಲ್ಲಾದ್ಯಂತ ವ್ಯಾಪಕ ಸಂಚಲನ ಸೃಷ್ಟಿಸಿತ್ತು.

ಸಮಿತಿ ದಾಳಿಗೆ ಮೆಚ್ಚುಗೆ

ಹೌದು. ಕಳೆದ ಒಂದು ವರ್ಷದಿಂದ ಅಕ್ರಮ ಮರಳು ಗಣಿಗಾರಿಕೆ ಮೇಲೆ ಕಂದಾಯ, ಪೊಲೀಸ್, ಅರಣ್ಯ ಇಲಾಖೆ ಅಧಿಕಾರಿಗಳನ್ನು ಒಳಗೊಂಡ ಈ ಸಮಿತಿಯ ಕಾರ್ಯಾಚರಣೆಗೆ ಜನರಿಂದ ಮೆಚ್ಚುಗೆ ವ್ಯಕ್ತವಾಗಿತ್ತು. ಕೊಪ್ಪಳ ಜಿಲ್ಲೆಗೆ ಹೊಸದಾಗಿ ಬಂದಿದ್ದ ಹಿರಿಯ ಭೂ ವಿಜ್ಞಾನಿ ಪುಷ್ಪಲತಾ ಕವಲೂರು ಅಧಿಕಾರ ವಹಿಸಿಕೊಂಡ ಕೆಲ ದಿನದಲ್ಲೇ ಇಂಥ ದಾಳಿ ಮಾಡಿದ್ದರಿಂದ ಜನರಿಂದ ಮಹಿಳಾ ಅಧಿಕಾರಿ ಬಗ್ಗೆಯೂ ಜನರಿಂದ ಮೆಚ್ಚುಗೆ ಮಾತು ಕೇಳಿ ಬಂದಿದ್ದವು. ಆದರೆ, ದಾಳಿ ನಂತರದ ಅಧಿಕಾರಿಗಳ ನಡೆಗಳು ವ್ಯಾಪಕ ಚರ್ಚೆ ಮತ್ತು ಟೀಕೆಗೆ ಗುರಿಯಾಗಿದ್ದು, ಕೊಪ್ಪಳ ಜಿಲ್ಲೆಯಲ್ಲಿ ನಡೆಯುತ್ತಿರುವ ನಿಸರ್ಗ ಸಂಪತ್ತಿನ ಲೂಟಿಗೆ ಕಡಿವಾಣ ಯಾವಾಗ ಎಂಬ ಪ್ರಶ್ನೆಗೆ ಉತ್ತರ ಇಲ್ಲದಾಗಿದೆ.

ದೂರುಗಳ ಒತ್ತಡ

ಐದಾರು ಇಲಾಖೆ ಅಧಿಕಾರಿಗಳ ಜಂಟಿ ಸಮಿತಿ ದಾಳಿ ಮಾಡಿದ್ದು ಕೊಪ್ಪಳ ತಾಲೂಕು ಹಿರೇಸಿಂದೋಗಿ ಹಿರೇಹಳ್ಳದಲ್ಲಿ ನಡೆಯುತ್ತಿದ್ದ ಅಕ್ರಮ ಮರಳು ಗಣಿಗಾರಿಕೆ ಮೇಲೆ. ಈ ವೇಳೆ ಸ್ಥಳದಲ್ಲಿ ಸುಮಾರು 25ಕ್ಕೂ ಹೆಚ್ಚು ಡಿಗ್ಗಿಂಗ್ ಬೋಟುಗಳು ಪತ್ತೆ ಆಗಿದ್ದವು. ಈ ಹಳ್ಳದಲ್ಲಿ ಮರಳು ಗಣಿಗಾರಿಕೆಗೆ ಪರವಾನಗಿಯೇ ಇಲ್ಲದಿದ್ದರೂ ಸುಮಾರು ಸಾವಿರಾರು ಮೆಟ್ರಿಕ್ ಟನ್ ಮರಳು ಗುಡ್ಡೆ ಕಂಡು ಬಂದಿತ್ತು. ಆದಾಗಿಯೂ ದಾಳಿ ಮಾಡಿರುವ ಅಧಿಕಾರಿಗಳು ಸ್ಥಳದಿಂದ ಒಂದು ವಸ್ತುವನ್ನೂ ಜಪ್ತಿ ಮಾಡಲಿಲ್ಲ.

ನೆಪಕ್ಕೆ ಮಾತ್ರ ದಾಳಿ

ಇಡೀ ಬಿಜೆಪಿ ನಿಯೋಗ ಕೊಪ್ಪಳ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ನೀಡಿದ ನಂತರ, ಯಾರೋ 3 ಸಾವಿರ ಮೆಟ್ರಿಕ್ ಟನ್ ಮರಳು ಕಳ್ಳತನ ಮಾಡಿದ್ದಾರೆ ಎಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ದೂರು ನೀಡಿ ಕೈ ತೊಳೆದುಕೊಂಡಿದ್ದು ಬಿಟ್ಟರೆ ಮತ್ತೇನು ಆಗಿಲ್ಲ. ವಾಸ್ತವದಲ್ಲಿ ಅಧಿಕಾರಿಗಳ ಈ ದಾಳಿಗೆ ಲೋಕಾಯುಕ್ತರಿಗೆ ಸಲ್ಲಿಕೆ ಆಗಿದ್ದ ಹತ್ತಾರು ದೂರುಗಳು ಕಾರಣ. ನೆಪಕ್ಕೆ ಮಾತ್ರ ದಾಳಿ ಮಾಡಿದ್ದಾರೆ ಎಂಬ ಸತ್ಯ ಹೊರ ಬಿದ್ದಿದೆ.

ಅಕ್ರಮವೇ ಅಪಾರ

ಸಾಮಾನ್ಯವಾಗಿ ರಾಜ್ಯದ ಎಲ್ಲೆಡೆ ಹೇರಳವಾಗಿ ಮರಳು ಸಿಗುವ ದೊಡ್ಡ ಹಳ್ಳ ಮತ್ತು ನದಿಯಲ್ಲಿ ಮಾತ್ರ ಷರತ್ತುಗಳೊಂದಿಗೆ ಮರಳು ಗಣಿಗಾರಿಕೆಗೆ ಬ್ಲಾಕ್ ಗಳನ್ನು ಗುರುತು ಮಾಡಲಾಗುತ್ತಿತ್ತು. ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಸ್ಥಳ ಗುರುತಿಸಿ ಟೆಂಡರ್ ಮೂಲಕ ಗಣಿ ಗುತ್ತಿಗೆ ನೀಡುತ್ತಿತ್ತು. ಗಣಿ ಗುತ್ತಿಗೆ ಪಡೆದವರು, ನಿಗದಿತ ಜಾಗದಲ್ಲಿ ತಾವು ಸಾಗಣೆ ಮಾಡುವ ಮರಳಿನ ಪ್ರಮಾಣಕ್ಕೆ ರಾಜಸ್ವ ಪಾವತಿಸಿ, ಗಣಿಗಾರಿಕೆ ಮಾಡಬೇಕಿತ್ತು. ಕಳೆದ ಕೆಲ ವರ್ಷದಿಂದ ಪಟ್ಟಾ ಭೂಮಿಯಲ್ಲೂ ಮರಳು ಗಣಿಗಾರಿಕೆಗೆ ಅವಕಾಶ ನೀಡಲಾಗಿದೆ.

ಕೊಪ್ಪಳದಲ್ಲಿ ಎಷ್ಟಿವೆ?

ಸರಕಾರದ ನಿಯಮದಂತೆ ಕಾರಟಗಿ ತಾಲೂಕು ನಂದಿಹಳ್ಳಿ ಗ್ರಾಮದ ಸಮೀಪದ ತುಂಗಭದ್ರ ನದಿಯಲ್ಲಿ ಮರಳು ಗಣಿಗಾರಿಕೆಗೆ ಬ್ಲಾಕ್ ಗುರುತಿಸಿ, ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿಗೆ ಗಣಿ ಗುತ್ತಿಗೆ ನೀಡಲಾಗಿದೆ. ಉಳಿದಂತೆ ಕೊಪ್ಪಳ ಜಿಲ್ಲೆಯ ಒಟ್ಟು 29 ಕಡೆ ಪಟ್ಟಾ ಭೂಮಿಯಲ್ಲಿ ಮರಳು ಗಣಿಗಾರಿಕೆಗೆ ಪರವಾನಗಿ ನೀಡಲಾಗಿದೆ. ಒಟ್ಟು 29 ಬ್ಲಾಕ್ ಪೈಕಿ ಕೇವಲ 13 ಕಡೆ ಮಾತ್ರ ಮರಳು ಗಣಿಗಾರಿಕೆ ಮಾಡಲು ಸದ್ಯ ಅವಕಾಶ ಇದೆ. ಉಳಿದ ಎಲ್ಲ ಪರವಾನಗಿ ಅಮಾನತು ಮಾಡಲಾಗಿದೆ.

ಪರವಾನಗಿ ಅಮಾನತು

ಈ ಪೈಕಿ ಕೊಪ್ಪಳ ತಾಲೂಕಿನ 3, ಕಾರಟಗಿ ಮತ್ತು ಕನಕಗಿರಿ ಸೇರಿ- 4, ಯಲಬುರ್ಗಾ ಮತ್ತು ಕುಕನೂರು ಸೇರಿ 4 ಹಾಗೂ ಕುಷ್ಟಗಿ ತಾಲೂಕಿನ 2 ಕಡೆ ಹೊರತಾಗಿ ಇತರೇ ಪರವಾನಗಿಗಳನ್ನು ಷರತ್ತು ಉಲ್ಲಂಘನೆ ಸೇರಿ ಬೇರೆ ಬೇರೆ ಕಾರಣಕ್ಕೆ ಅಮಾನತು ಮಾಡಲಾಗಿದೆ. ಇನ್ನು ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು 24 ಕಡೆ ಗ್ರಾಪಂ ಹಂತದ ಮರಳು ಗಣಿಗಾರಿಕೆಯ ಬ್ಲಾಕ್ ಇವೆ. ಇವುಗಳಿಗೆ ಪಿಡಿಒಗಳೇ ಪರ್ಮಿಟ್ ಕೊಡುತ್ತಾರೆ. ಜೊತೆಗೆ ಈ ಬ್ಲಾಕ್‌ನಲ್ಲಿ ಸಂಗ್ರಹ ಆಗುವ ರಾಜಸ್ವವನ್ನು ಸ್ಥಳೀಯವಾಗಿ ಅಭಿವೃದ್ಧಿಗೆ ಬಳಕೆ ಮಾಡಿಕೊಳ್ಳಲಾಗುತ್ತಿದೆ. ಆದರೆ, ಇಂಥ ಬ್ಲಾಕ್‌ನಲ್ಲಿ ಎತ್ತುವ ಮರಳನ್ನು ಆಯಾ ಗ್ರಾಮ ಪಂಚಾಯಿತಿಯಲ್ಲಿ ಮಾತ್ರ ಮಾರಾಟ ಮಾಡಲು ಅವಕಾಶ ನೀಡಲಾಗಿದೆ. ಇದು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ನೀಡಿದ ಅಧಿಕೃತ ಮಾಹಿತಿ.

ಮರಳು ಕಳ್ಳಸಾಗಣೆ

ವಾಸ್ತವದಲ್ಲಿ ಕೊಪ್ಪಳ ಜಿಲ್ಲಾದ್ಯಂತ ಈ ನಿಗದಿತ ಜಾಗದ ಹೊರತಾಗಿ ಬೇರೆ ಕಡೆಯಿಂದಲೇ ಮರಳು ಗಣಿಗಾರಿಕೆ ಮಾಡಿ, ಕಳ್ಳಸಾಗಣೆ ಮಾಡಲಾಗುತ್ತಿದೆ. ಇದಕ್ಕೆ ಆಯಾ ವ್ಯಾಪ್ತಿಯ ಗ್ರಾಪಂ, ಇಲಾಖೆ ಅಧಿಕಾರಿಗಳು ಬೆಂಗಾವಲಾಗಿ ನಿಂತಿದ್ದಾರೆ. ಹಿರೇಸಿಂಧೋಗಿ ಗ್ರಾಮಗಳ ಬಳಿಯ ಹಿರೇಹಳ್ಳದಲ್ಲಿ ಮರಳು ಗಣಿಗಾರಿಕೆ ಪರವಾನಗಿ ಇಲ್ಲ. ಆದರೆ, ಹಗಲು- ರಾತ್ರಿ ಕೊಪ್ಪಳ ಮತ್ತು ದೂರದ ನಗರಕ್ಕೆ ಮರಳು ಹೊತ್ತು ಹೋಗುವ ಟಿಪ್ಪರ್‌ಗಳು ಹಿರೇಹಳ್ಳದಿಂದಲೇ ಮರಳು ಎತ್ತಿಕೊಂಡು ಹೋಗುತ್ತವೆ.

ಸಂಪತ್ತೂ ಇಲ್ಲ, ರಾಜಸ್ವವೂ ಇಲ್ಲ

ಇನ್ನು ಕನಕಗಿರಿ ತಾಲೂಕಿನ ನವಲಿ ಸುತ್ತ, ಕುಷ್ಟಗಿ ತಾಲೂಕಿನ ವಿವಿಧ ಗ್ರಾಮ, ಯಲಬುರ್ಗಾ ತಾಲೂಕಿನ ಶಿರೂರು ಗ್ರಾಮದ ಸಣ್ಣ ಸಣ್ಣ ಹಳ್ಳದಲ್ಲಿ ಎಗ್ಗಿಲ್ಲದೇ ಮರಳು ಅಕ್ರಮ ಗಣಿಗಾರಿಕೆ ನಡೆಯುತ್ತಿದೆ. ಇದರಿಂದ ಒಂದೆಡೆ ನೈಸರ್ಗಿಕ ಸಂಪತ್ತೂ ಉಳಿಯುತ್ತಿಲ್ಲ. ಮತ್ತೊಂದೆಡೆ ಸರಕಾರದ ಬೊಕ್ಕಸಕ್ಕೆ ಬರಬೇಕಿದ್ದ ರಾಜಸ್ವ ಕೂಡ ಬರುತ್ತಿಲ್ಲ. ಬದಲಾಗಿ ಶಾಸಕ-ಸಂಸದರ ರಾಜಕೀಯ ಹಿಂಬಾಲಕರ ಐಷಾರಾಮಿ ಜೀವನಕ್ಕೆ ನಿಸರ್ಗ ಸಂಪತ್ತು ಕಳ್ಳತನ ಆಗುತ್ತಿದೆ.

ವಿಶ್ವವಾಣಿ @vishwavaninews
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ
ಬೆಂಗಳೂರು 08-07-2025 ಮಂಗಳವಾರ

ಚಿತ್ತವಿಹಾರ

ಪ್ರಕೃತಿ ಸಹಜ ಮನೋಗುಣವಿರಲಿ

● ವಿದ್ಯಾಶಂಕರ ಶರ್ಮ

ಬಣ್ಣ ಬಣ್ಣದ ಹೂವುಗಳು, ರಂಗು ರಂಗಿನ ಚಿಟ್ಟೆಗಳು, ವಿಶಿಷ್ಟ ರೂಪದ ಎಲೆಗಳು, ಬಳ್ಳಿಗಳು, ಚಿತ್ರ ವಿಚಿತ್ರ ಧ್ವನಿಗಳಿಂದ ಕೂಗುವ ಪಕ್ಷಿಗಳು: ನಿಸರ್ಗದ ಮಡಿಲಿನಲ್ಲಿ ನಾವು ವಿಹರಿಸಿದಾಗ ಇಂತಹ ವೈವಿಧ್ಯಗಳು ನಮಗೆ ಬೆರಗು ತರುತ್ತವೆ. ನಮ್ಮನ್ನು ತಕ್ಷಣ ಆಕರ್ಷಿಸುವ ಪ್ರಕೃತಿಯ ವಿವರಗಳು ನಮ್ಮಲ್ಲಿ ಒಂದು ಪ್ರಶ್ನೆಯನ್ನು ಖಂಡಿತ ಮೂಡಿಸುತ್ತವೆ. ಇಂತಹ ಸುಂದರ ರಚನೆ ಯಾರನ್ನು ಮೆಚ್ಚಿಸಲು?

ಈ ಜಿಜ್ಞಾಸೆ ಬರಲು ಕಾರಣವೂ ಇದೆ. ನಾವು ಯಾವಾಗಲೂ ಸುದ್ದಿಯಲ್ಲಿ ಇರಬೇಕು, ಜನರು ನಮ್ಮನ್ನು ಗಮನಿಸಬೇಕು ಎಂಬ ಒಳತೋಟಿಯು ನಮ್ಮನ್ನು ಸದಾ ಕಾಡುತ್ತಿರುತ್ತದೆ. ಅದಕ್ಕಾಗಿ ನಾವು ಏನೆಲ್ಲ ಪ್ರಯತ್ನಗಳು ಸಾಧ್ಯವಿದೆಯೋ ಅಷ್ಟನ್ನೂ ಮಾಡಿಯೇ ಬಿಡುತ್ತೇವೆ. ಒಂದು ಚಿಕ್ಕ ಪ್ರಶಂಸೆ, ಹೊಗಳು ಮಾತಿಗಾಗಿ ನಮ್ಮೆಲ್ಲ ದೊಂಬರಾಟಗಳು. ಆದರೆ ನಮ್ಮ ಮನೆಯಂಗಳದ ಹೂವು ನಾವು ಮಾತನಾಡಿಸಿದ್ದರೂ ಅದು ಅರಳುವುದನ್ನು ನಿಲ್ಲಿಸದು.

ಬಣ್ಣದ ಪಾತರಗಿತ್ತಿ ತನ್ನ ಸಂತಸದ ವಿಹಾರವನ್ನು ಎಂದಾದರೂ ನಿಲ್ಲಿಸಿ ಬೇಸರದಲ್ಲಿ ಇರುವುದನ್ನು ಕಾಣಲು ಸಾಧ್ಯವೇ? ಹಕ್ಕಿ ತನ್ನ ಹಾಡು ನಿಲ್ಲಿಸೀತೇ? ಪ್ರಕೃತಿ ಸಹಜವಾಗಿ ನೇಯ್ದಿರುವ ರೀತಿಯೇ ಹೀಗೆ. ಅದು ನಮ್ಮಂತೆ ಪರರ ಮೆಚ್ಚುಗೆಗಾಗಿ, ಹೊಗಳುಭಟರಿಗಾಗಿ, ವಂಧಿಮಾಗಧರಿಗಾಗಿ ನಿರೀಕ್ಷಿಸದು. ಸುಮ್ಮನೆ ತನ್ನ ಪಾಡಿಗೆ ತಾನು ತನ್ನ ಕಾಯಕವನ್ನು ಮಾಡಿ ಕೃತಾರ್ಥಳಾಗುವಳು. ಆದರೆ ಅವಳ ಸಹಜ ಪರಿಯು ಎಷ್ಟು ಚಿತ್ತಾಕರ್ಷಕ! ಅವಳು ಹೇಳದಿದ್ದರೂ ನಾವು ಅವಳ ಮೋಡಿಯಲ್ಲಿ ಬೀಳುವೆವು. ಅಂದರೆ ತನ್ನ ಸಹಜ ಸ್ವರೂಪದಲ್ಲಿಯೇ ಪ್ರಕೃತಿ ಮಾತೆಯು ನಲಿಯುವಳು.

ಕೀರ್ತಿಯ ಹಪಾಹಪಿಯ ದಾಸರಾದ ನಮಗೆ ಪ್ರಕೃತಿಯು ತನ್ನ ಮೌನದ ಸೆರಗಿನಿಂದನಲೇ ಪಾಠವೊಂದನ್ನು ಹೇಳುವಳು. ನಾವು ಇತರರನ್ನು ಮೆಚ್ಚಿಸುವ ಗುಂಗಿಗೆ ಬೀಳಬಾರದು. ನಮ್ಮ ಸಹಜತೆಯಿಂದ ನಾವಿದ್ದಾಗಲೇ ಅನವಶ್ಯಕ ನಿರೀಕ್ಷೆಗಳ ಭಾರವು ನಮ್ಮ ಹೆಗಲೇರದು. ನಮ್ಮ ಇತಿ ಮಿತಿಯಲ್ಲಿ ಸಾಧ್ಯವಾಗುವ ಸುಕೃತಗಳನ್ನ ಮಾಡಿ ಸುಮ್ಮನಾಗಬೇಕು. ಯಾರೋ ನಮ್ಮ ಬೆನ್ನು ತಟ್ಟುವರೆಂಬ ಭ್ರಮೆ ಬೇಡ, ನಮಗೆ ಬಿರುದು,ಬೆಡಗುಗಳು ಸಿಗುವವೆಂಬ ಚಪಲ ಕೂಡದು.

ಹಾಗೆ ನಾವು ಗುಪ್ತಗಾಮಿನಿಯಾಗಿ ಇರುವಾಗ ನಮ್ಮ ಮನವು ತಳಮಳಕ್ಕೆ ವಸ್ತುವಾಗದು. ಒಳ್ಳೆಯ ಕಾಯಕವನ್ನು ಮಾಡಿದೆವೆಂಬ ಧನ್ಯತಾ ಭಾವವು ಕೊಡುವ ತೃಪ್ತಿಯನ್ನು ಯಾವ ಪ್ರಶಸ್ತಿ ಪುರಸ್ಕಾರಗಳೂ ನೀಡಲಾರವು. ಸಹಜ ತೃಪ್ತಿಗಿಂತ ಮಿಗಿಲಾದುದು ಯಾವುದೂ ಇಲ್ಲ. ಸದಾ ಸಾರ್ವಜನಿಕವಾಗಿ ಮೆರೆಯುತ್ತಿರಬೇಕು ಎಂದು ಜನರು ಮಾಡುವ ಪ್ರಲಾಪಗಳು ಕೃತ್ರಿಮದ, ಕೃತಕತೆಯ ಅಟಾಟೋಪವೆನಿಸುತ್ತವೆ. ಪ್ರಕೃತಿಯ ಸಹಜ ಸೊಬಗಿನ ಗುಣವು ನಮ್ಮದಾದರೆ ಚೆನ್ನ.

ಇಂದಿನ ಬದುಕಿನಲ್ಲಿ ವಾತಾವರಣದ ಕಲ್ಮಷಗಳೊಂದಿಗೆ ಹೊಂದಿಕೊಂಡು ಬದುಕುವುದು ಅನಿವಾರ್ಯ ಎನಿಸಿದೆ. ಹೊರಗೆ ಓಡಾಡುವಾಗ, ಗಾಳಿಯಲ್ಲಿ ತೇಲಾಡುವ ಪೆಟ್ರೋಲ್ ಹೊಗೆ, ದೂಳು ಮೊದಲಾದ ಕಲ್ಮಷಗಳು ಮುಖದ ಚರ್ಮದ ಮೇಲೆ ಕುಳಿತುಕೊಂಡು, ಅಲ್ಲೇ ಶೇಖರಗೊಳ್ಳುತ್ತವೆ. ಇವುಗಳನ್ನು ನಿವಾರಿಸಲು ಒಂದು ಸರಳ ಉಪಾಯವಿದೆ : ಅದೇ ಮಣ್ಣಿನ ಪೇಸ್ಟ್‌ನ ಲೇಪನ!

ಸೌಂದರ್ಯವರ್ಧನೆಗೆ ಸರಳೋಪಾಯ!

● ಡಾ. ಶ್ರೀಲತಾ ಪದ್ಯಾಣ

ಇತ್ತೀಚಿಗೆ ಎಲ್ಲೆಂದರಲ್ಲಿ ಧೂಳು, ವಾಹನಗಳ ಹೊಗೆ, ತ್ಯಾಜ್ಯಗಳ ದುರ್ನಾತ ಇವೆಲ್ಲವೂ ಸಾಮಾನ್ಯ. ಹಾಗೆಯೇ, ಇವೆಲ್ಲವನ್ನೂ ಸಹಿಸಲಾಗದೆ ದೇಹಕ್ಕೆ ಕೆಲವು ರೋಗಗಳು, ಅಲರ್ಜಿಗಳು ಅಂಟಿಕೊಳ್ಳುವುದು ಸಾಮಾನ್ಯ. ಇದು ಮುಖ್ಯವಾಗಿ ಮುಖದ ಮೇಲೆ, ಗಾಳಿಗೆ ತೆರೆದುಕೊಂಡಿರುವ ಚರ್ಮದ ಮೇಲೆ ಪರಿಣಾಮ ಬೀರುವುದನ್ನು ಕಾಣಬಹುದು. ಗಂಟೆಗಟ್ಟಲೆ ಮುಖಕ್ಕೆ ಮೇಕಪ್ ಮಾಡಿದರೂ ಹೊರಗೆ ಹೋಗುವಾಗ ಮುಖ ಮುಚ್ಚಲೇಬೇಕಾದ ಪರಿಸ್ಥಿತಿ. ಮೊಗದ ಸೌಂದರ್ಯವ ಹಾಳುಗೆಡವಲು ಬೇರೆ ಕಾರಣ ಬೇಕಿಲ್ಲ ಅಲ್ಲವೇ!

ಹಾಗಿದ್ದರೆ ಆ ಸೌಂದರ್ಯವನ್ನು ಕಾಪಾಡಿಕೊಳ್ಳಲು ಸಾಕಷ್ಟು ಸಲಹೆಗಳನ್ನು ಈಗಾಗಲೇ ಪತ್ರಿಕೆ, ಇಂಟರ್ನೆಟ್‌ಗಳಲ್ಲಿ ಓದಿ, ಅಂತೆಯೇ ಪರಿಹಾರ ಕಂಡುಕೊಳ್ಳಲು ತಡಕಾಡಿದವರಿದ್ದೀರಿ. ಇಂದಿನ ಆಧುನಿಕ ಯುಗದ ಹಲವು ಕಂಪೆನಿಗಳು, ಕಾರ್ಪೊರೇಟ್‌ಗಳು, ಮುಖದ ಅಂದವನ್ನು, ಚರ್ಮದ ಕಾಂತಿಯನ್ನು ಹೆಚ್ಚಸಲೆಂದೇ ನಾನಾ ರೀತಿಯ ಉತ್ಪನ್ನಗಳನ್ನು ತಯಾರಿಸುತ್ತವೆ ಮತ್ತು ಬಹುವಾಗಿ ಜಾಹೀರಾತು ನೀಡಿ, ಜನರಿಗೆ ತಲುಪಿಸುತ್ತವೆ! ಅದನ್ನು ಬಳಸುವುದರ ಕುರಿತಾದ ವಿವೇಚನೆಯನ್ನು ಅವರವರೇ ತೆಗೆದುಕೊಳ್ಳುವುದು ವಿಹಿತ.

ಅದೆಲ್ಲದರೊಂದಿಗೆ ಇನ್ನೊಂದು ವಿಶೇಷ ಸಲಹೆಯಾಗಿ ಪರಿಹಾರವೊದಗಿಸುವುದೇ 'ಮೃತ್ತಿಕಾ ಚಿಕಿತ್ಸೆ'! ಅಂದರೆ, ಮೃತ್ತಿಕೆ ಅಥವಾ ಮಣ್ಣನ್ನು ಸೂಕ್ತವಾಗಿ ಬಳಸಿ, ನಮ್ಮ ದೇಹದ ಸೌಂದರ್ಯವನ್ನು ಕಾಪಾಡಿಕೊಳ್ಳುವುದು! ಅಚ್ಚರಿ ಎನಿಸಿತೇ? ವಾಸ್ತವವಾಗಿ ಗಮನಿಸಿದರೆ, ಮಣ್ಣಿನ ಚಿಕಿತ್ಸೆಯು ಒಂದು ನೈಸರ್ಗಿಕ ವಿಧಾನವಾಗಿದೆ.

ನೆಲದಾಳದ ಮಣ್ಣು

ನಮಗೆ ಸುಲಭವಾಗಿ ದೊರಕುವ ಮಣ್ಣನ್ನು ಸೌಂದರ್ಯವರ್ಧಕವಾಗಿಯೂ ಬಳಸಬಹುದು! ಇದು ತುಂಬಾ ಸರಳ ಹಾಗೂ ಪರಿಣಾಮಕಾರಿ ಚಿಕಿತ್ಸೆ. ಮಣ್ಣನ್ನು ಪಂಚಮಹಾಭೂತಗಳಲ್ಲಿ ಒಂದು ಎಂದು ನಮ್ಮ ಪರಂಪರೆ ಪರಿಗಣಿಸಿದೆ. ಪ್ರಾಕೃತಿಕವಾಗಿ ಸಿಗುವ ಕಪ್ಪು ಮಣ್ಣನ್ನು ಅತ್ಯಂತ ಸ್ವಚ್ಛವಿರುವ, ತ್ಯಾಜ್ಯಮುಕ್ತ ಪ್ರದೇಶಗಳಿಂದ ಸಂಗ್ರಹಿಸಬೇಕು. ಮಣ್ಣನ್ನು ತೆಗೆಯುವ ಜಾಗವು ಶುದ್ಧವಾಗಿರಬೇಕೆಂಬುದು ಮುಖ್ಯ ಅಂಶ. ಅದನ್ನು ಭೂಮಿಯ 3-4 ಅಡಿಯಿಂದ ತೆಗೆದು, ಕಲ್ಲುಗಳಿದ್ದರೆ ಹೊರತೆಗೆದು, ಸ್ವಚ್ಛಗೊಳಿಸಬೇಕು. ಹಾಗೆ ತೆಗೆದ ಮಣ್ಣನ್ನು ನೀರಿನಲ್ಲಿ ಬೆರೆಸಿ ಹದವಾಗಿ ಬೆರೆಸಿ, ಕೈಯಿಂದ ನಾದಿ, ಹದವಾದ ಪೇಸ್ಟ್ ಮಾಡಿಕೊಳ್ಳಬೇಕು. ಈಗ ನಮ್ಮ ಸುತ್ತಲಿನ ಮಣ್ಣು, ನಮ್ಮ ಸೌಂದರ್ಯ ವರ್ಧನೆಗೆ ಸಿದ್ಧ!

ಹದವಾಗಿ ನಾದಿದ ಮಣ್ಣಿನ ಪೇಸ್ಟ್‌ನ್ನು ಮುಖಕ್ಕೆ ಹಚ್ಚಿಕೊಂಡು 20 ನಿಮಿಷ ಹಾಗೆಯೆ ಬಿಡಬೇಕು. ಇಡೀ ಮುಖದ ಚರ್ಮವನ್ನು ಪಕ್ಷಿಮುಚ್ಚುವಂತೆ ಈ ಪೇಸ್ಟ್‌ನ್ನು ಸವರಿಕೊಳ್ಳಬಹುದು; ಕಣ್ಣುಗಳನ್ನು ಮುಚ್ಚಿ, ಕಣ್ಣಿನ ಮೇಲ್ಭಾಗಕ್ಕೂ ಹಾಕಬಹುದು. ಇಪ್ಪತ್ತು ನಿಮಿಷಗಳ ನಂತರ ತಣ್ಣೀರಿನಲ್ಲಿ ಮುಖವನ್ನು ಶುದ್ಧವಾದ ನೀರಿನಿಂದ ಚೆನ್ನಾಗಿ ತೊಳೆದುಕೊಳ್ಳಬೇಕು.

ಮುಖದ ಕಾಂತಿ ವರ್ಧನೆ: ಮಣ್ಣಿನ ಪೇಸ್ಟ್‌ನಿಂದ ಮುಖವನ್ನು ಈ ರೀತಿ ಮುಚ್ಚಿಕೊಂಡು, ಕೆಲವು ನಿಮಿಷಗಳ ನಂತರ ತೊಳೆದುಕೊಳ್ಳುವುದರಿಂದ, ಮುಖದಲ್ಲಿನ ಮಾಂಸಖಂಡ ಮತ್ತು ಸ್ನಾಯುಗಳ ಬಿಗಿತ ಕಡಿಮೆಯಾಗಿ ಒತ್ತಡ ದೂರವಾಗುತ್ತದೆ. ಆ ಭಾಗದಲ್ಲಿ ಹರಿಯುವ ರಕ್ತ ಶುದ್ಧೀಕರಣವಾಗುತ್ತದೆ. ಕಣ್ಣಿನ ಸುತ್ತಲಿರುವ ಕಪ್ಪು ಕಲೆ, ಮುಖದಲ್ಲಿನ ಮೊಡವೆಗಳು, ಕಪ್ಪು ಕಲೆಗಳು, ತುರಿಕೆಗಳು ಕ್ರಮೇಣ ನಿವಾರಣೆಯಾಗುತ್ತವೆ.

ಎಲ್ಲಕ್ಕಿಂತ ಮುಖ್ಯವಾಗಿ, ಮುಖದ ಕಾಂತಿ ಸಹಜವಾಗಿಯೇ ವರ್ಧಿಸುತ್ತದೆ. ದೇಹವನ್ನು ತಂಪುಮಾಡುತ್ತದೆ. ಚರ್ಮದ ಮೇಲೆ ಶೇಖರಗೊಂಡಿರುವ ಕಲ್ಮಷ ಮತ್ತು ವಿಷಕಾರಿ ಅಂಶಗಳನ್ನು ಹೀರಿಕೊಳ್ಳುತ್ತದೆ; ದೈನಂದಿನ ಓಡಾಟದಲ್ಲಿ, ನಗರದಲ್ಲಿರುವವರ ಮುಖದ ಮೇಲೆ ಪೆಟ್ರೋಲ್ ಹೊಗೆಯಂತಹ ಕಲ್ಮಷಗಳು ಸಣ್ಣಗೆ ಶೇಖರಗೊಳ್ಳುವುದು ಸಹಜ; ಅದನ್ನು ತೆಗೆದುಹಾಕುವಲ್ಲಿ ಈ ಮಣ್ಣಿನ ಪೇಸ್ಟ್‌ನ ಲೇಪನ ಸಹಕಾರಿ. ಮುಖದ ಮೇಲೆ ಇರುವ ಸಮಯದಲ್ಲಿ ಈ ಪೇಸ್ಟ್, ಅಂತಹ ಕಲ್ಮಷಗಳನ್ನು ಹೀರಿಕೊಳ್ಳುತ್ತದೆ. ಹಾಗಾಗಿ ದೇಹವೂ ಇದರಿಂದ ಹೆಚ್ಚಿನ ಪ್ರಯೋಜನಗ ಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ.ಇದೊಂದು ಸರಳ, ಸುಲಭ ಚಿಕಿತ್ಸೆ ಅಥವಾ ಉಪಾಯ ಎನ್ನಲೂಬ ಹುದು. ಶುದ್ಧವಾದ ಜಾಗದಿಂದ ಮಣ್ಣನ್ನು ಶೇಖರಿಸುವು ದರ ಕುರಿತು ಎಚ್ಚರಿಕೆ ವಹಿಸಬೇಕು. ಇನ್ನೇಕೆ ತಡ, ನೀವೂ ಮಾಡಿ ನೋಡಿ ಮಣ್ಣಿನ ಈ ಸರಳ ಚಿಕಿತ್ಸೆ!

ನಿಸರ್ಗಸಂಪತ್ತನ್ನು ಮಿತವಾಗಿ ಬಳಸಬೇಕು!

ತೆರಿಗೆಗಳು ಹಲವುಂಟು ಪ್ರಕೃತಿಗಂ ಸಲ್ಲುವುವು
ತೆರದೆ ನೀಂ ಮರೆಯೆ ದಂಡಿಪಳಾಕೆ ಮುನಿದು
ಕರಣಂಗಳಾಕೆಯವು ಮಿತದೊಳವುಗಳ ಬಳಸಿ
ತೆರು ಸಲುವ ಬಾಡಿಗೆಯ – ಮಂಕುತಿಮ್ಮ||

ಈ ಜಗತ್ತಿನಲ್ಲಿ ನಾವು ಜೀವಿಸಬೇಕಾದರೆ ನಮಗೆ ಅರಿವಿಗೆ ಬಂದೋ, ಬಾರದೆಯೋ ಈ ಪ್ರಕೃತಿಗೆ ತೆರಿಗೆಯನ್ನು ಪಾವತಿಸಲೇಬೇಕು. ತೆರಿಗೆಯನ್ನು ಪಾವತಿಸಲು ನಾವು ಮರೆತೆವೆಂದರೆ ಆಕೆಯು ಮುನಿದು ನಮಗೆ ಹಲವಾರು ದಂಡವನ್ನು ವಿಧಿಸುವಳು. ನಮ್ಮ ಜೀವನದ ಅಭ್ಯುದಯಕ್ಕೆ ಆಕೆಯು ಕೊಡಮಾಡಲ್ಪಟ್ಟಿರುವ ಉಪಕರಣಗಳನ್ನು ಮಿತವಾಗಿ ಉಪಯೋಗಿಸಿದರೆ ಮಾತ್ರವೇ ನಮ್ಮ ಬದುಕು, ಬಾಳು ಸೊಗಸೆನ್ನಿಸುತ್ತದೆ. ಇಲ್ಲದೆ ಹೋದರೆ ಅನರ್ಥವಾಗಿ ಬಿಡುತ್ತದೆ. ನಾವು ಈ ಪ್ರಕೃತಿಯಿಂದ ಪಡೆದ ಉಪಕಾರಗಳಿಗಾಗಿ ನಿಯಮಿತವಾದ ಬಾಡಿಗೆಯನ್ನು ಕಟ್ಟಲೇ ಬೇಕು ಎಂದು ಈ ಪದ್ಯದಲ್ಲಿ ಹೇಳಿದ್ದಾರೆ.

ಈ ಜಗದ ಪ್ರತಿಯೊಂದು ಜೀವಿಯೂ ಸಹ ಪ್ರಕೃತಿಯಿಂದಲೇ ಹುಟ್ಟಿ, ಪ್ರಕೃತಿಯಿಂದಲೇ ಬೆಳೆದು, ಪ್ರಕೃತಿಯಿಂದಲೇ ಸವಿದು, ಪ್ರಕೃತಿಯಿಂದಲೇ ಪಡೆದು, ಪ್ರಕೃತಿಯಿಂದಲೇ ಅಂತ್ಯಗೊಂಡು, ಈ ಪ್ರಕೃತಿಯಲ್ಲೇ ಲೀನವಾಗುವುದು. ಮಾನವನೂ ಸಹ ಈ ಪ್ರಕೃತಿಯಲ್ಲಿಯೇ ಹುಟ್ಟಿ, ಬೆಳೆದು, ಪಡೆದು, ಸವಿದು, ಅಂತ್ಯಗೊಂಡು ಈ ಪ್ರಕೃತಿಯಲ್ಲಿಯೇ ಲೀನವಾಗುತ್ತಾನೆ. ಈ ಪ್ರಕೃತಿಯ ಅವಶ್ಯಕತೆಯು ಮಾನವನಿಗಿದೆಯೇ ಹೊರತು, ಪ್ರಕೃತಿಗೆ ಈ ಮಾನವನಿಂದೇನಾಗ ಬೇಕಿಲ್ಲ. ಆದುದರಿಂದ ನಾವು ಮನುಷ್ಯರು ನಮ್ಮ ಇತಿಮಿತಿಯಲ್ಲಿಯೇ ಇಲ್ಲಿ ಜೀವನ ಮಾಡಬೇಕಾಗುತ್ತದೆ.

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ಈ ಪ್ರಕೃತಿಯಲ್ಲಿ ನಾವು ಬಳಸಿಕೊಂಡ, ಉಪಯೋಗಿಸಿಕೊಂಡ ವಸ್ತುಗಳಿಗೆ ನಾವು ಕೆಲವು ಕರಗಳನ್ನು ವ್ಯಕ್ತವಾಗೋ, ಅವ್ಯಕ್ತವಾಗೋ ಪಾವತಿಸಲೇಬೇಕಾಗುತ್ತದೆ. ಅಂಥಹ ತೆರಿಗೆ, ಕರ ಎಂದರೆ ನಾವು ಈ ಪ್ರಕೃತಿ ಯನ್ನು ಸದಾ ಸುಸ್ಥಿಯಲ್ಲಿಡುವಂತಹುದೇ ಆಗದೆ. ಮನುಷ್ಯನ ಲೋಭನೆಗಾಗಿ ನೀರು ಕೊಡುವ, ನದಿಮೂಲಗಳಾದ ಬೆಟ್ಟ ಗುಡ್ಡಗಳನ್ನು ಹಾಳುಮಾಡುವುದಾಗಲಿ, ಮಳೆಯನ್ನೂ, ಉತ್ತಮ ವಾತವಾರಣವನ್ನೂ ನೀಡುವ ಕಾಡುಗಳನ್ನು ನಾಶಮಾಡುವುದಾಗಲಿ, ಈ ಪ್ರಕೃತಿಯ ಅಲಂಕಾರಿಕ ವಸ್ತುಗಳಾದ ಇತರೆ ಪ್ರಾಣಿಗಳನ್ನು ಕೊಂದು, ಸ್ವಾಭಾವಿಕ ಆಹಾರ ಸರಪಳಿಗೆ ಪೆಟ್ಟು ಕೊಡುವಂತಹದ್ದಾಗಲಿ ಮಾಡದೇ ಇರುವುದೇ ನಾವು ಈ ಪ್ರಕೃತಿಗೆ ಕೊಡುವ ತೆರಿಗೆಯೇ ಆಗಿರುತ್ತದೆ.

ಆದರೆ ಇಂಥಹ ವಿನಾಶಕಾರಕ ಕೆಲಸಗಳನ್ನು ಮಾನವನು ಮಾಡಿದಾಗಲೇ ಆ ಪ್ರಕೃತಿಯು ಮುನಿದು ಚಂಡ ಮಾರುತ, ಭೂ ಕಂಪನ, ಸುನಾಮಿ, ಅತಿವೃಷ್ಟಿ, ಅಮಾವೃಷ್ಟಿಗಳಂಥಹ ಪ್ರಕೃತಿ ವಿಕೋಪಗಳು ಉಂಟಾಗಿ ಮಾನವ ಜೀವಿಗೆ ಇನ್ನಿಲ್ಲದಂತಹ ನರಕ ದರ್ಶನವಾಗುವುದು. ಹಾಗಾಗಿ ಪ್ರಕೃತಿ ಮಾತೆಯು ನಮ್ಮಗಳ ಮೇಲೆ ಮುನಿಯದಂತೆ ನೋಡಿಕೊಳ್ಳುವುದೇ ನಾವು ಅವಳಿಗೆ ಕೊಡುವ ಬಾಡಿಗೆ, ನಾವು ಅವಳಿಗೆ ಕೊಡುವ ಗೌರವ. ಮನುಷ್ಯನು ತನ್ನ ಇತಿ ಮಿತಿಯಲ್ಲಿಯೇ ಈ ಪ್ರಕೃತಿಗನುಗುಣವಾಗಿ ಜೀವಿಸಬೇಕೆ ಹೊರತು, ಎಲ್ಲವೂ ನನ್ನ ಅಧೀನ ಎಂಬ ದಾಷ್ಟ್ರ್ಯವನ್ನು ಪ್ರದರ್ಶಿಸದೆ ಈ ಪ್ರಕೃತಿಯ ಮಗುವಾಗಿ ಜೀವಿಸುವುದೇ ನಿಜ ಧರ್ಮ ಎಂದು ನಾವು ಅರಿಯಬೇಕಾಗುತ್ತದೆ.

ಈ ಮಾನವನ ಅಹಂಕಾರ ಮಿತಿ ಮೀರಿದಾಗ ಆ ಪ್ರಕೃತಿ ಮಾತೆಯೇ ಈತನ ಮೇಲೆ ಪ್ರಹಾರ ಮಾಡಿ ತನ್ನ ಹಿಡಿತಕ್ಕೆ ತಗೆದುಕೊಳ್ಳುತ್ತಾಳೆ. ಇದನ್ನೇ ಈ ಪದ್ಯದಲ್ಲಿ 'ತೆರದೆ ನೀಂ ಮರೆಯೆ ದಂಡಿಪಳಾಕೆ ಮುನಿದು' ಎಂದು ಹೇಳಿರುವುದು. ಈ ಕಾಲಘಟ್ಟದಲ್ಲಿಯ ಪ್ಲೇಗ್, ಕಾಲರ, ಕೊರೋನಾ ಎಂಬ ಮಹಾಮಾರಿಗಳ ಉಡುಗೊರೆಯು ಸಹ ಈ ಬಲಿತ ಮನುಷ್ಯನನ್ನು ತಹಬಂದಿಗೆ ತಂದು, 'ನನ್ನ ಮುಂದೆ ನಿನ್ನ ಯೋಗ್ಯತೆ ಇಷ್ಟೇ' ಎಂದು ಪ್ರಕೃತಿ ಮಾತೆಯು ಹೇಳಿದಂತಿದೆ. ಹಾಗಾಗಿ ಅಂತರಂಗ ಶುದ್ಧಿಯಿಂದ ಹಿಡಿದು, ಬಹಿರಂಗ ಶುದ್ಧಿಯಾಗಿ ತನ್ನೊಳಗಿನ ಆತ್ಮೋದ್ಧಾರದಿಂದ ಹಿಡಿದು, ಈ ಪ್ರಕೃತಿಯಲ್ಲಿ ನಾವು ಮಗುವಾಗಿ ಜೀವಿಸುವುದೇ ಒಳಿತು ಎಂದು ಈ ಪದ್ಯದಲ್ಲಿ ಸೂಕ್ಷ್ಮವಾಗಿ ಹೇಳಿದ್ದಾರೆ. ಮಹಾತ್ಮ ಗಾಂಧಿಯವರು 'ಈ ಪ್ರಕೃತಿಯು ನಿನ್ನೆಲ್ಲಾ ಆಸೆಗಳನ್ನು ಪೂರೈಸುತ್ತದೆ, ಆದರೆ ದುರಾಸೆಗಳನ್ನಲ್ಲ' ಎಂದು ಹೇಳಿರುವುದು ಸಹ ಇದೇ ಅರ್ಥದಲ್ಲಿ.

ಕ್ಷಮೆ ಎಂಬ ದಿವ್ಯೌಷಧಿ!

ಜುಲೈ 7 ಜಾಗತಿಕ ಕ್ಷಮೆ ದಿನ. 1994 ರಂದು ಕೆನಡಾ ದೇಶದ 'ಕ್ರಿಶ್ಚಿಯನ್ ಎಂಬಸಿ ಆಫ್ ಕ್ರೈಸ್ಟ್ ಅಂಬಾಸಿಡರ್ಸ್' (ಸಿ.ಇ.ಸಿ.ಎ) ಸಂಸ್ಥೆಯು ಕ್ಷಮೆಯ ದಿನದ ಆಚರಣೆಗೆ ಪ್ರಪ್ರಥಮವಾಗಿ ಅಡಿಪಾಯ ಹಾಕಿತು.

● ಮಲ್ಲಪ್ಪ. ಸಿ. ಖೊದ್ನಾಪೂರ (ತಿಕೋಟಾ)

ಖ್ಯಾತ ಮನಃಶಾಸ್ತ್ರಜ್ಞ ಜೋನಾಥನ್ ಹುಯಿ ಅವರು, 'ಇತರರು ಕ್ಷಮೆಗೆ ಅರ್ಹರು ಎಂಬ ಕಾರಣಕ್ಕಾಗಿ ಅಲ್ಲ. ಬದಲಾಗಿ ನೀವು ಶಾಂತಿಗೆ ಅರ್ಹರು ಎಂಭ ಕಾರಣಕ್ಕಾಗಿ ಕ್ಷಮಿಸಿ' ಎಂದು ಹೇಳಿದ್ದಾರೆ. ಜೀವನದಲ್ಲಿ ಮುರಿದ ಸಂಬಂಧ ಮತ್ತು ಅನ್ಯೋನ್ಯತೆಯ ಭಾವಾನುಬಂಧವನ್ನು ಜೋಡಿಸಲು ಮತ್ತು ಸುಧಾರಿಸಲು ಪ್ರತಿ ವರ್ಷ ಜುಲೈ 7 ರಂದು ಜಾಗತಿಕ ಕ್ಷಮೆ ದಿನವನ್ನು ಆಚರಿಸಲಾಗುತ್ತಿದೆ. ಜನರ-ಜನರ ಮಧ್ಯೆ ಇರುವ ಬಿರುಕು ಹಾಗೂ ಸಾಮರಸ್ಯವನ್ನು ಉತ್ತೇಜಿಸಲು ಕ್ಷಮೆಯು ಒಂದು ಕೊಂಡಿಯಾಗಿ ಕಾರ್ಯನಿರ್ವಹಿಸುತ್ತದೆ.

ನಾವು ಯಾವುದೇ ತಪ್ಪು ಎಸಗಿದಾಗ ಅಥವಾ ಬೇರೊಬ್ಬರೂ ತಪ್ಪುಗಳನ್ನು ಮಾಡಿದಾಗ ಕ್ಷಮೆಯೊಂದೇ ಪರಿಹಾರ. ಆದ್ದರಿಂದ ವ್ಯಕ್ತಿ-ವ್ಯಕ್ತಿಗಳ ಜೀವನದಲ್ಲಿ ಮತ್ತು ಸಮಾಜದಲ್ಲಿ ಬದಲಾವಣೆ ತರಲು ಕ್ಷಮೆ ಪರಿವರ್ತಕ ಶಕ್ತಿಯಾಗಿದೆ. ನಕಾರಾತ್ಮಕ ಭಾವನೆ, ದ್ವೇಷ, ಆವೇಶ, ಕೋಪವನ್ನು ಬಿಟ್ಟು ಕ್ಷಮೆಯ ಮೂಲಕವೇ ಮನಸ್ಸಿನಲ್ಲಿ ಶಾಂತಿ, ಸಮಾಧಾನ, ನೆಮ್ಮದಿಯನ್ನು ಮೂಡಿಸಬಹುದು.

ಜನರಲ್ಲಿ ದ್ವೇಷವೆಂಬ ಹಗೆಯನ್ನು ದೂರ ಮಾಡಲು ಹಾಗೂ ಆತ್ಮೀಯತೆ ಮತ್ತು ಸಹಾನುಭೂತಿಯನ್ನು ಬೆಳೆಸಲು ಮತ್ತು ಸಕಾರಾತ್ಮಕ ಚಿಂತನೆಯನ್ನು ಬೆಳೆಸಲು ಕ್ಷಮೆಯು ಸಹಕಾರಿ. ನಮ್ಮೊಂದಿಗೆ ಅನುಚಿತವಾಗಿ ವರ್ತಿಸಿದರೆ ಅಥವಾ ನಮ್ಮ ಮನಸ್ಸಿಗೆ ಘಾಸಿ ಮಾಡಿದರೆ ಅವರನ್ನು ಅಷ್ಟು ಸುಲಭವಾಗಿ ಕ್ಷಮಿಸಲು ಮನಸ್ಸು ಒಪ್ಪುವುದಿಲ್ಲ. ಆದರೆ ಜೀವನದಲ್ಲಿ ಕ್ಷಮಾಗುಣದಂತಹ ಮನೋಭಾವನ್ನು ಬೆಳೆಸಿಕೊಂಡರೆ ಅದುವೇ ಗೌರವಯುತ ಜೀವನವೆಂದು ಹೇಳಬಹುದು. ಆದ್ದರಿಂದ ಜನರಲ್ಲಿ ಸದ್ಭಾವನೆ ಮತ್ತು ಆರೋಗ್ಯಕರ ಸಂಬಂಧವನ್ನು ಬಲಪಡಿಸುವ ಉದ್ಧೇಶದಿಂದ ಈ ಜಾಗತಿಕ ಕ್ಷಮೆ ದಿನವನ್ನು ಆಚರಿಸಲಾಗುತ್ತದೆ.

ಕ್ಷಮೆಯು ಜನರ ಮನಸ್ಸಿನ ನೋವು, ಭಾವನತ್ಮಕತೆ ಮತ್ತು ಭಿನ್ನಾಭಿಪ್ರಾಯದಂತಹ ಮನಸ್ಥಿತಿಯನ್ನು ಗುಣಪಡಿಸುವ ದಿವ್ಯೌಷಧಿ. ಜಗತ್ತಿನೆಲ್ಲೆಡೆ ಎಲ್ಲ ಜನರಲ್ಲಿ ದ್ವೇಷ, ಕೋಪ, ಆಕ್ರೋಶ, ಆವೇಶ ಮತ್ತು ಮತ್ಸರಗಳನ್ನು ತೊಲಗಿಸಿ ಪರಸ್ಪರ ಪ್ರೀತಿ. ಸಹಕಾರ, ಮಮತೆ, ಬಾಂಧವ್ಯ, ಅನ್ಯೋನ್ಯತೆ, ಆತ್ಮೀಯತೆ. ಸಹಾನುಭೂತಿ,ಸೌಹಾರ್ದತೆ, ಭಾವೈಕ್ಯತೆ ಮತ್ತು ಸಾಮರಸ್ಯತೆಯನ್ನು ಪ್ರೋತ್ಸಾಹಿಸುವ ಮತ್ತು ಬೆಳೆಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಕ್ಷಮಿಸುವ ಉದಾರ ಗುಣವು ವ್ಯಕ್ತಿಯಲ್ಲಿ ಸದಾ ಸಕಾರಾತ್ಮಕ ಆಲೋಚನೆ, ಸಂತೋಷ ಮತ್ತು ಆರೋಗ್ಯಕರವಾದ ಜೀವನವನ್ನು ನಡೆಸಲು ಸಾಧ್ಯ.

ಅಧ್ಯಯನ: ಇತ್ತೀಚೆಗೆ ವಿಸ್ಕಾನ್ಸಿನ್ ವಿಶ್ವವಿದ್ಯಾಲಯದ ಮನಃಶಾಸ್ತ್ರ ವಿಭಾಗದಿಂದ ಕೈಗೊಂಡ ಸಂಶೋಧನೆಯಲ್ಲಿ ತಿಳಿದುಬಂದ ಸಂಗತಿ ಎಂದರೆ ಕ್ಷಮಿಸುವ ಗುಣ ಹೊಂದಿದ ಜನರು ಕೆಲವು ಕಾಯಿಲೆಗಳಿಂದ ಕಡಿಮೆ ಬಳಲುತ್ತಾರೆ! ಸದಾ ಕೋಪ, ಆವೇಶದಿಂದ ಕೂಡಿದ ಮತ್ತು ಕ್ಷಮಿಸುವ ಗುಣವನ್ನು ಹೊಂದಿಲ್ಲದ ಜನರು ಆತಂಕ, ಅಧಿಕ ರಕ್ತದೊತ್ತಡ, ಮಾನಸಿಕ ವೇದನೆ ಮತ್ತು ಖಿನ್ನತೆಯಂತಹ ಮನೋರೋಗಳಿಗೆ ಒಳಗಾಗುತ್ತಾರೆ! ಜಾಗತಿಕ ಮಟ್ಟದಲ್ಲೂ, ಕ್ಷಮೆಯ ಗುಣ ವಿವಿಧ ನಾಯಕರಲ್ಲಿ ಇದ್ದರೆ, ಯುದ್ಧದ ಸಮಸ್ಯೆ ದೂರಾದೀತು!

ನಮ್ಮ ದಿನಚರಿಯಲ್ಲಿ ಇತರರೊಂದಿಗೆ ಮಾತನಾಡುವುದು, ಭಾವನೆಗಳನ್ನು ವ್ಯಕ್ತಪಡಿಸುವುದು, ವೃತ್ತಿಪರ ಸಹದ್ಯೋಗಿಗಳೊಂದಿಗೆ ಕೆಲಸ ಮಾಡುವಲ್ಲಿ ಮತ್ತು ವಿಭಿನ್ನ ದೃಷ್ಟಿಕೋನದಿಂದ ಕಾಣುವ ಗೌರವ ಭಾವನೆ ಮೂಡಲು ಕ್ಷಮಾ ಗುಣವು ಸಹಕಾರಿಯಾಗಿದೆ. ದೇವರು ನಾವು ಮಾಡುವ ತಪ್ಪನ್ನು ಕ್ಷಮಿಸಿದಂತೆ, ನಾವು ಬೇರೊಬ್ಬರನ್ನು ಕ್ಷಮಿಸುವ ಉದಾರ ಹೃದಯ ಹೊಂದಬೇಕು.

ಹನಿ ಮಳೆ

ಸರಳ ಆಹಾರ ಸುಸ್ಥಿರ ಹೃದಯ

ಸದ್ದು ಮಾಡಿವೆ ಟಿವಿಗಳು ಹೃದಯದ ಕುರಿತು
ದಿನವಿಡೀ ಸಾಲು ಮರಣಗಳ ಕೊರೆತ
ಇದ ನೋಡಿ ಬೆದರದಿರು ಓ ಪ್ರೇಕ್ಷಕ
ಸರಳ ಆಹಾರದಿಂದ ಸಾಧ್ಯ ಸುಸ್ಥಿರ ಕಾಯಕ

● ಅಜಯ್ ಅಂಚೆಪಾಳ್ಯ

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

2. ಆತನಿಗೆ ಕಾಣಿಸಿದ ಭೂಮಿ (3)
5. ಆಕಾಶ ನೋಡುವ ಸಂದರ್ಭ (4)
6. ಆಹಾರ ಅಥವಾ ತುತ್ತು (2)
7. ಪುತ್ರ ತಿರುಗಿ ಬಂದಾಗ ಎಲ್ಲಾ ಸರಳ (3)
10. ಪ್ರಿಯ ವ್ಯಕ್ತಿ ದೂರವಿದ್ದಾಗ ಅಗಲಿಕೆಯ ನೋವು (3)
13. ರಕ್ತ ಹರಿಯುವ ನಾಳ (3)
14. ಲಕ್ಷ್ಯದಲ್ಲಿ ಚಿತ್ತವಿದೆ (3)
15. ವೇಗವು ರಸದ ನಡುವೆಯಿದೆ (3)
17. ಪಾಯಸ ಕುಡಿಯಲು ಬಂತೇ ಕಾಗೆ (3)
20. ಸ್ವಾಮಿ ನಿಷ್ಠೆಗೆ ಹೆಸರಾದ ಪ್ರಾಣಿ (2)
21. ನಡುರಾತ್ರಿ (4)
22. ಜೋಡಿ (3)

ಮೇಲಿಂದ ಕೆಳಕ್ಕೆ

1. ಯುದ್ಧದಲ್ಲಿ ಬಳಸುವ ಉಕ್ಕಿನ ಅಂಗಿ (3)
2. ದೇಹವಿಲ್ಲದ್ದು (4)
3. ತಿನ್ನುವ ವಸ್ತು (3)
4. ಗ್ರಾಮದಲ್ಲಿ ನಡೆದ ಕಾಳಗ (3)
8. ಮರ ಕತ್ತರಿಸುವ ಸಾಧನವಿದು (4)
9. ನೀಚನಿಗೆ ಇನ್ನೊಂದು ಹೆಸರು (3)
10. ವಸ್ತುಗಳ ಅದಲು-ಬದಲು (4)
11. ಭಾರವಿಲ್ಲದ್ದು (3)
12. ಅರಣ್ಯ (3)
16. ಹೆದರಿಕೆ ಹುಟ್ಟಿಸುವಂತಹುದು (4)
17. ಕಾಯಿದೆ ತರಲು ವಿಧಿಸಿದ ಗಡುವು (3)
18. ಯಾರಿಗೂ ಕಾಯದ ಕಾಲ (3)
19. ದಯೆ ಅಥವಾ ಕನಿಕರ (3)

ತುಳಸಿದಾಸರಿಗೆ ರಾಮನಾಗಿ ದರ್ಶನ ನೀಡಿದ ಪುರಿ ಜಗನ್ನಾಥ

ಒಂದು ದಿನ ತುಳಸಿದಾಸರಿಗೆ, ಪುರಿ ಜಗನ್ನಾಥನಲ್ಲಿ ರಾಮನ ದರ್ಶನವಾಗುತ್ತದೆ ಎಂಬ ಸುದ್ದಿ ಯಾರಿಂದಲೋ ತಿಳಿದು ಬಂದಿತು. ರಾಮನ ದರ್ಶನ ಮಾಡುವ ಸಲುವಾಗಿ ರಾಮನ ಭಕ್ತರಾಗಿದ್ದ ತುಳಸಿದಾಸರು ಯಾತ್ರಿಕರ ಜೊತೆ ಪಾದಯಾತ್ರೆ ಮಾಡುತ್ತಲೇ ಪುರಿ ಕ್ಷೇತ್ರಕ್ಕೆ ರಾಮನ ದರ್ಶನ ಮಾಡಲು ಹೊರಟರು. ಕಷ್ಟಪಟ್ಟು ನಡೆದು ಬಹಳ ದಿನಗಳ ಮೇಲೆ ಪುರಿ ಕ್ಷೇತ್ರವನ್ನು ತಲುಪಿದರು. ಅವರಿಗೆ ಇಷ್ಟದೈವವಾದ ರಾಮನ ದರ್ಶನ ಮಾಡಲು ಕಾತರದಿಂದ ದೇವಸ್ಥಾನದ ಒಳಗೆ ಬಂದು ಗರ್ಭಗುಡಿಯೊಳಗೆ ನೋಡಿದ ಅವರಿಗೆ ನಿರಾಸೆಯಾಯಿತು. ಇದೇನು, ದುಂಡನೆಯ ನಯನವುಳ್ಳ ಮರದ ದೇವರು, ನನ್ನ ರಾಮನಾಗಲು ಹೇಗೆ ಸಾಧ್ಯ? ರಾಮನೆಲ್ಲಿ? ಎಂಬ ಬೇಸರದಿಂದ ಹೊರಬಂದು ಮರದ ಕೆಳಗೆ ಕುಳಿತರು. ಅಷ್ಟೊಂದು ಕಷ್ಟಪಟ್ಟು ಇಷ್ಟು ದೂರ ಬಂದರೂ ನನಗೆ ರಾಮನ ದರ್ಶನವಾಗಲಿಲ್ಲ ಎಂದು ಬೇಸರದಿಂದ ಚಿಂತಿಸುತ್ತಲೇ ಕತ್ತಲಾಯಿತು.

ಆ ಹೊತ್ತಿಗೆ ಪುಟ್ಟ ಬಾಲಕನೊಬ್ಬ ಕೈಯಲ್ಲಿ ಕುಡಿಕೆ ತುಂಬಾ ಪ್ರಸಾದ ಹಿಡಿದು ತಂದು ಇಲ್ಲಿ ತುಳಸಿದಾಸರು ಎಂದರೆ ಯಾರು ಎಂದು ಅಲ್ಲಿದ್ದವರನ್ನೆಲ್ಲ ಕೇಳುತ್ತಾ ಬಂದನು. ತುಳಸಿದಾಸರು ಅವನನ್ನು ನೋಡಿ ದೇವಸ್ಥಾನದವರಿಗೆ ನಾನು ಬಂದಿರುವ ವಿಚಾರ ಈ ಹುಡುಗನಿಗೆ ಹೇಗೆ ತಿಳಿಯಿತು ಎಂದು ಯೋಚಿಸಿದರು. ನನ್ನ ಜೊತೆ ಬಂದವರು ಯಾರೋ ಒಳಗೆ ಹೇಳಿರಬೇಕು ಅದಕ್ಕಾಗಿ ನನಗೆ ಪ್ರಸಾದ ಕಳಿಸಿದ್ದಾರೆ ಎಂದುಕೊಂಡು, 'ಮಗು ನಾನೇ ತುಳಸಿ ದಾಸ ಎಂದರು. ಮುದ್ದಾದ ಬಾಲಕ ನಾನು ನಿಮ್ಮನ್ನು ಆಗಿನಿಂದಲೂ ಹುಡುಕುತ್ತಲೇ ಇದ್ದೆ. ಜಗನ್ನಾಥ ದೇವರು ನಿಮಗಾಗಿ ಈ ಕುಡಿಕೆ ತುಂಬಾ ಪ್ರಸಾದ ಕಳಿಸಿದ್ದಾರೆ' ಎಂದನು. ಆದರೆ ದಾಸರು ನಾನು ಈ ಪ್ರಸಾದವನ್ನು ನಾನು ಸೇವಿಸಲಾರೆ ಎಂದರು. ಆಶ್ಚರ್ಯದಿಂದ ಬಾಲಕ, ಇಡೀ ಜಗತ್ತೇ ಜಗನ್ನಾಥನ ಪ್ರಸಾದಕ್ಕಾಗಿ ಕೈ ಚಾಚುತ್ತದೆ. ಆದರೆ ನೀವೇಕೆ ಪ್ರಸಾದ ವಾಪಸ್ಸು ತೆಗೆದುಕೊಂಡು ಹೋಗಲು ಹೇಳುವಿರಿ? ಎಂದು ಕೇಳಿದಾಗ, ನನ್ನ ಇಷ್ಟದೈವ ರಾಮನ ಪೂಜೆ ಮಾಡಿ ಅವನಿಗೆ ಅರ್ಪಿಸದೆ ಏನನ್ನೂ ಸೇವಿಸುವಹಾಗಿಲ್ಲ. ಅಲ್ಲದೆ ನಿನ್ನ ಜಗನ್ನಾಥನ ಪ್ರಸಾದವನ್ನು ನನ್ನ ರಾಮನಿಗೆ ಹೇಗೆ ನೈವೇದ್ಯ ಮಾಡಲಿ? ಆದುದರಿಂದ ಈ ಪ್ರಸಾದವನ್ನು ಸ್ವೀಕರಿಸಲಾರೆ ಎಂದರು.

ಒಂದೊಳ್ಳೆ ಮಾತು



ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಅದಕ್ಕೆ ಬಾಲಕ, 'ನಿಮ್ಮ ಇಷ್ಟ ದೇವರೇ ಈ ಪ್ರಸಾದವನ್ನು ಕಳಿಸಿರುವುದು' ಎಂದನು. 'ಅದು ಹೇಗೆ ಸಾಧ್ಯ, ಹಸ್ತ-ಪಾದ ಗಳಿಲ್ಲದ ನಿನ್ನ ಜಗನ್ನಾಥ ನನ್ನ ರಾಮನಾಗಲು ಹೇಗೆ ಸಾಧ?' ಎಂದು ತುಳಸಿದಾಸರು ಕೇಳಿದಾಗ ಬಾಲಕ ನಗುತ್ತಾ ನುಡಿದ ನೀವೇ ನಿಮ್ಮ 'ರಾಮ ಚರಿತ ಮಾನಸ'ದಲ್ಲಿ ವರ್ಣಿಸಿದ್ದೀರಲ್ಲ, ಬ್ರಹ್ಮನು ಪಾದಗಳಿಲ್ಲದೆ ನಡೆಯುತ್ತಾನೆ, ಕಿವಿ ಇಲ್ಲದೆ ಕೇಳುತ್ತಾನೆ, ಕೈಗಳಿಲ್ಲದೆ ಕೆಲಸಗಳನ್ನು ಮಾಡುತ್ತಾನೆ, ನಾಲಿಗೆ ಇಲ್ಲದೆ ಎಲ್ಲಾ ಆಹಾರಗಳ ರುಚಿ ಆಸ್ವಾದಿಸುತ್ತಾನೆ, ಮತ್ತು ಮಾತಿಲ್ಲದೆ ಅನೇಕ ವಿಷಯಗಳನ್ನು ಮಾತಾಡುವ ವಾಗ್ಮೀ ಅಲ್ಲವೇ? ಎಂದು ತುಳಸಿ ದಾಸರನ್ನು ಕೇಳಿದಾಗ,ಅವರಿಗೆ ಅರ್ಥವಾಯಿತು. ತಮ್ಮ ಅಜ್ಞಾನಕ್ಕೆ ಕಣ್ಣಂಚಿನಲ್ಲಿ ನೀರೂ ಬಂದಿತು.

ಬಾಲಕನು ನಗುತ್ತಾ ತುಳಸಿದಾಸರೇ 'ನಾನೇ ನಿಮ್ಮ ರಾಮ, ನನ್ನ ನಾಲ್ಕೂ ದಿಕ್ಕುಗಳಿಗೂ ಹನುಮಂತ ಪಹರೆ ಕಾಯುತ್ತಿದ್ದಾನೆ. ದಿನ ನಿತ್ಯ ಬೆಳಿಗ್ಗೆ ವಿಭೀಷಣ ನನ್ನ ದರ್ಶನಕ್ಕೆ ಬರುತ್ತಾನೆ. ನೀವು ಸಹ ನಾಳೆ ಬಂದು ನನ್ನ ದರ್ಶನ ಮಾಡಿ' ಎಂದು ಹೇಳಿ ಓಡಿ ಕಣ್ಮರೆಯಾದನು.

ತುಳಸಿದಾಸರಿಗೆ ಜಗತ್ತಿನ ಪರಿವೇ ಇರಲಿಲ್ಲ. ಕಣ್ಣಿಂದ ಧಾರಾಕಾರವಾಗಿ ನೀರು ಸುರಿಯುತ್ತಿತ್ತು. ಬಾಲಕ ತಂದಿಟ್ಟ ಪ್ರಸಾದವನ್ನು ಭಕ್ತಿಯಿಂದ ಸಂಭ್ರಮದಿಂದ ಸೇವಿಸಿದರು. ಮರುದಿನ ಬೆಳಿಗ್ಗೆ ಎದ್ದವರೇ ಜಗನ್ನಾಥನ ದರ್ಶನ ಮಾಡಲು ಹೋದರು. ಜಗನ್ನಾಥ- ಬಲರಾಮ-ಸುಭದ್ರೆ ನಿಂತಿರುವ ಜಾಗದಲ್ಲಿ ರಾಮ, ಸೀತೆ, ಲಕ್ಷ್ಮಣ ಹನುಮಂತ ಇರುವುದನ್ನು ಕಂಡರು.

ಯಾವ ಜಾಗದಲ್ಲಿ ತುಳಿತಿದಾಸರು ರಾತ್ರಿಯನ್ನು ಕಳೆದಿದ್ದರೋ ಅದನ್ನು 'ತುಳಸಿಯ ಚೌರ' ಎಂದು ಕರೆಯುತ್ತಾರೆ. ಅವರು ಕುಳಿತಿದ್ದ ಪೀಠ 'ಬಡಸ್ತಾಮಠ' ಎಂದು ಪ್ರಸಿದ್ಧವಾಗಿದೆ. ದೇವನೊಬ್ಬ ನಾಮ ಹಲವು ಎನ್ನುವಂತೆ ನಾವು ಯಾವ ತೀರ್ಥಕ್ಷೇತ್ರಕ್ಕೆ ಹೋದರು ಅಲ್ಲಿ ನಮ್ಮ ಇಷ್ಟ ದೇವರು ಅಲ್ಲಿನ ದೈವದ ರೂಪದಲ್ಲಿ ನಮ್ಮನ್ನು ಆಶೀರ್ವದಿಸುತ್ತಾನೆ. ಅವನ ಕೃಪಾಕಟಾಕ್ಷಕ್ಕೆ ಪಾತ್ರರಾಗಲು ನಮ್ಮ ನಿಷ್ಕಲ್ಮಶ ಭಕ್ತಿಯೊಂದೇ ಸಾಧನ.

ಟೀಕೆಗಳನ್ನು ಎದುರಿಸುವುದು ಹೇಗೆ?

● ವಿರೇಶ್ ಎಸ್ ಅಬ್ಬಿಗೇರಿ. ನಾಗರಹಳ್ಳಿ

ನಮ್ಮ ಹಲವು ಚಟುವಟಿಕೆಗಳು ಬೇರೆಯವರ ಗಮನ ಸೆಳೆಯುತ್ತದೆ. ಒಂದು ಹೊಸ ಬಟ್ಟೆ, ಸೋಷಿಯಲ್ ಮೀಡಿಯಾದ ಒಂದು ಪೋಸ್ಟ್ ಇತ್ಯಾದಿಯನ್ನು ಇತರರು ಹೊಗಳಿದಾಗ, ಸಂತೋಷವಾಗುತ್ತದೆ. ಆದರೆ ಒಂದು ಸಣ್ಣ ಟೀಕೆ ಇಡೀ ದಿನದ ಮೂಡ್ ಹಾಳು ಮಾಡಿ ಬಿಡುತ್ತದೆ. ಇದರಿಂದ ಪಾರಾಗುವುದು ಹೇಗೆ?

ಮನುಷ್ಯ ಸಂಘಜೀವಿ ಮತ್ತು ಸ್ವಭಾವತಃ ಭಾವಜೀವಿ. ನಾಲ್ಕು ಜನರ ಮಧ್ಯೆ ಇದ್ದು ಬದುಕುವಾಗ ಇತರರ ಮಾತು, ಮೂದಲಿಕೆ ಎಲ್ಲವೂ ಸಾಮಾನ್ಯ. ಆದರೆ ಇತರರ ಅಭಿಪ್ರಾಯಗಳಿಗೆ ಕಾಯುವುದನ್ನು ಬಿಡುವುದು ಮತ್ತು ಅವು ನಿಮ್ಮ ಮೇಲೆ ಪ್ರತಿಕೂಲ ಪರಿಣಾಮ ಬೀರದಂತೆ ನೋಡಿಕೊಳ್ಳುವುದನ್ನು ಕಲಿಯುವುದು ಅವಶ್ಯಕ. ಅದಕ್ಕೆ ಈ ಕೆಳಗಿನ ಕೆಲವು ಸಲಹೆಗಳು ನಿಮಗೆ ಸಹಾಯವಾಗಬಹುದು.

- **ನಿಮ್ಮನ್ನು ನೀವು ಮೆಚ್ಚಿ ಮಾತನಾಡಿಕೊಳ್ಳುವುದನ್ನು ಅಭ್ಯಾಸ ಮಾಡಿಕೊಳ್ಳಿ. ನಿಮ್ಮ ಮೇಲಿನ ಗೌರವ ಯಾವುದೇ ಪರಿಸ್ಥಿತಿಯಲ್ಲೂ ಕಡಿಮೆಯಾಗದಂತೆ ನೋಡಿಕೊಳ್ಳಿ.**
- **ಯಾವುದನ್ನು ಜಗತ್ತಿಗೆ ಜಾಹೀರು ಮಾಡಬೇಕು ಯಾವುದನ್ನು ಮಾಡಬಾರದು ಎನ್ನುವ ಗೆರೆಯೊಂದನ್ನು ಹಾಕಿಕೊಳ್ಳಿ. ಖಾಸಗಿ ವಿಷಯವನ್ನು ಬಹಿರಂಗ ಪಡಿಸಿ ಅದಕ್ಕೆ ಜನರ ಮೆಚ್ಚುಗೆ ಬೇಕು ಎನ್ನುವುದನ್ನು ತೊಡೆದುಹಾಕಿ.**
- **ನಿಮ್ಮ ಆತ್ಮವಿಶ್ವಾಸ ಮತ್ತು ಶಕ್ತಿಯನ್ನು ವೃದ್ಧಿಸಿಕೊಳ್ಳಿ. ನಿಮ್ಮ ಒಳ್ಳೆಯ ಗುಣಗಳು ಮತ್ತು ನಿಮ್ಮ ಧನಾತ್ಮಕ ಅಂಶಗಳಿಂದ ಮಾಡುವ ಕೆಲಸಗಳನ್ನು**



ಯಶಸ್ವಿಗೊಳಿಸಿಕೊಳ್ಳಿ.

- **ಸಣ್ಣ ಪುಟ್ಟ ವಿಷಯಗಳಿಗೂ ಇತರರ ಅಭಿಪ್ರಾಯ ಪಡೆದುಕೊಳ್ಳುವುದನ್ನು ನಿಲ್ಲಿಸಿ. ನಿಧಾನವಾಗಿ ನಿಮ್ಮ ನಿರ್ಧಾರಗಳನ್ನು ನೀವೇ ತೆಗೆದುಕೊಳ್ಳುವುದನ್ನು ಅಭ್ಯಾಸ ಮಾಡಿಕೊಳ್ಳಿ.**
- **ಟೀಕೆಗಳು ಬಂದಾಗ ಅವುಗಳನ್ನು ಧನಾತ್ಮಕವಾಗಿ ತೆಗೆದುಕೊಂಡು ಅದರಲ್ಲಿ ಒಳ್ಳೆಯ ಅಂಶಗಳಿದ್ದರೆ ಅವನ್ನು ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದನ್ನು ಅಭ್ಯಾಸ ಮಾಡಿಕೊಳ್ಳಿ.**

ಜನರೊಂದಿಗೆ ಇರುವಾಗ ಗೆಳೆಯರು, ಹಿತೈಷಿಗಳು, ಅಕ್ಕ ಪಕ್ಕದ ಮನೆಯವರೆಲ್ಲರೂ ಸಂದರ್ಭಕ್ಕೆ ತಕ್ಕಂತೆ ಅಭಿಪ್ರಾಯಗಳನ್ನು ಹೇಳುವುದು ಸಾಮಾನ್ಯ. ಆದರೆ ಸಣ್ಣ ಸಣ್ಣ ವಿಷಯಕ್ಕೂ ಅವರ ಅಭಿಪ್ರಾಯ ಕೇಳುವಾಗ, ನಾವು ಮಾಡುವ ಕೆಲಸವನ್ನು ಇತರರು ಹೊಗಳಬೇಕು ಎಂಬ ಆಸೆಗಳು ಚಿಗುರಿದಾಗ ಕೆಲವೊಮ್ಮೆ ಇತರರ ಹೇಳಿಕೆ, ಅಭಿಪ್ರಾಯಗಳು ಅನಾಯಾಸವಾಗಿ ಸಂಕಷ್ಟಗಳನ್ನು ತಂದೊಡ್ಡುತ್ತವೆ. ಆದರೆ ಅವು ನಮಗೆ ಮುಖ್ಯ ಹೌದೋ ಅಲ್ಲವೋ, ಅವು ನಮ್ಮ ಮೇಲೆ ಯಾವ ರೀತಿಯ ಪರಿಣಾಮಗಳನ್ನುಂಟು ಮಾಡುತ್ತವೆ ಎನ್ನುವ ಸ್ಪಷ್ಟ ಅರಿವು ಇದ್ದಾಗ ಈ ಅನಿಸಿಕೆ ಹೇರಿಕೆ ಲೋಕದಿಂದ ಹೊರಬರುವುದು ಸಾಧ್ಯವಾಗುತ್ತದೆ.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

3ನೇ ಟೆಸ್ಟ್: ಜಸ್‌ಪ್ರೀತ್ ಬುಮ್ರಾ ಲಭ್ಯ

ಲಂಡನ್: ಬರ್ಮಿಂಗ್‌ಹ್ಯಾಮ್‌ನ ದ್ವಿತೀಯ ಟೆಸ್ಟ್ ಪಂದ್ಯಕ್ಕೆ ವಿಶ್ರಾಂತಿ ಪಡೆದಿದ್ದ ಭಾರತದ ವೇಗಿ ಜಸ್ ಪ್ರೀತ್ ಬುಮ್ರಾ ಜುಲೈ 10 ರಿಂದ ಲಾರ್ಡ್ಸ್ ಮೈದಾನದಲ್ಲಿ ಆರಂಭವಾಗುವ ಮೂರನೇ ಟೆಸ್ಟ್ ಪಂದ್ಯದಲ್ಲಿ ಬುಮ್ರಾ ಕಣಕ್ಕಿಳಿಯಲಿದ್ದಾರೆ ಎಂದು ಭಾರತ ತಂಡದ ನಾಯಕ ಗಿಲ್ ಖಚಿತಪಡಿಸಿದ್ದಾರೆ.



ದ್ವಿತೀಯ ಟೆಸ್ಟ್ ಮುಕ್ತಾಯದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಗಿಲ್, ಬುಮ್ರಾ ಅವರ ಹೊರೆಯನ್ನು ನಿಭಾಯಿಸಲು ಎಡ್ಜ್‌ಬಾಸ್ಟನ್‌ನಲ್ಲಿ ನಡೆದ ಎರಡನೇ ಪಂದ್ಯದಲ್ಲಿ ವಿಶ್ರಾಂತಿ ನೀಡಲಾಗಿತ್ತು. 5 ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಅವರು ಕೇವಲ ಮೂರು ಪಂದ್ಯಗಳು ಮಾತ್ರ ಆಡಲಿದ್ದಾರೆ. ಮೂರನೇ ಟೆಸ್ಟ್‌ನಲ್ಲಿ ಅವರ ಸೇವೆ ತಂಡಕ್ಕೆ ಲಭ್ಯವಿರಲಿದ್ದು, ಅವರ ಆಗಮನದಿಂದ ತಂಡ ಮತ್ತಷ್ಟು ಬಲಶಾಲಿಗೊಳ್ಳಲಿದೆ ಎಂದು ಗಿಲ್ ಹೇಳಿದರು. ಬುಮ್ರಾ 3ನೇ ಟೆಸ್ಟ್‌ಗೆ ಸೇರ್ಪಡೆಯಾದಾಗ ಅವರಿಗಾಗಿ ಯಾರು ಜಾಗ ತೆರವು ಮಾಡಿಕೊಡಲಿದ್ದಾರೆ ಎಂಬ ಕುತೂಹಲ ಹೆಚ್ಚಿದೆ. ಸದ್ಯದ ಪ್ರದರ್ಶನದ ಆಧಾರದಲ್ಲಿ ಕನ್ನಡಿಗ ಪ್ರಸಿದ್ಧ್ ಕೃಷ್ಣ ಅವರನ್ನು ತಂಡದಿಂದ ಕೈಬಿಡುವ ಸಾಧ್ಯತೆ ಅಧಿಕವಾಗಿದೆ. ಮೊದಲ ಎರಡು ಪಂದ್ಯಗಳಲ್ಲಿಯೂ ಅವರು ನಿರೀಕ್ಷಿತ ಪ್ರದರ್ಶನ ತೋರಿಲ್ಲ. ಮೊಹಮ್ಮದ್ ಸಿರಾಜ್ ದ್ವಿತೀಯ ಟೆಸ್ಟ್‌ನಲ್ಲಿ 7 ವಿಕೆಟ್ ಕಿತ್ತರೆ, ಬುಮ್ರಾ ಬದಲಿಗೆ ಆಡಲು ಇಳಿದ ಆಕಾಶ್‌ದೀಪ್ ಎರಡೂ ಇನ್ನಿಂಗ್ಸ್ ಸೇರಿ 10 ವಿಕೆಟ್ ಪಡೆದು ತಮ್ಮ ಆಯ್ಕೆಯನ್ನು ಸಮರ್ಥಿಸಿಕೊಂಡಿದ್ದಾರೆ.

ವಿಂಬಲ್ಡನ್: ಕ್ವಾರ್ಟರ್ ಫೈನಲ್‌ಗೆ ಫ್ರಿಟ್ಸ್

ಲಂಡನ್ : ಅಮೆರಿಕ ಓಪನ್ ರನ್ನರ್ ಅಪ್ ಟೇಲರ್ ಫ್ರಿಟ್ಸ್, ವಿಂಬಲ್ಡನ್ ಟೆನಿಸ್ ಟೂರ್ನಿಯಲ್ಲಿ ಸತತ ಎರಡನೇ ಬಾರಿ ಕ್ವಾರ್ಟರ್ ಫೈನಲ್ ತಲುಪಿದರು. ರಷ್ಯಾದ ಕರೆನ್ ಕಚನೋವ್ ಅವರೂ ಹೆಚ್ಚಿನ ಪ್ರಯಾಸವಿಲ್ಲದೆ ಎಂಟರ ಘಟ್ಟಕ್ಕೆ ಮುನ್ನಡೆದರು. ಪುರುಷರ ಸಿಂಗಲ್ಸ್‌ನಲ್ಲಿ ಐದನೇ ಶ್ರೇಯಾಂಕದ ಫ್ರಿಟ್ಸ್ 6–1, 3–0ಯಿಂದ ಮುನ್ನಡೆಯಲ್ಲಿದ್ದಾಗ, ಎದುರಾಳಿ ಆಟಗಾರ ಜೋರ್ಡಾನ್ ಥಾಂಪ್ಸನ್ (ಆಸ್ಟ್ರೇಲಿಯಾ) ಗಾಯದಿಂದಾಗಿ ಸ್ಪರ್ಧೆಯಿಂದ ಹಿಂದೆ ಸರಿದರು. ಇದರಿಂದಾಗಿ ವಾಕ್‌ಓವರ್ ಪಡೆದ ಅಮೆರಿಕದ 27 ವರ್ಷ ವಯಸ್ಸಿನ ಫ್ರಿಟ್ಸ್, ನಾಲ್ಕು ವರ್ಷಗಳಲ್ಲಿ ಮೂರನೇ ಬಾರಿ ಎಂಟರ ಘಟ್ಟ ಪ್ರವೇಶಿಸಿದಂತಾಗಿದೆ. ಸೆಮಿಫೈನಲ್ ತಲುಪುವ ಗುರಿ ಹೊಂದಿರುವ ಫ್ರಿಟ್ಸ್ ಅವರಿಗೆ ಮುಂದಿನ ಸುತ್ತಿನಲ್ಲಿ 17ನೇ ಶ್ರೇಯಾಂಕದ ಕಚನೋವ್ ಎದುರಾಳಿಯಾಗಿದ್ದಾರೆ.

ಇಂಗ್ಲೆಡ್ ವಿರುದ್ಧ ಐತಿಹಾಸಿಕ ಗೆಲುವು | ಶುಭಮನ್ ಗಿಲ್ ಪಡೆ ಮೇಲೆ ಮತ್ತಷ್ಟು ನಿರೀಕ್ಷೆ

ಯಂಗ್ ಇಂಡಿಯಾದತ್ತ ವಿಶ್ವದ ಕಣ್ಣು

ಎಡ್ಜ್‌ಬಾಸ್ಟನ್: ಇಂಗ್ಲೆಂಡ್ ಪ್ರವಾಸದಲ್ಲಿರುವ ಟೀಮ್ ಇಂಡಿಯಾ ಇಲ್ಲಿ ನಡೆದ 2ನೇ ಕ್ರಿಕೆಟ್ ಟೆಸ್ಟ್ ಪಂದ್ಯವನ್ನು 336 ರನ್‌ಗಳ ಭಾರೀ ಅಂತರದಲ್ಲಿ ಗೆಲ್ಲುವ ಮೂಲಕ 5 ಪಂದ್ಯಗಳ ಸರಣಿಯಲ್ಲಿ 1–1ರಿಂದ ಸಮಬಲ ಸಾಧಿಸಿದ್ದು, ಎಲ್ಲಾ ಕ್ರಿಕೆಟ್‌ಪ್ರೇಮಿಗಳ ಚಿತ್ತ ಇದೀಗ ಮತ್ತೆ ಯಂಗ್ ಇಂಡಿಯಾ ತಂಡದತ್ತ ಹರಿದಿದೆ. ಐದು ಪಂದ್ಯಗಳ ಸರಣಿಯಲ್ಲಿ ಮೊದಲ ಪಂದ್ಯ ಸೋತಿದ್ದ ಟೀಮ್ ಇಂಡಿಯಾ 2ನೇ ಪಂದ್ಯವನ್ನು ಗೆಲ್ಲಲೇಬೇಕಾದ ಒತ್ತಡದಲ್ಲಿತ್ತು, ಅದರಂತೆ ಆಂಗ್ಲರ ವಿರುದ್ಧ ಯೋಜನೆ ರೂಪಿಸಿ, ಗೆದ್ದು ಬೀಗಿರುವುದು ಭಾರತ ಕ್ರಿಕೆಟ್ ಪ್ರೇಮಿಗಳೆಲ್ಲರ ಮತ್ತಷ್ಟು ನಿರೀಕ್ಷೆಗೆ ಕಾರಣವಾಗಿದೆ.

ಪಂದ್ಯದ ಗೆಲುವಿಗೆ ಗೌತಮ್ ಗಂಭೀರ್ ಹಾಗೂ ಗಿಲ್‌ರ ಪ್ರಮುಖ ನಿರ್ಧಾರಗಳು ಸೇರಿದಂತೆ ಗೆಲುವಿಗೆ ಹತ್ತಲವು ಪ್ರಮುಖ ನಿರ್ಧಾರಗಳು ಕಾರಣವಾದವು. 2ನೇ ಪಂದ್ಯದಲ್ಲಿ ಬುಮ್ರಾ ಆಡದಿರಲು ನಿರ್ಧರಿಸಿದಾಗ ಅನೇಕರು ಯುವ ವೇಗಿ ಅರ್ಷದೀಪ್ ಸಿಂಗ್ ಅವರಿಗೆ ಅವಕಾಶ ನೀಡುವಂತೆ ಸಲಹೆ ನೀಡದರು, ಆದರೆ ಗಂಭೀರ್ ಹಾಗೂ ಗಿಲ್ ಇನ್ನರೂ ಸಾಕಷ್ಟು ಯೋಚಿಸಿ ಯುವ ವೇಗಿ ಆಕಾಶ್‌ದೀಪ್ ಅವರಿಗೆ 2ನೇ ಟೆಸ್ಟ್‌ನಲ್ಲಿ ಅವಕಾಶ ನೀಡಿದರು. ತಂಡದ ನಾಯಕ ಹಾಗೂ ಕೋಚ್ ಇಟ್ಟಿದ್ದ ಭರವಸೆ ಉಳಿಸಿಕೊಂಡ ವೇಗಿ ಆಕಾಶ್‌ದೀಪ್ 2 ಇನ್ನಿಂಗ್ಸ್‌ಗಳಲ್ಲೂ ಅದ್ಭುತ ಬೌಲಿಂಗ್ ದಾಳಿ ನಡೆಸಿದರು. ಆಕಾಶ್‌ದೀಪ್ ಮೊದಲ ಇನ್ನಿಂಗ್ಸ್‌ನಲ್ಲಿ 4 ಹಾಗೂ 2ನೇ ಇನ್ನಿಂಗ್ಸ್‌ನಲ್ಲಿ 6, ಹೀಗೆ ಒಟ್ಟು 10 ವಿಕೆಟ್ ಪಡೆದು ಮಿಂಚಿ, ಟೀಮ್ ಇಂಡಿಯಾ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ನಾಯಕನಾಗಿ ಅಮೋಘ ಬ್ಯಾಟಿಂಗ್ ನಡೆಸಿದ ಗಿಲ್ 2ನೇ ಟೆಸ್ಟ್ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದರು. ವಿಶೇಷವಾಗಿ ಮೊದಲ ಇನ್ನಿಂಗ್ಸ್‌ನಲ್ಲಿ ದ್ವಿಶತಕ (269) ಹಾಗೂ ಎರಡನೇ ಇನ್ನಿಂಗ್ಸ್‌ನಲ್ಲಿ 161, ಹೀಗೆ ಒಟ್ಟು 430 ರನ್ ಗಳಿಸುವ ಮೂಲಕ ಇಂಗ್ಲೆಂಡ್‌ಗೆ ಟೀಮ್ ಇಂಡಿಯಾ ಬೃಹತ್ ಗುರಿ ನೀಡಲು ಸಹಕಾರಿಯಾದರು. ನಾಯಕ ಗಿಲ್ ಜೊತೆಗೆ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ ಸಂಕಷ್ಟದ ಸಂದರ್ಭದಲ್ಲಿ ಟೀಮ್ ಇಂಡಿಯಾದ ಕೈ ಹಿಡಿದಿದ್ದು ಅನುಭವಿ ಆಲ್‌ರೌಂಡರ್ ರವೀಂದ್ರ ಜಡೇಜಾ. ಮೊದಲ ಪಂದ್ಯದಲ್ಲಿ ವೈಫಲ್ಯ ಅನುಭವಿಸಿದ್ದ ಅವರು, 2ನೇ ಟೆಸ್ಟ್‌ನ ಮೊದಲ ಇನ್ನಿಂಗ್ಸ್‌ನಲ್ಲಿ 89 ಹಾಗೂ ಎರಡನೇ ಇನ್ನಿಂಗ್ಸ್‌ನಲ್ಲಿ 69 ರನ್ ಸಿಡಿಸುವ ಮೂಲಕ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಬುಮ್ರಾ ಅನುಪಸ್ಥಿತಿಯಲ್ಲಿ ಬೌಲಿಂಗ್ ವಿಭಾಗವನ್ನು ಮುನ್ನಡೆಸಿದ ಮೊಹಮ್ಮದ್ ಸಿರಾಜ್ 2ನೇ ಟೆಸ್ಟ್‌ನಲ್ಲಿ ಆಂಗ್ಲ ಬ್ಯಾಟರ್‌ಗಳಿಗೆ ಸಿಂಹಸ್ವಪ್ನವಾಗಿ ಕಾಡಿದ್ದಂತೂ ಸುಳ್ಳಲ್ಲ, ಅದರಲ್ಲೂ ಮೊದಲ ಇನ್ನಿಂಗ್ಸ್‌ನಲ್ಲಿ ಪ್ರಮುಖ 6 ವಿಕೆಟ್ ಪಡೆದು ಭಾರತ ತಂಡದ ಬೃಹತ್ ಮುನ್ನಡೆಗೆ ಕಾರಣರಾದರು. 2ನೇ ಇನ್ನಿಂಗ್ಸ್‌ನಲ್ಲೂ ಉತ್ತಮ ಫಾರ್ಮ್‌ನಲ್ಲಿದ್ದ ಬೆನ್ ಡಕೆಟ್ ವಿಕೆಟ್ ಪಡೆದು ಟೀಮ್ ಇಂಡಿಯಾ ಗೆಲುವಿನಲ್ಲಿ ತನ್ನ ಕೊಡುಗೆ ನೀಡಿದರು.

ಮೊದಲ ಪಂದ್ಯದಲ್ಲಿ ಭಾರತ ಬ್ಯಾಟರ್‌ಗಳ ಅಮೋಘ ಬ್ಯಾಟಿಂಗ್ ಹೊರತಾಗಿಯೂ ಫೀಲ್ಡರ್‌ಗಳ ಕಳಪೆ ಕ್ಷೇತ್ರ ರಕ್ಷಣೆಯೂ ಟೀಮ್ ಇಂಡಿಯಾ ಸೋಲಿಗೆ ಕಾರಣವಾಗಿತ್ತು. ಆ ಒಂದೇ ಪಂದ್ಯದಲ್ಲಿ ಬರೋಬ್ಬರಿ 5ಕ್ಕೂ ಅಧಿಕ ಕ್ಯಾಚ್‌ಗಳನ್ನು ಕೈಚೆಲ್ಲುವ ಮೂಲಕ ಅಭಿಮಾನಿಗಳ ಕೆಂಗಣ್ಣಿಗೆ ಗುರಿಯಾಗಿದ್ದ ಭಾರತ ತಂಡವು 2ನೇ ಟೆಸ್ಟ್‌ನಲ್ಲಿ ಆ ರೀತಿಯ ತಪ್ಪು ಮಾಡದಿರುವುದು ಕೂಡಾ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿತು.

ಹೃದಯಸ್ಪರ್ಶಿ ಪ್ರತಿಕ್ರಿಯೆ

ಸಹೋದರ ಆಕಾಶ್ ದೀಪ್‌ನ ಸರ್ವಶ್ರೇಷ್ಠ ಪ್ರದರ್ಶನದ ಬಗ್ಗೆ ಅಕ್ಕ ಅಖಂಡ ಜ್ಯೋತಿ ಸಿಂಗ್ ಅವರು ಭಾವನಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ. ತಮ್ಮ 10 ವಿಕೆಟ್‌ಗಳ ಸಾಧನೆಯನ್ನು ಆಕಾಶ್ ದೀಪ್, ಕ್ಯಾನ್ಸರ್ ವಿರುದ್ಧ ಹೋರಾಡುತ್ತಿರುವ ಅಕ್ಕ ಅಖಂಡ ಜ್ಯೋತಿ ಸಿಂಗ್‌ಗೆ ಸಮರ್ಪಿಸಿದ್ದರು. ಇದೀಗ ಅವರು ತನ್ನ ತಮ್ಮನ ವಿಶೇಷ ಸಂದೇಶಕ್ಕೆ ಹೃದಯಸ್ಪರ್ಶಿ ಪ್ರತಿಕ್ರಿಯೆಯನ್ನು ನೀಡಿದ್ದಾರೆ, ತನ್ನ ಆರೋಗ್ಯದ ಬಗ್ಗೆ ಚಿಂತಿಸದೆ, ರಾಷ್ಟ್ರೀಯ ತಂಡದ ಪರ ಆಡುವ ಕಡೆಗೆ ಹೆಚ್ಚಿನ ಗಮನ ನೀಡಿ ಎಂದು ಕರೆ ನೀಡಿದ್ದಾರೆ. ಆಕಾಶ್ ದೀಪ್ ಪ್ರದರ್ಶನದ ಬಗ್ಗೆ ಪ್ರತಿಕ್ರಿಯೆ ನೀಡಿದ ಜ್ಯೋತಿ, ಕಠಿಣ ಸನ್ನಿವೇಶ ಇದ್ದರೂ ತನ್ನ ಸಹೋದರನ ಶ್ರೇಷ್ಠ ಕ್ರಿಕೆಟ್ ಪ್ರದರ್ಶನದಿಂದ ಇಡೀ ಕುಟುಂಬ ಸಂತೋಷವಾಗಿದೆ, ತಾನು ಕ್ಯಾನ್ಸರ್‌ನ 3ನೇ ಹಂತದಲ್ಲಿದ್ದು, 6 ತಿಂಗಳ ಕಾಲ ಚಿಕಿತ್ಸೆ ಪಡೆಯಬೇಕಾದ ಅಗತ್ಯವಿದೆ ಎಂದು ಬಹಿರಂಗಪಡಿಸಿದ್ದಾರೆ.

ಮುಲ್ಡರ್ ವಿಶ್ವ ದಾಖಲೆ

ಚೊಚ್ಚಲ ನಾಯಕತ್ವದ ಟೆಸ್ಟ್‌ನಲ್ಲಿ ತ್ರಿಶತಕ ಬಾರಿಸಿದ ದಕ್ಷಿಣ ಆಫ್ರಿಕಾ ತಂಡದ ನಾಯಕ

ಬುಲವಾಯೊ: ಆತಿಥೇಯ ಜಿಂಬಾಬ್ವೆ ವಿರುದ್ಧದ ದ್ವಿತೀಯ ಟೆಸ್ಟ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡದ ವಿಯಾನ್ ಮುಲ್ಡರ್ ತ್ರಿಶತಕ ಬಾರಿಸುವ ಮೂಲಕ ಇತಿಹಾಸ ನಿರ್ಮಿಸಿದ್ದಾರೆ. ಟೆಸ್ಟ್ ನಾಯಕತ್ವದ ಚೊಚ್ಚಲ ಪಂದ್ಯದಲ್ಲೇ ತ್ರಿಶತಕ ಗಳಿಸಿದ ವಿಶ್ವದ ಮೊದಲ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದು, ಒಟ್ಟಾರೆಯಾಗಿ ಅವರು ಟೆಸ್ಟ್‌ನಲ್ಲಿ ತ್ರಿಶತಕ ಬಾರಿಸಿದ ಒಂಬತ್ತನೇ ನಾಯಕ ಎನಿಸಿಕೊಂಡರು.

ಐಸಿಸಿ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ವೇಳೆ ಎದುರಾದ ಸ್ನಾಯು ಸೆಳೆತದಿಂದ ಚೇತರಿಸಿಕೊಳ್ಳದ ದಕ್ಷಿಣ ಆಫ್ರಿಕಾದ ನಾಯಕ ಟೆಂಬ ಬವುಮಾ ಈ ಸರಣಿಗೆ ಅಲಭ್ಯರಾದ ಕಾರಣ ಕೇಶವ್ ಮಹಾರಾಜ್‌ಗೆ ಹಂಗಾಮಿ ನಾಯಕತ್ವದ ಜವಾಬ್ದಾರಿ ನೀಡಲಾಗಿತ್ತು. ಮೊದಲ ಪಂದ್ಯದಲ್ಲಿ ತಂಡವನ್ನು ಮುನ್ನಡೆಸಿದ್ದ ಮಹಾರಾಜ್ ಗಾಯಗೊಂಡು ದ್ವಿತೀಯ ಪಂದ್ಯದಿಂದ ಹೊರಬಿದ್ದರು. ಹೀಗಾಗಿ 2ನೇ ಪಂದ್ಯದಲ್ಲಿ ವಿಯಾನ್ ಮುಲ್ಡರ್ ನಾಯಕತ್ವ ವಹಿಸಿಕೊಂಡರು. ತಮ್ಮ ಚೊಚ್ಚಲ ನಾಯಕತ್ವದ ಪಂದ್ಯದಲ್ಲೇ ತ್ರಿಶತಕ ಬಾರಿಸುವ ಮೂಲಕ ಭವಿಷ್ಯದ ನಾಯಕ ಮತ್ತು ಅಗ್ರ ಆಟಗಾರನಾಗಿ ಗುರುತಿಸಿಕೊಂಡರು.

ನ್ಯೂಜಿಲೆಂಡ್‌ನ ಬ್ರೆಂಡನ್ ಮೆಕಲಮ್ ಕೊನೆಯ ಬಾರಿಗೆ ನಾಯಕನಾಗಿ ಟೆಸ್ಟ್‌ನಲ್ಲಿ ತ್ರಿಶತಕ ಬಾರಿಸಿದ್ದರು. 2014ರಲ್ಲಿ ಭಾರತ ವಿರುದ್ಧ 302 ರನ್ ಬಾರಿಸಿದ್ದ ಆ ದಾಖಲೆಯ 11 ವರ್ಷದ ಬಳಿಕ ವಿಯಾನ್ ಮುಲ್ಡರ್ ತ್ರಿಶತಕ ಬಾರಿಸಿದ್ದಾರೆ. 1998ರ ನಂತರ ಟೆಸ್ಟ್‌ನಲ್ಲಿ ತವರಿನಿಂದ ಹೊರಗೆ ತ್ರಿಶತಕ ಗಳಿಸಿದ ಮೊದಲ ನಾಯಕ ಎಂಬ ಹೆಗ್ಗಳಿಕೆಗೂ ಮುಲ್ಡರ್ ಪಾತ್ರರಾಗಿದ್ದಾರೆ. ನಾಯಕನಾಗಿ ಟೆಸ್ಟ್‌ನಲ್ಲಿ ಮೊದಲ ತ್ರಿಶತಕ ಬಾರಿಸಿದ ದಾಖಲೆ ಆಸ್ಟ್ರೇಲಿಯಾದ ದಿಗ್ಗಜ ಆಟಗಾರ ಬಾಬ್ ಸಿಂಪ್ಸನ್ ಹೆಸರಿನಲ್ಲಿದ್ದು, 1964ರಲ್ಲಿ ಇಂಗ್ಲೆಂಡ್ ವಿರುದ್ಧ ಅವರು 311 ರನ್ ಬಾರಿಸಿದ್ದರು.

ನಾಯಕನಾಗಿ ಟೆಸ್ಟ್ ತ್ರಿಶತಕ ಬಾರಿಸಿದವರು

● ಬಾಬ್ ಸಿಂಪ್ಸನ್ (ಆಸ್ಟ್ರೇಲಿಯಾ)-1964 ● ಗ್ರಹಾಂ ಗೂಚ್ (ಇಂಗ್ಲೆಂಡ್)-1990 ● ಮಾರ್ಕ್ ಟೇಲರ್ (ಆಸ್ಟ್ರೇಲಿಯಾ)-1998 ● ಬ್ರಿಯಾನ್ ಲಾರಾ (ವಿಂಡೀಸ್)-2004 ● ಜಯವರ್ಧನೆ (ಶ್ರೀಲಂಕಾ)-2006 ● ಯೂನಿಸ್ ಖಾನ್ (ಪಾಕಿಸ್ತಾನ)-2009 ● ಮೈಕಲ್ ಕ್ಲಾರ್ಕ್ (ಆಸ್ಟ್ರೇಲಿಯಾ)-2012 ● ಬ್ರೆಂಡನ್ ಮೆಕಲಮ್ (ನ್ಯೂಜಿಲೆಂಡ್)-2014 ● ವಿಯಾನ್ ಮುಲ್ಡರ್ (ದ. ಆಫ್ರಿಕಾ)-2025

ಸ್ಯಾಂಡಲ್‌ವುಡ್ ನಟಿಯರ ಕ್ವೀನ್ಸ್ ಪ್ರೀಮಿಯರ್ ಲೀಗ್‌ನ 2ನೇ ಆವೃತ್ತಿ

ಬೆಂಗಳೂರಿನಲ್ಲಿ ಕ್ಯೂಪಿಎಲ್ 2.0: ಲೋಗೋ ಅನಾವರಣ

ಬೆಂಗಳೂರು: ಸ್ಯಾಂಡಲ್‌ವುಡ್ ನಟಿಯರ ಹಬ್ಬ ಕ್ವೀನ್ಸ್ ಪ್ರೀಮಿಯರ್ ಲೀಗ್ (ಕ್ಯೂಪಿಎಲ್) 2ನೇ ಸೀಸನ್ ಅದ್ದೂರಿಯಾಗಿ ಅನಾವರಣ ಗೊಂಡಿದೆ.ಬೆಂಗಳೂರಿನ ಚಾನ್ಸರಿ ಪೆವಿಲಿಯನ್‌ನಲ್ಲಿ ಬಹುನಿರೀಕ್ಷಿತ ದ್ವಿತೀಯ ಆವೃತ್ತಿಯ ಕ್ರೀಡೋತ್ಸವದ ಲೋಗೋವನ್ನು ಅಧಿಕೃತವಾಗಿ ಬಿಡುಗಡೆ ಮಾಡಲಾಯಿತು.

ನಟಿ ರಮ್ಯಾ, ನಟರಾದ ಅನಿರುಧ್, ನಿರೂಪ್ ಭಂಡಾರಿ, ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ಟಿ.ಎ. ನಾರಾಯಣಗೌಡ, ಮಾಜಿ ಶಾಸಕಿ ಸೌಮ್ಯರೆಡ್ಡಿ, ನಿರ್ಮಾಪಕ ಎನ್.ಎಂ. ಸುರೇಶ್, ಕ್ಯೂಪಿಎಲ್ ಸ್ಥಾಪಕರಾದ ಮಹೇಶ್ ಗೌಡ ಹಾಗೂ ಖ್ಯಾತ ನಟ ಮತ್ತು ಕ್ಯೂಪಿಎಲ್ ಸಮಿತಿಯ ಸದಸ್ಯ ಪ್ರಮೋದ್ ಶೆಟ್ಟಿ ಒಟ್ಟಾಗಿ ಲೋಗೋ ಅನಾವರಣಗೊಳಿಸಿದರು. ಅದ್ದೂರಿಯಾಗಿ ನಡೆದ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ಗ್ರೀಕ್ ಮೂಲದ ಎಲಿ ಅವ್ರಾಮ್ ಅವರನ್ನೊಳಗೊಂಡ ತಂಡದಿಂದ ಫ್ಯಾಷನ್ ಶೋ ನಡೆಸಲಾಯಿತು. ಇದು ಕ್ಯೂಪಿಎಲ್‌ಎರಡನೇ ಆವೃತ್ತಿಗೆ ಚಾಲನೆಯಾಗಿದ್ದು, 10 ತಂಡಗಳನ್ನೊಳಗೊಂಡ ಟೂರ್ನಿ ಸೆಪ್ಟೆಂಬರ್‌ನಲ್ಲಿ ನಡೆಯಲಿದೆ.

12 ಕ್ರೀಡೆಯ ಕ್ರೀಡೋತ್ಸವ: ಕ್ಯೂಪಿಎಲ್ ಮೊದಲ ಆವೃತ್ತಿಯಲ್ಲಿ ಕ್ರಿಕೆಟ್ ಮಾತ್ರ ಆಡಿ ಯಶಸ್ವಿಯಾಗಿದ್ದು, ಈ ಸಲದ ಆವೃತ್ತಿಯಲ್ಲಿ 12 ಹೊಸ ಕ್ರೀಡೆಗಳನ್ನು ಸೇರಿಸಿಕೊಳ್ಳಲಾಗಿದೆ. ಬೀಚ್ ಕ್ರಿಕೆಟ್, ಬ್ಯಾಡ್ಮಿಂಟನ್, ಟಗ್ ಆಫ್ ವಾರ್, ಲಗೋರಿ, ಪಿಕಲ್ ಬಾಲ್, ಚೆಸ್, ಕೇರಮ್, ವಾಟರ್ ಪೋಲೊ ಸೇರಿದಂತೆ 12 ಗೇಮ್‌ಗಳನ್ನು ಆಡಿಸಲಾಗುತ್ತದೆ.

ಸಂಜೋಗ್ ಗುಪ್ತಾ ಐಸಿಸಿ ಸಿಇಒ

ದುಬೈ: ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ತನ್ನ ಹೊಸ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಸಂಜೋಗ್ ಗುಪ್ತಾ ಅವರನ್ನು ನೇಮಕ ಮಾಡಿರುವುದಾಗಿ ಘೋಷಿಸಿದೆ. ಸೋಮವಾರದಂದು ಗುಪ್ತಾ ಅಧಿಕಾರ ವಹಿಸಿಕೊಂಡಿದ್ದು, ಅವರು ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿಯ ಏಳನೇ ಸಿಇಒ ಆಗಲಿದ್ದಾರೆ. ಮಾಧ್ಯಮ, ಮನರಂಜನೆ ಮತ್ತು ಕ್ರೀಡೆಯಲ್ಲಿ 20 ವರ್ಷಗಳಿಗೂ ಹೆಚ್ಚಿನ ಅನುಭವವನ್ನು ಹೊಂದಿರುವ ಅವರು, 2010ರಲ್ಲಿ ಸ್ಟಾರ್ ಇಂಡಿಯಾವನ್ನು ಸೇರುವ ಮೊದಲು ಪತ್ರಕರ್ತರಾಗಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದ್ದರು. 2024ರಲ್ಲಿ ಜಿಯೋಸ್ಟಾರ್ ಸ್ಪೋರ್ಟ್ಸ್‌ನ ಸಿಇಒ ಆಗಿ ನೇಮಕಗೊಂಡಿದ್ದರು. 'ಐಸಿಸಿಯ ಸಿಇಒ ಆಗಿ ಸಂಜೋಗ್ ಗುಪ್ತಾ ಅವರನ್ನು ನೇಮಕ ಮಾಡಲಾಗಿದೆ ಎಂದು ಘೋಷಿಸಲು ನನಗೆ ಸಂತೋಷವಾಗಿದೆ' ಎಂದು ಐಸಿಸಿ ಅಧ್ಯಕ್ಷ ಜಯ್ ಶಾ ಹೇಳಿದರು.

ವಿಟಾಕೀಸ್

ಎಕ್ಕನ ರೌಡಿ ರೈಮ್ಸ್

ದೊಡ್ಮನೆ ಮೊಮ್ಮಗ ಯುವರಾಜ್ ಕುಮಾರ್ ಹೊಸ ಅವತಾರ ತಾಳಿದ್ದು, ಎಕ್ಕನಾಗಿ ತೆರೆಗೆ ಬರಲು ಸಿದ್ಧವಾಗಿದ್ದಾರೆ. ಎಕ್ಕ ಸಿನಿಮಾ ತನ್ನ ಕಂಟೆಂಟ್ ಹಾಗೂ ಹಾಡುಗಳ ಮೂಲಕವೇ ಸಿನಿಪ್ರಿಯರ ನಿರೀಕ್ಷೆ ಹೆಚ್ಚಿಸಿದೆ. ಈಗಾಗಲೇ ಎಕ್ಕ ಚಿತ್ರದ ಬ್ಯಾಂಗಲ್ ಬಂಗಾರಿ.. ಹಾಡುಗಳು ಸಂಗೀತ ಪ್ರಿಯರ ಮನಸೂರೆಗೊಂಡಿವೆ. ಈಗ ಈ ಸಿನಿಮಾದ ಮತ್ತೊಂದು ಗೀತೆ ಬಿಡುಗಡೆಯಾಗಿದೆ. ರೌಡಿ ರೈಮ್ಸ್.. ಎಂಬ ಹಾಡು ಬಿಡುಗಡೆಯಾಗಿದೆ, ಈ ಹಾಡಿನಲ್ಲಿ ರೌಡಿಗಳ ಚಿತ್ರಣವೇ ಇದೆ. ರೌಡಿ ರೈಮ್ಸ್ ಹಾಡಿಗೆ ನಾಗಾರ್ಜುನ್ ಶರ್ಮ ಹಾಗೂ ನಿರ್ದೇಶಕ ರೋಹಿತ್ ಪದಕಿ ಸಾಹಿತ್ಯ ಬರೆದಿದ್ದಾರೆ. ಚರಣ್ ರಾಜ್ ಸಂಗೀತ ಸಂಯೋಜಿಸಿದ್ದು, ರೋಹಿತ್ ಪದಕಿಯ ಜತೆಗೆ ಹಾಡಿಗೂ ದನಿಯಾಗಿದ್ದಾರೆ. ಎಕ್ಕ ಚಿತ್ರಕ್ಕೆ ರೋಹಿತ್ ಪದಕಿ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಅಶ್ವಿನಿ ಪುನೀತ್ ರಾಜ್‌ಕುಮಾರ್, ಜಯಣ್ಣ, ಕಾರ್ತಿಕ್ ಗೌಡ ಈ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಡೆಡ್ಲಿ ಸೋಮ ಖ್ಯಾತಿಯ ನಟ ಆದಿತ್ಯ ನಟಿಸಿದ್ದು, ಬಾಲಿವುಡ್‌ನ ಅತುಲ್ ಕುಲಕರ್ಣಿ ಕೂಡಾ ಅಭಿನಯಿಸಿದ್ದಾರೆ. ಯುವ ಈ ಚಿತ್ರದಲ್ಲಿ ರಗಡ್ ಲುಕ್‌ನಲ್ಲಿ ಮಿಂಚಿದ್ದು, ಸಂಜನಾ ಆನಂದ್ ಹಾಗೂ ಸಂಪದಾ ನಾಯಕಿಯರಾಗಿ ಬಣ್ಣಹಚ್ಚಿದ್ದಾರೆ. ಜುಲೈ 18ರಂದು ಎಕ್ಕ ರಾಜ್ಯಾದ್ಯಂತ ಬಿಡುಗಡೆಯಾಗಲಿದೆ.

ಶ್ರಾವಣಿಗೆ ಮಾಲಾಶ್ರೀ ಸಾಥ್

ನಿರ್ದೇಶಕಿ ಎಸ್.ರಶ್ಮಿ ನಿರ್ದೇಶನದ ಹೊಸಚಿತ್ರಕ್ಕೆ ಸ್ಲಂ ಶ್ರಾವಣಿ ದಿ ಗ್ರೇಟ್ ಎಂದು ಶೀರ್ಷಿಕೆ ಇಡಲಾಗಿದೆ. ಇದೀಗ ಈ ಚಿತ್ರದ ಪೋಸ್ಟರ್ ಬಿಡುಗಡೆಯಾಗಿದೆ. ನಟಿ ಮಾಲಾಶ್ರೀ, ಸ್ಲಂ ಶ್ರಾವಣಿ ದಿ ಗ್ರೇಟ್ ಪೋಸ್ಟರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು. ಈ ಸಿನಿಮಾದ ಟೈಟಲ್ ಮತ್ತು ಪೋಸ್ಟರ್ ಎರಡೂ ಕೂಡ ಗಮನ ಸೆಳೆಯುವಂತಿದೆ. ಈ ಸಿನಿಮಾವನ್ನು ನೋಡಲು ನಾನು ಕಾತರಳಾಗಿದ್ದೇನೆ. ಸಿನಿಮಾ ಯಶಸ್ಸು ಕಾಣಲಿ ಎಂದು ಮಾಲಾಶ್ರೀ ಶುಭಹಾರೈಸಿದರು.

ಸ್ಲಂನಲ್ಲಿ ಬೆಳೆದ ಹುಡುಗಿ ನೋವು, ನಲಿವುಗಳ ಹಾದಿಯಲಿ ಸಾಗಿ ಸಾಧನೆಯ ಶಿಖರವನ್ನು ಮುಟ್ಟುವ ಕಥೆ ಚಿತ್ರದಲ್ಲಿದೆ. ಕಿರುತೆರೆಯ ಉಧೋ ಉಧೋ ರೇಣುಕಾ ಯಲ್ಲಮ್ಮ ಧಾರಾವಾಹಿಯ ಖ್ಯಾತಿಯ ಬೇಬಿ ಭೈರವಿ ಈ ಚಿತ್ರದ ಪ್ರಮುಖ ಪಾತ್ರದಲ್ಲಿ ಅಭಿನಯಿಸುತ್ತಿದ್ದು, ಐಶ್ವರ್ಯಾ ಸಿಂದೋಗಿ, ಸನತ್, ಶಿವಕುಮಾರ್ ಆರಾಧ್ಯ, ಲಯನ್ ಸುರೇಶ್, ನಾಗೇಂದ್ರ ಅರಸ್, ವಿಜಯಲಕ್ಷ್ಮೀ ಉಪಾಧ್ಯಾಯ, ಮಹೇಂದ್ರ ಮುನ್ನೋತ್, ಹೇಮಾ, ಮಂಜುಳಾ ರುದ್ರೇಶ್, ಮಾಸ್ಟರ್ ನಿಶ್ಚಲ್ ಮುಂತಾದವರು ತಾರಾಗಣದಲ್ಲಿದ್ದಾರೆ.

ಕನ್ನಡದ ಹಲವು ಚಿತ್ರಗಳಲ್ಲಿ ನಟಿಸಿರುವ ಬಿ.ಪಿ.ಹರಿಹರನ್ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಸ್ಲಂ ಶ್ರಾವಣಿ ದಿ ಗ್ರೇಟ್ ಚಿತ್ರಕ್ಕೆ ಎನ್.ಟಿ.ಜಯರಾಮ ರೆಡ್ಡಿ ಕಥೆ, ಚಿತ್ರಕಥೆ ಬರೆದಿದ್ದಾರೆ. ಆರ್.ಗಗನ್ ಮತ್ತು ನಾಗೇಂದ್ರ ರಂಗರಿ ಛಾಯಾಗ್ರಹಣವಿದ್ದು, ರವಿತೇಜ ಸಿ. ಹೆಚ್ ಸಂಕಲನ ಕಾರ್ಯ ನಿರ್ವಹಿಸುತ್ತಿದ್ದಾರೆ. ಚಿತ್ರದ ನಾಲ್ಕು ಹಾಡುಗಳಿಗೆ ಎ.ಟಿ.ರವೀಶ್ ಸಂಗೀತ ಸಂಯೋಜಿಸುತ್ತಿದ್ದು, ಅರಸು ಅಂತಾರೆ ಮತ್ತು ರೇವಣ್ಣ ನಾಯಕ್ ಸಾಹಿತ್ಯ ರಚಿಸಿದ್ದಾರೆ. ಬೆಂಗಳೂರು ಮತ್ತು ಮೈಸೂರು ಸುತ್ತಮುತ್ತ ಸುಮಾರು ಚಿತ್ರೀಕರಣ ನಡೆಸಲು ಯೋಜನೆ ಹಾಕಿಕೊಳ್ಳಲಾಗಿದೆ. ಸದ್ಯ ಸ್ಲಂ ಶ್ರಾವಣಿ ದಿ ಗ್ರೇಟ್ ಚಿತ್ರದ ಪ್ರೀ ಪ್ರೊಡಕ್ಷನ್ ಕಾರ್ಯಗಳು ಭರದಿಂದ ಸಾಗಿವೆ.

ನನ್ನ ನಿರ್ದೇಶನದ ಸುಮಾ ದಿ ಫ್ಲವರ್ ಚಿತ್ರಕ್ಕೆ ಹಲವು ಅಂತರಾಷ್ಟ್ರೀಯ ಪ್ರಶಸ್ತಿಗಳು ಲಭಿಸಿವೆ. ಈಗ ಅಂತದ್ದೇ ಮತ್ತೊಂದು ಸಾಮಾಜಿಕ ಕಥಾಹಂದರವನ್ನು ಈ ಸಿನಿಮಾದ ಮೂಲಕ ಪ್ರೇಕ್ಷಕರ ಮುಂದೆ ತರುತ್ತಿದ್ದೇವೆ. ಇದು ಎಲ್ಲರನ್ನೂ ಕಾಡುವ, ಹಿಡಿಸುವ ಸಿನಿಮಾವಾಗಲಿದೆ.

-ಎಸ್.ರಶ್ಮಿ ನಿರ್ದೇಶಕಿ

ರಿಷಬ್ ಶೆಟ್ಟಿ ಬರ್ತ್‌ಡೇಗೆ ಭರ್ಜರಿ ಉಡುಗೊರೆ

ಸ್ಯಾಂಡಲ್‌ವುಡ್ ನಟ, ನಿರ್ದೇಶಕ ರಿಷಬ್ ಶೆಟ್ಟಿ ಹುಟ್ಟುಹಬ್ಬಕ್ಕೆ ಭರ್ಜರಿ ಉಡುಗೊರೆ ಸಿಕ್ಕಿದೆ. ಹೊಂಬಾಳೆ ಫಿಲಂಸ್ ಬ್ಯಾನರ್‌ನಲ್ಲಿ ದೊಡ್ಡ ಮಟ್ಟದಲ್ಲಿ ನಿರ್ಮಾಣವಾಗುತ್ತಿರುವ ಕಾಂತಾರ ಚಾಪ್ಟರ್ 1 ಸಿನಿಮಾದಿಂದ ಬಿಗ್ ಅಪ್‌ಡೇಟ್ ಸಿಕ್ಕಿದೆ. ಈ ಹಿಂದೆ ತೆರೆಕಂಡ ಕಾಂತಾರ ಭರ್ಜರಿ ಯಶಸ್ಸು ಕಂಡಿತ್ತು. ಈಗ ಕಾಂತಾರ ಪ್ರೀಕ್ವೆಲ್ ಆಧರಿಸಿ ಕಾಂತಾರ ಚಾಪ್ಟರ್ 1 ಮೂಡಿಬರುತ್ತಿದೆ. ಈ ಚಿತ್ರ ಅಕ್ಟೋಬರ್ 2ರಂದು ವಿಶ್ವದಾದ್ಯಂತ ಅದ್ದೂರಿಯಾಗಿ ತೆರೆಗೆ ಬರಲಿದೆ. ರಿಷಬ್ ಶೆಟ್ಟಿ ಬರ್ತ್‌ಡೇಗೆ ಕಾಂತಾರ 1 ಚಿತ್ರದ ಹೊಸ ಪೋಸ್ಟರ್ ಕೂಡ ಬಿಡುಗಡೆಯಾಗಿದ್ದು, ಈ ಪೋಸ್ಟರ್ ಸಿನಿಮಾದ ಬಗ್ಗೆ ನಿರೀಕ್ಷೆ ದುಪ್ಪಟ್ಟುಗಳಿಸಿದೆ. ಬೆಂಕಿಯ ಕೆನ್ನಾಲಿಗೆ ಅಲ್ಲಿಂದ ಬರುತ್ತಿರುವ ರಿಷಬ್, ಪರುಶು ಹಿಡಿದು ದುರಳರ ವಿರುದ್ಧ ವೀರ ಯೋಧನಂತೆ ಹೋರಾಡುತ್ತಿರುವ ಪೋಸ್ಟರ್ ಗಮನಸೆಳೆಯುತ್ತಿದೆ.

ದಂತಕಥೆಯ ಮುನ್ನುಡಿ, ಆ ನುಡಿಗೊಂದು ಪರಿಚಯ ಮನದಾಳದ ಕಥೆಗೆ ಮತ್ತೊಮ್ಮೆ ಸ್ವಾಗತ ಎಂಬ ಕ್ಯಾಪ್ಷನ್ ಮೂಲಕ ಕಾಂತಾರ ಚಾಪ್ಟರ್ 1 ಚಿತ್ರದ ಹೊಸ ಲುಕ್ ಬಿಡುಗಡೆ ಮಾಡಲಾಗಿದೆ. ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದ್ದು, ಪೋಸ್ಟ್ ಪ್ರೊಡಕ್ಷನ್ ಕಾರ್ಯಗಳು ಆರಂಭವಾಗಿವೆ.

ಕಾಂತಾರ ಚಾಪ್ಟರ್ 1 ಚಿತ್ರ, ಹಲವು ವಿಶೇಷತೆಗಳಿಂದ ಕೂಡಿದ ಸಿನಿಮಾ. ಈಗಾಗಲೇ ಬಿಡುಗಡೆ ಆಗಿರುವ ಸಿನಿಮಾಕ್ಕೆ ಹೋಲಿಸಿದರೆ ಈ ಚಿತ್ರ, ಹಲವು ಹೊಸತನಗಳಿಂದ ಕೂಡಿದೆ. ಆಧ್ಯಾತ್ಮ ಮತ್ತು ಸಾಹಸಗಾಥೆಯ ಸಮ್ಮಿಶ್ರಣವೂ ಈ ಸಿನಿಮಾದಲ್ಲಿದೆ. ಅದಕ್ಕೂ ಮಿಗಿಲಾಗಿ ಭವ್ಯಕಥೆ ತೆರೆಮೇಲೆ ಸಾಗಲಿದೆ.

ಅದ್ದೂರಿ ಸೆಟ್: ಈ ಚಿತ್ರಕ್ಕಾಗಿ ಬರೋಬ್ಬರಿ ಇಪ್ಪತ್ತೈದು ಎಕರೆ ಪ್ರದೇಶದಲ್ಲಿ ಬೃಹತ್ ಸೆಟ್ ನಿರ್ಮಿಸಿ, ಕಾಲ್ಪನಿಕ ಊರಿನಲ್ಲಿ ಕಾಂತಾರ ಚಾಪ್ಟರ್ 1 ಸಿನಿಮಾವನ್ನು ಚಿತ್ರೀಕರಿಸಲಾಗಿದೆ. ಭಾರತೀಯ ಹಾಗೂ ಅಂತರರಾಷ್ಟ್ರೀಯ ತಂತ್ರಜ್ಞರೂ ಈ ಸಿನಿಮಾಕ್ಕೆ ಕೈ ಜೋಡಿಸಿದ್ದಾರೆ. ಮೂರು ಸಾವಿರಕ್ಕೂ ಹೆಚ್ಚು ಜೂನಿಯರ್ ಕಲಾವಿದರು ಈ ಸಿನಿಮಾದ ಶೂಟಿಂಗ್‌ನಲ್ಲಿ ಭಾಗವಹಿಸಿದ್ದರು. ಕಾಂತಾರ: ಚಾಪ್ಟರ್ 1 ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು ಅಕ್ಟೋಬರ್ 2 ರಂದು ವಿಶ್ವಾದ್ಯಂತ ಅದ್ದೂರಿಯಾಗಿ ತೆರೆಗೆ ಬರಲಿದೆ.

ಕೊತ್ತಲವಾಡಿಯಲಿ ಮುಂಗಾರು ಮಳೆ

ನಟ ಯಶ್ ಅವರ ತಾಯಿ ಪುಷ್ಪಾ ಅರುಣ್ ಕುಮಾರ್ ನಿರ್ಮಾಣದ ಮೊದಲ ಸಿನಿಮಾ ಕೊತ್ತಲವಾಡಿ ಬಿಡುಗಡೆಗೆ ಸಿದ್ಧವಾಗಿದೆ. ಟೀಸರ್‌ನಲ್ಲಿ ಮನಗೆದ್ದಿರುವ ಕೊತ್ತಲವಾಡಿ ಚಿತ್ರ, ಮೊದಲ ಹಾಡು ರಿಲೀಸ್ ಆಗಿದೆ. ಪ್ರಮೋದ್ ಮರವಂತೆ ಸಾಹಿತ್ಯ ಬರೆದಿರುವ ಮುಂಗಾರು ಮಳೆಯಲಿ.. ಪ್ರೇಮಗಾನಕ್ಕೆ ನಿಶಾನ್ ರೈ, ಸುನಿಧಿ ಗಣೇಶ್ ಧ್ವನಿಯಾಗಿದ್ದು, ವಿಕಾಸ್ ವಸಿಷ್ಠ ಸಂಗೀತ ಸಂಯೋಜಿಸಿದ್ದಾರೆ. ಪೃಥ್ವಿ ಅಂಬರ್ ಹಾಗೂ ಕಾವ್ಯಾ ಶೈವ ಹಾಡಿನಲ್ಲಿ ಕಾಣಿಸಿಕೊಂಡಿದ್ದಾರೆ. ಶ್ರೀರಾಜ್ ಕಥೆ ಬರೆದು ನಿರ್ದೇಶನ ಮಾಡಿರುವ ಚಿತ್ರ ಇದಾಗಿದ್ದು, ಪೃಥ್ವಿ ಅಂಬರ್ ನಾಯಕನಾಗಿ ನಟಿಸಿದ್ದು ಕಾವ್ಯಾ ಶೈವ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಗೋಪಾಲಕೃಷ್ಣ ದೇಶಪಾಂಡೆ, ರಾಜೇಶ್ ನಟರಂಗ ಮುಂತಾದವರು ತಾರಾಬಳಗದಲ್ಲಿದ್ದಾರೆ. ಈ ಹಿಂದಿನ ಸಿನಿಮಾಗಳಲ್ಲಿ ಲವರ್ ಬಾಯ್ ಆಗಿ ಕಾಣಿಸಿಕೊಳ್ಳುತ್ತಿದ್ದ ಪೃಥ್ವಿ ಕೊತ್ತಲವಾಡಿ ಚಿತ್ರದಲ್ಲಿ ಕಂಪ್ಲೀಟ್ ಮಾಸ್ ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಕಾರ್ತಿಕ್ ಛಾಯಾಗ್ರಹಣ, ರಾಮಿಸೆಟ್ಟಿ ಪವನ್ ಸಂಕಲನ ಈ ಚಿತ್ರಕ್ಕಿದೆ. ವಿ.ನಾಗೇಂದ್ರ ಪ್ರಸಾದ್, ಕಿನ್ನಾಳ್ ರಾಜ್, ಪ್ರಮೋದ್ ಮರವಂತೆ, ಗೌಸ್‌ಪಿರ್ ಚಿತ್ರದ ಹಾಡುಗಳಿಗೆ ಸಾಹಿತ್ಯ ಬರೆದಿದ್ದಾರೆ. ಕೊತ್ತಲವಾಡಿ ಆಗಸ್ಟ್ 1ರಂದು ಅದ್ದೂರಿಯಾಗಿ ತೆರೆಗೆ ಬರಲಿದೆ.